ವಿಶ್ವವಾಣಿ

ವಿಶ್ವಾಸವೇ ವಿಶ್ವ

ಇಂದಿನಿಂದ ರಾಜ್ಯದಲ್ಲಿ ನವರಾತ್ರಿ ಹಬ್ಬದ ಸಂಭ್ರಮ. ಮೈಸೂರಿನ ಚಾಮುಂಡಿ ಬೆಟ್ಟ ಸೇರಿ ಶಕ್ತಿ ದೇಗುಲಗಳಲ್ಲಿ ನಿರಂತರ ಆರಾಧನೆ

ಸೆ.30 ದುರ್ಗಾಷ್ಟಮಿ, ಅ.1ರಂದು ಆಯುಧಪೂಜೆ, ಅ.2ಕ್ಕೆ ವಿಜಯದಶಮಿ ಉತ್ಸವ.

ಸೊಂಪಾದ ಪುಟಗಳು

ವಿಜಯೇಂದ್ರ ಬೆನ್ನಿಗೆ ಈಗ ಸಂತೋಷ್ ನಿಂತರು

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಇವರು ಎಂಥಾ ಲಾಂ(ಗಲೀ)ಜು ಜನ...!!?

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಒಂದು ವೇಳೆ ದೇವರು ನಿಮಗೆ ಹೊಸ ಆರಂಭ ಅಥವಾ ಎರಡನೇ ಅವಕಾಶವನ್ನು ಕೊಟ್ಟರೆ, ಹಳೆಯ ತಪ್ಪುಗಳನ್ನು ಮತ್ತೊಮ್ಮೆ ಮಾಡಲು ಹೋಗಬಾರದು. ಆ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವುದು ಹೇಗೆ ಎಂದು ಯೋಚಿಸಬೇಕು.

ವಕ್ರತುಂಡೋಕ್ತಿ

ವಿಶ್ವವಿದ್ಯಾಲಯ ಶಿಕ್ಷಣ ಪಡೆದ ನಂತರವೂ, ಸ್ವತಂತ್ರ ಚಿಂತನೆಯನ್ನು ಯಾರು ಉಳಿಸಿಕೊಂಡಿರುತ್ತಾರೋ ಅವರಿಗೆ ನಿಜವಾದ ಸರ್ವೈವರ್ ಎಂದು ಕರೆಯಬಹುದು.

2 ಸ್ಲ್ಯಾಬ್‌ಗಳ ಜಿಎಸ್‌ಟಿ ಸುಧಾರಣೆಗಳ ಪ್ರಕಟಿಸಿ ಪ್ರಧಾನಿ ಭಾಷಣ
ನಾಗರಿಕ ದೇವೋ ಭವ: ನವರಾತ್ರಿ ಹೊತ್ತಲ್ಲಿ ಮೋದಿ ನವ ಘೋಷ

ಸ್ವದೇಶಿಯೇ ಶಕ್ತಿ ಮಂತ್ರ

ದೆಹಲಿ: ಸೋಮವಾರದಿಂದ ನವರಾತ್ರಿ ಆರಂಭವಾಗುವ ಸಂಭ್ರಮದಲ್ಲಿ ಇಡೀ ದೇಶ

ಇದ್ದಾಗಲೇ, ಭಾನುವಾರ ಸಂಜೆ ದೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಶೇ.18 ಮತ್ತು ಶೇ.5ರ 2 ಸ್ಲ್ಯಾಬ್‌ಗಳ ಜಿಎಸ್‌ಟಿ ಜಾರಿಯನ್ನು ಅಧಿಕೃತವಾಗಿ ಘೋಷಿಸಿದರು. 'ನಾಗರಿಕ ದೇವೋ ಭವ' ಎಂಬ ಮಂತ್ರವನ್ನಿಟ್ಟುಕೊಂಡು ನಾವು ಜಿಎಸ್‌ಟಿ ಕಡಿತ ಮಾಡಿದ್ದೇವೆ, ಇದರಿಂದ ಜನರಿಗೆ ಹಣವುಳಿಸಲು ನೆರವಾಗುತ್ತದೆ ಎಂದ ಮೋದಿ ಆತ್ಮನಿರ್ಭರ ಭಾರತದ ಅಗತ್ಯವನ್ನು ಬಲವಾಗಿ ಪ್ರತಿಪಾದಿಸಿ ದರು. ಸ್ವಾತಂತ್ರ್ಯ ಚಳವಳಿಯಲ್ಲಿ ಸ್ವದೇಶಿ ಮಂತ್ರ ನಮ್ಮ ನೆರವಿಗೆ ಬಂತು. ಈಗ ಮತ್ತೆ ಸ್ವದೇಶಿಯನ್ನೇ ಸಾಧಿಸಬೇಕು. ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರ ಒಗ್ಗೂಡಿ ನಡೆದರೆ ಮಾತ್ರ ಆತ್ಮನಿರ್ಭರತೆ ಸಾಧ್ಯ ಎಂದು ಮೋದಿ ಹೇಳಿದ್ದಾರೆ.

→ 4

ಪ್ರಧಾನಿ ಮೋದಿ ಹೇಳಿದ್ದೇನು?

ದೇಶದ ಸಮೃದ್ಧಿಗೆ ಮತ್ತೆ ಸ್ವದೇಶಿ ಮಂತ್ರ

ಸ್ವದೇಶಿ ಮಂತ್ರ ಸ್ವಾತಂತ್ರ್ಯ ಚಳವಳಿಗೆ ಶಕ್ತಿ ತುಂಬಿತು. ಅದೇ ಮಂತ್ರ ಈಗ ದೇಶದ ಸಮೃದ್ಧಿಗೆ ಶಕ್ತಿ ತುಂಬಬೇಕಿದೆ. ಈಗ ನಾವು ಗೊತ್ತಿದ್ದೋ, ಗೊತ್ತಿಲ್ಲದೆಯೋ ಹಲವಾರು ವಿದೇಶಿ ವಸ್ತುಗಳನ್ನು ಬಳಸುತ್ತಿದ್ದೇವೆ. ಈ ಅವಲಂಬನೆಯಿಂದ ನಾವು ಹೊರಬರಬೇಕು. ದೇಶದಲ್ಲೇ ಉತ್ಪನ್ನವಾದ ವಸ್ತುಗಳನ್ನು ಕೊಳ್ಳಬೇಕು.

ಕೇಂದ್ರ-ರಾಜ್ಯಗಳು ಕೈಜೋಡಿಸಬೇಕು

ರಾಜ್ಯಗಳು ತಂತಮ್ಮ ಸ್ಥಾನಗಳಲ್ಲೇ ಉತ್ಪಾದನೆ ಮಾಡುವ ಮೂಲಕ ಆತ್ಮನಿರ್ಭರ ಭಾರತ ಯೋಜನೆಗೆ ಕೈಜೋಡಿಸಬೇಕು. ಹೂಡಿಕೆಯನ್ನು ಉತ್ತೇಜಿಸುವ ವಾತಾವರಣ ನಿರ್ಮಾಣವಾಗಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಗ್ಗೂಡಿ ಕೆಲಸ ಮಾಡಿದರೆ ಆತ್ಮನಿರ್ಭರ ಭಾರತ ಸಾಧ್ಯ.

2.5 ಲಕ್ಷ ಕೋಟಿ ರು. ಉಳಿಕೆ ಉತ್ಸವ ಇದು

ಇದು ಮುಂದಿನ ಜನಾಂಗಕ್ಕಾಗಿ ಮಾಡಿದ ಜಿಎಸ್‌ಟಿ ಸುಧಾರಣೆ. 12 ಲಕ್ಷ ರು.ವರೆಗೆ ಆದಾಯ ಹೊಂದಿದವರಿಗೆ ಆದಾಯ ತೆರಿಗೆ ವಿನಾಯಿತಿ ನೀಡಿದ್ದನ್ನೂ ಸೇರಿಸಿದರೆ ಪ್ರಸ್ತುತ ಬದಲಾವಣೆಯಿಂದ ದೇಶದ ಜನರು ಒಟ್ಟು 2.5 ಲಕ್ಷ ಕೋಟಿ ರು. ಉಳಿಸುತ್ತಾರೆ. ಇದು ಉಳಿಕೆ ಉತ್ಸವ.

25 ಕೋಟಿ ಮಂದಿ ಬಡತನ ಮುಕ್ತ

ಕಳೆದ 11 ವರ್ಷಗಳಲ್ಲಿ 25 ಕೋಟಿ ಮಂದಿ ಬಡತನದಿಂದ ಹೊರಬಂದಿದ್ದಾರೆ. ಹೊಸ ತೆರಿಗೆಯಲ್ಲಿ ಶೇ.5 ಮತ್ತು ಶೇ.18ರ ಸ್ಲ್ಯಾಬ್‌ಗಳು ಮಾತ್ರ ಇರಲಿವೆ. ಶೇ.12ರ ತೆರಿಗೆ ವ್ಯಾಪ್ತಿಯಲ್ಲಿ ಬರುತ್ತಿದ್ದ ಶೇ.99 ಸರಕು ಇನ್ನು ಶೇ.5ರ ವ್ಯಾಪ್ತಿಯಲ್ಲಿ ಬರಲಿವೆ.

ಇಂದಿನಿಂದ 2 ಸ್ಲ್ಯಾಬ್ ಜಿಎಸ್‌ಟಿ

1. ಹಿಂದೆ ಶೇ.12ರ ವ್ಯಾಪ್ತಿಯಲ್ಲಿದ್ದ ಪ್ರಮುಖ ಔಷಧಗಳು ಶೇ.5ಕ್ಕಿಳಿಕೆ. ಜೀವರಕ್ಷಕ ಔಷಧಗಳಾದ ಕ್ಯಾನ್ಸರ್, ಜೆನೆಟಿಕ್, ಹೃದಯ ಸಂಬಂಧಿತ ಕಾಯಿಲೆಗಳ ಔಷಧಗಳಿಗೆ ಪೂರ್ಣ ವಿನಾಯಿತಿ
2. ವೈದ್ಯಕೀಯ ಸಾಧನ, ಡಯಾಗ್ನಾಸ್ಟಿಕ್ ಕಿಟ್‌ಗಳ ತೆರಿಗೆ ಶೇ.5ಕ್ಕಿಳಿಕೆ
3. ತುಪ್ಪ, ಬೆಣ್ಣೆ, ಪನೀರ್, ಉಪ್ಪು, ಒಣ ಹಣ್ಣುಗಳು, ಕಾಫೀ, ಟೀವಿ, ಎಸಿ, ವಾಷಿಂಗ್ ಮಷಿನ್‌ಗೆ ಕಡಿಮೆ ತೆರಿಗೆ
4. ಸಿಮೆಂಟ್‌ಗೆ ಶೇ.28ರಿಂದ ಶೇ.18ಕ್ಕಿಳಿಕೆ
5. ಬೃಹತ್ ಗಾತ್ರದ ಕಾರ್‌ಗಳಿಗೆ ಶೇ.28, ಸಣ್ಣ ಕಾರುಗಳಿಗೆ ಶೇ.18 ತೆರಿಗೆ
6. ಕ್ಷೌರದಂಗಡಿ, ಯೋಗ ಕೇಂದ್ರಗಳಿಗೆ ಶೇ. 5 ತೆರಿಗೆ. ತಲೆಗೆ ಹಾಕುವ ಎಣ್ಣೆ, ಹಲ್ಲುಜ್ಜುವ ಬ್ರಷ್, ಪೇಸ್ಟ್‌ಗೆ ಶೇ.5 ತೆರಿಗೆ
8. ಮಕ್ಕಳಿಗೆ ನೆರವಾಗುವ ನಕ್ಷೆಗಳು, ಎಕ್ಸರ್ ಸೈಜ್, ಪೆನ್ಸಿಲ್‌ಗಳು, ಶಾರ್ಪನರ್‌ಗಳು, ಚಾಕ್‌ಪೀಸ್‌ಗಳಿಗೆ ಶೂನ್ಯ ತೆರಿಗೆ

ಬಸವಜಯಶ್ರೀ ಉಚ್ಚಾಟನೆ

ಬಾಗಲಕೋಟೆ: ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಪೀಠದಿಂದ ಉಚ್ಚಾಟನೆ ಮಾಡಲಾಗಿದೆ. ಕೂಡಲ ಸಂಗಮದಲ್ಲಿ ನಡೆದ ಅಖಿಲ ಭಾರತ ಪಂಚಮಸಾಲಿ ಸಮಾಜ ಟ್ರಸ್ಟ್‌ನ ಕಾರ್ಯಕಾರಿಣಿ ಸಭೆಯಲ್ಲಿ 30 ಸದಸ್ಯರು ಹಾಗೂ ಸಮುದಾಯದ ಜನರ ಮಧ್ಯೆ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.

ತಿಮ್ಮಪ್ಪನ 100 ಕೋಟಿ ಕಳವು

ತಿರುಪತಿ: ಜಗನ್ ರೆಡ್ಡಿ ಸರಕಾರದ ಅವಧಿಯಲ್ಲಿ ತಿರುಪತಿ ತಿರುಮಲ ದೇಗುಲದಲ್ಲಿ 100 ಕೋಟಿ ರು. ಕಳ್ಳತನವಾಗಿದೆ ಎಂದು ಬಿಜೆಪಿ ನಾಯಕ, ತಿರುಪತಿ ದೇಗುಲ ಟ್ರಸ್ಟ್ ಸದಸ್ಯ ಭಾನುಪ್ರಕಾಶ್ ರೆಡ್ಡಿ ಆರೋಪ ಮಾಡಿದ್ದು, ದೇಣಿಗೆ ಹುಂಡಿಯಿಂದ ರವಿಕುಮಾರ್ ಎಂಬ ಸಿಬ್ಬಂದಿ ಹಣ ಕದ್ದಿದ್ದಾರೆ. ಈ ಹಣವನ್ನು ನಂತರ ಜಗನ್ ರೆಡ್ಡಿ ಅರಮನೆಗೆ ರವಾನಿಸಲಾಗಿದೆ ಎಂದಿದ್ದಾರೆ.



ಕೈಕುಲುಕಲು ಒಲ್ಲೆ: ಸೂರ್ಯ

ದುಬೈ: ಭಾರತ-ಪಾಕಿಸ್ತಾನ ನಡುವಿನ ಏಷ್ಯಾಕಪ್ ಟಿ20ಯ 2ನೇ ಪಂದ್ಯದಲ್ಲೂ ವಿವಾದ ಮುಂದುವರಿದಿದೆ. ಟಾಸ್ ವೇಳೆ ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಆಘಾ ಕೈಕುಲುಕಲು ಭಾರತದ ನಾಯಕ ಸೂರ್ಯ ಕುಮಾರ್ ಮತ್ತೆ ನಿರಾಕರಿಸಿದರು. ಹಿಂದಿನ ಪಂದ್ಯದಲ್ಲಿ ಸೂರ್ಯ ಹೀಗೆ ಮಾಡಿದ್ದಾಗ ಪಾಕಿಸ್ತಾನ ಪ್ರಬಲವಾಗಿ ಪ್ರತಿಭಟಿಸಿತ್ತು.

ಬಾನು ಮುಷ್ತಾಕ್ ಉದ್ಘಾಟನೆ | ಸಿಎಂ ಸೇರಿ ಹಲವರು ಉಪಸ್ಥಿತಿ

ನಾಡಹಬ್ಬ ಆರಂಭ

ಮೈಸೂರು: 2025ರ ನಾಡಹಬ್ಬ ದಸರಾ ಮಹೋತ್ಸವ ಚಾಲನೆಗೆ ಕ್ಷಣಗಣನೆ ಆರಂಭವಾಗಿದೆ. ಈ ಮೂಲಕ ಈ ನೆಲದ ಕಲೆ, ಸಂಸ್ಕೃತಿ, ಪರಂಪರೆಯ ಅನಾವರಣಕ್ಕೆ ಸಾಂಸ್ಕೃತಿಕ ನಗರಿ ಮೈಸೂರು ಸಾಕ್ಷಿಯಾಗಲಿದೆ.

ಸೆ.22ರ ಸೋಮವಾರ ಬೆಳಗ್ಗೆ 10.10ರಿಂದ 10.40 ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಬುಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. 11 ದಿನಗಳ ದಸರಾ ವಿವಿಧ ಕಾರ್ಯಕ್ರಮಗಳು ಆರಂಭವಾಗಲಿವೆ. ಚಾಮುಂಡಿ ಬೆಟ್ಟದಿಂದ ಚಾಲನೆಗೊಳ್ಳುವ ದಸರಾ 11 ದಿನ ವೈಭವಯುತವಾಗಿ ನಡೆದು ಅ.2ರಂದು ಅರಮನೆ ಅಂಗಳದಲ್ಲಿನ ಜಂಬೂಸವಾರಿ ಹಾಗೂ ಬನ್ನಿಮಂಟಪ ಮೈದಾನದಲ್ಲಿ ನಡೆಯುವ ಪಂಜಿನ ಕವಾಯತಿಯೊಂದಿಗೆ ಸಂಪನ್ನಗೊಳ್ಳಲಿದೆ. ಅ.2ರಂದು ಮಧ್ಯಾಹ್ನ 1ರಿಂದ 1.18ರೊಳಗಿನ ಧನುರ್ ಲಗ್ನದಲ್ಲಿ ನಂದಿ ಧ್ವಜ ಪೂಜೆ ನಡೆಯಲಿದ್ದು, ಸಂಜೆ 4.42ರಿಂದ 5.06 ರೊಳಗಿನ ಕುಂಭ ಲಗ್ನದಲ್ಲಿ ವಿಜಯದಶಮಿ ಮೆರವಣಿಗೆಗೆ ಚಾಲನೆ ದೊರೆಯಲಿದೆ. ಫಲಪುಷ್ಪ ಪ್ರದರ್ಶನ, ವಸ್ತು ಪ್ರದರ್ಶನ, ಆಹಾರ ಮೇಳ, ಕುಸ್ತಿ ಪಂದ್ಯಾವಳಿ, ಚಿತ್ರಕಲಾ ಶಿಬಿರ, ಪುಸ್ತಕ ಮೇಳ, ಯೋಗ ದಸರಾ, ಸಿಎಂ ಕಪ್, ವಿದ್ಯುತ್ ದೀಪಾಲಂಕಾರ, ರಂಗೋಲಿ ಸ್ಪರ್ಧೆ, ಕವಿಗೋಷ್ಠಿ ಮಹಿಳಾ ದಸರಾ ಕಾರ್ಯಕ್ರಮಗಳಿಗೆ ಚಾಲನೆ ದೊರಕಲಿದೆ.

ಏಳು ಕೋಟಿ ಜನರ ಸಮೀಕ್ಷೆ ನಡೆಸಲಿರುವ ಸರಕಾರ
ವಿವಾದಿತ 33 ಕ್ರೈಸ್ತ ಉಪಜಾತಿಗಳು ಪಟ್ಟಿಯಲ್ಲಿಲ್ಲ

ಇಂದಿನಿಂದ ಜಾತಿ ಗಣತಿ

ಬೆಂಗಳೂರು: ರಾಜ್ಯದಲ್ಲಿ ತೀವ್ರ ವಿರೋಧಕ್ಕೆ ಕಾರಣವಾಗಿರುವ, ಹಲವು ಸಮುದಾಯಗಳ ಅಕ್ಷೇಪ, ಅಸಮಾಧಾನಕ್ಕೆ ಕಾರಣವಾಗಿದ್ದ ಜಾತಿ ಗಣತಿ ಸೋಮವಾರದಿಂದ ಅಧಿಕೃತವಾಗಿ ಶುರುವಾಗಲಿದೆ.

ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಒಕ್ಕಲಿಗ, ಲಿಂಗಾಯತ ಸೇರಿದಂತೆ ಹಲವು ಸಮುದಾಯ ಗಳಲ್ಲಿ ರುವ ಗೊಂದಲದ ನಡುವೆಯೇ, ಹಿಂದುಳಿದ ವರ್ಗಗಳ ಆಯೋಗ ಜಾತಿ ಗಣತಿಗೆ ಚಾಲನೆ ನೀಡಲಿದ್ದು, ರಾಜ್ಯದಲ್ಲಿರುವ ಏಳು ಕೋಟಿ ಜನರ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಪರಿಸ್ಥಿತಿ ಯನ್ನು ತಿಳಿಯಲು ನಡೆಸುತ್ತಿರುವ ಈ ಸಮೀಕ್ಷೆಗೆ 1.75 ಲಕ್ಷ ಶಿಕ್ಷಕರನ್ನು ನಿಯೋಜಿಸಲಾಗಿದೆ.

ಸಾಮಾಜಿಕ ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಯೆಂದು ಸರಕಾರ ಹೇಳುತ್ತಿದ್ದರೂ, ಜಾತಿಗಳ ಬಲಾಬಲ ಅರಿಯಲು ನಡೆಸುತ್ತಿರುವ ಸಮೀಕ್ಷೆ ಎನ್ನುವುದು ಈಗಾಗಲೇ ಬಹಿರಂಗವಾಗಿದೆ. ಸೋಮವಾರದಿಂದ 15 ದಿನಗಳ ಕಾಲ ಪ್ರತಿ ಕುಟುಂಬದ ಸಮಗ್ರ ಸಮೀಕ್ಷೆ ಕಾರ್ಯವನ್ನು ನಡೆಸಲಾಗುತ್ತಿದ್ದು, ಕುಟುಂಬದ ಸದಸ್ಯರ ಶೈಕ್ಷಣಿಕ, ಆರ್ಥಿಕ ಹಾಗೂ ಸಾಮಾಜಿಕ ವಿವರ ಗಳನ್ನು ಸಂಗ್ರಹಿಸಲಾಗುತ್ತದೆ. ಪ್ರತಿ ಕುಟುಂಬದ ಸದಸ್ಯರ ಜಾತಿಯನ್ನು ದಾಖಲು ಮಾಡುವ ಪ್ರತ್ಯೇಕ ಕಾಲಂಗಳಿದ್ದು, ಅದರಂತೆ ಪ್ರತಿ ಕುಟುಂಬದ ಸದಸ್ಯರ ಜಾತಿ, ಧರ್ಮ, ಉಪಜಾತಿ ಎಲ್ಲ ವಿವರಗಳನ್ನು ಗಣತಿದಾರರು ತಮಗೆ ನೀಡಿರುವ ನಮೂನೆಯಲ್ಲಿ ಸಮೀಕ್ಷರು ದಾಖಲೆ ಮಾಡಿಕೊಳ್ಳಲಿದ್ದಾರೆ. ಈ ಸಮೀಕ್ಷೆಗೆಂದು ರಾಜ್ಯ ಸರಕಾರ ಈಗಾಗಲೇ 425 ಕೋಟಿ ರು. ಅನುದಾನ ಮೀಸಲಿಟ್ಟಿದೆ.

→ 4

ಯಾವ ದಾಖಲೆ ತೋರಿಸಬೇಕು?

- ಆಧಾರ್ ಕಾರ್ಡ್
- ವೋಟರ್ ಐಡಿ ಕಾರ್ಡ್
- ಪಡಿತರ ಕಾರ್ಡ್
- ವಿದ್ಯಾಭ್ಯಾಸದ ಅಂಕ ಪಟ್ಟಿ

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಮೈಸೂರು ದಸರಾ
ಕ್ರಿಶ 1610 ರಿಂದ ಆಚರಣೆ

ವಿಶ್ವವಿಖ್ಯಾತ ಮೈಸೂರು ದಸರಾ
ಸೌಹಾರ್ದ ಸಂಭ್ರಮದ ಮೆರುಗು
ದಿವ್ಯ ಸಾಂಸ್ಕೃತಿಕ ಉನ್ನತಿಯ ಬೆಳಗು
ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ
2025ರ ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭ
ದಿನಾಂಕ: 22.09.2025, ಬೆಳಿಗ್ಗೆ 10.10 ಗಂಟೆ
ಸ್ಥಳ: ಚಾಮುಂಡಿ ಬೆಟ್ಟ, ಮೈಸೂರು

2025ರ ಅಂತಾರಾಷ್ಟ್ರೀಯ ಬೂಕರ್ ಬಹುಮಾನ ವಿಜೇತರಾದ ಸಾಹಿತಿ ಶ್ರೀಮತಿ ಬಾನು ಮುಷ್ತಾಕ್ ರವರು ಬಹುಮಾನ ಸ್ವೀಕರಿಸಿದ ಸಂದರ್ಭ

"ನಾಡಹಬ್ಬ ಮೈಸೂರು ದಸರಾ ಮಹೋತ್ಸವವು ನಮ್ಮ ರಾಜ್ಯದ ಐತಿಹಾಸಿಕ, ಸಾಂಸ್ಕೃತಿಕ ಪರಂಪರೆ ಮತ್ತು ಸಮೂಹ ಸೌಹಾರ್ದತೆಯ ಪ್ರತೀಕವಾಗಿದೆ. ಮೊದಲ ಬಾರಿಗೆ ಪ್ರತಿಷ್ಠಿತ ಅಂತಾರಾಷ್ಟ್ರೀಯ ಬೂಕರ್ ಬಹುಮಾನವನ್ನು ಕನ್ನಡ ಸಾಹಿತ್ಯಕ್ಕೆ ತಂದು ಕೊಡುವ ಮೂಲಕ ಕನ್ನಡ ಕೀರ್ತಿಯನ್ನು ವಿಶ್ವಮಟ್ಟಕ್ಕೆ ಏರಿಸಿದ ಶ್ರೀಮತಿ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಲಿರುವುದು ಸಂತಸದ ಸಂಗತಿಯಾಗಿದೆ.
ನಾವೆಲ್ಲರೂ ಒಗ್ಗಟ್ಟಿನಿಂದ, ಸಹಭಾಗಿತ್ವದಿಂದ, ಕನ್ನಡ ನಾಡು-ನುಡಿಗೆ ಗೌರವ ನೀಡಲು ಕೈಜೋಡಿಸೋಣ.
ನಾಡಿನ ಸಮಸ್ತ ಜನತೆಗೆ ನಾಡಹಬ್ಬ ಮೈಸೂರು ದಸರಾದ ಹಾರ್ದಿಕ ಶುಭಾಶಯಗಳು"
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಉದ್ಘಾಟನೆ
ಶ್ರೀಮತಿ ಬಾನು ಮುಷ್ತಾಕ್
ಸಾಹಿತಿಗಳು ಹಾಗೂ 2025ರ ಅಂತಾರಾಷ್ಟ್ರೀಯ ಬೂಕರ್ ಬಹುಮಾನ ವಿಜೇತರು

ಘನ ಉಪಸ್ಥಿತಿ
ಶ್ರೀ ಸಿದ್ದರಾಮಯ್ಯ, ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು

ಮುಖ್ಯ ಅತಿಥಿಗಳು
ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಾನ್ಯ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವರು, ಭಾರತ ಸರ್ಕಾರ
ಶ್ರೀ ಪ್ರಲ್ಹಾದ ಜೋಶಿ, ಮಾನ್ಯ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರು, ಭಾರತ ಸರ್ಕಾರ
ಶ್ರೀ ವಿ. ಸೋಮಣ್ಣ, ಮಾನ್ಯ ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ
ಸುಶ್ರೀ ಶೋಭಾ ಕರಂದ್ಲಾಜೆ, ಮಾನ್ಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ

ಅಧ್ಯಕ್ಷತೆ
ಶ್ರೀ ಜಿ.ಟಿ ದೇವೇಗೌಡ, ಮಾನ್ಯ ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ

ಹಾಗೂ ರಾಜ್ಯ ಸಚಿವ ಸಂಪುಟದ ಮಾನ್ಯ ಸಚಿವರು, ಮಾನ್ಯ ಸಂಸದರು, ಮಾನ್ಯ ವಿಧಾನ ಪರಿಷತ್ ಮತ್ತು ವಿಧಾನಸಭೆ ಶಾಸಕರು, ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳ ಮಾನ್ಯ ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯಿತಿಯ ಮಾನ್ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಸ್ಥಳೀಯ ಸಂಸ್ಥೆಗಳ ಚುನಾಯಿತ ಜನ ಪ್ರತಿನಿಧಿಗಳು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
CMofKarnataka https://dipr.karnataka.gov.in/
ಕರ್ನಾಟಕ ವಾರ್ತೆ

ಸಮಾಚಾರ ಸಣ್ಣದಲ್ಲ

ಹಾಲಕ್ಕಿ ಒಕ್ಕಲಿಗ ಎಂದೇ ಬರೆಯಿಸಿ

ಅಂಕೋಲಾ: ಜಾತಿ ಗಣತಿ ಸಮೀಕ್ಷೆ ಇದೇ ತಿಂಗಳು 22ರಿಂದ ಆರಂಭಗೊಳ್ಳುತ್ತಿದ್ದು, ತಮ್ಮ ಮನೆಗಳಿಗೆ ಸರ್ವೆ ಮಾಹಿತಿ ಕೇಳಲು ಬಂದ ಸಂದರ್ಭದಲ್ಲಿ ಹಾಲಕ್ಕಿ ಸಮಾಜದ ಪ್ರತಿಯೊಬ್ಬರೂ ಧರ್ಮ ಕಾಲಂನಲ್ಲಿ ಹಿಂದೂ ಎಂತಲೂ ಜಾತಿ ಕಾಲಮ್‌ನಲ್ಲಿ ಹಾಲಕ್ಕಿ ವಕ್ಕಲು (ಒಕ್ಕಲು) ಎಂದು ಮಾಹಿತಿ ನೀಡಬೇಕು ಎಂದು ಜಿಲ್ಲಾ ಹಾಲಕ್ಕಿ ಒಕ್ಕಲಿಗರ ಸಂಘದ ಅಧ್ಯಕ್ಷ ಹನುಮಂತ ಗೌಡ ವಿನಂತಿಸಿದ್ದಾರೆ.ಈ ಗಣತಿ ಪ್ರತಿಯೊಂದು ಜನಾಂಗದವರಿಗೂ ಅತ್ಯಂತ ಅಗತ್ಯವಾಗಿದ್ದು, ನಮ್ಮ ಸಮಾಜದ ಮುಂದಿನ ಶ್ರೇಯಸ್ಸಿಗಾಗಿ ನಾವು ನಮ್ಮ ಜಾತಿಯ ಹೆಸರನ್ನು ಸರಿಯಾಗಿ ನಮೂನೆಗಳಲ್ಲಿ ಭರ್ತಿ ಮಾಡಿದರೆ ಮುಂದೆಯು ಹಾಲಕ್ಕಿ ಒಕ್ಕಲು ಎನ್ನುವ ಹೆಸುರ ಸರಿಯಾಗಲಿದೆ. ನಮ್ಮಲ್ಲಿ ಯಾವುದೇ ಜಾತಿ ಬೇಧಭಾವ ಇಲ್ಲ. ಈ ಕುರಿತು ನಮ್ಮ ಹಾಲಕ್ಕಿ ಸಮಾಜದ ಪ್ರತಿಯೊಬ್ಬರ ಸರಿಯಾದ ಮಾಹಿತಿ ಪೂರೈಸಿ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪಡಿತರ ಅಕ್ಕಿ ವಶ, ಒಬ್ಬನ ಬಂಧನ

ಭಟ್ಕಳ: ದಾಖಲೆಗಳಿಲ್ಲದೆ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ಸುಮಾರು 6 ಕ್ವಿಂಟಾಲ್ ಪಡಿತರ ಅಕ್ಕಿಯನ್ನು ಪೊಲೀಸರು ಶನಿವಾರ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಓಮ್ನಿ ವಾಹನದ ಚಾಲಕನನ್ನು ಬಂಧಿಸಲಾಗಿದ್ದು, ಪ್ರಕರಣ ದಾಖಲಿಸಲಾಗಿದೆ. ತಾಲೂಕಿನ ಮುರುಡೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯ ತೆರ್ನಮಕ್ಕಿ ಬಳಿ ಈ ಘಟನೆ ನಡೆದಿದೆ. ಭಟ್ಕಳದ ಪುರವರ್ಗ ನಿವಾಸಿಯಾಗಿರುವ 35 ವರ್ಷದ ಚಾಲಕ ಫಹೀಮ್ ಮಹಮ್ಮದ್ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಿಸುತ್ತಿದ್ದಾಗ ಪೊಲೀಸರ ತಪಾಸಣೆಗೆ ಸಿಕ್ಕಿಬಿದ್ದಿದ್ದಾರೆ. ವಾಹನ ಹಾಗೂ ಅಕ್ಕಿ ಮೂಟೆಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಬಗ್ಗೆ ಆಹಾರ ನಿರೀಕ್ಷಕ ಉದಯ ತಳವಾರ ಅವರು ಮುರುಡೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪಿಎಸ್ಐ ಹನುಮಂತ ಬಿರಾದಾರ ಅವರು ಭಾರತೀಯ ದಂಡ ಸಂಹಿತೆಯಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ಅಕ್ಕಿಯನ್ನು ಎಲ್ಲಿಗೆ ಸಾಗಿಸಲಾಗುತ್ತಿತ್ತು ಮತ್ತು ಈ ಜಾಲದಲ್ಲಿ ಯಾರಿದ್ದಾರೆ ಎಂಬ ಬಗ್ಗೆ ತನಿಖೆ ಮುಂದುವರಿದಿದೆ.

ಭಂಡಾರಿ ಜನಸಂಖ್ಯೆ 7 ಸಾವಿರಕ್ಕೆ ಇಳಿಕೆ

ಕುಮಟಾ: ಉತ್ತರ ಕನ್ನಡ ಜಿಲ್ಲೆಯ 1 ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ಭಂಡಾರಿ ಸಮುದಾಯದವರನ್ನು ಸರ್ಕಾರ ಸವಿತಾ ಸಮಾಜಕ್ಕೆ ಸೇರಿಸಿದೆ. ಹೆಸರಿನ ಜೊತೆ ದೇಶಭಂಡಾರಿ ಎಂಬ ಪದನಾಮ ಹೊಂದಿದವರನ್ನು ಮಾತ್ರ ಸರ್ಕಾರ ಆ ಸಮುದಾಯಕ್ಕೆ ಸೇರಿಸಿದ್ದರಿಂದ ನಿಜವಾಗಿಯೂ ಭಂಡಾರಿ ಸಮುದಾಯದವರ ಸಂಖ್ಯೆ ಏಳು ಸಾವಿರಕ್ಕೆ ಇಳಿಕೆಯಾಗಿದೆ!. ಇಂದು ಈ ಸಮಾಜದವರಲ್ಲಿ ಆತಂಕ ಉಂಟು ಮಾಡಿದೆ.

ಜಿಲ್ಲೆಯಲ್ಲಿ ಕೊಂಕಣಿ ಮಾತನಾಡುವ ಭಂಡಾರಿ ಸಮುದಾಯದವರು ವಾಸವಾಗಿದ್ದಾರೆ. ಇದೇ ಸಮುದಾಯದ ಕೆಲವರು ಕಾರವಾರ ಸೇರಿ ಕೆಲ ಭಾಗದಲ್ಲಿ ದೇಶಭಂಡಾರಿ ಎಂಬ ಹೆಸರಿನಿಂದ ಗುರುತಿಸಿಕೊಂಡಿದ್ದಾರೆ. ಕುಮಟಾ, ಶಿರಸಿ, ಹೊನ್ನಾವರ ಭಾಗದಲ್ಲಿ ಭಂಡಾರಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಸರ್ಕಾರ ಭಂಡಾರಿ ಸಮುದಾಯದವರನ್ನು ದೇಶಭಂಡಾರಿ ಸಮುದಾಯದ ಲೆಕ್ಕಾಚಾರದಲ್ಲಿ ಸೇರಿಸಿಲ್ಲದಿರುವುದು ಈ ಎಡವಟ್ಟಿಗೆ ಕಾರಣ ಎನ್ನಲಾಗುತ್ತಿದೆ. ಭಂಡಾರಿ ಹಾಗೂ ದೇಶಭಂಡಾರಿ ಎರಡು ಒಂದೇ ಸಮುದಾಯವಾಗಿದ್ದು ಸರ್ಕಾರ ಅನಗತ್ಯವಾಗಿ ಅವರಿಬ್ಬರನ್ನು ಪ್ರತ್ಯೇಕವಾಗಿ ತೋರಿಸಿದೆ. ಸರ್ಕಾರ ಈಚೆಗೆ ಆರ್ಯ ಈಡಿಗ ಬಿಲ್ಲವ ಮಾಡಿದ ಸಮುದಾಯದವರು ಕುಲ ಅಧ್ಯಯನ ಸಮಿತಿ ಮಾಡಿದ್ದು, ಆ ಪಟ್ಟಿಯಲ್ಲಿರುವ 26 ಸಮುದಾಯದಲ್ಲಿ ದೇಶಭಂಡಾರಿ ಇದೆ. ಆದರೆ, ಆ ಪಟ್ಟಿಯಲ್ಲಿ ಭಂಡಾರಿ ಸಮುದಾ ಯದವರಿಗೆ ಸ್ಥಾನ ಸಿಕ್ಕಿಲ್ಲ. ಸರ್ಕಾರ ರಚಿಸಿದ ಆರ್ಯ ಈಡಿಗ ಬಿಲ್ಲವ ಸಮಾಜದ ಕುಲ ಅಧ್ಯಯನ ಸಮಿತಿಯೂ ಕುಲ ಕಸುಬಿನ ಆಧಾ ರದಲ್ಲಿ ಜಾತಿ ಲೆಕ್ಕಾಚಾರ ಮಾಡಿದ್ದು, ಆ ವೇಳೆ ಅನೇಕ ತಪ್ಪುಗಳಾಗಿವೆ.

ಲೋಕಾಯುಕ್ತರಿಂದ ತಾಲೂಕು ಭೇಟಿ

ಕಾರವಾರ: ಲೋಕಾಯುಕ್ತ ಅಧಿಕಾರಿಗಳ ತಾಲ್ಲೂಕು ಭೇಟಿ ಕಾರ್ಯಕ್ರಮವು ಸೆ.30 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಯಲ್ಲಾಪುರ ತಹಶೀಲ್ದಾರ ಕಚೇರಿ ಸಭಾ ಭವನದಲ್ಲಿ ನಡೆಯಲಿದೆ.ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಭರ್ತಿ ಮಾಡಿದ ದೂರುಗಳನ್ನು ಸ್ವೀಕಾರ ಮಾಡಿ, ವಿಚಾರಣೆ ನಡೆಸುವರು. 'ರ್ತವ್ಯ ಲೋಪ, ಕಳಪೆ ಕಾಮಗಾರಿ ಮಾಡುವ ಸರ್ಕಾರಿ ಅಧಿಕಾರಿ ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗಧಿತ ನಮೂನೆ-1 ಮತ್ತು 2 ರಲ್ಲಿ ಭರ್ತಿ ಮಾಡಿ ನೀಡಬಹುದು. ಸಾರ್ವಜನಿಕರು ತಮ್ಮ ದೂರುಗಳು ಇದ್ದಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಿಹಾರ ಕಂಡುಕೊಳ್ಳಬಹುದು.

{ಯದುವೀರ್ ಒಡೆಯರ್} ಸಂಸದರು

ದಸರಾ ಸಮಯದಲ್ಲಿ ಜನರು ಬೇರೆ ಕಡೆ ಹೋಗುತ್ತಾರೆ. ಅಧಿಕಾರಿಗಳು ದಸರಾದಲ್ಲಿ ಬ್ಯುಸಿ ಆಗಿರುತ್ತಾರೆ. ಇಂತಹ ಸಮಯದಲ್ಲಿ ನಿಜವಾದ ದತ್ತಾಂಶ ಸಂಗ್ರಹ ಕಷ್ಟ. ಮನೆ ಮನೆಗೆ ಹೋಗಿ ಗಣತಿ ಮಾಡಲು ಆಗಲ್ಲ. ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಇದನ್ನು ಮಾಡುತ್ತಿದೆ. ಈಗಾಗಲೇ 140 ಕೋಟಿ ವೆಚ್ಚದ ವರದಿ ಕಸದ ಬುಟ್ಟಿ ಸೇರಿದೆ.

ವೈದ್ಯರ ನೇಮಕಾತಿ ಆರಂಭಿಸಿ | ಆಸ್ಪತ್ರೆಯಿಂದ ಬಡವರಿಗೆ ಅನುಕೂಲ : ಅನಂತಮೂರ್ತಿ ಹೆಗಡೆ ಹೇಳಿಕೆ

ಯಂತ್ರೋಪಕರಣಕ್ಕೆ ಟೆಂಡರ್ ಕರೆಯದಿದ್ದರೆ ಹೋರಾಟ

ಶಿರಸಿ: ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಶಾಸಕರಿದ್ದ ಸಮಯದಲ್ಲಿ ಶಿರಸಿಗೆ ಕೊಡುಗೆಯಾಗಿ ಕೊಟ್ಟಂತಹ ಆಸ್ಪತ್ರೆ ಪ್ರಾರಂಭವಾದರೆ ಬಿಜೆಪಿ ಸರಕಾರಕ್ಕೆ ಆಸ್ಪತ್ರೆ ನಿರ್ಮಾಣ ಮಾಡಿದ ಕ್ರೆಡಿಟ್ ಸಿಗುತ್ತದೆ ಎಂಬ ಭ್ರಮೆಯಿಂದ ಈಗಿನ ಶಾಸಕರು ಸರಕಾರ ಆಸ್ಪತ್ರೆಯನ್ನು ಹಾಳು ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಅನ್ನಿಸುತ್ತಿದೆ. ಮುಂದಿನ ಚುನಾವಣೆವರೆಗೂ ಆಸ್ಪತ್ರೆ ವಿಚಾರವನ್ನು ತಳ್ಳುತ್ತಾ ಎಲೆಕ್ಷನ್ ಟೈಮಿನಲ್ಲಿ ಮುಂದಿನ ಚುನಾವಣೆಯಲ್ಲಿ ನಮ್ಮನ್ನು ಗೆಲ್ಲಿಸಿದರೆ ನಾವು ಆಸ್ಪತ್ರೆ ಮಾಡುತ್ತೇವೆ ಎನ್ನೋಣ ಎಂದು ನಾಟಕ ಮಾಡುತ್ತಿದ್ದೀರಾ? ಜನರಿಗೆ ಈ ಆಸ್ಪತ್ರೆ ಅವಶ್ಯಕತೆ ಎಷ್ಟಿದೆ ಎನ್ನುವುದರ ಅರಿವಿದೆಯೇ? ಎಷ್ಟು ಜನರ ಜೀವ ಜೀವನ ಹಾಳಾಗುತ್ತಿದೆ ಎನ್ನುವ ಕಲ್ಪನೆ ಇದೆಯೇ ಶೇ.80ರಷ್ಟು ಕಾಮಗಾರಿ ಮುಗಿದ ಕಾರಣ ಕೂಡಲೇ ವೈದ್ಯರ ನೇಮಕಾತಿ ಆಗಬೇಕು, ಯಂತ್ರೋಪಕರಣಗಳಿಗೆ ಟೆಂಡರ್ ಕರೆಯಬೇಕು, ಇನ್ನೂ 30 ದಿನದಲ್ಲಿ ಟೆಂಡರ್ ಆಗಿಲ್ಲ ಎಂದಾದಲ್ಲಿ ಪ್ರತಿ ಪಂಚಾಯತ್ ವ್ಯಾಪ್ತಿಯಲ್ಲಿ ಆಸ್ಪತ್ರೆ ಹೋರಾಟ ಸಮಿತಿ ರಚಿಸಿ ಹೋರಾಟ ಮಾಡಲಾಗುವುದು ಎಂದು ಸಾಮಾಜಿಕ ಹೋರಾಟಗಾರ ಅನಂತಮೂರ್ತಿ ಹೆಗಡೆ ಇದೀಗ ಪತ್ರಿಕಾಗೋಷ್ಟಿಯಲ್ಲಿ ಹೇಳಿದರು.

ಅವರು ಭಾನುವಾರ ಪತ್ರಿಕಾಭವನದಲ್ಲಿ ಸುದ್ದಿಗೋಷ್ಟಿ ನಡೆಸಿ ಮಾತನಾಡಿದರು. ಈ ಹಿಂದೆ ಶಾಸಕರಾದ ಭೀಮಣ್ಣನವರು ಸುದ್ದಿಗೋಷ್ಟಿಯಲ್ಲಿ ಮಾತನಾಡುವಾಗ ನನ್ನ ಕುರಿತಾಗಿ 'ಅನ್ಕಲ್ಚರ್ ರಾಜಕಾರಣಿ' ಅಂತ ಹೇಳಿದ್ದರು. ಜನರ ಸಮಸ್ಯೆ ಹೇಳಿದರೆ ವೈಯಕ್ತಿಕ ಟಾರ್ಗೆಟ್ ಮಾಡುವ ಅವಶ್ಯಕತೆ ಏನಿದೆ? ನಾನು ಇವತ್ತಿನ ವರೆಗೂ ಒಂದೇ ಒಂದು ಅಸಂವಿಧಾನಿಕ ಶಬ್ದ ಉಪಯೋಗಿಸಿಲ್ಲ ಎನ್ನುವುದು ಜನರ ಗಮನಕ್ಕಿದೆ ಎಂದರು. ಶಾಸಕರಿಗೆ ನಮ್ಮದೊಂದಿಷ್ಟು ಪ್ರಶ್ನೆಗಳಿದ್ದು, ಉತ್ತರ ನೀಡಬೇಕೆಂದು ಆಗ್ರಹಿಸಿದರು.

ಹಿಂದಿನ ಸರಕಾರದಲ್ಲಿ ಸರಕಾರಿ ಆಸ್ಪತ್ರೆಗಾಗಿ ಯಂತ್ರೋಪಕರಣಗಳಿಗಾಗಿ ಮೀಸಲಾಗಿ ಇಟ್ಟಿದ್ದ 30 ಕೋಟಿ ಹಣವನ್ನು ಮಾಯ ಮಾಡಿ ನಿಮ್ಮ ಸರ್ಕಾರದಲ್ಲಿ 5.20 ಕೋಟಿ ಪ್ರಸ್ತಾವನೆ ಕಳಿಸಿದ್ದೀರಿ ಎಂಬುದಾಗಿ ದಾಖಲೆ ನೀಡಿ, ಹಲವಾರು ಬಾರಿ ಆರೋಪಿಸಿದರೂ ಇನ್ನೂ ಯಾಕೆ ಉತ್ತರಿಸುತ್ತಿಲ್ಲ.ಈಗಾಗಲೇ ಪ್ರಸ್ತಾವನೆ ಕಳಿಸಿ ಒಂದು ವರ್ಷವಾಗಿದೆ. ಜೊತೆಗೆ 80% ಕಾಮಗಾರಿ ಈಗಾಗಲೇ ಮುಗಿದಿದೆ, ಯಾವಾಗ ಮುಂದಿನ ಕ್ರಮ ಕೈಗೊಳ್ಳುತ್ತೀರಿ ? ಆರೋಗ್ಯ ಮಂತ್ರಿಗಳಾಗಿರುವ ದಿನೇಶ ಗುಂಡೂರಾವ್ ಅವರು ಆಗಮಿಸಿದಾಗ ಈಗಾಗಲೇ ಮೇಲ್ದರ್ಜೆಗೇರಿಸಿರುವ ಆಸ್ಪತ್ರೆಯನ್ನು ನಾವು ಮತ್ತೆ ಮೇಲ್ದರ್ಜೆಗೇರಿಸುತ್ತೇವೆ ಎಂದು ನಾಟಕ ಮಾಡುವ ಅವಶ್ಯಕತೆ ಏನಿದೆ? ಯಂತ್ರೋಪಕಣಗಳಿಗೆ ಹಿಂದಿನ ಸರ್ಕಾರದಲ್ಲಿ ಇಟ್ಟ ಹಣ ಬಿಡುಗಡೆ ಮಾಡಿದರೆ ಆಯ್ತಲ್ಲವೇ? ಬಸ್ ವಿಚಾರವಾಗಿ ಶಿರಸಿ ಘಟಕದಲ್ಲಿ 79 ಬಸ್ಸುಗಳು 10 ಲಕ್ಷ ಕಿ.ಮೀಗೂ ಅಧಿಕ ರನ್ ಆಗಿರುವುದಿದೆ ಎಂದು ಹೇಳಿದ ಕೂಡಲೇ ತಾವು ಥಟ್ಟಂತ ಸುಳ್ಳು ಹೇಳಿದ್ದೀರಿ. ಹಿಂದಿನ ಬಿಜೆಪಿ ಸರ್ಕಾರದಲ್ಲಿ ಒಂದು ಬಸ್ ಖರೀದಿ ಮಾಡಿಲ್ಲ ಎಂಬುದಾಗಿ ಹೇಳಿದ್ದೀರಿ, ಆದರೆ ಹಿಂದಿನ ಬಿಜೆಪಿ ಸರ್ಕಾರದಲ್ಲಿ 87 ಹೊಸ ಬಸ್ ಬಂದಿದೆ. ಈ ರೀತಿ ಒಬ್ಬ ಜವಾಬ್ದಾರಿಯುತ ಶಾಸಕರಾಗಿ ಸುಳ್ಳು ಹೇಳಿದ್ದಕ್ಕೆ ತಾವು ವಿಷಾದ ವ್ಯಕ್ತಪಡಿಸುತ್ತೀರಾ? ಒಬ್ಬ ಶಾಸಕರಾದವರು ಈ ರೀತಿ ಬೇಕಾಬಿಟ್ಟಿಯಾಗಿ ಮಾತನಾಡಬಹುದೇ, ಇಡೀ ಕ್ಷೇತ್ರದಲ್ಲಿ ಬಸ್ ವ್ಯವಸ್ಥೆ ಹಾಳಾಗಿದೆ, ಸರಿ ಮಾಡಿಸುತ್ತೇನೆ ಎಂದು ಯಾವಾಗ ಹೇಳುತ್ತೀರಿ ? ನಾವು ರಾಜ್ಯ ಸರ್ಕಾರದ ವ್ಯಾಪ್ತಿಯ ರಸ್ತೆಗುಂಡಿ ಮುಚ್ಚಿ ಅಂದರೆ ನೀಲೆಕಣಿ ಮತ್ತು ಹಾವೇರಿ ರಸ್ತೆ ಬಗ್ಗೆ ಮಾತಾಡಿದ್ದೀರಿ. ಆದರೆ ಸಂಸದರು ರಸ್ತೆ ಗುಂಡಿ ಮುಚ್ಚುವ ಕೆಲಸವನ್ನು ಮಾಡಿದ್ದರು. ಈಗ ಹೈವೇ ಕೆಲಸ ಪ್ರಾರಂಭವಾಗಿದೆ, ನಿಮ್ಮದು ಯಾವಾಗ ಅಂತ ನಾವು ಕೇಳುತ್ತಿದ್ದೇವೆ. ನಮ್ಮ ಈ ಪ್ರಶ್ನೆಗಳಿಗೆ ತಾವು ಉತ್ತರಿಸದಿದ್ದರೆ ಮುಂದಿನ ಚುನಾವಣೆಯಲ್ಲಿ ಜನರೇ ತಮಗೆ ಉತ್ತರ ನೀಡುತ್ತಾರೆ ಎಂದು ಅವರು ಹೇಳಿದರು.

ಪ್ರಮುಖರಾದ ಜಯಶೀಲ ಗೌಡ ಮಾತನಾಡಿ, ನೆನೆಗುದಿಗೆ ಬಿದ್ದಿರುವ ಆಸ್ಪತ್ರೆ ವಿಚಾರದಲ್ಲಿ ಶೇ.80 ರಷ್ಟು ಕೆಲಸ ಪೂರ್ಣಗೊಂಡಿದ್ದರೂ ಸಹ ಇನ್ನೂ ಉಳಿದ ಟೆಂಡರ್ ಚಟುವಟಿಕೆ ಆಗಿಲ್ಲ. ಬಡವರು ಸಂಕಷ್ಟದಲ್ಲಿದ್ದಾರೆ. ಆದಷ್ಟು ಶೀಘ್ರ ಆಸ್ಪತ್ರೆ ಸೌಲಭ್ಯ ಜನರಿಗೆ ಸಿಗಲಿ ಎಂದರು.

ಮತ್ತೀಘಟ್ಟ ಭಾಗದ ಗ್ರಾಪಂ ಸದಸ್ಯ ನಾರಾಯಣ ಹೆಗಡೆ ಮಾತನಾಡಿ, ಶಿರಸಿ ಸಿದ್ದಾಪುರ ಯಾವುದೇ ಗ್ರಾಮೀಣ ರಸ್ತೆ ಸರಿ ಇಲ್ಲ, ಲೋಕೋಪಯೋಗಿ ವಿಭಾಗದ, ಜಿಲ್ಲಾ ಪಂಚಾಯತ್ ವಿಭಾಗದ ಒಂದು ರಸ್ತೆಯೂ ಸರಿ ಇಲ್ಲ, ಕಳೆದ ವರ್ಷದ ಹೊಂಡ ಮುಚ್ಚಿದ ಹಣವನ್ನೇ ಇನ್ನೂ ಗುತ್ತಿಗೆದಾರರಿಗೆ ಕೊಟ್ಟಿಲ್ಲ, ಈ ವರ್ಷ ರಿಪೇರಿ ಹಾಗಿರಲಿ ಹೊಂಡವನ್ನೇ ಮುಚ್ಚಿಲ್ಲ? ಇದರಿಂದ ಗ್ರಾಮೀಣ ಜನತೆಗೆ ತೊಂದರೆಯಾಗುತ್ತಿದೆ ಎಂದರು.

ನಿವೃತ್ತ ಸಾರಿಗೆ ಅಧಿಕಾರಿ 10 ಲಕ್ಷ ಕಿ.ಮೀಗಿಂತ ಹೆಚ್ಚು ಓಡಿರುವ ಬಸ್ಸುಗಳು ಅಪಘಾತವಾದರೆ ಜವಾಬ್ದಾರಿಯಾಗುತ್ತಾರೆ. ಈ ಕೂಡಲೇ ಜನರಿಗೆ ಸುರಕ್ಷತೆ ನಿಟ್ಟಿನಲ್ಲಿ ಶಾಸಕರು ಕ್ರಮ ಕೈಗೊಳ್ಳಲಿ ಎಂದರು. ಸುದ್ದಿಗೋಷ್ಟಿಯಲ್ಲಿ ಶಿವಾನಂದ ದೇಶಳ್ಳಿ ಇದ್ದರು.

ಸುದ್ದಿಗೋಷ್ಠಿಯಲ್ಲಿ ಅನಂತಮೂರ್ತಿ ಹೆಗಡೆ ಅವರು ಮಾತನಾಡಿದರು.

ಭೀಮಣ್ಣನವರೂ ಜನಸ್ಪಂದನ ಕಾರ್ಯಕ್ರಮ ಮಾಡಲಿ

ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಮಂಕಾಳ ವೈದ್ಯರು ತಮ್ಮ ಕ್ಷೇತ್ರದಲ್ಲಿ ಜನ ಸ್ಪಂದನ ಅಥವಾ ಜನತಾ ದರ್ಶನ ಕಾರ್ಯಕ್ರಮ ಪ್ರತಿ ತಿಂಗಳ ಮಾಡುತ್ತಾರೆ. ನೀವು ಯಾಕೇ ಮಾಡುತ್ತಿಲ್ಲ ? ವಿವಿಧ ರೀತಿಯ ಜನರ ಸಮಸ್ಯೆ ಸಾಕಷ್ಟು ಈ ಭಾಗದಲ್ಲಿದೆ. ತಾವು ಪ್ರತೀ ತಿಂಗಳ ಜನಸ್ಪಂದನ ಕಾರ್ಯಕ್ರಮವನ್ನು ದಯವಿಟ್ಟು ತಾವು ಮಾಡಲೇಬೇಕು ಎಂದು ಜನತೆಯ ಪರವಾಗಿ ಅನಂತಮೂರ್ತಿ ಹೆಗಡೆ ಆಗ್ರಹಿಸಿದ್ದಾರೆ.

ಇಂದಿನಿಂದ ನವರಾತ್ರ ನಮಸ್ಯಾ ಸಮಾಜ ಸಂಭ್ರಮ ಕಾರ್ಯಕ್ರಮ

ಸಾಗರ: ನಗರದ ರಾಘವೇಶ್ವರ ಸಭಾ ಭವನದಲ್ಲಿ ಸೆ. 22ರಿಂದ ಆರಂಭಗೊಳ್ಳುವ ನವರಾತ್ರ ನಮಸ್ಯಾ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯವಹಿಸಲು ಶನಿವಾರ ಸಾಗರಕ್ಕೆ ಆಗಮಿಸಿದ ಶ್ರೀ ರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಪುರ ಪ್ರವೇಶ ಸಾಗರೋಪಾದಿಯಲ್ಲಿ ಸೇರಿದ ಜನಸಮೂಹದ ಮಧ್ಯದಲ್ಲಿ ವೈಭವದಿಂದ ನಡೆಯಿತು.

ನಗರದ ಶಾರದಾಂಬಾ ವೃತ್ತದಿಂದ ಆರಂಭವಾದ ಮೆರವಣಿಗೆಯು ಗಣಪತಿ ದೇವಾಲಯದವರೆಗೆ ನಡೆಯಿತು. ಸುಮಾರು 10 ಸಾವಿರಕ್ಕೂ ಹೆಚ್ಚು ಶಿಷ್ಯ ಭಕ್ತರು ಸುಮಾರು 1.5 ಕಿಮೀ ಉದ್ದದ ಮೆರವಣಿಗೆಯಲ್ಲಿ ಭವ್ಯವಾಗಿ ನಡೆಯಿತು. 2 ಸಾವಿರ ಮಾತೆಯರು ಪೂರ್ಣಕುಂಭದೊಂದಿಗೆ ಶ್ರೀಗಳವರ ಸ್ವಾಗತಿಸಿದರು. ಚಂಡೆ ವಾದನ, ನಾದಸ್ವರ, ಭಜನಾ ಕುಣಿತ, ರಾಮ ಸಂಕೀರ್ತನೆ ಸೇರಿದಂತೆ ಹತ್ತಕ್ಕೂ ಹೆಚ್ಚು ಕಲಾತಂಡಗಳು ಹಾಗೂ ಸುಮಾರು 15 ಅಡಿ ಎತ್ತರದ ಧನುರ್ಧಾರಿ ರಾಮನ ಮೂರ್ತಿ ಮೆರವಣಿಗೆಯ ಸೊಬಗನ್ನು ಹೆಚ್ಚಿಸಿತ್ತು. ಆರಂಭದಲ್ಲಿ ಶ್ರೀ ಶಾರದಾ ದೇವಿಗೆ ಪೂಜಿಸಿ, ವಿಶೇಷವಾಗಿ ಅಲಂಕರಿಸಿದ ರಥಾರೋಹಣ ಗೈದ ಶ್ರೀಗಳವರಿಗೆ ಕ್ಷೇತ್ರದ ಶಾಸಕ ಗೋಪಾಲಕೃಷ್ಣ ಬೆಳೆಯೂರು, ಮಾಜಿ ಸಚಿವ ಹರತಾಳು ಹಾಲಪ್ಪ, ಶಿಮೂಲ್ ಅಧ್ಯಕ್ಷ ವಿದ್ಯಾಧರ ಫಲ ಸಮರ್ಪಿಸಿದರು. ವಿವಿಧ ಸಮಾಜಗಳ ಮುಖಂಡರು ಭಾಗವಹಿಸಿದ್ದರು.

ಶೋಭಾಯಾತ್ರೆಯ ನಂತರ ಮಾತನಾಡಿದ ಶ್ರೀಗಳು, ಸಾಗರ ನಗರಕ್ಕೆ ಸಾಗರ ಎಂಬ ಹೆಸರು ಸಲ್ಲುವುದು ಹೇಗೆ ಎಂಬ ಪ್ರಶ್ನೆಯಿತ್ತು. ಅದಕ್ಕೀಗ ಉತ್ತರ ಸಿಕ್ಕಿದೆ. ಪುರಪ್ರವೇಶದ ಸಂದರ್ಭದಲ್ಲಿ ಭಕ್ತಿ ಸಾಗರವಾಗಿ ಹೊಮ್ಮಿದೆ. ಸಾಗರಕ್ಕೆ ಸಾಗರವೇ ಹೋಲಿಕೆ, ಆಕಾಶಕ್ಕೆ ಆಕಾಶವೇ ಹೋಲಿಕೆ, ರಾಮ-ರಾವಣ ಯುದ್ಧಕ್ಕೆ ಆ ಯುದ್ಧವೇ ಹೋಲಿಕೆ ಎಂದು ವಾಲ್ಮೀಕಿ ಮಹರ್ಷಿ ಹೇಳುತ್ತಾರೆ. ಸಾಗರ ನಗರದಲ್ಲಿ ನಡೆದ ಪುರಪ್ರವೇಶ ಉತ್ಸವಕ್ಕೆ ಬೇರೆ ಹೋಲಿಕೆ ಇಲ್ಲ. ಇವೆಲ್ಲ ವೈಭವಗಳು ರಾಜರಾಜೇಶ್ವರಿಗೆ ಸಲ್ಲುತ್ತದೆ ಎಂದರು.

ಶಾಸಕ ಗೋಪಾಲಕೃಷ್ಣ ಬೇಳೂರು ಮಾತನಾಡಿ, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಸಾಗರದಲ್ಲಿ ದೇವಿಯ ಆರಾಧನೆ ನಡೆಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ. ಶಾಸಕನಾಗಿ ಹಾಗೂ ಮಠದ ಭಕ್ತನಾಗಿ ಕಾರ್ಯಕ್ರಮಕ್ಕೆ ಅಗತ್ಯವಾದ ಎಲ್ಲಾ ಸಹಕಾರ ನೀಡುತ್ತೇನೆ ಎಂದರು.

ನವರಾತ್ರ ನಮಸ್ಯಾ: ಸೋಮವಾರದಿಂದ ಪ್ರತಿದಿನ ಮಧ್ಯಾಹ್ನ ಶ್ರೀಗಳಿಂದ ಲಲಿತೋಪಾಖ್ಯಾನ ವಿಶೇಷ ಪ್ರವಚನ ಇರಲಿದ್ದು, ಬೆಳಗ್ಗೆ ಶ್ರೀಪೂಜೆ, ಲಲಿತಾ ಮೂರ್ತಿ ಪೂಜೆ, ಚಂಡಿಕಾ ಹವನ, ಚಂಡೀ ಸಪ್ತಶತಿ ಪಾರಾಯಣ, ಕುಂಕುಮಾರ್ಚನೆ, ಭಜನೆ, ಸುವಾಸಿನಿ ಪೂಜೆ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಪುರ ಪ್ರವೇಶ ಜನಸಮೂಹದ ಮಧ್ಯದಲ್ಲಿ ವೈಭವದಿಂದ ನಡೆಯಿತು.

ಗಮನ ಸೆಳೆದ ವಾಲಿ ಮೋಕ್ಷ ತಾಳಮದ್ದಳೆ

ವೇಂಕಟರಮಣ ದೇವಸ್ಥಾನದಲ್ಲಿ ನಡೆದ ವಾಲಿ ಮೋಕ್ಷ ತಾಳಮದ್ದಳೆ ಗಮನ ಸೆಳೆಯಿತು.

ಶಿರಸಿ: ತಾಲೂಕಿನ ಶ್ರೀಕ್ಷೇತ್ರದ ಮಂಜುಗುಣಿಯ ವೇಂಕಟರಮಣ ದೇವಸ್ಥಾನದಲ್ಲಿ ನಡೆದ ವಾಲಿ ಮೋಕ್ಷ ತಾಳಮದ್ದಳೆ ಗಮನ ಸೆಳೆಯಿತು. ಮಂಜುಗುಣಿ ಶ್ರೀವೇಂಕಟರಮಣ ದೇವಸ್ಥಾನದ ಸಹಕಾರದಲ್ಲಿ ಶಬರ ಸಂಸ್ಥೆ ಸೋಂದಾ ಇವರಿಂದ ತಾಳಮದ್ದಳೆ ಯಶಸ್ವಿಯಾಗಿ ನಡೆಯಿತು.

ಹಿಮ್ಮೇಳದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕೇಶವ ಹೆಗಡೆ ಕೊಳಗಿ ತಮ್ಮ ಇಂಪಾದ ಹಾಡುಗಾರಿಕೆಯಲ್ಲಿ ಜನರನ್ನು ರಂಜಿಸಿದರೆ, ಭರವಸೆಯ ಯುವ ಮದ್ದಳೆ ವಾದಕ ಅನಿರುದ್ಧ ಹೆಗಡೆ ಬೆಣ್ಣೆಮನೆ ಸಮರ್ಥ ಸಾಥ್ ನೀಡಿದರು. ಮುಮ್ಮೇಳದಲ್ಲಿ ವಾಲಿಯಾಗಿ ವಿದ್ವಾನ್ ಗಣಪತಿ ಭಟ್ ಸಂಕದಗುಂಡಿ, ರಾಮನಾಗಿ ಮೋಹನ ಹೆಗಡೆ ಹೆರವಟ್ಟಾ, ಸುಗ್ರೀವನಾಗಿ ಎಂ ಎನ್ ಹೆಗಡೆ ಹಳವಳ್ಳಿ, ತಾರೆಯಾಗಿ ಕರುಣಾಕರ ಹೆಗಡೆ ಕಲ್ಲಳ್ಳಿ ತಮ್ಮ ವಾಗ್ಝರಿಯಿಂದ ಪ್ರೇಕ್ಷಕರನ್ನು ಪೌರಾಣಿಕ ಲೋಕಕ್ಕೆ ಕರೆದೊಯ್ದರು. ಮಂಜುಗುಣಿ ದೇವಸ್ಥಾನದ ಪ್ರಧಾನ ಅರ್ಚಕ ಶ್ರೀನಿವಾಸ ಭಟ್ ಕಲಾವಿದರಿಗೆ ಶಾಲು ಹೊದೆಸಿ ಗೌರವಿಸಿದರು. ಕರುಣಾಕರ ಹೆಗಡೆ ಸ್ವಾಗತಿಸಿದರು. ನಾಗರಾಜ್ ಜೋಶಿ ಸೋಂದಾ ವಂದಿಸಿದರು.

ಯಲ್ಲಾಪುರ ಕೈಗಾರಿಕಾ ಸಹಕಾರಿ ಸಂಘದ 10ನೇ ವಾರ್ಷಿಕ ಸಭೆ

ಸಣ್ಣ ಕೈಗಾರಿಕೆ ಬೆಳವಣಿಗೆಗೆ ಆದ್ಯತೆ ನೀಡಿ

ಯಲ್ಲಾಪುರ: ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳಿಗೆ ಅವಕಾಶವಿಲ್ಲ. ಹಾಗಂತ ಸಣ್ಣ ಕೈಗಾರಿಕೆಗಳನ್ನು ಬೆಳೆಸದಿದ್ದರೆ ಯುವ ಜನಾಂಗ ಉದ್ಯೋಗವಿಲ್ಲದೇ ಬೇರೆಡೆ ಹೋಗುವ ಸ್ಥಿತಿಗೆ ಕಾರಣವಾಗುತ್ತದೆ. ಆ ಹಿನ್ನೆಲೆಯಲ್ಲಿ ಇಂತಹ ಕೈಗಾರಿಕಾ ಬ್ಯಾಂಕುಗಳು ಸಣ್ಣ ಸಣ್ಣ ಕೈಗಾರಿಕೆಗಳಿಗೆ ಸಾಲ ನೀಡಿ, ಯುವಕರಿಗೆ ಉದ್ಯೋಗ ವ್ಯವಹಾರ ಕಲ್ಪಸುವುದಕ್ಕೆ ಮಹತ್ವ ನೀಡಬೇಕು ಎಂದು ಹಿರಿಯ ಸಹಕಾರಿ ಯು.ಕೆ.ಸೌಹಾರ್ದ ಬ್ಯಾಂಕಿನ ಅಧ್ಯಕ್ಷ ಪ್ರಮೋದ ಹೆಗಡೆ ಹೇಳಿದುರು.

ಅಮರು, ಶನಿವಾರ ಪಟ್ಟಣದ ಶ್ರೀ ಶಕ್ತಿಗಣಪತಿ ದೇವಸ್ಥಾನದ ಸಭಾಭವನದಲ್ಲಿ ಯಲ್ಲಾಪುರ ಕೈಗಾರಿಕಾ ಸಹಕಾರಿ ಸಂಘದ 10ನೇ ವಾರ್ಷಿಕ ಸಭೆಯಲ್ಲಿ ಮಾತನಾಡಿದರು.

ಹಿಂದೆ ದೊಡ್ಡನೆ ಗಣೇಶ ಹೆಗಡೆಯುರು, ಯಲ್ಲಾಪುರದ ಬಾಳಂ ಭಟ್ಟ, ಡೊಮಗೆರಿಯ ದಿವಾಕರ ಹೆಗಡೆ ಇಂತಹಮರು ಸಹಕಾರಿ ಕೈಗಾರಿಕಾ ಬ್ಯಾಂಕನ್ನು ಸ್ಥಾಪಿಸಿದ್ದರು. ಆದೆರು, ಇಂದು ಊರ್ಜಿತವಾಗಿ ಇುರುವುದು ಕಂಡುಬುರುತ್ತಿಲ್ಲ. ಆದೆರು ಡಿ.ಶಂಕರ ಭಟ್ಟರ ನೇತೃತ್ವದಲ್ಲಿ ಈ ಕೈಗಾರಿಕಾ ಬ್ಯಾಂಕು ಉತ್ತಮ ಪ್ರಗತಿಯನ್ನು ಸಾಧಿಸುತ್ತಿದೆ.

ಯುವಕರನ್ನು ಹುಡುಕಿ ಹೊಸ ಹೊಸ ಉದ್ಯೋಗಕ್ಕೆ ಸಾಲ ನೀಡಿ ಸಣ್ಣ ಕೈಗಾರಿಕೆ ಬೆಳೆಸುವಲ್ಲಿ ಪ್ರಯತ್ನಿಸಿದೆರು ಸರ್ಕಾರದಿಂದ ದೊಡ್ಡ ಪ್ರಮಾಣದಲ್ಲಿ ಸಬ್ಸಿಡಿ ಪಡೆಯಬಹುದು. ಅದರಿಂದ ಯುವಕರಿಗೆ ಉದ್ಯೋಗದಲ್ಲಿ ಮುಂದುವರಿಯಲು ಅನುಕೂಲವಾಗಲಿದೆ ಎಂದುರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಡಿ.ಶಂಕರ ಭಟ್ಟ ಮಾತನಾಡಿ, ಯಾವುದೇ ಸಂಸ್ಥೆಯ ಹಣಕಾಸಿನ ಸ್ಥಿತಿಗತಿಯನ್ನು ಪ್ರತಿವರ್ಷವೂ ಸದಸ್ಯರಿಗೆ ನೀಡಬೇಕು. ಒಂದು ಸಂಸ್ಥೆ ಬೆಳೆಯಲು ಉತ್ತಮ ಸಾಲಗಾರುರು, ಠೇವಣಿದಾರುರು ಬೇಕು. ಹಾಗೆಯೇ ಸಿಬ್ಬಂದಿ ಪ್ರಾಮಾಣಿಕ ಸೇವೆ ಅತ್ಯಂತ ಮಹತ್ವವಾದುದು. ನಾವು ಸರ್ಕಾರದಿಂದಾಗಲೀ,

ಯಾವುದೇ ಬ್ಯಾಂಕಿನಿಂದ ಸಾಲ ಪಡೆಯದೇ ಈ ವರ್ಷ 27 ಲಕ್ಷ ಲಾಭ ಗಳಿಸಿದ್ದೇವೆ ಎಂದ ಅಮರು, ಕಾಯಿದ್ದಟ್ಟ ನಿಧಿಗೆ 8 ಲಕ್ಷ, ಸಹಕಾರ ಶಿಕ್ಷಣ ನಿಧಿಗೆ 40,000 ೊರ. ಕಟ್ಟಡ ನಿಧಿಗೆ 10 ಲಕ್ಷ ೊರ., ಕೈಗಾರಿಕಾ ಅಭಿವೃದ್ಧಿ ನಿಧಿಗೆ 49,000ರು.ಮುಳುಗುವ ಸಾಲ ನಿಧಿಗೆ 6.50 ಲಕ್ಷ ರು. ಸಿಬ್ಬಂದಿ ಕ್ಷೇಮ ನಿಧಿಗೆ 50000ರು. ಧರ್ಮಾರ್ಥ ನಿಧಿಗೆ 5,000ರು, ಸಿಬ್ಬಂದಿಗೆ ಬೋನಸ್ 75,000ರು., ಉತ್ಸವ ನಿಧಿಗೆ 25,000 ೊರ. ಹೀಗೆ 27 ಲಕ್ಷ ಲಾಭ ಗಳಿಸಿದ್ದೇವೆ ಎಂದು ವಿವರಿಸಿದುರು.

ವಿಕಾಸ ಬ್ಯಾಂಕ್ ಅಧ್ಯಕ್ಷ ಮುಳಿರ ಹೆಗಡೆ, ಹಿರಿಯ ಸಹಕಾರಿ ಪಿ.ಜಿ.ಹೆಗಡೆ ಕಳಚೆ ಸಾಂದರ್ಭಿಕ ಮಾತನಾಡಿದುರು. ಈ ಸಂದರ್ಭದಲ್ಲಿ ಉತ್ತಮ ಠೇವು ನೀಡಿದ ಲಲಿತಾ ಎಂ.ಹೆಗಡೆ ಮತ್ತು ಉತ್ತಮ ಸಾಲಗಾರಾದ ಪ್ರೇಮಾ ಭೋವಿವಡ್ಡರ್ ಇವರನ್ನು ಸನ್ಮಾನಿಸಲಾಯಿತು.

ಸಂಸ್ಥೆಯ ಸಿಬ್ಬಂದಿ ವೀಣಾ ಧರ್ಮಶೆಟ್ಟಿ ಪ್ರಾರ್ಥಿಸಿದುರು. ಸಂಸ್ಥೆಯ ಉಪಾಧ್ಯಕ್ಷ ಕೆ.ಟಿ.ಹೆಗಡೆ ಸ್ವಾಗತಿಸಿದುರು. ವ್ಯವಸ್ಥಾಪಕ 'ರವೀಂದ್ರ ದೇಸಾಯಿ ನಿರ್ವಹಿಸಿ, ವರದಿ ವಾಚಿಸಿದುರು.

ನಿರ್ದೇಶಕ ಅನಂತ ಗಾಂವ್ಕರ, ನಾಗೇಂದ್ರ ಕವಾಳೆ, ಶ್ರೀಪಾದ ಮೆಣಸುಮನೆ, ಅಲ್ಲದೇ ಡಾ.ರವಿ ಭಟ್ಟ ವೇದಿಕೆಯಲ್ಲಿದ್ದರು.

ಕೈಗಾರಿಕಾ ಸಹಕಾರಿ ಸಂಘದ 10ನೇ ವಾರ್ಷಿಕ ಸಭೆಯನ್ನು ಪ್ರಮೋದ ಹೆಗಡೆ ಅವರು ಉದ್ಘಾಟಿಸಿದರು.

ಕರಾವಳಿ ಪ್ರದೇಶ ಸ್ವಚ್ಛವಾಗಿಡುವುದು ಜವಾಬ್ದಾರಿ

ಕಾರವಾರ: ಭಾರತೀಯ ಕೋಸ್ಟ್ ಗಾರ್ಡ್ ಆಯೋಜಿಸಿದ್ದ ಅಂತಾರಾಷ್ಟ್ರೀಯ ಕಡಲತೀರ ಸ್ವಚ್ಛತಾ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ದಿಲೀಷ್ ಶಶಿ ಅವರು, ಸಮುದ್ರ ಮತ್ತು ಕರಾವಳಿ ಪ್ರದೇಶಗಳನ್ನು ಸ್ವಚ್ಛವಾಗಿಡುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಒತ್ತಿ ಹೇಳಿದರು.

ಸಮುದ್ರದಲ್ಲಿನ ಪ್ಲಾಸ್ಟಿಕ್ ತ್ಯಾಜ್ಯದಿಂದ ಕಡಲ ಜೀವಿಗಳು ಮತ್ತು ಅವುಗಳ ಮೂಲಕ ಮಾನವನ ಆರೋಗ್ಯದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಅವರು ಗಮನ ಸೆಳೆದರು.ರವೀಂದ್ರನಾಥ್ ಠಾಗೋರ್ ಬೀಚ್‌ನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮಾತನಾಡಿದ ಡಾ. ಶಶಿ, ಜೀವಸಂಕುಲದ ಮೂಲ ಸಮುದ್ರವೇ ಆಗಿದ್ದರೂ, ಮಾನವನ ಚಟುವಟಿಕೆಗಳಿಂದ ಅದು ಅತಿ ಹೆಚ್ಚು ಕಲುಷಿತಗೊಳ್ಳುತ್ತಿದೆ ಎಂದು ವಿವರಿಸಿದರು. ಪ್ಲಾಸ್ಟಿಕ್ ಮಾಲಿನ್ಯವನ್ನು ನಿಯಂತ್ರಿಸುವುದು ಕೇವಲ ಒಂದು ಇಲಾಖೆಯ ಕರ್ತವ್ಯವಲ್ಲ, ಬದಲಾಗಿ ಪ್ರತಿ ಮನೆಯಿಂದಲೂ ಸ್ವಚ್ಛತೆಯ ಪಾಠ ಪ್ರಾರಂಭವಾಗಬೇಕು ಎಂದು ಕರೆ ನೀಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಅವರು, ಪ್ರತಿಯೊಬ್ಬರೂ ಕಡಲ ತೀರಗಳನ್ನು ಸ್ವಚ್ಛವಾಗಿಡುವ ಪ್ರಮಾಣ ವಚನ ಸ್ವೀಕರಿಸಬೇಕು ಮತ್ತು ಮನೆಯಲ್ಲಿಯೇ ತ್ಯಾಜ್ಯ ನಿರ್ವಹಣೆ ಮಾಡಬೇಕು ಎಂದು ಸಲಹೆ ನೀಡಿದರು. ಕೋಸ್ಟ್ ಗಾರ್ಡ್ ಕಮಾಂಡೆಂಟ್ ಕಿರಣ್ ಕುಮಾರ್ ಸಿನ್ಹಾ ಅವರು, ಪ್ಲಾಸ್ಟಿಕ್‌ಗೆ ಪರ್ಯಾಯವಾದ ಪರಿಸರ ಸ್ನೇಹಿ ವಸ್ತುಗಳ ಬಳಕೆಗೆ ಒತ್ತು ನೀಡಿದರು ಮತ್ತು ಕಡಲತೀರ ಸ್ವಚ್ಛತೆಯಲ್ಲಿ ಯುವ ಸಮೂಹದ ಪಾತ್ರದ ಮಹತ್ವವನ್ನು ತಿಳಿಸಿದರು.

ಈ ಕಾರ್ಯಕ್ರಮವು ಸೆ.17 ರಿಂದ ಅಕ್ಟೋಬರ್ 2 ರವರೆಗೆ ನಡೆಯುತ್ತಿರುವ 'ಸ್ವಚ್ಛತಾ ಹಿ ಸೇವಾ' ಪಾಕ್ಷಿಕ ಅಭಿಯಾನದ ಭಾಗವಾಗಿತ್ತು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ರವಿರಾಜ್ ಅಂಕೋಲೆಕರ್, ನೌಕಾಪಡೆಯ ಅಧಿಕಾರಿ ರಜತ್ ಕುಮಾರ್, ಮೀನುಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರವೀಂದ್ರ ತಾಳೇಕರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಕೋಸ್ಟ್ ಗಾರ್ಡ್ ಸಿಬ್ಬಂದಿ ಮತ್ತು ಮೀನುಗಾರರು ಭಾಗವಹಿಸಿದ್ದರು.

ಕುಮಟಾ, ಭಟ್ಕಳ ತಾಲೂಕು ಘಟಕಗಳಿಗೆ ಚಾಲನೆ

ಕುಮಟಾ: ಜಿಲ್ಲೆಯಲ್ಲಿ ಕನ್ನಡಪರ ಚಟುವಟಿಕೆಗಳಿಗೆ ಹೊಸ ಹುರುಪು ನೀಡುವ ಉದ್ದೇಶದಿಂದ ಕರ್ನಾಟಕ ರಣಧೀರರ ವೇದಿಕೆಯ ಕುಮಟಾ ಹಾಗೂ ಭಟ್ಕಳ ತಾಲೂಕು ಘಟಕಗಳಿಗೆ ರಾಜ್ಯಾಧ್ಯಕ್ಷ ಶಂಕರ ಗೌಡ್ರು ಕೆ.ಆರ್. ಮಿರ್ಜಾನದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ರವಿವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಶಂಕರ್ ಗೌಡ್ರು ಕೆ.ಆರ್. ಕರ್ನಾಟಕ ರಣಧೀರರ ವೇದಿಕೆಯು ಕೇವಲ ಹೋರಾಟಗಳಿಗೆ ಸೀಮಿತವಾದ ಸಂಘಟನೆಯಲ್ಲ. ಇದು ನಾಡಿನ ನೆಲ, ಜಲ, ಭಾಷೆಯ ಅಸ್ಮಿತೆಯನ್ನು ಕಾಪಾಡುವ ಕನ್ನಡಿಗರ ಗಟ್ಟಿ ಧ್ವನಿ. ನೂತನವಾಗಿ ಜವಾಬ್ದಾರಿ ಹೊತ್ತಿರುವ ಪದಾಧಿಕಾರಿಗಳು ಯಾವುದೇ ಒತ್ತಡಕ್ಕೆ ಮಣಿಯದೆ, ಪ್ರಾಮಾಣಿಕವಾಗಿ ಕನ್ನಡದ ಕೆಲಸ ಮಾಡಬೇಕು. ನೊಂದವರ ಪರವಾಗಿ ಧ್ವನಿ ಆಗಬೇಕು ಎಂದು ಕರೆ ನೀಡಿದರು.

ಟಿಎಸ್‌ಎಸ್ ಲೆಕ್ಕದ ಬಗ್ಗೆ ತನಿಖೆಯಾಗಲಿ: ರಾಮಕೃಷ್ಣ ಹೆಗಡೆ ಕಡವೆ

ಶಿರಸಿ: ಅಡಿಕೆ ಬೆಳೆಗಾರರ ಜೀನವಾಡಿ ಸಂಸ್ಥೆಯಾದ ಟಿಎಸ್‌ಎಸ್ ಲೆಕ್ಕದ ಬಗ್ಗೆ ಸರಕಾರದಿಂದಲೇ ಸಹಕಾರಿ ಕಾಯ್ದೆ ಪ್ರಕಾರ 64 ರಲ್ಲಿ ತನಿಖೆಯಾಗಿ ಸ್ಪಷ್ಟತೆ ಸದಸ್ಯರಿಗೆ ಸಿಗಲಿ ಎಂದು ಸಂಸ್ಥೆಯ ನಿಕಟಪೂರ್ವ ಕಾರ್ಯಾಧ್ಯಕ್ಷ ರಾಮಕೃಷ್ಣ ಹೆಗಡೆ ಕಡವೆ ಒತ್ತಾಯಿಸಿದ್ದಾರೆ.

ಅವರು ಭಾನುವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾಡತನಾಡಿ, ಸಂಘದ ಹಣವನ್ನು ಸರಿಯಾಗಿ ದುಡಿಸುವುದಕ್ಕೋಸ್ಕರ ಮತ್ತು ಆ ಮೂಲಕ ಸಂಘಕ್ಕೆ ಹೆಚ್ಚಿನ ಆದಾಯ ಕಲ್ಪಿಸುವ ಸದುದ್ದೇಶದಿಂದ ಕಾಯ್ದೆ ಪ್ರಕಾರ ಸಾಲ ನೀಡಲಾಗಿದ್ದು, ಸಾಲಗಳಿಗೆ ರೈತರಿಗೆ ನೀಡಲ್ಪಡುವ ಸಾಲಕ್ಕಿಂತ ಹೆಚ್ಚಿನ ಬಡ್ಡಿ ವಿಧಿಸಲಾಗುತ್ತಿತ್ತು. ಸಾಲ ಪಡೆದ ಜಮೀನುಗಳನ್ನು ಹೂಡಿಕೆ ವಿಭಾಗದಿಂದ ಮಾರಾಟ ಮಾಡಿದಾಗ ಸಂಘಕ್ಕೆ ಕಮಿಷನ್ ರೂಪದಲ್ಲಿಯೂ ಹೆಚ್ಚುವರಿ ಆದಾಯ ಆಗುತ್ತಿತ್ತು. ಇದನ್ನು ಸಂಘದ ಸದಸ್ಯರ ಸೌಲಭ್ಯಗಳಿಗೆ ಬಳಸುತ್ತಿದ್ದೇವು. ನೀಡಿದ ಸಾಲಗಳ ಮರುಪಾವತಿ ವಿಳಂಬವಾದರೆ ಆಡಳಿತ ಮಂಡಳಿ ವಸೂಲಿ ಮಾಡಬೇಕು. ಆದರೆ, ನೀಡಿದ ಸಾಲವನ್ನು ಅವ್ಯವಹಾರ ಎಂದು ಹೇಳುವುದು ಸರಿಯಲ್ಲ, ನ್ಯಾಯಾಲಯದ ಮೊರೆ ಹೋದರೆ ವಸೂಲಿಯೂ ವಿಳಂಬವಾಗಲಿದೆ. ಅವರನ್ನು ಕರೆದು ಮಾತನಾಡಬಹುದಿತ್ತು. ವೈಯಕ್ತಿಕ ದ್ವೇಷದದಿಂದ ಪ್ರಕರಣ ದಾಖಲಿಸಿದ್ದಾರೆ. ಇದರಿಂದ ಸಂಘಕ್ಕೆ ಹಾನಿಯೇ ಹೊರತು, ಲಾಭವಲ್ಲ ಎಂದರು.

ಕೆಡಿಸಿಸಿ ಬ್ಯಾಂಕ್‌ನಿಂದ ಟಿಎಸ್‌ಎಸ್‌ಗೆ ಸಾಲ ನೀಡಿಲ್ಲ ಎಂಬುದಕ್ಕೆ ಅಥಾವೆಯಲ್ಲಿ ಆರ್ಥಿಕ ಸುಸ್ಥಿತಿಯನ್ನು ಪ್ರದರ್ಶಿಸದಿರುವುದೇ ಪ್ರಮುಖ ಕಾರಣ. ಇದಕ್ಕೆ ಈಗಿನ ಕೆಡಿಸಿಸಿ ಬ್ಯಾಂಕಿನ ಅಧ್ಯಕ್ಷರನ್ನು ಹೊಣೆಗಾರರನ್ನಾಗಿ ದೂಷಿಸುವುದು ಸರಿಯಲ್ಲ ಎಂದು ಕೆಡಿಸಿಸಿ ಹಾಲಿ ನಿರ್ದೇಶಕನಾಗಿಯೂ ಹೇಳುತ್ತೇನೆ. 2023-24 ರಲ್ಲಿ ಮೂರು ಬೇರೆ ಬೇರೆ ದಿನಾಂಕಕ್ಕೆ ಮೂರು ಬೇರೆ ಬೇರೆ ಅಂಕಿ-ಅಂಶಗಳನ್ನು ಒಳಗೊಂಡ ಅಥಾವೆ ಪತ್ರಿಕೆಯನ್ನು ನೀಡಿದ್ದು, ಸದಸ್ಯರಿಗೆ, ಸಹಕಾರ ಇಲಾಖೆಗೆ ಮಾಡಿರುವ ಅಪರಾಧದ ಪರಾಕಾಷ್ಠೆ ಎಂದರು.

ಹಾಲಿ ಆಡಳಿತ ಮಂಡಳಿಗೆ ಅಡಿಕೆ ಮಾರುಕಟ್ಟೆ ಜ್ಞಾನ ಇಲ್ಲದೇ, ಶಿವಮೊಗ್ಗದ ಕೆಂಪಡಿಕೆ ಹಾಗೂ ಶಿರಸಿ ಕೆಂಪಡಿಕೆಗೂ ಪ್ರತಿ ಕ್ವಿಂಟಲ್ಲಿಗೆ ಸುಮಾರು 12 ಸಾವಿರ ರೂ. ವ್ಯತ್ಯಾಸ ಕಾಣುತ್ತಿದೆ. ಆದರೆ ಮೊದಲು ಇದು ಕೇವಲ 500 ರಿಂದ 1000 ರೂಪಾಯಿ ಮಾತ್ರ ವ್ಯತ್ಯಾಸ ಕಾಣುತ್ತಿತ್ತು. ಮಂಗಳೂರು ಚಾಲಿಗೂ, ಶಿರಸಿ ಚಾಲಿ ಅಡಕೆಗೂ ಪ್ರತಿ ಕ್ವಿಂಟಾಲ್‌ಗೆ 8 ಸಾವಿರ ರೂ. ವ್ಯತ್ಯಾಸ ಕಾಣುತ್ತಿದೆ. ಆದರೆ ಇದು ಮೊದಲು 500 ರಿಂದ 800 ರೂಪಾಯಿ ವ್ಯತ್ಯಾಸ ಇರುತ್ತಿತ್ತು. ತಂದೆ ದಿವಂಗತ ಶ್ರೀಪಾದ ಹೆಗಡೆ ಕಡವೆ ಹಾಗೂ ದಿವಂಗತ ಶಾಂತಾರಾಮ ಹೆಗಡೆ ಸಹಕಾರಿ ತತ್ವದಡಿಯಲ್ಲಿ ಸಂಘವನ್ನು ಮುನ್ನಡೆಸಿದ್ದೆವು ಹಾಗೂ ನಮ್ಮ ನಡುವಳಿಕೆಯ ಬಗ್ಗೆ ನಮಗೆ ತೃಪ್ತಿಯಿದೆ. ಆದರೆ ನಮಗೆ ಖಳನಾಯಕ ಪಟ್ಟ ಸಿಕ್ಕಿದೆ ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ನಿರ್ದೇಶಕರಾದ ಗಣಪತಿ ರಾಯ್ಸದ, ಶಾರದಾ ಹೆಗಡೆ, ಸೀತಾರಾಮ ಹೆಗಡೆ ನೀರ್ನಳ್ಳಿ, ಚಂದ್ರಶೇಖರ ಹೆಗಡೆ ಹೂಡ್ಲಮನೆ, ನಾರಾಯಣ ನಾಯ್ಕ, ನರಸಿಂಹ ಹೆಗಡೆ ಗುಂಡ್ಕಲ್ ಮತ್ತಿತರರು ಇದ್ದರು.

ಸುದ್ದಿಗೊಷ್ಠಿಯಲ್ಲಿ ಸಂಸ್ಥೆಯ ನಿಕಟಪೂರ್ವ ಕಾರ್ಯಾಧ್ಯಕ್ಷ ರಾಮಕೃಷ್ಣ ಹೆಗಡೆ ಕಡವೆ ಮಾತನಾಡಿದರು.

ನಮ್ಮ ಆಡಳಿತ ಮಂಡಳಿ ಅವಧಿಯಲ್ಲಿ ಟಿಎಸ್‌ಎಸ್‌ನಿಂದ ನೀಡಿಸಲ್ಪಟ್ಟ 123 ಕೋಟಿ ರೂ. ಸಾಲಗಳು ಸರ್ವಸಮ್ಮತಿಯಿಂದ ನಿರ್ಧಾರವಾಗಿ ಕಾಯ್ದೆ ಬದ್ಧವಾಗಿ ಮಂಜೂರಾತಿ ಆಗಿದೆ. ಅಲ್ಲದೇ ಅವರ ಆಸ್ತಿಗಳನ್ನು ಜಾಮೀನಾಗಿ ಪಡೆದಿದ್ದೇವೆ. ಸಾಲ ನೀಡುವುದು ಅವ್ಯವಹಾರ ಎಂದು ಹಾಲಿ ಆಡಳಿತ ಮಂಡಳಿಯು ಬಿಂಬಿಸಲು ಹೊರಟಿದೆ.

-ರಾಮಕೃಷ್ಣ ಹೆಗಡೆ ಕಡವೆ, ನಿಟಕಪೂರ್ವ ಕಾರ್ಯಾಧ್ಯಕ್ಷ

ದೇವಗಿರ ಗ್ರಾಪಂ ವ್ಯಾಪ್ತಿ ಚಿರತೆ ಸಾವು

ಕುಮಟಾ: ದೇವಗಿರ ಗ್ರಾಮ ಪಂಚಾಯತ ವ್ಯಾಪ್ತಿಯ ಹರಭಾಗದ ಕೃಷಿ ಜಮೀನಿನಲ್ಲಿನ ಮುಳ್ಳಿನ ಹಿಂಡಿದ ಪೊದೆಗೆ ಸಿಲುಕಿ ಹೊರಬರಲಾಗದೆ ನಿತ್ರಾಣಗೊಂಡು ಒದ್ದಾಡುತ್ತಿದ್ದ ಹೆಣ್ಣು ಚಿರತೆಯೊಂದು ಮೃತಪಟ್ಟ ಘಟನೆ ರವಿವಾರ ನಡೆದಿದೆ. ಹೊರಭಾಗದ ಕೃಷಿ ಜಮೀನಿನ ಅಂಚಿನಲ್ಲಿದ್ದ ಮುಳ್ಳಿನಿಂದ ಕೂಡಿದ್ದ ಮುಂಡಕಿ ಪೊದೆಯಲ್ಲಿ ಚಿರತೆಯೊಂದು ಸಿಕ್ಕು ಒದ್ದಾಡುತ್ತಿದ್ದುದನ್ನು ಕಂಡು ವಿಷಯವನ್ನು ಅರಣ್ಯ ಇಲಾಖೆಗೆ ತಿಳಿಸಿದರು.ವಲಯ ಅರಣ್ಯಾಧಿಕಾರಿ ಪ್ರವೀಣ ನಾಯಕ ಅವರು ವನ್ಯಜೀವಿ ಸಂರಕ್ಷಣೆಯಲ್ಲಿ ನುರಿತಿರುವ ಅಶೋಕ ನಾಯ್ಕ, ತದಡಿ, ಮಹೇಶ ನಾಯ್ಕ, ಅವರ್ಸಾ, ನಾಗರಾಜ ಶೇಟ್, ಹಳದಿಪುರ, ಪವನ ನಾಯ್ಕ, ಕುಮಟಾ, ಸಿ.ಆರ್.ನಾಯ್ಕ ಹಾಗೂ ಸ್ಥಳೀಯ ಅರಣ್ಯ ಇಲಾಖೆ ಸಿಬ್ಬಂದಿ ರಾಘವೇಂದ್ರ ನಾಯ್ಕ, ಗೌರಿಶಂಕರ ರಾಯ್ಕರ, ಮುತುರ್ಜಾ, ಸಂಗಮೇಶ ದಿನೇಶ ಆಚಾರಿ, ಮಹೇಶ ಹರ್ಮಲಕರ್, ಸಂತೋಷ, ಬೀರಾ ಗೌಡ, ಅನಿಲ, ಬಲಿಯಾ, ಭಾವಾ ಗೌಡ, ಸದಾನಂದ ನಾಯ್ಕ, ಕಮಲಾಕರ ಬಂಡಾರಿ, ಗ್ರಾ.ಪಂ ಸದಸ್ಯ ಪಾಂಡುರಂಗ ಪಟಗಾರ, ಹರಿಕಾಂತ ಅವರೊಂದಿಗೆ ಸ್ಥಳಕ್ಕೆ ತೆರಳಿ ಅಲ್ಲಿನ ಪರಿಸ್ಥಿತಿ ತಿಳಿದು, ಡಿಸಿಎಫ್ ಯೋಗಿಶ ಹಾಗೂ ಎಸಿಎಫ್ ಕೃಷ್ಣ ಗೌಡ ಅವರ ಮಾರ್ಗದರ್ಶನದಲ್ಲಿ ನಿತ್ರಾಣಗೊಂಡು ಒದ್ದಾಡುತ್ತಿದ್ದ 1 ವರ್ಷದ ಈ ಚಿರತೆಯನ್ನು ರಕ್ಷಿಸಿ ಪಶು ವೈದ್ಯಾಧಿಕಾರಿಗಳಿಂದ ಪ್ರಾಥಮಿಕ ಚಿಕಿತ್ಸೆ ಕೊಡಿಸಿದರು. ಆದರೂ ಚಿರತೆ ಅಸುನಿಗಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಮೀಕ್ಷೆಗೆ ಸಹಕರಿಸಿ: ಜಿಲ್ಲಾಧಿಕಾರಿ ಮನವಿ

ಧಾರವಾಡ: ಜಿಲ್ಲೆಯಲ್ಲಿ ಸೆ. 22ರ ಸೋಮವಾರದಿಂದ ಆರಂಭವಾಗುವ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪ್ರತಿಯೊಂದು ಕುಟುಂಬವು ಭಾಗವಹಿಸಿ, ಅಗತ್ಯ ಮಾಹಿತಿ ನೀಡುವ ಮೂಲಕ ಸಮೀಕ್ಷೆಗೆ ಸಹಕಾರ ನೀಡಬೇಕೆಂದು ಜಿಲ್ಲಾ ಸಮನ್ವಯ ಸಮಿತಿ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮನವಿ ಮಾಡಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಸಮೀಕ್ಷೆದಾರರಿಗೆ ಈಗಾಗಲೇ ಜಿಲ್ಲಾ ಹಾಗೂ ತಾಲೂಕು ಹಂತದಲ್ಲಿ ತರಬೇತಿ ನೀಡಲಾಗಿದೆ. ಸಮೀಕ್ಷೆ ಮಾಡುವ ಮನೆಗಳಿಗೆ ಈಗಾಗಲೇ ಸ್ಟಿಕರ್ ಸಹ ಅಂಟಿಸಿ, ಸಮೀಕ್ಷೆಗಾಗಿ ಗುರುತಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಸಮೀಕ್ಷೆ ಮುಗಿಯುವವರೆಗೆ ಮನೆ ಬಾಗಿಲಿಗೆ ಅಂಟಿಸಿರುವ ಸ್ಟಿಕರ್ ತೆಗೆಯಬಾರದು. ಸಮೀಕ್ಷೆದಾರರು ಮನೆಗೆ ಬಂದಾಗ ಕುಟುಂಬದ ಎಲ್ಲ ಸದಸ್ಯರು ಶಿಕ್ಷಣ, ಉದ್ಯೋಗ, ಸೌಲಭ್ಯ ಪಡೆದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿ, ಸಮೀಕ್ಷೆ ಕಾರ್ಯ ಯಶಸ್ವಿಯಾಗಿ ಜರುಗುವಂತೆ ಸಹಕರಿಸಬೇಕೆಂದು ಅವರು ಹೇಳಿದ್ದಾರೆ. ಒಬ್ಬ ಸಮೀಕ್ಷೆದಾರ ಗರಿಷ್ಠ 150 ಕುಟುಂಬಗಳಿಗೆ ಭೇಟಿ ನೀಡಿ, ಮಾಹಿತಿ ದಾಖಲಿಸಲಿದ್ದಾರೆ. 4,880 ಗಣತಿದಾರರು ಸೆ.22 ರಿಂದ ಅ.7 ರವರೆಗೆ ಅಂದಾಜು 5,46,012 ಕುಟುಂಬಗಳ ಸಮೀಕ್ಷೆ ಮಾಡಲಿದ್ದಾರೆ. ಕುಟುಂಬಸ್ಥರು ಅಗತ್ಯ ಮಾಹಿತಿ ನೀಡಿ, ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಯಶಸ್ವಿಯಾಗಿ ಕೈಗೊಳ್ಳಲು ಸಾರ್ವಜನಿಕರು ಸಹಕಾರ ನೀಡಬೇಕೆಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮನವಿ ಮಾಡಿದ್ದಾರೆ.

98ವರ್ಷಗಳಿಂದ ಶರನ್ನವರಾತ್ರಿ ಉತ್ಸವ

ನರಗುಂದ: ಇಲ್ಲಿನ ಸೋಮಾಪೂರದ ನಾಗಲಿಂಗ ನಿಲಯದಲ್ಲಿ ಕಳೆದ 98ವರ್ಷಗಳಿಂದ ಶರನ್ನವರಾತ್ರಿ ಉತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದ್ದು ಸೆ.22ರಿಂದ ಅ.2ರವರೆಗೆ ದೇವಿ ಪುರಾಣ ಪ್ರವಚನ, ಧಾರ್ಮಿಕ ಸಭೆ ಸಮಾರಂಭಗಳು ಜರುಗಲಿವೆ. ಸೆ.22ರಂದು ಮೌನೇಶ ಪತ್ತಾರ ಅವರಿಂದ ದೇವಿ ಪುರಾಣ ಪ್ರವಚನ ಜರುಗಲಿದ್ದು ಚಂದ್ರಕಾಂತ ಇನಾಮದಾರ, ಶ್ರೀನಿವಾಸ ಇನಾಮದಾರ, ಸಾಗರ ಬಡಿಗೇರ ಅವರಿಂದ ಸಂಗೀತ ಸೇವೆ ಜರುಗಲಿದೆ. ಬೆಳಿಗ್ಗೆ ಘಟಸ್ಥಾಪನೆ, ನಂತರ ಹುಬ್ಬಳ್ಳಿಯ ಸೋಮಾಚಾರ್ಯ ರಾಮಚಾರ್ಯ ಕಡ್ಲಾಸ್ಕರ ಅವರಿಂದ ಪುರಾಣ ಪ್ರವಚನಕ್ಕೆ ಚಾಲನೆ, ನಂತರ ಶಿರಹಟ್ಟಿ ಫಕೀರ ಸಿದ್ದರಾಮ ಸ್ವಾಮಿಗಳ ಪಾದ ಪೂಜೆ ಜರುಗಲಿದೆ.

ಸ್ಟ್ಯಾನ್ಫೋರ್ಡ್ ಎಲ್ಸೆವಿಯರ್ ಜಾಗತಿಕ ಪಟ್ಟಿಯಲ್ಲಿ ಕೆಎಲ್‌ಇ ಟೆಕ್‌ನ 8 ಸಂಶೋಧಕರು | ಸತತ 6 ವರ್ಷ ಟಾಪ್ 2% ವಿಜ್ಞಾನಿಗಳು

ವಿಜ್ಞಾನಿಗಳ ಜಾಗತಿಕ ಪಟ್ಟಿಯಲ್ಲಿ ಕೆಎಲ್‌ಇ ಸಾಧನೆ

ಹುಬ್ಬಳ್ಳಿ: ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲ ಯ, ಹುಬ್ಬಳ್ಳಿಯ 8 ಗಣ್ಯ ಸಂಶೋಧಕರು ಮತ್ತು ಪ್ರಾಧ್ಯಾಪಕರು, ಸ್ಟ್ಯಾನ್ಫೋರ್ಡ್ ವಿಶ್ವವಿದ್ಯಾಲಯ ಮತ್ತು ಎಲ್ಸೆವಿಯರ್ ಪ್ರಕಾಶನಗಳು ಸಂಯುಕ್ತವಾಗಿ ಬಿಡುಗಡೆ ಮಾಡಿದ 2025ರ ಟಾಪ್ 2% ಪ್ರಭಾವಶಾಲಿ ವಿಜ್ಞಾನಿಗಳ ಜಾಗತಿಕ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಇದು ಸತತ 6 ನೇ ವರ್ಷದ ಸಾಧನೆ ಆಗಿದ್ದು, ಕೆಎಲ್‌ಇ ಟೆಕ್‌ನ ಉನ್ನತ ಮಟ್ಟದ ಸಂಶೋಧನಾ ಕೀರ್ತಿ ಯನ್ನು ಮತ್ತೊಮ್ಮೆ ದೃಢಪಡಿಸಿದೆ.

ಪ್ರಕಟಿತ ಪಟ್ಟಿಯನ್ನು ಸಂಶೋಧನಾ ಪ್ರಕಟಣೆಗಳು, ಉಲ್ಲೇಖನೆಗಳು (citat ions &ಇಂಡೆಕ್ಸ್, ಸಹ-ಲೇಖಕರ ಹೊಂದಾಣಿಕೆ ಜಇ-ಇಂಡೆಕ್ಸ್ ಹಾಗೂ ಸಂಯುಕ್ತ್ಕ್ಯ ರ್‌ಗಳ ಆಧಾರದ ಮೇಲೆ 22 ವೈಜ್ಞಾನಿಕ ಕ್ಷೇತ್ರಗಳಲ್ಲಿ ತಯಾರಿಸಲಾಗಿದೆ. ಈ ಪಟ್ಟಿಯಲ್ಲಿ ವಿಶ್ವದ 18,477 ವಿಜ್ಞಾನಿಗಳು, ಅದರಲ್ಲಿ ಭಾರತದಿಂದ 1,566 ವಿಜ್ಞಾನಿಗಳು ಸ್ಥಾನ ಪಡೆದಿದ್ದಾರೆ. ಪಟ್ಟಿಯಲ್ಲಿ ಎರಡು ವಿಭಾಗಗಳಿವೆ: ಒಂದು ವರ್ಷದ ಪ್ರಭಾವ ಪಟ್ಟಿ 2025ರ ಪ್ರಕಟಣೆಗಳು ಹಾಗೂ ಪ್ರಭಾವ ಆಧಾರಿತ.

ವೃತ್ತಿ ಸಾಧನೆ ಪಟ್ಟಿ ಜೀವನಪರ್ಯಂತದ ಸಂಶೋಧನಾ ಕೊಡುಗೆ ಆಧಾರಿತ. ಇವುಗಳಲ್ಲಿ 4 ಮಂದಿ ಸಂಶೋಧಕರು ಪ್ರೊ. ತೇಜರಾಜ ಅಮನ ಭಾವಿ, ಡಾ.ನಾಗರಾಜ್ ಶೆಟ್ಟಿ, ಪ್ರೊ.ವಿನಾಯಕ ಗೈತೊಂಡೆ ಹಾಗೂ ಪ್ರೊ. ಪ್ರಭುಗೌಡ ಪಾಟೀಲ ಇರುವುದು ಎರಡೂ ಪಟ್ಟಿಗಳಲ್ಲಿಯೂ. ಪ್ರೊ. ತೇಜರಾಜ ಅಮೀನಾಭಾವಿ ಮತ್ತು ಡಾ.ನಾಗರಾಜ್ ಶೆಟ್ಟಿ ಸತತ 6 ವರ್ಷಗಳಿಂದ ಅಂತಾರಾಷ್ಟ್ರೀಯವಾಗಿ ಮಾನ್ಯತೆ ಪಡೆದುಕೊಂಡಿದ್ದು, ತಮ್ಮ ಅತ್ಯುನ್ನತ ಗುಣಮಟ್ಟದ ಸಂಶೋ ಧನಾ ಕೊಡುಗೆಯ ಮೂಲಕ ವಿಶಿಷ್ಟ ಸ್ಥಾನ ಗಳಿಸಿದ್ದಾರೆ. ಡಾ. ಮೋಹನಕೃಷ್ಣ ಗುಂಡಾ ಐದನೇ ವರ್ಷ ಹಾಗೂ ಡಾ.ಶ್ವೇತಾ ಮಲೋ ಡೆ 4ನೇ ವರ್ಷದ ಸಾಧನೆ ಮಾಡಿ ದ್ದಾರೆ. ಪ್ರೊ-ಚಾನ್ಸಲರ್ ಡಾ.ಅಶೋಕ್ ಶೆಟ್ಟರ್, ವೈಸ್ ಚಾನ್ಸಲರ್ ಡಾ.ಪ್ರಕಾಶ್ ಖಿಜತಿಚಿಡಿ, ಜತೆಗೆ ಡೀನ್ಸ್, ವಿಭಾಗಾ ಧ್ಯಕ್ಷರು, ಅಧ್ಯಾ ಪಕರು ಹಾಗೂ ಸಿಬ್ಬಂದಿ ಗಳು ಈ ಎಂಟು ಸಂಶೋಧಕರನ್ನು ಹೃತ್ಪೂ ರ್ವಕವಾಗಿ ಅಭಿನಂದಿಸಿದರು. ವೈಸ್ ಚಾನ್ಸಲರ್ ಅವರು ಈ ಸಾಧನೆ ಕೆಎಲ್‌ಇ ಟೆಕ್‌ನ ಸಂಶೋಧನಾ ಸಂಸ್ಕೃತಿಯನ್ನು ಮತ್ತಷ್ಟು ಬಲಪಡಿಸಿ, ನಾವೀನ್ಯತೆ ಹಾಗೂ ಜ್ಞಾನ ಸೃಷ್ಟಿಗೆ ಉತ್ತೇಜನ ನೀಡಲಿದೆ ಎಂದು ಅಭಿಪ್ರಾ ಯಪಟ್ಟರು.

ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯವು ಈ ಅನನ್ಯ ಸಾಧನೆಯನ್ನು ಹೆಮ್ಮೆಪಡು ವುದರೊಂದಿಗೆ, ಜಾಗತಿಕ ವೈಜ್ಞಾನಿಕ ಪ್ರಗತಿಗೆ ತನ್ನ ಕೊಡುಗೆ ನೀಡುವ ಬದ್ಧತೆ ಯನ್ನು ಮತ್ತೊಮ್ಮೆ ಪುನರುಚ್ಚರಿಸಿದೆ.

ಕೆಎಲ್‌ಇ ಟೆಕ್‌ನಿಂದ ಸ್ಥಾನ ಪಡೆದ ಸಂಶೋಧಕರು

ಪ್ರೊ.ತೇಜರಾಜ.ಎಂ.ಅಮನಭಾವಿ, ಡಾ.ನಾಗರಾಜ್ ಪಿ.ಶೆಟ್ಟಿ, ಡಾ.ಮೋಹನಕೃಷ್ಣ ಗುಂಡಾ, ಡಾ.ಶ್ವೇತಾ ಮಲೋಡೆ, ಪ್ರೊ.ಪ್ರಭುಗೌಡ ಎಂ. ಪಾಟೀಲ, ಪ್ರೊ. ಶರಣಬಸವ ವಿ. ಗಣಚಾರೀ, (ಅಡ್ವಾನ್ಸ್ ಸೈನ್ಸ್ ಶಾಲೆಯಿಂದ), ಪ್ರೊ.ವಿನಾಯಕ ಎಚಿಜಿ ಖಿಟ್ಲಥಿಭಿ, ಪ್ರೊ.ನಾಗರಾಜ್ (ಮೆಕ್ಯಾನಿಕಲ್ ಎಂಜಿನಿಯರಿಂಗ್ ಶಾಲೆಯಿಂದ)

'ನಮ್ಮ ಸಂಶೋಧಕರಿಗೆ ಜಾಗತಿಕ ಮಟ್ಟದಲ್ಲಿ ದೊರೆತಿರುವ ಈ ಮಾನ್ಯತೆ ಕೆಎಲ್‌ಇ ಸಮಾಜಕ್ಕೆ ಅತ್ಯಂತ ಹೆಮ್ಮೆಯ ವಿಷಯ. ಇವರ ವೈಜ್ಞಾನಿಕ ಕ್ಷೇತ್ರದಲ್ಲಿ ನೀಡಿದ ಕ್ರಾಂತಿಕಾರಿ ಕೊಡುಗೆಗಳು ಕೆಎಲ್‌ಇ ಟೆಕ್‌ನ ಖ್ಯಾತಿಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದಿವೆ.
-ಡಾ.ಪ್ರಭಾಕರ ಕೋರೆ, ಚೇರಮನ್ ಕೆಎಲ್‌ಇ ಸೊಸೈಟಿ

ಸ್ಮಾರ್ಟ್ ಪೀಪಲ್-ಹ್ಯಾಕಥಾನ್ ಉದ್ಘಾಟನೆ

ಧಾರವಾಡ: ಕರ್ನಾಟಕವು ಸೈಬರ್ ಭದ್ರತೆಯ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ ಮತ್ತು ನಾಯ ಕತ್ವದ ಸಾಗುತ್ತಿದೆ. ಮಹತ್ತಾಗಿ ಯೋಚಿ ಸುವುದು, ಸಹ ಯೋಗ ಮತ್ತು ಸ್ಥಿತಿಸ್ಥಾಪಕತ್ವದ ಮಹತ್ವವನ್ನು ಕರ್ನಾಟಕ ಸೈಬರ್ ಸೆಕ್ಯುರಿಟಿ ಉತ್ಕೃಷ್ಟತಾ ಕೇಂದ್ರದ (ಸೈಸೆಕ್) ಮುಖ್ಯಸ್ಥ ರಂಜನ್ ಮಿಶ್ರಾ ಹೇಳಿದರು.

ಧಾರವಾಡದ ಎಸ್‌ಡಿಎಮ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಗಮ್ಯ ಟೆಕ್ ಆಯೋಜಿಸಿದ್ದ ಸ್ಮಾರ್ಟ್ ಸೆಕ್ಯುರಿಟಿ ಫಾರ್ ಸ್ಮಾರ್ಟ್ ಪೀಪಲ್-ಹ್ಯಾಕಥಾನ್ ಉದ್ಘಾಟಿಸಿ ಮಾತನಾಡಿದ ಮಿಶ್ರಾ, ಪ್ರತಿ ತಂತ್ರ ಜ್ಞಾನವೂ ಸಮುದಾಯಕ್ಕೆ ಒಡ್ಡುವ ಅವಕಾಶಗಳು ಮತ್ತು ಸವಾಲುಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿ,

ಧಾರವಾಡ ಮತ್ತು ಇಡೀ ಉತ್ತರ ಕರ್ನಾಟಕವು ನಾವೀನ್ಯತೆಯ ಕೇಂದ್ರ ವಾಗಲು ಅಪಾರ ಸಾಮರ್ಥ್ಯವನ್ನು ಹೊಂದಿದೆ ಎಂದರು.ಕಾರ್ಯಕ್ರಮದಲ್ಲಿ ಧಾರವಾಡದ ಎಸ್‌ಡಿಎಮ್ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶು ಪಾಲ ಡಾ.ರಮೇಶ್ ಚಕ್ರಸಾಲಿ ಮಾತನಾಡಿ, ನಾವೀನ್ಯತೆಯು ಶೂನ್ಯ ದೋಷ ಶೂನ್ಯ ಪರಿಣಾಮದ ಪರಿಕಲ್ಪನೆಯನ್ನು ಖಾತ್ರಿಪಡಿಸುವ ಕನಿಷ್ಠ ಸಂಪನ್ಮೂಲ ಬಳಕೆಯೊಂದಿಗೆ ಪರಿಹಾ ರಗಳನ್ನು ರೂಪಿಸುವ ಮತ್ತೊಂದು ವಿಧಾನ ವಾಗಿದೆ. ಇದಲ್ಲದೆ, ಸಮಾಜದ ಸೌಕರ್ಯಕ್ಕಾಗಿ ತಂತ್ರಜ್ಞಾನಗಳನ್ನು ಅನ್ವೇಷಿಸಬೇಕಾಗಿದೆ ಮತ್ತು ಅಂತಹ ನಾವೀನ್ಯತೆಗಳ ಆಲೋಚನೆಗಳು ಇಂತಹ ವಿವಿಧ ಚಟುವಟಿಕೆಗಳನ್ನು ನಡೆಸುವ ಮೂಲಕ ಹುಟ್ಟಿಕೊಳ್ಳುತ್ತವೆ ಎಂದರು.

ಪ್ರೊ.ಇಂದಿರಾ ಉಮರ್ಜಿ ಮತ್ತು ಮೇಘಾ ಮೆಲ್ಗೇರಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮದ ಎರಡನೇ ದಿನದಲ್ಲಿ ಗಣ್ಯ ವ್ಯಕ್ತಿಗಳಿಂದ ಎಐ, ಫೋರೆನ್ಸಿಕ್ಸ್ ಮತ್ತು ಸೈಬರ್ ಸೆಕ್ಯುರಿಟಿಯಂತಹ ವಿಷಯಗಳ ಕುರಿತು ಟೆಕ್ ಮಾತುಕತೆಗಳು, ಕಾರ್ಯಾಗಾರಗಳು ಮತ್ತು ಪ್ಯಾನಲ್ ಚರ್ಚೆಗಳು ನಡೆದವು.

ಪ್ರಸ್ತುತ ಸಮಾಜದ ಅಗತ್ಯತೆಗಳಲ್ಲಿ ಒಂದಾದ ಸೈಬರ್ ಭದ್ರತೆಯ ಕುರಿತಾದ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಅವರು ಅಗಮ್ಯ ಸಂಸ್ಥೆ ಯನ್ನು ಅಭಿನಂದಿಸಿದರು. ಹುಬ್ಬಳ್ಳಿಯ ಕೆಎಲ್‌ಎಟಿ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿ ಯರಿಂಗ್ ವಿಭಾಗದ ಮುಖ್ಯಸ್ಥ ಡಾ.ರಾಜೇಶ್ ಉಪಸ್ಥಿತರಿದ್ದರು. ಕೆಎಲ್‌ಎಟಿಯ ಮೆಹಕ್ ನಾಜ್ ಧಾರವಾಡ ಕಾರ್ಯಕ್ರಮವನ್ನು ನಿರೂಪಿಸಿದರು.

ಅಗಮ್ಯ ಟೆಕ್ ಆಯೋಜಿಸಿದ್ದ ಸ್ಮಾರ್ಟ್ ಸೆಕ್ಯುರಿಟಿ ಫಾರ್ ಸ್ಮಾರ್ಟ್ ಪೀಪಲ್-ಹ್ಯಾಕಥಾನ್ ಉದ್ಘಾಟಿಸಿದರು.

ಹ್ಯಾಕಥಾನಲ್ಲಿ 130 ತಂಡಗಳು ಭಾಗಿ

ಹ್ಯಾಕಥಾನ್ ನಲ್ಲಿ ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡು ಸೇರಿದಂತೆ ರಾಜ್ಯಗಳಿಂದ ಸುಮಾರು 130 ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. ಶಿಲ್ಪಾ ಸಂಗಪ್ಪ, ಸಂತೋಷ ತುಪ್ಪದ್, ಪವನ್, ಅಭಿಷೇಕ ಸಿಂಗ್, ಶಿವಲಿಂಗ ಇವರುಗಳು ತಾಂತ್ರಿಕ ತೀರ್ಪುಗಾರರಾಗಿ ಭಾಗವಹಿಸಿದ್ದರು.

ಕಾಶಿ ಪೀಠದಲ್ಲಿ ಶರನ್ನವರಾತ್ರಿ ಆಚರಣೆ ಇಂದಿನಿಂದ 10 ದಿನ

ಧಾರವಾಡ: ಶ್ರೀಆದಿಶಕ್ತಿ ಮಹಾಮಾತೆಯ ಅರ್ಚನೆ, ಆರಾಧನೆಯ ವಿಶೇಷ ಪರ್ವಕಾಲವಾದ ಶರನ್ನವರಾತ್ರಿ ಆಚರಣೆ ವೀರಶೈವ-ಲಿಂಗಾಯತ ಧರ್ಮದ ಪಂಚಪೀಠಗಳಲ್ಲಿ ಒಂದಾದ ಉತ್ತರಪ್ರದೇಶದ ಕಾಶಿ ಜ್ಞಾನ ಪೀಠದಲ್ಲಿ ಸೆ.22ರಿಂದ ಅ.2ರವರೆಗೆ 10 ದಿನಗಳ ಕಾಲ ವಿಶೇಷವಾಗಿ ನಡೆಯಲಿದೆ.

ನಿತ್ಯ ಪ್ರಾತಃಕಾಲ 8 ಗಂಟೆಗೆ ಕನ್ನಡಿಗರಾಗಿರುವ ಕಾಶಿ ಜ್ಞಾನ ಪೀಠದ ಹಿರಿಯ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಸಾಮೂಹಿಕ ಇಷ್ಟಲಿಂಗ ಮಹಾಪೂಜೆ ನಡೆಯಲಿದೆ. ಮುಂಜಾನೆ 10 ಗಂಟೆಗೆ ಕಾಶಿ ಪೀಠದ ಮೂಲ ಆಚಾರ್ಯರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಲಿಂಗೋದ್ಭವ ಮೂರ್ತಿಗೆ ಬಿಲ್ವಾರ್ಚನೆ, ವಿಶೇಷ ಅಲಂಕಾರ ಪೂಜೆ ಮತ್ತು ಮಹಾಮಂಗಳಾರತಿ ನಡೆದು ನಂತರ ಮಹಾಪ್ರಸಾದ ವಿತರಣೆ ಜರುಗಲಿದೆ.

ಸಂಜೆ 5 ಗಂಟೆಗೆ ಶ್ರೀಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರ ಮಂಗಲ ಸಾನ್ನಿಧ್ಯದಲ್ಲಿ ಶ್ರೀಕಾಶಿ ಪೀಠದಲ್ಲಿರುವ ಶ್ರೀ ಚಕ್ರ ಸಹಿತ ಆದಿಶಕ್ತಿ ಮಾತೆಯ ವಿಗ್ರಹಕ್ಕೆ ಲಲಿತಾ ಸಹಸ್ರನಾಮ ಪಠಣಪೂರ್ವಕ ಕುಂಕುಮಾರ್ಚನೆಯ ವಿಶೇಷ ಪೂಜೆ ನಡೆಯಲಿದೆ.

ನಂತರ ಕಾಶಿ ಪೀಠದ ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲದ ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಶ್ರೀದುರ್ಗಾ ಸಪ್ತಶತಿಯ ಪಾರಾಯಣ ಜರುಗಲಿದೆ.

ಶರನ್ನವರಾತ್ರಿ ಆಚರಣೆಯ ಅಂಗವಾಗಿ ನಿತ್ಯವೂ ಶ್ರೀಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರಿಂದ ಆಶೀರ್ವಚನ ನಡೆಯಲಿದೆ. ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ಶಿವಾಚಾರ್ಯ ಶ್ರೀಗಳು, ಗಣ್ಯರು ಹಾಗೂ ಭಕ್ತರು ಪಾಲ್ಗೊಳ್ಳುವರೆಂದು ಶ್ರೀಕಾಶಿ ಪೀಠದ ಕಾರ್ಯಕ್ರಮ ಸಂಯೋಜಕ ಶಿವಾನಂದ ಹಿರೇಮಠ ಹಾಗೂ ಶಿವಮೂರ್ತಿ ಅವರು ಜಂಟಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಮಹಿಳಾ ಕಾಂಗ್ರೆಸ್ ಪದಗ್ರಹಣ ನಾಳೆ

ಧಾರವಾಡ: ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್, ಹು-ಧಾ ಮಹಾನಗರ ಜಿಲ್ಲಾ ಮಹಿಳಾ ಕಾಗ್ರೆಸ್ ಪದಗ್ರಹಣ ಕಾರ್ಯಕ್ರಮವನ್ನು ಸೆ.23ರಂದು ಮುಂಜಾನೆ 11 ಗಂಟೆಗೆ ಧಾರವಾಡ ಪಿ.ಬಿ.ರಸ್ತೆಯ ಮಾರ್ಡನ್ ಹಾಲ್‌ನಲ್ಲಿ ಪದಗ್ರಹಣ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಹು-ಧಾ ಮಹಾನಗರ ಜಿಲ್ಲಾ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಗೌರಮ್ಮಾ ಬಲೋಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಕಾರ್ಯಕ್ರಮಕ್ಕೆ ಕೆ.ಪಿ.ಎಂ.ಸಿ ರಾಜ್ಯಾಧ್ಯಕ್ಷೆ ಸೌಮ್ಯ ರೆಡ್ಡಿ ರವರು ಆಗಮಿಸುತ್ತಿದ್ದಾರೆ. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಗ್ರಾಮೀಣ ಶಾಸಕ ವಿನಯ್ ಕುಲಕರ್ಣಿ, ಹುಬ್ಬಳ್ಳಿ ಶಾಸಕ ಅಬ್ಬಯ್ಯ ಪ್ರಸಾದ, ಧಾರವಾಡ ಜಿಲ್ಲೆಯ ಮುಖಂಡ ದೀಪಕ ಚಿಂಚೋರೆ, ಇಸ್ಮಾಯಿಲ ತಮಟಗಾರ, ರಜತ ಉಳ್ಳಾಗ ಡ್ಡಿಮಠ, ಶಿವಲೀಲಾ ಕುಲಕರ್ಣಿ ಎಲ್ಲರೂ ಕಾರ್ಯ ಕ್ರಮದಲ್ಲಿ ಭಾಗವಹಿ ಸಲಿದ್ದಾರೆ.ಹಾಗಾಗಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಲು ವಿನಂತಿಸಿದರು. ಪತ್ರಿಕಾಗೋ ಷ್ಠಿಯಲ್ಲಿ ಚೇತನಾ ಲಿಂಗದಾಳ, ಬಾಳಮ್ಮ ಜಂಗಿನವರ, ಅಕ್ಕಮ್ಮ ಕಂಬಳಿ, ಕಲಾವತಿ ದತ್ತನಾಳ, ನಾಗರತ್ನ ಶಿಗೀಹಳ್ಳಿ, ಸಂಗೀತಾ ಪೂಜಾರ, ಸುಜನ್ ಕಾಕಿ ಇದ್ದರು.

ಪತ್ರಿಕಾಗೋಷ್ಠಿಯಲ್ಲಿ ಹು-ಧಾ ಮಹಾನಗರ ಜಿಲ್ಲಾ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಗೌರಮ್ಮಾ ಬಲೋಗಿ ಮಾತನಾಡಿದರು.

ವೆಂಕಟೇಶ್ವರ ದೇವಸ್ಥಾನದಲ್ಲಿ ಘಟ ಸ್ಥಾಪನೆ ಇಂದು

ನರಗುಂದ: ತಿರುಪತಿ ತಿಮ್ಮಪ್ಪನ ಮಾದರಿಯಲ್ಲಿ 1710ರಲ್ಲಿ ನಿರ್ಮಿಸಲಾದ ಐತಿಹಾಸಿಕ ವೆಂಕಟೇಶ್ವರ ದೇವಸ್ಥಾನದಲ್ಲಿ ಇಂದು ಘಟಸ್ಥಾಪನೆಯೊಂದಿಗೆ ನವರಾತ್ರಿ ಉತ್ಸವಗಳು ಜರುಗಲಿವೆ. ಸೋಮವಾರ ಬೆಳಗ್ಗೆ ಘಟ ಸ್ಥಾಪನೆ ರಾತ್ರಿ ಪುಷ್ಪ ವಾಹನೋತ್ಸವ, ಮಂಗಳವಾರ ರಾತ್ರಿ ಗಜ ವಾಹನೋತ್ಸವ, ಬುಧವಾರ ಸಿಂಹ ವಾಹನ, ಗುರುವಾರ ಹಂಸ ವಾಹನ, ಶುಕ್ರವಾರ ಲಲಿತ ಪಂಚಮಿ ಆಚರಣೆ ರಾತ್ರಿ ಕಲ್ಪವೃಕ್ಷ ವಾಹನ, ಶನಿವಾರ 12 ಗಂಟೆಗೆ ದೇವರ ಕಲ್ಯಾಣೋತ್ಸವ, ರಾತ್ರಿ ಶೇಷ ವಾಹನೋತ್ಸವ, ರವಿವಾರ ಚಂದ್ರ ವಾಹನ, ಸೋಮವಾರ ಸರಸ್ವತಿ ಆವಾಹನ, ರಾತ್ರಿ ಸೂರ್ಯ ವಾಹನ, ಮಂಗಳವಾರ ಸರಸ್ವತಿ ಪೂಜನ, ರಾತ್ರಿ ಅಶ್ವ ವಾಹನೋತ್ಸವ, ಬುಧವಾರ ಆಯುಧ ಪೂಜೆ ರಾತ್ರಿ ಮಾರುತಿ ವಾಹನೋತ್ಸವ ಅಂದು ನೂರಾರು ಭಕ್ತರು ದಿವಟಗಿ ಹಿಡಿದು ಕರ್ಪೂರ ಹಚ್ಚಿ ಪ್ರಾರ್ಥಿಸುವರು. ಗುರುವಾರ ದಸರಾ, ಸಂಜೆ ಬನ್ನಿ ಪೂಜೆ, ರಾತ್ರಿ ಗರುಡ ವಾಹನೋತ್ಸವ, ಶುಕ್ರವಾರ ಸಂಜೆ ರಥೋತ್ಸವ ಜರುಗಲಿದೆ. ಶನಿವಾರ ಬೆಳಿಗ್ಗೆ ಲಳಿತ ಪೂಜಾ, ಅವಭೃತ ಸ್ನಾನ ಓಕಳಿ, ರಾತ್ರಿ ನಡೆಯುವ ಕೊನೆಯ ದಿನದ ಸೂರ್ಯ ವಾಹನೋತ್ಸವ ದೇವಸ್ಥಾನ ಪ್ರದರ್ಶನ ಹಾಕಿದ ನಂತರ ನಗರದಲ್ಲಿ ಸಂಚರಿಸುವುದು.

ನರಗುಂದ ಸಂಸ್ಥಾನದ ಅರಸ ವೀರ ಬಾಬಾಸಾಹೇಬರ ಪೂರ್ವಜರು 1710ರಲ್ಲಿ ತಿರುಪತಿ ತಿಮ್ಮಪ್ಪನನ್ನು ಆವ್ಹಾನ ಮಾಡಿ ಗುಡ್ಡದ ಓರೆಯಲ್ಲಿ ಬೃಹತ್ ದೇವಸ್ಥಾನ ನಿರ್ಮಿಸಿದ್ದು ಅಂದಿನಿಂದ 315 ವರ್ಷಗಳಿಂದ ತಿರುಪತಿಯಲ್ಲಿ ನಡೆಯುವ ಉತ್ಸವ ಮಾದರಿಯಲ್ಲೆ ಇಲ್ಲೂ ಒಂಬತ್ತು ದಿನಗಳವರೆಗೆ ವಾಹನೋತ್ಸವ ನಡೆಯುವುದು.

ವಿಶೇಷ. ಆದರೆ ಆಗಿನ ರಾಜ ವೈಭವ್, ಅಂಬಾರಿ ಮೆರವಣಿಗೆ ಈಗ ಹುಡುಕಿದರೂ ಸಿಗಲಾರದೆ ಇರುವುದು ವರ್ಷ ವರ್ಷವೂ ತನ್ನ ಕಳೆಯನ್ನು ಕಳೆದುಕೊಳ್ಳುತ್ತಿರುವುದು ಭಕ್ತರಲ್ಲಿ ನಿರಾಶೆ ಮೂಡಲು ಕಾರಣವಾಗಿದೆ.

345 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಹುಬ್ಬಳ್ಳಿ: ಹುಬ್ಬಳ್ಳಿವರೂರುನಲ್ಲಿರುವ ಎ.ಜಿ.ಎಮ್.ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ ವತಿಯಿಂದ ಹಮ್ಮಿಕೊಂಡಿದ್ದ ಅದ್ವಿತ 12ಖಎ ಗ್ಯಾಜುವೇಷನ್ ಡೇ ಕಾರ್ಯ ಕ್ರಮದಲ್ಲಿ ಸರ್ವಧರ್ಮ ಸಮಾಜ ಸೇವಕ ಡಾ.ರಮೇಶ್ ಮಹಾದೇ ವಪ್ಪನವರ ಅವರು ಪಾಲ್ಗೊಂಡು ವಿಶೇಷವಾಗಿ ಕಾರ್ಯಕ್ರಮ ಉದ್ಘಾಟಿಸಿದರು.

ಬಳಿಕ ವಿವಿಧ ಪದವಿಗಳಲ್ಲಿ ಪದವೀಧರರಾದ 345 ವಿದ್ಯಾರ್ಥಿ ಗಳಿಗೆ ಡಾ.ರಮೇಶ್ ಅವರು ಪದವಿ ಪ್ರದಾನ ಮಾಡಿ ಅಭಿನಂದನೆ ಸಲ್ಲಿಸಿದರು.ಈ ಸಂದರ್ಭದಲ್ಲಿ ಸಾನಿಧ್ಯ ವಹಿಸಿದ ರಾಷ್ಟ್ರಸಂತ ಆಚಾರ್ಯ ಶ್ರೀ108 ಗುಣದರನಂದಿ ಮಹಾರಾಜರಿಂದ ಆರ್ಶೀವಾದ ಪಡೆದುಕೊಂಡರು.

ಈ ವಿಶೇಷ ಸಂದರ್ಭದಲ್ಲಿ ವಿವಿಧ ಕಾಲೇಜಿನ ಪ್ರಾಚಾರ್ಯರಾದ ಪ್ರೊಫೆಸರ್ ರಾಧಾ ರಾಮದುರ್ಗ, ಪ್ರೊಫೆಸರ್ ಪ್ರಸನ್ನ ಸಿಂಗ್, ಪ್ರೊಫೆಸರ್ ಗೀತಾ, ಪ್ರೊ.ರಮೇಶ ಅತ್ತಿಗೇರಿ, ಪ್ರೊಫೆಸರ್ ಮಾತಿನ್ ಬಿಡಿ ವಾಲೆ, ಡಾ.ಪಿ.ಜಿ.ಪಾಟೀಲ್, ಡಾ.ಡಿ.ಟಿ. ಪಾಟೀಲ್, ಡಾ. ಬಾಲಚಂದ್ರ ತೊಂಡಿಹಾಳ್, ಪ್ರೊ.ರವಿ ಕಬ್ಬಿನದ, ಡಾಕ್ಟರ್ ಸಂದೀಪ್ ಖ್ಯಾತಣ್ಣವರ್ ಸೇರಿದಂತೆ ಕಾಲೇಜಿನ ವಿವಿಧ ಉಪನ್ಯಾಸಕರು, ವಿದ್ಯಾರ್ಥಿಗಳು, ಗುರುಹಿರಿಯರು ಉಪಸ್ಥಿತರಿದ್ದರು.

ವಿವಿಧ ಪದವಿಗಳಲ್ಲಿ ಪದವೀಧರರಾದ 345 ವಿದ್ಯಾರ್ಥಿಗಳಿಗೆ ಡಾ.ರಮೇಶ್ ಅವರು ಪದವಿ ಪ್ರದಾನ ಮಾಡಿ ಅಭಿನಂದನೆ ಸಲ್ಲಿಸಿದರು.

ಸಂಸ್ಥೆಯಲ್ಲಿ ಭ್ರಷ್ಟಾಚಾರ ನಡೆದಿಲ್ಲ: ಹುನ್ನಾರ ನಡೆದಿದೆ

ಹಾನಗಲ್ಲ : ಭ್ರಷ್ಟಾಚಾರದ ಸರಿಯಾದ ಅರ್ಥವೇ ಗೊತ್ತಿಲ್ಲದವರು ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಘದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸುತ್ತಿರುವುದು ತೀರ ನೋವಿನ ಸಂಗಿತಿಯಾಗಿದ್ದು, ಈ ಸಂಸ್ಥೆಯ ಮೇಲೆ ವಕ್ರದೃಷ್ಟಿ ಬೀರಿ ಇಲ್ಲಿನ ವ್ಯವಸ್ಥೆಯನ್ನು ಮೂಲೆಗುಂಪು ಮಾಡುವ ಹುನ್ನಾರಕ್ಕೆ ಮುಂದಾಗಿದ್ದಾರೆ ಎಂದು ಸಂಸ್ಥೆಯ ಉಪಾಧ್ಯಕ್ಷ ಸುರೇಶ ರಾಯಕರ ಕಿಡಿಕಾರಿದರು. ಇಲ್ಲಿನ ಶ್ರೀಕುಮಾರೇಶ್ವರ ಕಲಾ ವಾಣಿಜ್ಯ ಮಹಾವಿದ್ಯಾಲಯದ ಸಭಾಂಗಣದಲ್ಲಿ ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಘದ 19 ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು. ಸಂಸ್ಥೆಯ ಸಿಇಒ ಎಂ.ಎಚ್.ಬಳಿಗಾರ ಲೆಕ್ಕ ಪತ್ರ ಹಾಗೂ ಅಂದಾಜು ಪತ್ರಿಕೆಯನ್ನು ಮಂಡಿಸಿದರು. ನಿರ್ದೇಶಕರಾದ ಅಶೋಕ ಹಂಗರಗಿ, ಭಿಮನಗೌಡ ಪಾಟೀಲ, ಚಂದ್ರಶೇಖರ ಸುಬ್ಬಣ್ಣನವರ, ದುಶ್ಯಂತ ನಾಗರವಳ್ಳಿ, ರವಿಚಂದ್ರ ಪುರೋಹಿತ, ರವಿರಾಜ ಕಲಾಲ, ನಿಂಗಪ್ಪ ಗೊಬ್ಬೇರ, ಹುನಮಂತಪ್ಪ ಮಲಗುಂದ, ಮಧುಮತಿ ಪೂಜಾರ, ಲಕ್ಷ್ಮಣ ಕಂಚಿಗೊಲ್ಲರ, ಜಗದೇವ ಶಿಡ್ಲಾಪೂರ, ಅರುಣ ತಿರುಮಲೆ, ಪುರಸಭೆ ಮಾಜಿ ಅಧ್ಯಕ್ಷ ಎಂ.ಬಿ.ಕಲಾಲ, ಎ.ಎಸ್. ಬಳ್ಳಾರಿ ವೇದಿಕೆಯಲ್ಲಿದ್ದರು. ಗುರುರಾಜ ನಿಂಗೋಜಿ, ಘನಶ್ಯಾಮ ದೇಶಪಾಂಡೆ ಇದ್ದರು.

ಅನಂತ ನಮನ 66

'ದೇಶ ಮೊದಲು' ಧ್ಯೇಯದೊಂದಿಗೆ ರಾಷ್ಟ್ರ ಹಿತಕ್ಕಾಗಿ ಜೀವ ತೇಯ್ದ,
ಪ್ರಧಾನ ಮಂತ್ರಿಗಳಾಗಿದ್ದ ದಿ. ಅಟಲ್ ಬಿಹಾರಿ ವಾಜಪೇಯಿಜೀ ಮತ್ತು
ಸನ್ಮಾನ್ಯ ಶ್ರೀ ನರೇಂದ್ರ ಮೋದಿಜೀಯವರೊಂದಿಗೆ ದೇಶದ ಉನ್ನತಿಗಾಗಿ ಅವಿರತ ಸೇವೆಗೈದ
ಕೇಂದ್ರ ಸಚಿವರಾಗಿ ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದ
ಅಪ್ರತಿಮ ದೇಶಪ್ರೇಮಿ - ಜನನಾಯಕ

ಶ್ರೀ ಎಚ್ ಎನ್ ಅನಂತಕುಮಾರ್
(22 Sept.1959 - 12 Nov. 2018)

ನಮ್ಮ ಗೌರವಪೂರ್ವಕ ನಮನಗಳು

ಶ್ರೀಮತಿ ತೇಜಸ್ವಿನಿ ಅನಂತಕುಮಾರ
ಅಧ್ಯಕ್ಷರು : ಅದಮ್ಯ ಚೇತನ ಫೌಂಡೇಶನ್

ಐಶ್ವರ್ಯಾ ಅನಂತಕುಮಾರ
ವಿಜೇತಾ ಅನಂತಕುಮಾರ

ನಂದಕುಮಾರ
ವಿಭವ ಸಮೂಹ ಸಂಸ್ಥೆಗಳು

ಅನಂತಕುಮಾರ ಪ್ರತಿಷ್ಠಾನ, ಬೆಂಗಳೂರು
www.akp.org.in
www.adamyachetana.org

ನಮೋ ಯುವ ಓಟಕ್ಕೆ ಜೋಶಿ ಚಾಲನೆ

ಹುಬ್ಬಳ್ಳಿ: ತೋಳನಕೆರೆ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಅವರ 75 ನೇ ಹುಟ್ಟುಹಬ್ಬದ ಅಂಗವಾಗಿ ಹುಬ್ಬಳ್ಳಿ- ಧಾರವಾಡ ಮಹಾನಗರ ಬಿಜೆಪಿ ಜಿಲ್ಲಾ ಯುವ ಮೋರ್ಚಾದ ವತಿಯಿಂದ ಆಯೋ ಜಿಸಿದ ನಮೋ ಯುವ ಓಟದ ಕಾರ್ಯ ಕ್ರಮಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಮಾಜಿ ಕ್ರಿಕೆಟ್ ಆಟಗಾರ ವೆಂಕಟೇಶ್ ಪ್ರಸಾದ್ ಅವರು ಚಾಲನೆ ನೀಡಿದರು.

ವಿಶೇಷವಾಗಿ ಯುವಕರಿಗೆ ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳುವಂತೆ ಮತ್ತು ಮಾದಕ ವಸ್ತುಗಳಿಂದ ದೂರವಿರುವಂತೆ ಯುವಕರನ್ನು ಮತ್ತು ಜನರಲ್ಲಿ ಜಾಗೃತಿ ಮೂಡಿಸಲು ಈ ಅಭಿಯಾನವನ್ನು ಆಯೋಜಿಸಲಾಗಿತ್ತು.

ಯುವಕರಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಸುಧಾರಣೆಯ ಉದ್ದೇಶದಿಂದ, ದೈಹಿಕ ಫಿಟ್ನೆಸ್ ಗಾಗಿ ಪ್ರಧಾನಿ ನರೇಂದ್ರಮೋದಿ ಅವರು ಕರೆ ನಿರ್ಮಾಣದತ್ತ ರಾಷ್ಟ್ರ ಬಲಿಷ್ಟವಾಗುತ್ತಿರುವ ಈ ಸಂದರ್ಭದಲ್ಲಿ ನಮೋ ಯುವ ಓಟ ಯುವಕರಲ್ಲಿ ದೈಹಿಕ ಕ್ಷಮತೆಯನ್ನು ಸದೃಢ ಗೊಳಿಸಿಕೊಳ್ಳಲು ಜಾಗೃತೆ ಮೂಡಿಸುವ ಕಾರ್ಯಕ್ರಮವಾಗಿತ್ತು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗ ಳಾಗಿ ಖ್ಯಾತ ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಮತ್ತು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಹಾಗೂ ಮಾಜಿ ರಾಜ್ಯ ಸಭಾ ಸಂಸದ ಡಾ.ಪ್ರಭಾಕರ ಕೋರೆ, ಶಾಸಕರಾದ ಅರವಿಂದ ಬೆಲ್ಲದ, ಮಹೇಶ್ ಟೆಂಗಿನಕಾಯಿ , ಬೆಳ್ತಂಗಡಿ ಶಾಸಕ ಹರೀಶ ಪೂಂಜ ಮೇಯರ್ ಜ್ಯೋತಿ ಪಾಟೀಲ, ಉಪ ಮೇಯರ್ ಸಂತೋಷ ಚವ್ಹಾಣ್ , ಯುವ ಮೋರ್ಚಾ ಜಿಲ್ಲಾಧ್ಯಕ್ಷ ಪ್ರೀತಂ ಅರಕೇರಿ ಪಕ್ಷದ ಪಾಲಿಕೆಯ ಸದಸ್ಯರು, ಪದಾಧಿಕಾ ರಿಗಳು ಮತ್ತು ಸಹಸ್ರಾರು ಸಂಖ್ಯೆಯಲ್ಲಿ ಯುವಕರು ಪಾಲ್ಗೊಂಡಿದ್ದರು.

ನಮೋ ಯುವ ಓಟದ ಕಾರ್ಯಕ್ರಮಕ್ಕೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಾಗೂ ಮಾಜಿ ಕ್ರಿಕೆಟ್ ಆಟಗಾರ ವೆಂಕಟೇಶ್ ಪ್ರಸಾದ್ ಚಾಲನೆ ನೀಡಿದರು.

ಗಾಂಜಾ ಗಿಡ: ಪ್ರಕರಣ ದಾಖಲು

ಹಾವೇರಿ: ತಾಲೂಕಿನ ಅಗಡಿ ಗ್ರಾಮದ ನೀಲವ್ವ ತಿಪ್ಪಣ್ಣ ತಳ್ಳಳ್ಳಿ ಎಂಬುವರು ತಮ್ಮ ಜಮೀನನಲ್ಲಿ ನಿಷೇಧಿತ ಗಾಂಜಾ ಗಿಡಗಳನ್ನು ಬೆಳೆದ ಬಗ್ಗೆ ಮಾಹಿತಿ ತಿಳಿದ ಪೊಲೀಸ್ ತಂಡ ಶನಿವಾರ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಸುಮಾರು 8ಕೆ.ಜಿ, 222 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಲಾಭ ಕೊಸ್ಕರ ಗಾಂಜಾ ಗಿಡಗಳನ್ನು ಬೆಳೆದಿದ್ದರು ಎನ್ನ ಲಾಗಿದೆ. 12000 ಕಿಮ್ಮತ್ತಿನದ್ದು ಎಂದು ತಿಳಿದಿದೆ. ಆಕ್ರಮವಾಗಿ ಗಾಂಜಾ ಗಿಡಗಳನ್ನು ನೆಟ್ಟು ಹಣ ಮಾಡುವ ಆಸೆಗೆ ಒಳಗಾಗಿದ್ದರು. ಇದನ್ನು ಬೇಧಿಸಿ ದಾಳಿ ನಡೆಸಿದ ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐ ರವಿಕು ಮಾರ್. ಡಿ,ಸೋಮೋಟೋ ಕೇಸ್ ದಾಖಲಿಸಿದ್ದು ತನಿಖಾ ಧಿಕಾರಿ ಪಿಎಸ್‌ಐ ನಿಂಗಪ್ಪ ಕರಕಣ್ಣನವರ ಹಾಗೂ ತಹಸೀಲ್ದಾರರ ಕಚೇರಿಯ ಅಧಿಕಾರಿಗಳು ದಾಳಿ ಸಮಯದಲ್ಲಿ ಹಾಜರಿದ್ದರು.

ಸಮಾಚಾರ ಸಣ್ಣದಲ್ಲ

ಹುಸಿಬಾಂಬ್ ಬೆದರಿಕೆ: ಆರೋಪಿ ಕೇರಳಕ್ಕೆ

ಭಟ್ಕಳ: ಭಟ್ಕಳದಲ್ಲಿ ಹುಸಿ ಬಾಂಬ್ ಸ್ಫೋಟಿಸುವ ಬೆದರಿಕೆ ಈಮೇಲ್ ಹಾಕಿದ ಪ್ರಕರಣದ ಆರೋಪಿ ನಿತಿನ್ ಶರ್ಮಾ ಯಾನೆ ಖಾಲೀದ್‌ನನ್ನು ಕೇರಳಕ್ಕೆ ಮಹಜರಿಗಾಗಿ ಭಟ್ಕಳ ಪೊಲೀಸರು ಕರೆದೊಯ್ದಿದ್ದಾರೆ. ದೆಹಲಿಯ ಪಟೇಲ್ ನಗರದ ನಿವಾಸಿ ನಿತಿನ್ ಶರ್ಮಾ ಯಾನೆ ಖಾಲೀದ್ ಸೆ.10ರಂದು ಭಟ್ಕಳ ಶಹರ ಠಾಣೆಗೆ ಭಟ್ಕಳವನ್ನು 24 ಗಂಟೆಯೊಳಗೆ ಸ್ಫೋಟಿಸುವಂತೆ ಬೆದರಿಕೆಯ ಸಂದೇಶವುಳ್ಳ ಇ-ಮೇಲ್ ಹಾಕಿದ್ದ. ಆತನನ್ನು ಮಹಜರಿಗಾಗಿ ಕೇರಳದ ಮೂನಾರಿಗೆ ಕರೆದೊಯ್ಯಲಾಗಿದೆ. ಭಟ್ಕಳದಲ್ಲಿನ ಬಾಂಬ್ ಬೆದರಿಕೆ ಪ್ರಕರಣವೂ ಸೇರಿದಂತೆ ಒಟ್ಟು 16 ಪ್ರಕರಣಗಳಲ್ಲಿ ಈತ ಆರೋಪಿಯಾಗಿದ್ದಾನೆ ಎಂದು ತನಿಖೆಯಿಂದ ತಿಳಿದು ಬಂದಿದೆ. ಕೇರಳದಿಂದ ತಮಿಳುನಾಡು ಮೂಲದ ಕಣ್ಣನ್ ಗುರುಸ್ವಾಮಿ ಎಂಬಾತನ ಮೊಬೈಲ್‌ನಿಂದ ಆತನದ್ದೇ ಇಮೇಲ್ ಮೂಲಕ ಬೆದರಿಕೆ ಹಾಕಿದ್ದ, ಈತನು ಪೊಲೀಸರು ತಮಿಳುನಾಡಿಗೆ ತೆರಳಿ ತನಿಖೆ ನಡೆಸಿದಾಗ ನೈಜ ಆರೋಪಿಯ ಬಗ್ಗೆ ತಿಳಿದುಬಂದಿತ್ತು. ಅದಾಗಲೇ ಬಾಂಬ್ ಸ್ಫೋಟದ ಬೆದರಿಕೆ ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಮೈಸೂರು ಜೈಲಿನಲ್ಲಿದ್ದ ಆರೋಪಿಯನ್ನು ಬಾಡಿ ವಾರಂಟ್ ಮೂಲಕ ಕರೆ ತಂದ ಭಟ್ಕಳ ಪೊಲೀಸರು ಕೇರಳದಲ್ಲಿ ಕೃತ್ಯ ಎಸಗಿರುವ ಜಾಗದಲ್ಲಿ ಮಹಜರು ನಡೆಸುತ್ತಿದ್ದಾರೆ.

ಆತ್ಮಹತ್ಯೆ ಕೇಸ್: ಪತಿ, ಅತ್ತೆ ಬಂಧನ

ತುಮಕೂರು: ಇಬ್ಬರು ಮಕ್ಕಳ ಜತೆ ಮಹಿಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಿಳೆ ಪತಿ, ಅತ್ತೆ ಮತ್ತು ಅಜ್ಜಿಯನ್ನು ಪೊಲೀಸರು ಬಂಧಿಸಿದ್ದಾರೆ. ಮೃತ ಸರಿತಾ ಗಂಡ ಸತೋಷ್, ಅತ್ತೆ ಅಂಜಿನಮ್ಮ, ಹಾಗೂ ಸಂತೋಷ್ ಅಜ್ಜಿ ಹನುಮಕ್ಕಳನ್ನು ಪೊಲೀಸರು ಬಂಧಿಸಿದ್ದಾರೆ. ಸರಿತಾ ಕುಟುಂಬಸ್ಥರಿಂದ ಕಿರುಕುಳಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಆರೋಪ ಕೇಳಿಬಂದಿತ್ತು. ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ಕಡಪಲಕೆರೆ ಗ್ರಾಮದಲ್ಲಿ ಘಟನೆ ನಡೆದಿತ್ತು. ಮೂವರನ್ನು ಪಾವಗಡ ಪೊಲೀಸರು ಬಂಧಿಸಿದ್ದಾರೆ. ಶನಿವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಇಬ್ಬರು ಮಕ್ಕಳ ಜೊತೆ ಸೇರಿ ಮಹಿಳೆ ಆತ್ಮಹತ್ಯೆ ಮಾಡಿಕೊಂಡಿದ್ದರು.

ತಿಮರೋಡಿಗೆ ಎರಡನೇ ನೋಟಿಸ್

ಮಂಗಳೂರು: ಮಹೇಶ್ ಶೆಟ್ಟಿ ತಿಮರೋಡಿ

ಭಾನುವಾರ ಬೆಳ್ತಂಗಡಿ ಪೊಲೀಸರ ವಿಚಾರಣೆಗೆ ಗೈರಾಗಿದ್ದಾರೆ. ಅಕ್ರಮ ಶಸ್ತ್ರಾಸ್ತ್ರ ಹೊಂದಿದ್ದ ಆರೋಪದಲ್ಲಿ ಭಾನುವಾರ ತಿಮರೋಡಿ ಬೆಳ್ತಂಗಡಿ ಠಾಣೆಗೆ ಹಾಜರಾಗಿ ವಿಚಾರಣೆ ಎದುರಿಸಬೇಕಿತ್ತು. ಆದರೆ ಭಾನುವಾರ ವಿಚಾರಣೆಗೆ ಬರಲು ಅಸಾಧ್ಯ ಎಂದು ಆಪ್ತರ ಮೂಲಕ ತಿಮರೋಡಿ ಪೊಲೀಸರಿಗೆ ಮನವಿ ಮಾಡಿದ್ದರು. ವಿಚಾರಣೆಗೆ ಹಾಜರಾಗದ ಹಿನ್ನೆಲೆಯಲ್ಲಿ ಬೆಳ್ತಂಗಡಿ ಪೊಲೀಸರು ತಿಮರೋಡಿ ಮನೆಗೆ ತೆರಳಿ ಎರಡನೇ ನೋಟಿಸ್ ಅಂಟಿಸಿ ಸೆ.25ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ. ಸಾಕ್ಷಿಯಾಗಿ ಆಗಮಿಸಿ ಈಗ ಬಂಧನಕ್ಕೆ ಒಳಗಾದ ಚಿನ್ನಯ್ಯನನ್ನು ತಿಮರೋಡಿ ಮನೆಗೆ ಕರೆದುಕೊಂಡು ವಿಶೇಷ ತನಿಖಾ ತಂಡದ ಪೊಲೀಸರು ಮಹಜರು ಮಾಡಿದ್ದರು. ಮಹಜರು ಮಾಡುವ ವೇಳೆ ತಿಮರೋಡಿ ಮನೆಯಲ್ಲಿ ಎರಡು ತಲವಾರು ಮತ್ತು ಒಂದು ಬಂದೂಕು ಪತ್ತೆಯಾಗಿರುವ ಬಗ್ಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಎಸ್ಐಟಿ ಎಸ್‌ಪಿ ಸಿ.ಎ. ಸೈಮನ್ ಸೆ.16ರಂದು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ಬರೆಸಿ

ಹುಬ್ಬಳ್ಳಿ: ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಯ

ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ಬರೆಸಬೇಕು. ವೀರಶೈವ ಲಿಂಗಾಯತ ಏಕತಾ ಸಮಾವೇಶದಲ್ಲಿ ಅವರವರ ವಿವೇಚನೆಗೆ ಬಿಟ್ಟಿದ್ದು ಎನ್ನುವ ಸಚಿವ ಈಶ್ವರ ಖಂಡ್ರೆ ಹೇಳಿಕೆ ವೈಯಕ್ತಿವಾದದ್ದೇ ಹೊರತು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನಿರ್ಧಾರವಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಅರವಿಂದ ಬೆಲ್ಲದ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾವೇಶದಲ್ಲಿ ಕೆಲವು ಸ್ವಾಮೀಜಿಗಳು ಧರ್ಮದ ಕುರಿತು ವಿತಂಡವಾದ ಮಂಡಿಸಿದ್ದಾರೆ. ಸಚಿವರು ಹಾಗೂ ಕೆಲವು ನಾಯಕರು ವಿವೇಚನೆ ಅನುಸಾರ ಹಾಗೂ ವೀರಶೈವ ಲಿಂಗಾಯತ ಧರ್ಮ ಎಂದೇ ಬರೆಸಬೇಕು ಎಂದು ಹೇಳಿಕೆ ನೀಡಿದ್ದಾರೆ.



ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್‌ನ ಕಾರ್ಯಕಾರಿಣಿ ಸಭೆಯಲ್ಲಿ ನಿರ್ಧಾರ

ಪೀಠದಿಂದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಉಚ್ಚಾಟನೆ

ಬಾಗಲಕೋಟೆ: ಜಿಲ್ಲೆಯ ಕೂಡಲ ಸಂಗಮದ

ಪಂಚಮಸಾಲಿ ಪೀಠದ ಪೀಠಾಧ್ಯಕ್ಷ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ಪೀಠದಿಂದ ಉಚ್ಚಾಟನೆ ಮಾಡಲಾಗಿದೆ.

ಕೂಡಲ ಸಂಗಮದಲ್ಲಿ ನಡೆದ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್‌ನ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡ ಟ್ರಸ್ಟ್‌ನ 30 ಸದಸ್ಯರು ಹಾಗೂ ಸಮುದಾಯದ ಜನರ ಮಧ್ಯೆ ಈ ನಿರ್ಣಯ ತೆಗೆದುಕೊಳ್ಳಲಾಗಿದೆ.

ಟ್ರಸ್ಟ್‌ನ ಕಾರ್ಯದರ್ಶಿ ನೀಲಕಂಠ ಅಸೂಟಿ ಅವರು, ಟ್ರಸ್ಟ್ ನಿರ್ಧಾರವನ್ನು ಘೋಷಿಸಿ, ಸುದ್ದಿಗಾರರೊಂದಿಗೆ ಮಾತನಾಡಿದರು, ಸ್ವಾಮೀಜಿ ಸ್ವ-ಆಸ್ತಿ ಮಾಡಿದ್ದಾರೆ. ದಾವಣಗೆರೆ ಹಾಗೂ ಇತರೆ ಕಡೆಗಳಲ್ಲೂ ಆಸ್ತಿ ಮಾಡಿದ್ದಾರೆ. ಲಿಂಗಾಯತ ತತ್ವ ಬಿಟ್ಟು, ಹಿಂದುತ್ವ ಪರ ಹೊರಟಿದ್ದಾರೆ. ಟ್ರಸ್ಟ್ ಸದಸ್ಯರ ಮಾತು ಕೇಳುವುದಿಲ್ಲ. ಜತೆಗೆ ಪೀಠದಲ್ಲೂ ಇರುವು ದಿಲ್ಲ. ಒಂದು ಪಕ್ಷದ ಪರ ಹೊರಟಿದ್ದಾರೆ. ಸ್ವಾಮೀಜಿ ಗಳು ಸ್ವಾಮೀಜಿಗಳಾಗಿ ಉಳಿದಿಲ್ಲ ಎಂಬ ಕಾರಣ ಸೇರಿದಂತೆ ಅನೇಕ ಕಾರಣ ನೀಡಿ ಉಚ್ಚಾಟನೆ ಮಾಡಲಾಗಿದೆ ಎಂದು ತಿಳಿಸಿದರು.

ಟ್ರಸ್ಟ್ ಅಧ್ಯಕ್ಷ, ವೀರಶೈವ ಲಿಂಗಾಯತ ನಿಗಮದ ಅಧ್ಯಕ್ಷ ಹಾಗೂ ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಹಾಗೂ ಸಮುದಾಯದ ಹಿರಿಯ ಮುಖಂಡ ಎಂ.ಪಿ.ನಾಡಗೌಡ ಸೇರಿದಂತೆ ಟ್ರಸ್ಟ್‌ನ ಸದಸ್ಯರು ಹಾಗೂ ಸಮುದಾಯದ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.



ಕೂಡಲಸಂಗಮದಲ್ಲಿ ನಡೆದ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್‌ನ ಕಾರ್ಯಕಾರಿಣಿ ಸಭೆಯಲ್ಲಿ ಟ್ರಸ್ಟ್‌ನ ಅಧ್ಯಕ್ಷ ಹಾಗೂ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿದರು.

ಯತ್ನಾಳ ಪರ ಬ್ಯಾಟಿಂಗ್ ಮಾಡಿದ್ದಾಗಿನಿಂದ ಒಡಕು: ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ಶಾಸಕ ವಿಜಯಾನಂದ ಕಾಶಪ್ಪನವರ ಹಾಗೂ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸೇರಿ ಬೆಂಗಳೂರಿನವರೆಗೆ ಪಾದಯಾತ್ರೆ ಯಶಸ್ವಿಯಾಗಿ ಪೂರ್ಣಗೊಳಿಸಿದ್ದರು. ಜತೆಗೆ ಶಾಸಕ ಕಾಶಪ್ಪನವರ ಅವರ ಪತ್ನಿ ವೀಣಾ ಕಾಶಪ್ಪನವರ ಅವರಿಗೆ ಬಾಗಲಕೋಟೆ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ನೀಡುವಂತೆ ಹೈಕಮಾಂಡ್ ವರೆಗೂ ಒತ್ತಡ ಹೇರಿದ್ದರು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿ ಉಚ್ಚಾಟಿಸಿದಾಗ ಸ್ವಾಮೀಜಿ ಪಕ್ಷಕ್ಕೆ ಎಚ್ಚರಿಕೆ ನೀಡಿದ್ದರು. ಅಲ್ಲಿಂದ ಶಾಸಕರು ಹಾಗೂ ಸ್ವಾಮೀಜಿ ನಡುವೆ ಒಡಕು ಮೂಡಲಾರಂಭಿಸಿತು. ಕೆಲವು ತಿಂಗಳಗಳ ಹಿಂದೆ ಶ್ರೀಪೀಠಕ್ಕೆ ಬೀಗ ಜಡಿಯಲಾಗಿತ್ತು.

ಕೂಡಲಸಂಗಮದಲ್ಲಿ ಭಕ್ತರ ಸಭೆ ಇಂದು

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಹೋರಾಟದ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಹಾರೂಗೇರಿಗೆ ತೆರಳಿದ್ದೆ. ಸಂಜೆ ಟ್ರಸ್ಟ್‌ನ ನಿರ್ಧಾರದ ಬಗ್ಗೆ ಗೊತ್ತಾಗಿದೆ. ಪೀಠಕ್ಕೂ, ಟ್ರಸ್ಟಿಗೂ ಸಂಬಂಧವೇ ಇಲ್ಲ. ಪೀಠವನ್ನು ಕಟ್ಟಿದವರು ಶ್ರೀಸಾಮಾನ್ಯ ಭಕ್ತರು. ಪೀಠ ಎಂದೆಂದಿಗೂ ಶಾಶ್ವತ. ಯಾರ ಗಮನಕ್ಕೂ ಬಾರದಂತೆ ಈ ನಿರ್ಣಯವನ್ನು ಅವರು ಕೈಗೊಂಡಿದ್ದಾರೆ. ನಾನು ಭಕ್ತರ ಮನಸ್ಸಿನಲ್ಲಿದ್ದೇನೆ. ವೈಯಕ್ತಿಕ ಆಸ್ತಿ ಮಾಡಿರುವುದಕ್ಕೆ ಭಕ್ತರೇ ಉತ್ತರ ನೀಡಲಿದ್ದಾರೆ. ಆಸ್ತಿ ಎಲ್ಲಿ ಮಾಡಿದ್ದೇನೆ ಏನು ಎಂಬುದನ್ನು ಹೇಳಲಿ. ಭಕ್ತರೇ ಎಲ್ಲದಕ್ಕೂ ಉತ್ತರ ನೀಡಲಿದ್ದಾರೆ. ಟ್ರಸ್ಟ್ ಪದಾಧಿಕಾರಿಗಳ ಸಭೆ ನಡೆಸಿರುವ ಬೆನ್ನಲ್ಲೇ ಸೋಮವಾರ ಕೂಡಲಸಂಗಮದ ಸಂಗಮೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಬೆಳಗ್ಗೆ 10ಕ್ಕೆ ಭಕ್ತರ ಸಭೆ ನಡೆಸಲು ತೀರ್ಮಾನಿಸಲಾಗಿದೆ. ಅಲ್ಲಿ ಭಕ್ತರ ಅಭಿಪ್ರಾಯವನ್ನು ಆಲಿಸಿ ಮುಂದಿನ ನಿರ್ಣಯ ಕೈಗೊಳ್ಳುತ್ತೇನೆ ಎಂದು ವಿಶ್ವವಾಣಿ ಪತ್ರಿಕೆಗೆ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾಹಿತಿ ನೀಡಿದರು.

ಸ್ವಾಮೀಜಿ ಸ್ವಂತ ಆಸ್ತಿ, ಸಂಸ್ಥೆಗಳನ್ನು ಹೊಂದಿದ್ದಾರೆ. ಕೂಡಲಸಂಗಮದಲ್ಲೇ ಇವೆ. ಕೆಲವು ಅತಿ ಖಾಸಗಿ ವಿಷಯಗಳನ್ನು ಮಾಧ್ಯಮದ ಎದುರು ಹಂಚಿಕೊಳ್ಳಲು ಆಗುವುದಿಲ್ಲ. ಅದನ್ನು ಸಮುದಾಯದವರ ಮುಂದೆಯೇ ಹೇಳುತ್ತೇನೆ. ಶ್ರೀಪೀಠಕ್ಕೆ ಗೇಟ್ ಅಳವಡಿಸಿದಾಗ ಬೀಗ ಹಾಕಿದ್ದೇನೆ ಎಂದರು. ಬಿಜೆಪಿ ಅವರ ಕಡೆಯಿಂದ ಆರೋಪ ಮಾಡಿಸಿ ಹೆದರಿಸಲು ಸಹ ನೋಡಿದರು. ಇಂದು ಟ್ರಸ್ಟ್ ತನ್ನ ನಿರ್ಣಯ ಕೈಗೊಂಡಿದೆ.
-ವಿಜಯಾನಂದ ಕಾಶಪ್ಪನವರ, ಹುನಗುಂದ ಶಾಸಕರು

ಆಗ ಶಾಸಕ ವಿಜಯಾನಂದ ಕಾಶಪ್ಪನವರ ಅವರು ಶ್ರೀಗಳು ಪೀಠದಲ್ಲಿ ಇರಲ್ಲ, ರಕ್ಷಣೆಗಾಗಿ ಬೀಗ ಹಾಕಿಸಿದ್ದಾಗಿ ತಿಳಿಸಿದ್ದರು. ಇದಕ್ಕೆ ಸ್ವಾಮೀಜಿ ವಿರೋಧ ವ್ಯಕ್ತಪಡಿಸಿದ್ದರು. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಸಭೆ ನಡೆಸಿರುವ ಸ್ವಾಮೀಜಿಗಳು ಧರ್ಮದ ಕಾಲಂನಲ್ಲಿ ಹಿಂದೂ ಹಾಗೂ ಜಾತಿ ಕಾಲಂನಲ್ಲಿ ಲಿಂಗಾಯತ ಪಂಚಮ ಸಾಲಿ ಎಂದು ನಮೂದಿಸಲು ಕರೆ ಕೊಟ್ಟಿದ್ದರು. ಇಬ್ಬರ ನಡುವೆ ಇಂತಹ ಅನೇಕ ಘಟನೆಗಳು ನಡೆದು, ಪೀಠದಿಂದ ಸ್ವಾಮೀಜಿಯನ್ನು ಉಚ್ಚಾಟನೆ ಮಾಡುವ ಹಂತಕ್ಕೆ ಬಂದು ನಿಂತಿದೆ.

ವೈಭವದೊಂದಿಗೆ ಸಂಪನ್ನವಾದ ರಾಘವೇಶ್ವರ ಶ್ರೀಗಳ ಪುರಪ್ರವೇಶ ಮೆರವಣಿಗೆ

ಇಂದಿನಿಂದ ನವರಾತ್ರಿ ನಮಸ್ಯಾ ಸಂಭ್ರಮ

ನವರಾತ್ರಿ ನಮಸ್ಯಾ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯವಹಿಸಲು ಸಾಗರಕ್ಕೆ ಆಗಮಿಸಿದ ರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ರಾಘವೇಶ್ವರ ಭಾರತೀ ಮಹಾಸ್ವಾಮಿ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಶಿವಮೊಗ್ಗ: ಸಾಗರದ ರಾಘವೇಶ್ವರ ಸಭಾ ಭವನದಲ್ಲಿ ಸೆ.22ರಿಂದ ಆರಂಭಗೊಳ್ಳುವ ನವರಾತ್ರಿನಮಸ್ಯಾ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯವಹಿಸಲು ಶನಿವಾರ ಸಾಗರಕ್ಕೆ ಆಗಮಿಸಿದ ರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ರಾಘವೇಶ್ವರ ಭಾರತೀ ಮಹಾಸ್ವಾಮಿಗಳ ಪುರ ಪ್ರವೇಶ ಕಾರ್ಯಕ್ರಮ ವೈಭವದಿಂದ ನಡೆಯಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ನಗರದ ಶಾರದಾಂಬಾ ವೃತ್ತದಿಂದ ಆರಂಭವಾದ ಮೆರವಣಿಗೆಯು ಗಣಪತಿ ದೇವಾಲಯದವರೆಗೆ ನಡೆಯಿತು.

ಸುಮಾರು 10 ಸಾವಿರಕ್ಕೂ ಹೆಚ್ಚು ಶಿಷ್ಯ ಭಕ್ತರು ಸುಮಾರು 1.5 ಕಿಮೀ ಉದ್ದದ ಮೆರವಣಿಗೆಯಲ್ಲಿ ಭವ್ಯವಾಗಿ ನಡೆಯಿತು. 2 ಸಾವಿರ ಮಾತೆಯರು ಪೂರ್ಣ ಕುಂಭದೊಂದಿಗೆ ಶ್ರೀ ಸ್ವಾಗತಿಸಿದರು.

ಚಂಡೆ ವಾದನ, ನಾದಸ್ವರ, ಭಜನಾ ಕುಣಿತ, ರಾಮ ಸಂಕೀರ್ತನೆ ಸೇರಿದಂತೆ ಹತ್ತಕ್ಕೂ ಹೆಚ್ಚು ಕಲಾತಂಡಗಳು ಹಾಗೂ ಸುಮಾರು 15 ಅಡಿ ಎತ್ತರದ ಧನುರ್ಧಾರಿ ರಾಮನ ಮೂರ್ತಿ ಮೆರವಣಿಗೆಯ ಸೊಬಗನ್ನು ಹೆಚ್ಚಿಸಿತ್ತು.

ಶೋಭಾಯಾತ್ರೆಯ ನಂತರ ಮಾತನಾಡಿದ ಶ್ರೀಗಳು, ಸಾಗರ ನಗರಕ್ಕೆ ಸಾಗರ ಎಂಬ ಹೆಸರು ಸಲ್ಲುವುದು ಹೇಗೆ ಎಂಬ ಪ್ರಶ್ನೆಯಿತ್ತು. ಅದಕ್ಕೀಗ ಉತ್ತರ ಸಿಕ್ಕಿದೆ. ಪುರಪ್ರವೇಶದ ಸಂದರ್ಭದಲ್ಲಿ ಭಕ್ತಿ ಸಾಗರವಾಗಿ ಹೊಮ್ಮಿದೆ. ಸಾಗರಕ್ಕೆ ಸಾಗರವೇ ಹೋಲಿಕೆ, ಆಕಾಶಕ್ಕೆ ಆಕಾಶವೇ ಹೋಲಿಕೆ, ರಾಮ-ರಾವಣ ಯುದ್ಧಕ್ಕೆ ಆ ಯುದ್ಧವೇ ಹೋಲಿಕೆ ಎಂದು ವಾಲ್ಮೀಕಿ ಮಹರ್ಷಿ ಹೇಳುತ್ತಾರೆ. ಸಾಗರ ನಗರದಲ್ಲಿ ನಡೆದ ಪುರಪ್ರವೇಶ ಉತ್ಸವಕ್ಕೆ ಬೇರೆ ಹೋಲಿಕೆ ಇಲ್ಲ. ಇವೆಲ್ಲ ವೈಭವಗಳು ರಾಜರಾಜೇಶ್ವರಿಗೆ ಸಲ್ಲುತ್ತದೆ ಎಂದರು.

ನಾನಾ ಧಾರ್ಮಿಕ ಕಾರ್ಯಕ್ರಮ

ಸೋಮವಾರದಿಂದ ಪ್ರತಿದಿನ ಮಧ್ಯಾಹ್ನ ಶ್ರೀಗಳಿಂದ ಲಲಿತೋಪಾಖ್ಯಾನ ವಿಶೇಷ ಪ್ರವಚನ ಇರಲಿದ್ದು, ಬೆಳಗ್ಗೆ ಶ್ರೀಪೂಜೆ, ಲಲಿತಾಮೂರ್ತಿ ಪೂಜೆ, ಚಂಡಿಕಾ ಹವನ, ಚಂಡೀ ಸಪ್ತಶತಿ ಪಾರಾಯಣ, ಕುಂಕುಮಾರ್ಚನೆ, ಭಜನೆ, ಸುವಾಸಿನಿ ಪೂಜೆ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಕಾಲುವೆಗೆ ಎಸೆದು ಮಗು ಕೊಲೆ: ತಾಯಿ ಬಂಧನ

ಬಳ್ಳಾರಿ: ಹೆಣ್ಣು ಮಗು ಹುಟ್ಟಿದ್ದಕ್ಕೆ ಹೆತ್ತ ತಾಯಿಯೇ ಎರಡು ತಿಂಗಳ ಹಸುಗೂಸು ಕಾಲುವೆಗೆ ಎಸೆದು ಕೊಲೆ ಮಾಡಿರುವ ಘಟನೆ ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ತೋರಣಗಲ್‌ನಲ್ಲಿ ನಡೆದಿದೆ. ಪ್ರಿಯಾಂಕಾ ದೇವಿ ತನ್ನ ಮಗುವನ್ನ ಕಾಲುವೆಗೆ ಎಸೆದು ಕೊಲೆ ಮಾಡಿದ ಪಾಪಿ. ಪತಿ ಸರೋಜ್ ಕುಮಾರ್ ಖಾಸಗಿ ಕಂಪನಿಯಲ್ಲಿ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದಾರೆ. ಬಿಹಾರ ಮೂಲದ ದಂಪತಿ ತೋರಣಗಲ್‌ನಲ್ಲಿ ವಾಸವಾಗಿದ್ದರು. ಪ್ರಿಯಾಂಕಾ ದೇವಿ-ಸರೋಜ್ ಕುಮಾರ್ ದಂಪತಿಗೆ ಮೊದಲು ಇಬ್ಬರು ಹೆಣ್ಣು ಮಕ್ಕಳು ಜನಿಸಿದ್ದರು. ಮೂರನೇ ಹೆಣ್ಣು ಮಗು ಜನಿಸಿ ಎರಡು ತಿಂಗಳಾಗಿತ್ತು. ಮೂರನೆಯದ್ದೂ ಹೆಣ್ಣು ಮಗು ಆದ ಕಾರಣ ಕೊಲೆ ಮಾಡಿದ್ದಾಳೆ ಎಂದು ತಿಳಿದುಬಂದಿದೆ.

ಇಂದಿನಿಂದ ಜಾತಿ ಗಣತಿ

← ಮೊದಲಪುಟದಿಂದ

ಸೋಮವಾರದಿಂದ ರಾಜ್ಯಾದ್ಯಂತ ಜಾತಿಸಮೀಕ್ಷೆ ನಡೆಯಲಿದೆ. ಲಕ್ಷಾಂತರ ಶಿಕ್ಷಕರು ಪಾಲ್ಗೊಳ್ಳಲಿದ್ದಾರೆ. ಜಾತಿ ಸಂಬಂಧಿತ ಹಲವಾರು ಪ್ರಶ್ನೆಗಳಿಗೆ ಉತ್ತರ ಹುಡುಕಲು ಸರಕಾರ ಹೆಜ್ಜೆ ಇಟ್ಟಿದೆ.

- ಜಾತಿ ಗಣತಿ ವೇಳೆ, 60 ಪ್ರಶ್ನೆಗಳನ್ನು ಕೇಳಲಿರುವ ಅಧಿಕಾರಿಗಳು
- ಸಮೀಕ್ಷೆಯಲ್ಲಿ ಭಾಗವಹಿಸುವ ಸರಕಾರಿ ಶಿಕ್ಷಕರಿಗೆ ಮುಂದೆ ಪರ್ಯಾಯ ರಜೆಯನ್ನು ನೀಡಲು ರಾಜ್ಯ ಸರಕಾರದಿಂದ ಚಿಂತನೆ
- ಕ್ರಿಶ್ಚಿಯನ್ ಜತೆ ಕಾಣಿಸಿಕೊಂಡಿದ್ದ 33 ಉಪಜಾತಿಗಳನ್ನು ಮುಖ್ಯಪಟ್ಟಿಯಿಂದ ಹೊರಗಿಡಲು ತೀರ್ಮಾನ
- ಜಾತಿ ಗಣತಿಗೆ 1.75 ಲಕ್ಷ ಶಿಕ್ಷಕರನ್ನು ಬಳಸಿಕೊಳ್ಳಲು ತೀರ್ಮಾನ
- ನಿತ್ಯ ಎಂಟರಿಂದ 10 ಮನೆಗಳಿಗೆ ಭೇಟಿ ನೀಡಲಿರುವ ಸಮೀಕ್ಷಕರು
- ಆರು ವರ್ಷ ಮೇಲ್ಪಟ್ಟ ಎಲ್ಲರಿಗೂ ಆಧಾರ್ ಕಡ್ಡಾಯ

ಸಮೀಕ್ಷೆ ಸಮಯದಲ್ಲಿ ಕೆವೈಸಿ ನಡೆಸುವಲ್ಲಿ ಎದುರಾಗುತ್ತಿದ್ದ ಅಡಚಣೆಗಳನ್ನು ಪರಿಹರಿಸಲು ಫೇಸ್ ರೆಕಗ್ನಿಷನ್ ಕಲ್ಪಿಸಲಾಗಿದೆ. ತಪ್ಪು ಗೊಂದಲಕ್ಕೆ ಒಳಗಾಗಿದ್ದ 33 ಜಾತಿಗಳ ಹೆಸರನ್ನು ಪಟ್ಟಿಯಿಂದ ನಿಷ್ಕ್ರಿಯಗೊಳಿಸಲಾಗಿದೆ. ಆದರೂ ಯಾವುದೇ ಜಾತಿಯ ಹೆಸರನ್ನು ಸ್ವಯಂ ಇಚ್ಛೆಯಿಂದ ನಮೂದಿಸಲು ಅವಕಾಶವಿದೆ. ನಾವು ಯಾವುದೇ ಜಾತಿಯನ್ನು ಸೃಷ್ಟಿ ಮಾಡಿಲ್ಲ. ಮಾಹಿತಿಗಾಗಿ ಕುಟುಂಬದ ಧರ್ಮ, ಜಾತಿ, ಉಪಜಾತಿಗಳ ಮಾಹಿತಿ ಪಡೆಯಲಾಗುತ್ತಿದೆ.
-ಮಧುಸೂಧನ್ ನಾಯಕ್, ಅಧ್ಯಕ್ಷರು, ಹಿಂದುಳಿದ ವರ್ಗಗಳ ಆಯೋಗ

ಸ್ವದೇಶಿ ಮಂತ್ರವೇ ಶಕ್ತಿ

← ಮೊದಲಪುಟದಿಂದ

ಬೆಂಗಳೂರು-ಹೈದ್ರಾಬಾದ್ ಸರಕು ಸಾಗಣೆ - 2014ರ ಬವಣೆ ನೆನೆದ ಪ್ರಧಾನಿ: 2014ರಲ್ಲಿ ನಾನು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುವಾಗ ವಿದೇಶಿ ಪತ್ರಿಕೆಯಲ್ಲಿ ಸುದ್ದಿಯೊಂದು ಬಂದಿತ್ತು. ಬೆಂಗಳೂರಿನಿಂದ ಕೇವಲ 570 ಕಿ.ಮೀ. ದೂರದಲ್ಲಿರುವ ಹೈದ್ರಾಬಾದ್‌ಗೆ ಸರಕು ಕಳಿಸಬೇಕಿದ್ದರೆ ಬಹಳ ತ್ರಾಸವಾಗುತ್ತಿದೆ. ಹಲವಾರು ರೀತಿಯ ತೆರಿಗೆಗಳ ಭಾರದಿಂದ ಕಂಪನಿಗಳು ಬೆಂಗಳೂರಿನಿಂದ ಮೊದಲು ಯೂರೋಪ್‌ಗೆ ಕಳಿಸಿ, ಅಲ್ಲಿಂದ ಹೈದ್ರಾಬಾದ್‌ಗೆ ಕಳಿಸಿದರೆ ಉತ್ತಮ ಎಂದು ಭಾವಿಸುವ ಪರಿಸ್ಥಿತಿಯಿತ್ತು ಎಂದು ಅದರಲ್ಲಿ ಬರೆಯಲಾಗಿತ್ತು. ಆಗ ಲಕ್ಷಾಂತರ ಕಂಪನಿಗಳು, ದೇಶದ ಜನರು ಈ ಪರಿಸ್ಥಿತಿ ಎದುರಿಸುತ್ತಿದ್ದರು. 2014ರಲ್ಲಿ ನೀವು ನಮಗೆ ಅಧಿಕಾರ ನೀಡಿದಾಗ 2017ರಲ್ಲಿ ಜಿಎಸ್‌ಟಿಯನ್ನು ಜಾರಿಗೆ ತಂದೆವು. ಈಗ ಹೊಸ ಸುಧಾರಣೆ ಮಾಡಿದ್ದೇವೆ. ಒಂದು ದೇಶ ಒಂದು ತೆರಿಗೆಯ ಕನಸು ನನಸಾಗಿದೆ. ಕಾಲಕ್ಕೆ ತಕ್ಕಂತೆ ಈ ರೀತಿಯ ಸುಧಾರಣೆಗಳು ಆಗುತ್ತಲೇ ಹೋಗುತ್ತವೆ ಎಂದು ಮೋದಿ ಹೇಳಿದ್ದಾರೆ.

ಸಣ್ಣ-ದೊಡ್ಡ ಕಂಪನಿಗಳಿಗೆ ಲಾಭ: ಸಣ್ಣ ಕಂಪನಿಗಳಿಗೆ, ಚಿಲ್ಲರೆ ವ್ಯಾಪಾರಿಗಳಿಗೆ ಸಂಕೀರ್ಣ ತೆರಿಗೆ ವಿಂಗಡಣೆಯ ಸಮಸ್ಯೆಯನ್ನು ಇಲ್ಲ ಮಾಡುತ್ತವೆ. ದೊಡ್ಡ ಸಂಸ್ಥೆಗಳಿಗೆ ತೆರಿಗೆ ವಿವಾದಗಳನ್ನು ಬಗೆಹರಿಸಿಕೊಳ್ಳಲು ಇದು ಉತ್ತಮ ಅವಕಾಶ. ಈಗ ಕಂಪನಿಗಳು ಈ ಸುಧಾರಣೆಯ ಲಾಭವನ್ನು ಜನರಿಗೆ ಹಸ್ತಾಂತರವಾಗುವಂತೆ ನೋಡಿಕೊಳ್ಳಬೇಕು ಎಂದು ಪ್ರಧಾನಿ ಹೇಳಿದ್ದಾರೆ.

ಕಮ್ಮಟದಿಂದ ಸನಾತನ ಧರ್ಮ, ಸಂಸ್ಕೃತಿಯ ಅನಾವರಣ: ಗುರುದೇವಾನಂದ

ಧರ್ಮಸ್ಥಳ ಭಜನಾ ಕಮ್ಮಟಕ್ಕೆ ಅದ್ದೂರಿ ತೆರೆ

ಉಜಿರೆ: ಭಜನಾ ಕಮ್ಮಟದಿಂದ ನಮ್ಮ ಸನಾತನ ಧರ್ಮ ಮತ್ತು ಸಂಸ್ಕೃತಿಯ ಅನಾವರಣವಾಗಿ ಭಗವಂತನ ಸಾಕ್ಷಾತ್ಕಾರವಾಗುತ್ತದೆ ಎಂದು ಒಡಿಯೂರು ಗುರುದೇವಾನಂದ ಸ್ವಾಮೀಜಿ ಹೇಳಿದರು.

ಧರ್ಮಸ್ಥಳದಲ್ಲಿ ಭಾನುವಾರ ನಡೆದ 27ನೇ ವರ್ಷದ ಭಜನಾ ಕಮ್ಮಟದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ಭಜನೆ ಮತ್ತು ಸಂಸ್ಕೃತಿಗೆ ಅವಿನಾಭಾವ ಸಂಬಂಧವಿದ್ದು, ದೃಢಭಕ್ತಿಯಿಂದ ಭಜನೆ ಮಾಡಿದಾಗ ಭಗವಂತನ ಸಾಕ್ಷಾತ್ಕಾರವಾಗುತ್ತದೆ. ಭಜನೆ ಮೂಲಕ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಪುರುಷಾರ್ಥಗಳನ್ನು ಸಾಧಿಸಬಹುದು. ರಾಮಾಯಣ, ಮಹಾಭಾರತದ ಕಥೆಗಳಿಂದ ನಮ್ಮ ಸಾರ್ಥಕ ಬದುಕಿಗೆ ಮಾರ್ಗದರ್ಶನ ಸಿಗುತ್ತಿದೆ. ಭಜನಾ ಕಮ್ಮಟದ ಮೂಲಕ ಹೆಗ್ಗಡೆಯವರು ಹಿಂದೂ ಸಮಾಜದ ಸಂಘಟನೆ ಮತ್ತು ಬಲವರ್ಧನೆಗೆ ಅಮೂಲ್ಯ ಕೊಡುಗೆ ನೀಡುತ್ತಿದ್ದಾರೆ. ಭಜನೆಯಿಂದ ಸಾತ್ವಿಕ ಶಕ್ತಿ ಜಾಗೃತಗೊಂಡು ಭಯ, ದ್ವೇಷ ದೂರವಾಗಿ ಪ್ರೀತಿ-ವಿಶ್ವಾಸ ಮೂಡಿಬಂದು ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಇಂದು ಆನ್‌ಲೈನ್ ಚಿಂತೆ-ಚಿಂತನದಿಂದ ಲೈಫ್‌ಲೈನ್ ಹಾಳಾಗುತ್ತಿದೆ ಎಂದು ವಿಷಾದಿಸಿದರು.

ಭಜನಾ ಕಮ್ಮಟವನ್ನು ವೀಕ್ಷಿಸಿ ಸಂಭ್ರಮಿಸಿದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ.

ಮಹಿಳೆಯರು ಮತ್ತು ಮಕ್ಕಳು ಕೂಡಾ ಭಜನೆಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿರುವುದು ಸಂತೋಷವಾಗಿದೆ. ಭಜನಾಪಟುಗಳು ಪರಸ್ಪರ ಪ್ರೀತಿ-ವಿಶ್ವಾಸದೊಂದಿಗೆ ನಾಯಕತ್ವ ಗುಣವನ್ನು ಬೆಳೆಸಿಕೊಳ್ಳಬೇಕು.
-ಡಿ. ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ ಧರ್ಮಾಧಿಕಾರಿ

ಸಂಸದ ಬ್ರಿಜೇಶ್ ಚೌಟ ಮಾತನಾಡಿ, ಧರ್ಮ ಮತ್ತು ಸಂಸ್ಕೃತಿ ಉಳಿದರೆ ಮಾತ್ರ ದೇಶ ಉಳಿಯುತ್ತದೆ. ಸನಾತನ ಧರ್ಮ ಮತ್ತು ಸಂಸ್ಕೃತಿಯ ಪುನರುತ್ಥಾನದೊಂದಿಗೆ ಏಕತೆ ಮತ್ತು ಏಕಾಗ್ರತೆ ಸಾಧಿಸಲು ಭಜನೆ ಪ್ರೇರಕ ಶಕ್ತಿಯಾಗಿದೆ ಎಂದು ಹೇಳಿದರು.

ಹೇಮಾವತಿ ವೀ. ಹೆಗ್ಗಡೆ, ಡಿ. ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರದ್ಧಾ ಅಮಿತ್ ಉಪಸ್ಥಿತರಿದ್ದರು.

2 ಕೋಟಿ ಮನೆಗಳ ಸಮೀಕ್ಷೆ ಇಂದಿನಿಂದ | ಒಬ್ಬ ಸಮೀಕ್ಷಕರಿಗೆ 140ರಿಂದ 150 ಮನೆ

33 ಜಾತಿ ನಿಷ್ಕ್ರಿಯಗೊಳಿಸಿ ಸಮೀಕ್ಷೆ: ಮಧುಸೂಧನ್ ನಾಯಕ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರಿ ವಿವಾದಕ್ಕೆ ಕಾರಣವಾಗಿದ್ದ 33 ಜಾತಿಗಳನ್ನು

ನಿಷ್ಕ್ರಿಯಗೊಳಿಸಿ ಇಂದಿನಿಂದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಗಣತಿಯನ್ನು ನಡೆಸಲಾಗುವುದು ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ನಾಯಕ್ ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿಗಳನ್ನು ಸೃಷ್ಟಿಸುವ ಕೆಲಸ ಆಯೋಗ ಮಾಡಿಲ್ಲ. ಅಸ್ತಿತ್ವದಲ್ಲಿವೆ ಎಂದು ಹೇಳಲಾದ ಜಾತಿಗಳನ್ನು ಸಮೀಕ್ಷಾದಾರರ ಅನುಕೂಲಕ್ಕಾಗಿ ಮೊಬೈಲ್ ಆ್ಯಪ್‌ನಲ್ಲಿ ಪಟ್ಟಿ ಮಾಡಿ ಒದಗಿಸಲಾಗಿದೆ. ಇದು ಸಮೀಕ್ಷಾದಾರರ ಆಂತರಿಕ ಬಳಕೆಗೆ ಮಾತ್ರ. ಇದು ಸಾರ್ವಜನಿಕ ದಾಖಲೆಯಲ್ಲ. ಇದಕ್ಕೆ ಕಾನೂನು ಮಾನ್ಯತೆ ಇಲ್ಲ. ಸಮೀಕ್ಷೆಯಲ್ಲಿ ಸಂಗ್ರಹಿಸಲಾದ ಮಾಹಿತಿಗಳನ್ನು ಆಯೋಗವು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಿದ ಬಳಿಕ ವಿವಿಧ ಜಾತಿ ಜನಾಂಗಗಳಿಗೆ ಒದಗಿಸಬಹುದಾದ ಅನುಕೂಲತೆಗಳ ಬಗ್ಗೆ ಶಿಫಾರಸಿನೊಂದಿಗೆ ಸಮೀಕ್ಷೆ ವರದಿ ಮಾಡಲಿದೆ. ತಪ್ಪು ಗೊಂದಲಕ್ಕೆ ಒಳಗಾಗಿದ್ದ 33 ಜಾತಿಗಳ ಹೆಸರನ್ನು ಪಟ್ಟಿಯಿಂದ ನಿಷ್ಕ್ರಿಯಗೊಳಿಸಲಾಗಿದೆ. ಆದರೂ ಯಾವುದೇ ಜಾತಿಯ ಹೆಸರನ್ನು ಸ್ವಯಂ ಇಚ್ಛೆಯಿಂದ ನಮೂದಿಸಲು ಅವಕಾಶವಿದೆ. 148 ಜಾತಿಗಳನ್ನು ಸೇರ್ಪಡೆ ಮಾಡಲಾಗಿದೆ. ಪರಿಶಿಷ್ಟ ಜಾತಿ-ಪಂಗಡ ಹೊರತುಪಡಿಸಿ 1561 ಜಾತಿಗಳಿವೆ ಎಂದು ಸ್ಪಷ್ಟಪಡಿಸಿದರು.

ಪಾಕಿಸ್ತಾನದವರು ಎಂದರೂ ಬರೆದುಕೊಳ್ಳುವಿರಾ?

ಜನರು ಹೇಳುವ ಜಾತಿಯನ್ನು ಬರೆದುಕೊಳ್ಳಲಾಗುವುದು ಎನ್ನುವ ಆಯೋಗದ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿರುವ ಪ್ರತಿಪಕ್ಷ ನಾಯಕ ಆರ್. ಅಶೋಕ್, ಮಧುಸೂದನ್ ನಾಯ್ಕ್ ಪಾಕಿಸ್ತಾನದವರು ಅಂತ ಯಾರೋ ಅಂದರೆ ಅದನ್ನೂ ಬರೆದುಕೊಳ್ತೀರಾ? ಎಂದು ಟೀಕಿಸಿದರು. ಏನು ಬೇಕಾದರೂ ಬರೀಬಹುದು ಅಂದರೆ ದೇಶ ವಿರೋಧಿಗಳಿಗೆ ಅವಕಾಶ ಮಾಡಿಕೊಟ್ಟಂತೆ. ಆಯೋಗದ ಅಧ್ಯಕ್ಷ ಸಂವಿಧಾನಕ್ಕೆ ಅಪಚಾರ ಆಗೋ ಹೇಳಿಕೆ ಕೊಟ್ಟಿದ್ದಾರೆ. ಇದು ರಾಜಕಾರಣದ ಒಳ್ಳೆಕೆಗಾಗಿ ಮಾಡುತ್ತಿರುವ ಸಮೀಕ್ಷೆ. ಈ ಸಮೀಕ್ಷೆಯಿಂದ ಯಾವುದೇ ಜಾತಿಗೂ ನ್ಯಾಯ ಸಿಗಲ್ಲ. ಲಿಂಗಾಯತ ಧರ್ಮ ಒಡೆಯುವ ಸಂಚು ಮಾಡಿದ್ದ ತಂಡವೇ ಈಗ ಹಿಂದೂ ಧರ್ಮ ಒಡೆಯಲು ಹೊರಟಿದೆ ಎಂದು ಕಿಡಿಕಾರಿದರು.

ಈ ಸಮೀಕ್ಷೆಯ ಹಿಂದೆ ಕ್ರಿಶ್ಚಿಯನ್ ಮಿಷನರಿಗಳ ಕೈವಾಡವಿದೆ. ಅಧಿಕಾರ ಉಳಿಸಿಕೊಳ್ಳಲು ಎಲ್ಲರನ್ನೂ ಸೋನಿಯಾ ಗಾಂಧಿ ಅವರ ಧರ್ಮಕ್ಕೆ ಸೇರಿಸಲು ಸರಕಾರ ಹೊರಟಿದೆ. ಅಧಿಕಾರದ ಲಾಲಸೆಗೆ ಸನಾತನ ಹಿಂದೂ ಧರ್ಮ ಮಲಿನ ಮಾಡಲು ಹೊರಟಿದ್ದಾರೆ. ಇನ್ನೆರಡು ವರ್ಷ ಕಾಂಗ್ರೆಸ್ ಅಧಿಕಾರದಲ್ಲಿ ಇರುತ್ತೆ. ನಂತರ ಅವರ ಈ ಸಮೀಕ್ಷೆಯನ್ನು ಯಾರೂ ಕೇಳೋರು ಇರಲ್ಲ.
- ಆರ್.ಅಶೋಕ್, ಪ್ರತಿಪಕ್ಷ ನಾಯಕ

- ಸಮೀಕ್ಷಾ ಕಾರ್ಯಕ್ಕಾಗಿ ಸಮೀಕ್ಷಾದಾರರಿಗೆ ಮತ್ತು ಮೇಲ್ವಿಚಾರಕರಿಗೆ ಅಗತ್ಯ ಪ್ರಮಾಣ ತರಬೇತಿ ನೀಡಲಾಗಿದೆ.
- ಸಮೀಕ್ಷಾ ನಮೂನೆಯಲ್ಲಿ ಒಟ್ಟು 60 ಪ್ರಶ್ನೆಗಳ ಕಾಲಂ ಗಳಿದ್ದು ಮಾಹಿತಿಯನ್ನು ಸಂಗ್ರಹಿಸಲಾಗುವುದು.
- ಕೆಲಸದ ಮೇಲೆ ಹೊರಗೆ ಹೋಗಿರುವವರ ಮಾಹಿತಿಯನ್ನು ಆಧಾರ್ ಪರಿಶೀಲನೆ ಮೂಲಕ ಆನ್‌ನಲ್ಲಿ ಸಮೀಕ್ಷೆ ನಡೆಸುವ ವ್ಯವಸ್ಥೆ.

ನಾವು ನಡೆಸುತ್ತಿರುವುದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಾಗಿದ್ದು, ಜಾತಿ ಗಣತಿ ಅಥವಾ ಜಾತಿ ಸಮೀಕ್ಷೆಯಲ್ಲ. ಈಗಾಗಲೇ ರಾಜ್ಯದ ಎರಡು ಕೋಟಿ ಮನೆಗಳ ಜಿಯೋಟ್ಯಾಗಿಂಗ್ ಹಾಗೂ ಗಣತಿ ಬ್ಲಾಕ್‌ನ ನಕ್ಷೆ ಕಾರ್ಯ ಪೂರ್ಣಗೊಂಡಿದೆ. ಬ್ಲಾಕ್ ನಕ್ಷೆಯಲ್ಲಿ ಮನೆಗಳನ್ನು ಗುರುತಿಸುವ ಜೊತೆಗೆ ರಸ್ತೆಗಳನ್ನು ನಕ್ಷೆಗಳಲ್ಲಿ ನಮೂದಿಸಲಾಗಿದ್ದು, ಗಣತಿದಾರರು ಸಮೀಕ್ಷೆಗಾಗಿ ಮನೆ ಮನೆಗಳಿಗೆ ತಲುಪಲು ಅನುಕೂಲವಾಗಲಿದೆ. ಒಬ್ಬ ಸಮೀಕ್ಷಕರಿಗೆ 140ರಿಂದ 150 ಮನೆಗಳ ಬ್ಲಾಕ್‌ಗಳನ್ನು ಹಂಚಿಕೆ ಮಾಡಿ ಸಮೀಕ್ಷೆ ಕಾರ್ಯವನ್ನು ವಹಿಸಲಾಗಿದೆ. ಒಟ್ಟು 1.61 ಲಕ್ಷ ಬ್ಲಾಕ್‌ಗಳನ್ನು ಮಾಡಲಾಗಿದೆ ಎಂದರು.

ಸುಮಾರು ಎರಡು ಲಕ್ಷ ಶಿಕ್ಷಕರು ಹಾಗೂ ಇತರ ಸಿಬ್ಬಂದಿ ಸಮೀಕ್ಷೆ ಹಾಗೂ ಸಂಬಂಧಿತ ಕೆಲಸಗಳಲ್ಲಿ ನಿರತರಾಗಲಿದ್ದಾರೆ. ಇಲಾಖಾ ಅಧಿಕಾರಿಗಳು ಮೇಲುಸ್ತುವಾರಿ ಮಾಡುತ್ತಾರೆ. ಒಬ್ಬ ಸಮೀಕ್ಷಕರು ದಿನವೊಂದಕ್ಕೆ ಏಳರಿಂದ ಎಂಟು ಮನೆ ಸಮೀಕ್ಷೆ ಮಾಡಿದರೂ, ಎರಡು ಕೋಟಿ ಕುಟುಂಬಗಳನ್ನು 16 ದಿನಗಳಲ್ಲಿ ಮೊಬೈಲ್ ಆ್ಯಪ್‌ನಲ್ಲಿ ಸಂಗ್ರಹಿಸಬಹುದಾಗಿದೆ. ಕುಟುಂಬಗಳ ದತ್ತಾಂಶಗಳನ್ನು ವಿಶೇಷ ತಂತ್ರಾಂಶವುಳ್ಳ ಮೊಬೈಲ್ ಆ್ಯಪ್‌ನಲ್ಲಿ ಸಂಗ್ರಹಿಸಲಾಗುತ್ತದೆ ಎಂದರು.

ಸಮೀಕ್ಷಾದಾರರಿಗೆ ಅಗತ್ಯ ತರಬೇತಿಯನ್ನು ನೀಡಲಾಗಿದೆ. ಸಮೀಕ್ಷಾ ನಮೂನೆಯಲ್ಲಿ ಒಟ್ಟು 60 ಪ್ರಶ್ನೆಗಳಿದ್ದು, ಅದಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲಾಗುತ್ತದೆ. ಒಂದಕ್ಕಿಂತ ಹೆಚ್ಚು ಬಾರಿ ಸಮೀಕ್ಷೆಗೆ ಒಳಗಾಗುವುದನ್ನು ತಪ್ಪಿಸಲು 6 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರ ಆಧಾರ ಸಂಖ್ಯೆಯನ್ನು ಒದಗಿಸುವಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಪಡಿತರಚೀಟಿ ನಮೂದಿಸಿದರೆ ಅದರಲ್ಲಿರುವ ಮಾಹಿತಿಯೂ ಸ್ವಯಂಚಾಲಿತವಾಗಿ ಪ್ರದರ್ಶಿತವಾಗುತ್ತದೆ ಎಂದು ವಿವರಿಸಿದರು.

ಗೊಂದಲ ನಿವಾರಣೆ ಕ್ರಮ: ಕೆಲವು ಅನಗತ್ಯ ವಿವಾದಗಳನ್ನು ಪರಿಹರಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಜಾತಿಗಳನ್ನು ಸೃಷ್ಟಿಸುವ ಕೆಲಸವನ್ನು ಆಯೋಗ ಮಾಡಿರುವುದಿಲ್ಲ. ಸಮೀಕ್ಷೆ ಮುಗಿದ ನಂತರ ಸಂಗ್ರಹಿಸಲಾದ ಮಾಹಿತಿಗಳನ್ನು ಆಯೋಗವು ವಿಶ್ಲೇಷಿಸುತ್ತದೆ. ವೈಜ್ಞಾನಿಕ ವಿಶ್ಲೇಷಣೆಯ ನಂತರ ಮಾತ್ರ ವಿವಿಧ ಜಾತಿ ಜನಾಂಗಗಳಿಗೆ ಒದಗಿಸಬಹುದಾದ ಅನುಕೂಲತೆಗಳ ಬಗ್ಗೆ ಶಿಫಾರಸ್ಸಿನೊಂದಿಗೆ ಸರಕಾರಕ್ಕೆ ವರದಿ ಸಲ್ಲಿಸಲಾಗುವುದು.

ಮಹಿಳೆಯ ವಶಕ್ಕೆ ಪಡೆದಿರುವ ಪೊಲೀಸರು

ಗಣೇಶ ಮೂರ್ತಿಯ ಮೇಲೆ ಚಪ್ಪಲಿ ಹಾರ

ಹಾಸನ: ಬೇಲೂರಿನ ಗಣೇಶ ಮೂರ್ತಿಗೆ ಚಪ್ಪಲಿ ಹಾರ ಹಾಕಿ ಅಪಮಾನ ಮಾಡಿದ ಆರೋಪಿ ಮಹಿಳೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಹಾಸನದ ಗುಡ್ಡೇನಹಳ್ಳಿ ಬಳಿ ಮಹಿಳೆಯನ್ನು ವಶಕ್ಕೆ ಪಡೆಯಲಾಗಿದೆ. ಬಾಣಾವರ ಪಿಎಸ್‌ಐ ಸುರೇಶ್, ಶೋಭಾ ನೇತೃತ್ವದ ತಂಡ ಮಹಿಳೆಯನ್ನು ವಶಕ್ಕೆ ಪಡೆದಿದ್ದು, ವಿಚಾರಣೆಗೆ ಮುಂದಾಗಿದೆ.

ಪ್ರಕರಣ ಏನು?: ಹಾಸನ ಜಿಲ್ಲೆಯಲ್ಲಿ ಮಹಾಲಯ ಅಮವಾಸ್ಯೆಯ ಬೆನ್ನಲ್ಲೇ ಮಹಿಳೆಯೊಬ್ಬರು ವಿಕೃತಿ ಮೆರೆದಿದ್ದಾರೆ. ಬೇಲೂರು ಪಟ್ಟಣದಲ್ಲಿರುವ ಶ್ರೀ ವಿದ್ಯಾಗಣಪತಿ ದೇವಸ್ಥಾನದ ಕಲ್ಲಿನ ಗಣೇಶ ಮೂರ್ತಿಗೆ ಚಪ್ಪಲಿ ಹಾರ ಹಾಕಿ ವಿಕೃತಿ ಮೆರೆದಿರುವ ಘಟನೆ ನಡೆದಿದೆ. ಶನಿವಾರ ರಾತ್ರಿ ಈ ಘಟನೆ ನಡೆದಿದ್ದು, ಬೆಳಗ್ಗೆ ಭಕ್ತಾಧಿಗಳು ಕೈ ಮುಗಿಯಲು ಹೋದಾಗ ಗಣಪತಿಗೆ ಚಪ್ಪಲಿ ಹಾರ ಹಾಕಿರುವುದು ಬೆಳಕಿಗೆ ಬಂದಿದೆ. ಕೂಡಲೇ ಸ್ಥಳಕ್ಕೆ ಬಂದ ಸ್ಥಳೀಯರು ಕೃತ್ಯ ಖಂಡಿಸಿ ಪ್ರತಿಭಟನೆ ಮಾಡಿ ಆಕ್ರೋಶ ಹೊರಹಾಕಿದ್ದಾರೆ.

ಗಣೇಶ ಮೆರವಣಿಗೆ ಮೇಲೆ ಕಲ್ಲು ತೂರಲಾಗುತ್ತದೆ. ಹಸುವಿನ ಕೆಚ್ಚಲು ಕೊಯ್ಯುತ್ತಾರೆ. ಈಗ ಪುರಸಭೆ ಆವರಣ ಗಣಪತಿಗೆ ಚಪ್ಪಲಿ ಹಾಕಿದ್ದಾರೆ. ಇದು ಕೋಮು ಗಲಭೆ ಸೃಷ್ಟಿಸುವ ಸಂಚಿನ ಭಾಗವಾಗಿದೆ. ಯಾರು ತಪ್ಪು ಮಾಡಿದ್ದಾರೋ ಅವರಿಗೆ ಕಠಿಣ ಶಿಕ್ಷೆ ಆಗಬೇಕು.
- ಸಿ.ಟಿ. ರವಿ, ವಿಧಾನ ಪರಿಷತ್ ಸದಸ್ಯ

ಸಮಾಚಾರ ಸಣ್ಣದಲ್ಲ

ಮತಕಳವು: ಎಸ್‌ಐಟಿ ರಚನೆ ಸ್ವಾಗತಾರ್ಹ

ಹುಬ್ಬಳ್ಳಿ: ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಕಳವು ಪ್ರಕರಣಕ್ಕೆ ಸಂಬಂಧಿಸಿ ಎಸ್‌ಐಟಿ ತನಿಖೆ ನಡೆಸಿ, ಸತ್ಯಾಂಶ ಹೊರಹಾಕಲಿದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತಕಳವು

ಪ್ರಕರಣಕ್ಕೆ ಸಂಬಂಧಿಸಿ ತನಿಖೆ ನಡೆಸಲು ರಾಜ್ಯ ಸರಕಾರ ಎಸ್‌ಐಟಿ ರಚಿಸಿದ್ದು ಸ್ವಾಗತಾರ್ಹ. ಮತಕಳವಿನ ಹಿಂದೆ ಕಾಣದ ಕೈಗಳು ಕೆಲಸ ಮಾಡಿದ್ದು, ಅದಕ್ಕೆ ಚುನಾವಣಾ ಆಯೋಗ ಶಾಮೀಲಾಗಿದೆ. ಹೀಗಾಗಿ, ಕೆಲವು ಕಡೆ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಆಳಂದದಲ್ಲಿ ಆರು ಸಾವಿರ ಮತ ಕಳವು ಆಗಿರುವ ಅನುಮಾನವಿದೆ' ಎಂದರು. ರಾಜ್ಯ ಸರಕಾರ ನಡೆಸಲು ಉದ್ದೇಶಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಿಂದ ತುಳಿತಕ್ಕೊಳಗಾದ ಸಮಾಜಕ್ಕೆ ಶಕ್ತಿ ಸಿಗಲಿದೆ. ಇದು ಕ್ರಾಂತಿಕಾರಿ ನಡೆಯಾಗಿದ್ದು, ಯಾರೂ ಆತಂಕಪಡುವ ಅಗತ್ಯವಿಲ್ಲ. ಯಾವ್ಯಾವ ಸಮಾಜಕ್ಕೆ ಎಷ್ಟೆಷ್ಟು ಸೌಲಭ್ಯ ನೀಡಬೇಕು ಎನ್ನುವುದು ಸಮೀಕ್ಷೆಯಿಂದ ತಿಳಿಯಲಿದೆ. ಹೀಗಾಗಿ ಎಲ್ಲರೂ ಇದರಲ್ಲಿ ಭಾಗಿಯಾಗಬೇಕು ಎಂದು ವಿನಂತಿಸಿದರು.

ಆಕಸ್ಮಿಕ ಬೆಂಕಿ: ಹೊತ್ತಿ ಉರಿದ ಕಾರು

ಯಲ್ಲಾಪುರ: ಕಾರೊಂದಕ್ಕೆ ಆಕಸ್ಮಿಕ ಬೆಂಕಿ ಸಂಭವಿಸಿ ಹೊತ್ತಿ ಉರಿದ ಘಟನೆ ರಾಷ್ಟ್ರೀಯ ಹೆದ್ದಾರಿ 63 ರ ಯಲ್ಲಾಪುರ ತಾಲೂಕಿನ ಆರತಿಬೈಲ್ ಘಟ್ಟದಲ್ಲಿ ಭಾನುವಾರ ಬೆಳಗ್ಗೆ ನಡೆದಿದೆ. ಯಲ್ಲಾಪುರದಿಂದ ಅಂಕೋಲಾ ಕಡೆಗೆ ಹೊರಟಿದ್ದ ದೆಹಲಿ ಮೂಲದ ಕಾರಿಗೆ ಬೆಂಕಿ ಹೊತ್ತಿಕೊಂಡಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದವರು ಬೆಂಕಿ ಆರಿಸುವ ಪ್ರಯತ್ನ ಮಾಡಿದರೂ ಕಾರು ಸಂಪೂರ್ಣ ಸುಟ್ಟು ಹೋಗಿತ್ತು. ಕಾರಿನಲ್ಲಿದ್ದವರು ಹೊರ ಬಂದು ಪ್ರಾಣ ಉಳಿಸಿಕೊಂಡಿದ್ದಾರೆ. ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

ಆಯತಪ್ಪಿ ಬಿದ್ದು ಕಾರ್ಮಿಕ ಸಾವು

ನೆಲಮಂಗಲ: ನಿರ್ಮಾಣ ಹಂತದಲ್ಲಿದ್ದ ಮನೆಯ ಸೆಂಟ್ರಿಂಗ್ ಕಳಚುವ ವೇಳೆ ಆಯತಪ್ಪಿ ಎರಡನೇ ಮಹಡಿಯಿಂದ ಬಿದ್ದು ತೀವ್ರ ರಕ್ತಸ್ರಾವದಿಂದ

ಕಾರ್ಮಿಕ ಸ್ಥಳದಲ್ಲೇ ಸಾವನಪ್ಪಿರುವ ಘಟನೆ ಬೆಂಗಳೂರು ಹೊರವಲಯ ನೆಲಮಂಗಲ ಬಳಿಯ ಗೆಜ್ಜಗದಹಳ್ಳಿ ಗ್ರಾಮದಲ್ಲಿ ನಡೆದಿದೆ. ಯಾದಗಿರಿ ಜಿಲ್ಲೆಯ ಗೋಪಾಲಪುರ ಗ್ರಾಮದ ಬೀರಪ್ಪ (34) ಮೃತ ಕಾರ್ಮಿಕ. ಈತ ಕಳೆದ 8 ವರ್ಷದಿಂದ ಈ ಭಾಗದಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ. ಬೀರಪ್ಪನಿಗೆ ಹೆಂಡತಿ, ಇಬ್ಬರು ಮಕ್ಕಳು ಇದ್ದು, ಬಡ ಕುಟುಂಬದಲ್ಲಿ ಜೀವನ ನಡೆಸುತ್ತಿದ್ದರು. ಸದ್ಯ ನೆಲಮಂಗಲ ಶವಾಗಾರದ ಬಳಿ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ. ಇನ್ನೂ ಮೃತ ಬೀರಪ್ಪ ನೂರಾರು ಜನ ಕಾರ್ಮಿಕರಿಗೆ ಆಸರೆ ಯಾಗಿದ್ದ. ಎಲ್ಲರಿಗೂ ಕೆಲಸ ಕೊಡಿಸಿ ಆಸರೆ ಯಾಗಿದ್ದ ಬೀರಪ್ಪ ಮೃತಪಟ್ಟ ವಿಚಾರ ತಿಳಿದು ನೂರಾರು ಸಂಖ್ಯೆಯಲ್ಲಿ ಕಾರ್ಮಿಕರು ಜಮಾಯಿಸಿದ್ದರು. ಘಟನೆ ಸಂಬಂಧ ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾತಿಗಳ ಮಧ್ಯೆ ವಿಷ ಬೀಜ ಬಿತ್ತುವ ಕೆಲಸ

ಬಳ್ಳಾರಿ: ಕಾಂಗ್ರೆಸ್ ಸರಕಾರ ಜಾತಿ ಗಣತಿ, ಸಮೀಕ್ಷೆ ಹೆಸರಲ್ಲಿ ಜಾತಿ ಜಾತಿಗಳ ಮಧ್ಯೆ ಬೆಂಕಿ ಹಚ್ಚುವ ಕೆಲಸ, ವೈಷಮ್ಯ ಮೂಡಿಸುವ ಕೆಲಸ ಮಾಡುತ್ತಿದೆ.

ಸಾರ್ವಜನಿಕರೊಳಗೆ ದ್ವೇಷ ಭಾವನೆ ಮೂಡುವಂತೆ ಮಾಡುವ ಕೆಲಸಕ್ಕೆ ಕಾಂಗ್ರೆಸ್ ಸರಕಾರ ಕೈ ಹಾಕಿದೆ, ಇದಕ್ಕೆ ಬಿಜೆಪಿ ಧಿಕ್ಕಾರ ಹೇಳುತ್ತಿದೆ ಎಂದು ಗಂಗಾವತಿ ಶಾಸಕ ಜಿ. ಜನಾರ್ದನ ರೆಡ್ಡಿ ಹೇಳಿದರು. ಸುದ್ದಿಗಾರ ರೊಂದಿಗೆ ಮಾತನಾಡಿ, ದಾಸರ, ದಾರ್ಶನಿಕರ ಹೇಳಿಕೆಗಳನ್ನು ಕೇವಲ ಭಾಷಣದಲ್ಲಿ ಹೇಳಬಾರದು, ಅದನ್ನ ಅನುಸರಿಸಬೇಕು. ಮಾನವ ಕುಲ ಒಂದಾಗಿ ಬಾಳುತ್ತಿದ್ದರೆ ಮಾತ್ರ ಮಾನವ ಕುಲಕ್ಕೆ ಒಳಿತು ಎಂದು ಬಸವಣ್ಣನವರು ಹೇಳಿದ್ದರು. ಕುಲ ಕುಲ ಎಂದು ಹೊಡೆದಾಡಬೇಡಿ ಎಂದು ಕನಕದಾಸರು ಹೇಳಿದ್ದರು. ಆದರೆ ಈ ರಾಜ್ಯದ ಮುಖ್ಯಮಂತ್ರಿ ಜಾತಿ ಜಾತಿಗಳ ಮಧ್ಯೆ ಬೆಂಕಿ ಹಚ್ಚುವ ಕೆಲಸಕ್ಕೆ ಕೈ ಹಾಕಿದ್ದಾರೆ. ಹಿಂದೂ ಸಮಾಜವನ್ನು ಒಡೆಯುವ ಕೊಳಕು ಕೆಲಸ ಮಾಡಲು ಸಿಎಂ ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ಚಾಮುಂಡಿ ಬೆಟ್ಟದಲ್ಲಿ ದಸರಾ-2025ಕ್ಕೆ ಚಾಲನೆ ನೀಡಲಿರುವ ಬುಕರ್ ಪ್ರಶಸ್ತಿ ವಿಜೇತ ಲೇಖಕಿ ಬಾನು ಮುಷ್ತಾಕ್

ಸಂಭ್ರಮದ ನಾಡಹಬ್ಬ ಮೈಸೂರು ದಸರಾ ಇಂದಿನಿಂದ

ಕೆ.ಜೆ.ಲೋಕೇಶ್ ಬಾಬು, ಮೈಸೂರು

2025ರ ನಾಡಹಬ್ಬ ದಸರಾ ಮಹೋತ್ಸವ ಚಾಲನೆಗೆ ಕ್ಷಣಗಣನೆ ಆರಂಭವಾಗಿದೆ. ಈ ಮೂಲಕ ಈ ನೆಲದ ಕಲೆ, ಸಂಸ್ಕೃತಿ, ಪರಂಪರೆಯ ಅನಾವರಣಕ್ಕೆ ಸಾಂಸ್ಕೃತಿಕ ನಗರಿ ಮೈಸೂರು ಸಾಕ್ಷಿಯಾಗಲಿದೆ.

ಸೆ.22ರ ಸೋಮವಾರ ಬೆಳಗ್ಗೆ 10.10ರಿಂದ 10.40ರೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಬುಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ದಸರಾ ಮಹೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. 11 ದಿನಗಳ ದಸರಾ ವಿವಿಧ ಕಾರ್ಯಕ್ರಮಗಳು ಆರಂಭವಾಗಲಿವೆ.

ವಿಜಯದಶಮಿ ಮೆರವಣಿಗೆಗೆ ಚಾಲನೆ: ಚಾಮುಂಡಿ ಬೆಟ್ಟದಿಂದ ಚಾಲನೆಗೊಳ್ಳುವ ದಸರಾ 11 ದಿನ ವೈಭವಯುತ ವಾಗಿ ನಡೆದು ಅ.2ರಂದು ಅರಮನೆ ಅಂಗಳದಲ್ಲಿನ ಜಂಬೂ ಸವಾರಿ ಹಾಗೂ ಬನ್ನಿಮಂಟಪ ಮೈದಾನದಲ್ಲಿ ನಡೆಯುವ ಪಂಜಿನ ಕವಾಯತಿಯೊಂದಿಗೆ ಸಂಪನ್ನಗೊಳ್ಳಲಿದೆ. ಅ.2ರಂದು ಮಧ್ಯಾಹ್ನ 1ರಿಂದ 1.18ರೊಳಗಿನ ಧನುರ್ ಲಗ್ನದಲ್ಲಿ ನಂದಿ ಧ್ವಜ ಪೂಜೆ ನಡೆಯಲಿದ್ದು, ಸಂಜೆ 4.42ರಿಂದ 5.06ರೊಳಗಿನ ಕುಂಭ ಲಗ್ನದಲ್ಲಿ ವಿಜಯದಶಮಿ ಮೆರವಣಿಗೆಗೆ ಚಾಲನೆ ದೊರೆಯಲಿದೆ. ಫಲಪುಷ್ಪ ಪ್ರದರ್ಶನ, ವಸ್ತು ಪ್ರದರ್ಶನ, ಆಹಾರ ಮೇಳ, ಕುಸ್ತಿ ಪಂದ್ಯಾವಳಿ, ಚಿತ್ರಕಲಾ ಶಿಬಿರ, ಪುಸ್ತಕ ಮೇಳ, ಯೋಗ ದಸರಾ, ಸಿಎಂ ಕಪ್ ಕ್ರೀಡಾಕೂಟ, ವಿದ್ಯುತ್ ದೀಪಾಲಂಕಾರ, ರಂಗೋಲಿ ಸ್ಪರ್ಧೆ, ಕವಿಗೋಷ್ಠಿ ಮಹಿಳಾ ದಸರಾ ಕಾರ್ಯಕ್ರಮಗಳಿಗೆ ಇಂದು ಚಾಲನೆ ದೊರಕಲಿದೆ.

ರೈತ ದಸರಾ, ಕವಿ ಗೋಷ್ಠಿ: ಸೆ.24ರಂದು ಪ್ರಚುರ ಕವಿಗೋಷ್ಠಿ ಸೆ.25ರಂದು ಪಾರಂಪರಿಕ ಸೈಕಲ್ ಸವಾರಿ, ಪ್ರಜ್ವಲ ಕವಿಗೋಷ್ಠಿ, ಸೆ.26ರಂದು ಪಾರಂಪರಿಕ ನಡಿಗೆ, ರೈತ ದಸರಾ, ಪ್ರತಿಭಾ ಕವಿಗೋಷ್ಠಿ, ಕೃಷಿ ವಸ್ತು ಪ್ರದರ್ಶನ, ಕಲಾ ಪ್ರದರ್ಶನ, ಸೆ.27ರಂದು ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆ, ಪಾರಂಪರಿಕ ಉಡುಗೆಯಲ್ಲಿ ಪಾರಂಪರಿಕ ಟಾಂಗಾ ಸವಾರಿ, ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆ, ಪ್ರಬುದ್ಧ ಕವಿಗೋಷ್ಠಿ ಸೇರಿ ಏರ್‌ಶೋ ನಡೆಯಲಿದೆ.

ನಾನಾ ಬಗೆಯ ಕಲೆ ಅನಾವರಣ: ಸೆ.28ರಂದು ಪ್ರಾಣಿಗಳ ಪ್ರದರ್ಶನ ಮತ್ತು ಸ್ಪರ್ಧೆ, ಕಲಾ ಜಾತ್ರೆ. ಸೆ.29ರಂದು ಡ್ರೋನ್ ಪ್ರದರ್ಶನ. ಸೆ.30ರಂದು ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ. ಅ.1ರಂದು ಪಂಜಿನ ಕವಾಯತು ಪೂರ್ವಾಭ್ಯಾಸ ನಡೆ ಯಲಿದೆ. ಇದಲ್ಲದೆ, 11 ದಿನಗಳ ಕಾಲ ಅರಮನೆ ಮುಂಭಾಗದಲ್ಲಿ ಗಜಲ್, ಶಾಸ್ತ್ರೀಯ ಫ್ಯೂಷನ್, ಇಂಡಿಯನ್ ಫೋಕ್ ಫ್ಯೂಷನ್, ಕರ್ನಾಟಕ ಶಾಸ್ತ್ರೀಯ ಸಂಗೀತ, ಕರ್ನಾಟಕ ಫ್ಯೂಷನ್ ವಾದ್ಯ ಸಂಗೀತ, ಗೀತಚಿತ್ರ, ಜಾನಪದ ಗಾನವೈಭವ, ವಯೋಲಿನ್ ಟ್ರಯೋ, ಸಿತಾರ್ ವಾದನ, ಶಿವತಾಂಡವ ನೃತ್ಯ ರೂಪಕ, ಕರ್ನಾಟಿಕ್ ಮತ್ತು ಇಂಗ್ಲಿಷ್ ಬ್ಯಾಂಡ್, ಸಂಗೀತ ಯಾನ, ಜನಪದ ಗಾಯನ, ಫ್ಯೂಷನ್ ಸೇರಿದಂತೆ ನಾನಾ ಬಗೆಯ ಕಲೆ ಅನಾವರಣಗೊಳ್ಳಲಿದೆ.

ನಾಡಿನ ವಿವಿಧ ಕ್ಷೇತ್ರಗಳ ಗಣ್ಯರ ಆಗಮನ: ಸೆ.22ರಿಂದ ಅ.2ರವರೆಗೆ ನಡೆಯಲಿರುವ ದಸರಾ ಮಹೋತ್ಸವದಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿಗಳು, ಸಚಿವರು ಸೇರಿದಂತೆ ನಾಡಿನ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಲಿದ್ದಾರೆ. ಈ ಸಾಲಿನ ದಸರಾ ಮಹೋತ್ಸವದ ಹನ್ನೊಂದು ದಿನಗಳ ಕಾಲ ನಡೆಯಲಿದ್ದು, ಅಂದಾಜು ಹದಿನೈದು ಲಕ್ಷಕ್ಕೂ ಹೆಚ್ಚು ಮಂದಿ ಪ್ರವಾಸಿಗರು ಮೈಸೂರಿಗೆ ಭೇಟಿ ನೀಡುವ ಅಂದಾಜು ಮಾಡಲಾಗಿದೆ.

ದಸರಾ ಹಿನ್ನೆಲೆಯಲ್ಲಿ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಮೈಸೂರು ನಗರ. ಚಿತ್ರ: ಕೃಷ್ಣೋಜಿರಾವ್

6384 ಪೊಲೀಸರ ನಿಯೋಜನೆ

ನಾಡಹಬ್ಬದ ವೇಳೆ ನಗರದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಪೊಲೀಸ್ ಇಲಾಖೆ ತನ್ನ ಅಭೇದ್ಯ ಕೋಟೆ ನಿರ್ಮಿಸಿದೆ. ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಅತಿ ಹೆಚ್ಚು ಪೊಲೀಸ್ ಭದ್ರತೆ ವ್ಯವಸ್ಥೆ ಮಾಡಲಾಗಿದೆ. ಸಿವಿಲ್, ಟ್ರಾಫಿಕ್ ಸಿಬ್ಬಂದಿ ಸೇರಿ ಒಟ್ಟು 6384 ಮಂದಿ ನಿಯೋಜನೆ ಮಾಡಲಾಗಿದೆ. ಐದು ಎಸ್‌ಪಿ, 35 ಡಿವೈಎಸ್‌ಪಿ, 140 ಸರ್ಕಲ್ ಇನ್‌ಸ್ಪೆಕ್ಟರ್ ಸೇರಿದಂತೆ 6384 ಪೊಲೀಸ್ ಸಿಬ್ಬಂದಿ, 35 ಕೆಎಸ್‌ಆರ್‌ಪಿ, 15 ಸಿಎಆರ್, ಡಿಎಆರ್, 29 ಎಎಸ್‌ಸಿ ತಂಡ, 1 ಗರುಡ ಪೊಲೀಸ್, 1 ಆರ್‌ಎಎಫ್, 1200 ಹೋಂ ಗಾರ್ಡ್‌ಗಳನ್ನು ಭದ್ರತೆಗೆ ನಿಯೋಜಿಸಲಾಗಿದೆ.

30,614 ಸಿಸಿ ಕ್ಯಾಮೆರಾ ಕಣ್ಗಾವಲು

ನಗರದಲ್ಲಿ ಈಗಾಗಲೇ ಇರುವ 30,614 ಸಿಸಿ ಕ್ಯಾಮೆರಾಗಳ ಜತೆಗೆ, ಹೆಚ್ಚುವರಿಯಾಗಿ ಅರಮನೆ, ಬನ್ನಿಮಂಟಪ ಮೈದಾನ, ಮೆರವಣಿಗೆ ಮಾರ್ಗ, ಇತರ ಪ್ರಮುಖ ಸ್ಥಳ ಗಳಲ್ಲಿ 200 ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. 32 ಅಗ್ನಿಶಾಮಕ ದಳ, 26 ಆಂಬ್ಯುಲೆನ್ಸ್‌ಗಳನ್ನು ನಿಯೋಜನೆ ಮಾಡಲಾಗಿದೆ.

ಹೂವಿನಲ್ಲಿ ಸಬರಮತಿ ಆಶ್ರಮ

ಈ ಬಾರಿ ದಸರಾ ಫಲಪುಷ್ಪ ಪ್ರದರ್ಶನದ ಅಂದ ಹೆಚ್ಚಿಸಲು ವಿವಿಧ ಬಗೆಯ 1 ಲಕ್ಷ ಹೂವಿನ ಗಿಡ ಬೆಳೆಸಲಾಗಿದೆ. ಸಬರಮತಿ ಆಶ್ರಮ ಮಾದರಿ ಈ ಬಾರಿಯ ವಿಶೇಷವಾ ಗಿದೆ. ಜತೆಗೆ, ಹೊರ ರಾಜ್ಯದಿಂದ ತರುವ ಹೂವಿನ ಗಿಡ ಗಳು ಫಲಪುಷ್ಪ ಪ್ರದರ್ಶನಕ್ಕೆ ಮೆರುಗು ನೀಡಲಿದೆ. ನಗರದ ಹಾರ್ಡಿಂಗ್ ವೃತ್ತದ ಬಳಿಯ ಕುಪ್ಪಣ್ಣ ಉದ್ಯಾನದಲ್ಲಿ ಸೆ.22ರಿಂದ ಅ.3ರವರೆಗೆ ದಸರಾ ಫಲಪುಷ್ಪ ಪ್ರದರ್ಶನ ನಡೆಯಲಿದೆ.

ರತ್ನ ಖಚಿತ ಸಿಂಹಾಸನವೇರಲಿರುವ ಯದುವೀರ್

ಖಾಸಗಿ ದರ್ಬಾರ್‌ಗೆ ಸಕಲ ಸಿದ್ಧತೆ

ಮೈಸೂರು: ದಸರಾ ಮಹೋತ್ಸವ ಆಚರಣೆಗೆ ಅಂಬಾವಿಲಾಸ ಅರಮನೆಯಲ್ಲಿ ರಾಜ ಮನೆತನದ ಖಾಸಗಿ ದರ್ಬಾರ್‌ಗೆ ಸಕಲ ಸಿದ್ಧತೆ ನಡೆದಿದೆ. ಚಿನ್ನದ ಸಿಂಹಾಸನವನ್ನೇರಿ ಧಾರ್ಮಿಕ ವಿಧಿ ವಿಧಾನ ನೆರವೇರಿಸಲಿರುವ ರಾಜ ವಂಶಸ್ಥ ಯದುವೀರ್ ಒಡೆಯರ್ ಅವರ ಮನೆಯಲ್ಲಿ ದಸರೆ ಸಂಭ್ರಮ ಮನೆ ಮಾಡಿದೆ.

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ರತ್ನ ಖಚಿತ ಸಿಂಹಾಸನವೇರಿ ಖಾಸಗಿ ದರ್ಬಾರ್ ನಡೆಸಲಿದ್ದು, ಅದಕ್ಕಾಗಿ ಈಗಾಗಲೇ ಸಿಂಹಾಸನವನ್ನು ಅರಮನೆಯ ಸ್ಟ್ರಾಂಗ್ ರೋಮ್‌ನಿಂದ ಹೊರ ತಂದು ದರ್ಬಾರ್ ಹಾಲ್‌ನಲ್ಲಿ ಜೋಡಣೆ ಮಾಡಲಾಗಿದೆ. ಸೆ.22ರಂದು ಬೆಳಗ್ಗೆ 5:30 ರಿಂದ 5:45ರ ಒಳಗೆ ಸಿಂಹಾಸನಕ್ಕೆ ಸಿಂಹ ಜೋಡಣೆ ಮಾಡಲಾಗುತ್ತದೆ. ಬಳಿಕ 9:55ರಿಂದ 10:15ರ ಒಳಗೆ ಚಾಮುಂಡಿ ತೊಟ್ಟಿಯಲ್ಲಿ ಯದುವೀರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್‌ಗೆ ವಾಣಿವಿಲಾಸ ದೇವರ ಮನೆಯಲ್ಲಿ ಕಂಕಣ ಧಾರಣೆ ನಡೆಯಲಿದೆ.

ಇಂದು ಪಟ್ಟದ ಆನೆ, ಕುದುರೆಗೆ ಪೂಜೆ: ಬೆಳಗ್ಗೆ 11.35ಕ್ಕೆ ಅರಮನೆಯ ಆವರಣದ ಕೋಡಿ ಸೋಮೇಶ್ವರ ದೇವಾಲಯದ ಬಳಿಯಿಂದ ಪಟ್ಟದ ಆನೆ ಹಾಗೂ ಪಟ್ಟದ ಕುದುರೆ, ಪಟ್ಟದ ಹಸು ಸೇರಿದಂತೆ ಕಳಸ ಹೊತ್ತು ಬರಲಿರುವ ಸುಮಂಗಲಿಯರಿಂದ ಸವಾರಿ ತೊಟ್ಟಿಯ ಬಳಿ ಪೂಜಾ ಕಂಕೈರ್ಯ ನೆರವೇರಲಿವೆ. ಸೆ.23ರಿಂದ 29ರ ಸಂಜೆ ವರೆಗೆ ಖಾಸಗಿ ದರ್ಬಾರ್ ಜರುಗಲಿದ್ದು, ಸೆ.29ರಂದು ಬೆಳಗ್ಗೆ 10.10ರಿಂದ 10.30ರೊಳಗೆ ಯದುವೀರ್ ಒಡೆಯರ್ ಸರಸ್ವತಿ ಪೂಜೆ ನೆರವೇರಿಸುವರು. ಅಂದೇ ರಾತ್ರಿ ಖಾಸಗಿ ದರ್ಬಾರ್ ಕೊನೆಗೊಳ್ಳಲಿದೆ.

ಜಂಬೂಸವಾರಿಗೆ ಚಾಲನೆ

ಆಯುಧ ಪೂಜೆಯ ದಿನದಂದು ಬೆಳಗ್ಗೆ 6 ಗಂಟೆಗೆ ಚಂಡಿ ಹೋಮ ಆರಂಭವಾಗಲಿದೆ. ಬೆಳಗ್ಗೆ 7.30 ರಿಂದ 7.42ರೊಳಗೆ ಪಟ್ಟದ ಕತ್ತಿ ಸೇರಿದಂತೆ ಖಾಸಾ ಆಯುಧಗಳನ್ನು ಅರಮನೆಯಿಂದ ಕೋಡಿ ಸೋಮೇಶ್ವರ ದೇವಸ್ಥಾನಕ್ಕೆ ಕಳುಹಿಸಿ ಪೂಜೆ ನೆರವೇರಿಸಲಾಗುವುದು. ಬೆಳಗ್ಗೆ 10:35ಕ್ಕೆ ಅರಮನೆಯ ಕಲ್ಯಾಣ ಮಂಟಪದಲ್ಲಿ ಯದುವೀರ್ ಒಡೆಯರ್ ಆಯುಧ ಪೂಜೆ ನೆರವೇರಿಸಲಿದ್ದಾರೆ. ಅಂದು ಸಂಜೆ ಸಿಂಹಾಸನಕ್ಕೆ ಅಳವಡಿಸಿರುವ ಸಿಂಹ ಹಾಗೂ ಯದುವೀರ್ -ತ್ರಿಷಿಕಾ ಕುಮಾರಿ ಒಡೆಯರ್ ಅವರ ಕಂಕಣ ವಿಸರ್ಜನೆ ನಡೆಯಲಿದೆ. ರಾಜಮನೆತನದ ಎಲ್ಲಾ ಪೂಜಾ ವಿಧಿಗಳು ಮುಗಿದ ಬಳಿಕ ವಿಜಯದಶಮಿ ದಿನ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ.

ಸಿಎಂ ಕಪ್ ಕ್ರೀಡಾಕೂಟ

ಸಿಎಂ ಕಪ್ ಕ್ರೀಡಾಕೂಟ ಸೆ.22ರಿಂದ 25ರವರೆಗೆ ನಡೆಯಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ 22ರಂದು ಸಂಜೆ 4.30ಕ್ಕೆ ಉದ್ಘಾಟನೆ ಮಾಡಲಿದ್ದಾರೆ. ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಅರ್ಚರಿ, ಅಥ್ಲೆಟಿಕ್ಸ್, ಬಾಸ್ಕೆಟ್ ಬಾಲ್, ಬಾಕ್ಸಿಂಗ್, ಫೆನ್ಸಿಂಗ್, ಜಿಮ್ನಾಸ್ಟಿಕ್, ಹ್ಯಾಂಡ್ ಬಾಲ್, ಹಾಕಿ, ಖೋ-ಖೋ, ನೆಟ್ ಬಾಲ್, ಈಜು, ಥ್ರೋ ಬಾಲ್, ವಾಲಿಬಾಲ್ ಸ್ಪರ್ಧೆಗೆ ನಡೆಯಲಿವೆ. ಮಾನಸ ಗಂಗೋತ್ರಿಯ ಒಳಾಂಗಣ ಕ್ರೀಡಾಕೂಟದಲ್ಲಿ ಬ್ಯಾಡ್ಮಿಂಟನ್ ಸ್ಪರ್ಧೆ, ಮೈಸೂರು ವಿವಿಯಲ್ಲಿ ಪೆವಿಲಿಯನ್ ಹಾಕಿ ಮೈದಾನದಲ್ಲಿ ಬಾಲ್ ಬ್ಯಾಡ್ಮಿಂಟನ್, ಫುಟ್‌ಬಾಲ್, ಕಬಡ್ಡಿ ಕ್ರೀಡೆ ನಡೆಯಲಿದೆ. ಸೆ.22ರಿಂದ ಅ.1ರವರೆಗೆ ನಗರದ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ. ಸಾಹಿತಿಗಳೊಂದಿಗೆ ಸೆಲ್ಫಿ, ಸಾಂಸ್ಕೃತಿಕ ಕಾರ್ಯಕ್ರಮ, ವಿಚಾರ ಗೋಷ್ಠಿಗಳು ನಡೆಯಲಿದೆ.

ದಸರಾ ಉದ್ಘಾಟನೆ ಹಿನ್ನೆಲೆಯಲ್ಲಿ ಭಾನುವಾರ ಸಂಜೆ ಮೈಸೂರಿಗೆ ಆಗಮಿಸಿದ ಬುಕರ್ ಪ್ರಶಸ್ತಿ ವಿಜೇತೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಸರಕಾರದ ಪರವಾಗಿ ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಹೂಗುಚ್ಛ ನೀಡಿ ಆತ್ಮೀಯವಾಗಿ ಸ್ವಾಗತಿಸಿದರು.

ಮತಬ್ಯಾಂಕ್ ರಾಜಕಾರಣದ ಷಡ್ಯಂತ್ರ

ವಿಜಯಪುರ: ರಾಜ್ಯದಲ್ಲಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಹೆಸರಲ್ಲಿ ಕಾಂಗ್ರೆಸ್ ಪಕ್ಷ ಹಿಂದೂ ಧರ್ಮವನ್ನು ಒಡೆಯಲು ಹಾಗೂ ತನ್ನ ಮತಬ್ಯಾಂಕ್ ರಾಜಕಾರಣಕ್ಕಾಗಿ ದೊಡ್ಡ ಷಡ್ಯಂತ್ರ ಮಾಡುತ್ತಿದೆ. ಹೀಗಾಗಿ ಸೋಮವಾರದಿಂದ ಆರಂಭವಾಗಲಿರುವ ಸಮೀಕ್ಷೆಯನ್ನು ನಿಲ್ಲಿಸಬೇಕು ಎಂದು ಸಂಸದ ಗೋವಿಂದ ಕಾರಜೋಳ ಒತ್ತಾಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಬ್ರಿಟಿಷರು ಸೇರಿದಂತೆ ಬೇರೆ-ಬೇರೆಯವರು 600 ವರ್ಷ ಆಳ್ವಿಕೆ ನಡೆಸಿದ್ದಾರೆ. ಆದರೆ, ಯಾರೂ ಹಿಂದೂ ಧರ್ಮಕ್ಕೆ ಕೈಹಾಕಿರಲಿಲ್ಲ. ಈಗ ಸಿದ್ದರಾಮಯ್ಯ ಸರಕಾರ ಜಾತಿಗಣತಿ ಹೆಸರಲ್ಲಿ ಹಿಂದೂ ಧರ್ಮಕ್ಕೆ ಕೈಹಾಕಿದೆ. ಇದರ ಹಿಂದೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮಾರ್ಗದರ್ಶನ ಇದ್ದು, ಇವರ ತಾಳಕ್ಕೆ ತಕ್ಕಂತೆ ಸಿದ್ದರಾಮಯ್ಯ ಕುಣಿಯುತ್ತಿದ್ದಾರೆ. ಅಲ್ಲದೇ, ಭಾರತ ದೇಶವನ್ನು ಕ್ರಿಶ್ಚಿಯನ್ ಮಯ ಮಾಡಿಹೋಗಬೇಕು ಎಂಬ ಹುನ್ನಾರವನ್ನು ಸೋನಿಯಾ ಗಾಂಧಿ ಹೊಂದಿದ್ದಾರೆ ಎಂದು ಆರೋಪಿಸಿದರು.

ಸರಕಾರ ಮುಲ್ಲಾ, ಪಾದ್ರಿಗಳ ಕೈಗೊಂಬೆ

ರಾಜ್ಯದ ಪೋಪ್ ಆಗಲು ಹೊರಟಿದ್ದಾರೆ ಸಿಎಂ ಸಿದ್ದು

ಉಡುಪಿ: ಜಾತಿಗಣತಿ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಕರ್ನಾಟಕದ ಪೋಪ್ ಆಗಲು ಹೊರಟಿದ್ದಾರೆ. ಮುಲ್ಲಾ ಆಗಿದ್ದ ಸಿದ್ದರಾಮಯ್ಯ ಈಗ ಫಾದರ್ ಆಗಲು ಹೊರಟಿದ್ದಾರೆ ಎಂದು ಬಿಜೆಪಿ ಶಾಸಕ ಸುನಿಲ್ ಕುಮಾರ್ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಕಚೇರಿ ಕ್ರೈಸ್ತ ಮಿಷನರಿಗಳ ನೆರಳಲ್ಲಿ ಕೆಲಸ ಮಾಡುತ್ತಿದೆ. ಕ್ರಿಶ್ಚಿಯನ್ ಜತೆ ಇರುವ 47 ಉಪಜಾತಿ ಪಟ್ಟಿ ಕೈಬಿಡದಿದ್ದರೆ ಆಯೋಗಕ್ಕೆ ಮುತ್ತಿಗೆ ಹಾಕುವ ದಿನ ಬರಬಹುದು ಎಂದು ಎಚ್ಚರಿಸಿದ್ದಾರೆ.

ಸಿಎಂ ಕ್ರಿಶ್ಚಿಯನ್ ಗರ್ಭಗುಡಿಯಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಕರ್ನಾಟಕದ ಪೋಪ್ ಆಗಲು ಹೊರಟಿದ್ದಾರೆ. ಆಗ ಟಿಪ್ಪು ಪೋಷಾಕು, ಈಗ ಪಾದ್ರಿ ರೂಪದ ಆಡಳಿತ. ಸರಕಾರ ಮುಲ್ಲಾ ಪಾದ್ರಿಗಳ ಕೈಗೊಂಬೆ ಆಗಲು ಹೊರಟಿದೆ. ಸಿಎಂ ಫಾದರ್ ಸಿದ್ದರಾಮಯ್ಯ ಆಗಲು ಹೊರಟಿದ್ದಾರೆ. ಫಾದರ್ ಸಿದ್ದರಾಮಯ್ಯ ಹಿಂದೆ ಯಾರದೋ ಓಲೈಕೆ ಅಡಗಿದೆ ಎಂದು ಕಿಡಿಕಾರಿದರು.

> ಕಾಂಗ್ರೆಸ್‌ನಲ್ಲಿ ಐದು ಒಳಪಂಗಡಗಳಾಗಿವೆ. ಜನರ ಹೋರಾಟ ಅನಿವಾರ್ಯ. ಕಾಂಗ್ರೆಸ್ ಯಾವಾಗಲೂ ಗೊಂದಲದಲ್ಲೇ ಇರೋದು. ಸಚಿವ ಸಂಪುಟದಲ್ಲಿ ಸಿಎಂ ಏಕಾಂಗಿಯಾದರು. ಸಚಿವ ಸಂಪುಟ ಒಡೆದು ಹೋಗಿದೆ. ನವೆಂಬರ್, ಡಿಸೆಂಬರ್ ಬೆಳವಣಿಗೆಯಿಂದ ಕಾಂಗ್ರೆಸ್ ಒಳಗೆ ಒಳಪಂಗಡವಾಗಿದೆ. ಜಾರಕಿಹೊಳಿ, ಡಿಕೆ, ಪರಮೇಶ್ವರ್, ಸಿದ್ದರಾಮಯ್ಯ ಸುರ್ಜೇವಾಲ ಪಂಗಡವಾಗಿದೆ. ಕ್ರೈಸ್ತ ಮಿಷನರಿ ನೆರಳು ಸಿಎಂ ಕಚೇರಿ ಮೇಲೆ ಬಿದ್ದಿದೆ.
>
> -ಸುನಿಲ್ ಕುಮಾರ್, ಶಾಸಕ

ಸಿಎಂ ಸಿದ್ದರಾಮಯ್ಯ ವಿರುದ್ಧ ಬಿ.ವೈ.ವಿಜಯೇಂದ್ರ ಕಿಡಿ

ಜಾತಿಗಣತಿ ಹೆಸರಿನಲ್ಲಿ ಹಿಂದೂ ಧರ್ಮವನ್ನು ಒಡೆಯುವ ಕೆಲಸ

ಶಿವಮೊಗ್ಗ: ಸಿಎಂ ಸಿದ್ದರಾಮಯ್ಯ ಅವರು ಜನಗಣತಿ ಹೆಸರಿನಲ್ಲಿ ಹಿಂದೂ ಧರ್ಮವನ್ನು ಒಡೆಯುವ ಕೆಲಸ ಮಾಡುತ್ತಿದ್ದಾರೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ. ವೈ. ವಿಜಯೇಂದ್ರ ಅವರು ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಈ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಯಾಕೆ ಇಂತಹ ದುರ್ಬುದ್ಧಿ ಬಂದಿದೆಯೋ?. ಯಾಕೆ ಇಂತಹ ವಿಕೃತ ಮನಸ್ಸಿನಿಂದ ಇವತ್ತು ರಾಜ್ಯವನ್ನು ಒಡೆಯುವಂತಹ ಕೆಲಸಕ್ಕೆ ಕೈ ಹಾಕಿದ್ದಾರೋ ಎಂದು ರಾಜ್ಯದ ಜನತೆ ಇವತ್ತು ಮಾತನಾಡಿಕೊಳ್ಳುತ್ತಿದ್ದಾರೆ ಎಂದು ಟಾಂಗ್ ನೀಡಿದರು.

ಒಂದಲ್ಲ ಎರಡಲ್ಲ ಧರ್ಮಸ್ಥಳದ ವಿಚಾರವನ್ನು ತೆಗೆದುಕೊಂಡು ಮಂಜುನಾಥನ ಕೋಟ್ಯಂತರ ಭಕ್ತರ ಭಕ್ತಿ, ಶ್ರದ್ಧೆಗೆ ಕೊಡಲಿ ಪೆಟ್ಟು ಕೊಡುವಂತಹ ಕೆಲಸಕ್ಕೆ ಕಾಂಗ್ರೆಸ್ ಸರಕಾರ ಕೈ ಹಾಕಿತು. ನಂತರದಲ್ಲಿ ನಾಡ ದೇವತೆ ಚಾಮುಂಡೇಶ್ವರಿ ವಿಚಾರದಲ್ಲಿ ಗೊಂದಲವನ್ನು ಸೃಷ್ಟಿ ಮಾಡುವಂತಹ ಕೆಲಸವನ್ನು ಮಾಡಿದ್ದರು. ಹಿಂದೂಗಳಿಗೆ ಅಪಮಾನ ಮಾಡುವಂತಹ ಕೆಲಸವನ್ನು ಸಿದ್ದರಾಮಯ್ಯ ಅವರ ಸರಕಾರ ಮಾಡಿದೆ ಎಂದರು.

ಈಗ ಗಣಪತಿ ಹಬ್ಬಕ್ಕೂ ಕಲ್ಲು ಹಾಕುವ ಕೆಲಸವನ್ನು ಮಾಡಿದ್ದಾರೆ. ಗಣಪತಿ ಮೆರವಣಿಗೆಗೆ ಅನೇಕ ಕಡಿವಾಣಗಳನ್ನು ಹಾಕುವ ಮುಖೇನ ಕೆಲಸ ಮಾಡಿದ್ದಾರೆ. ಹೊಸ ಹೊಸ ಕಾನೂನು ಸೃಷ್ಟಿ ಮಾಡಿ ಗಣಪತಿಯನ್ನು ವಿಜೃಂಭಣೆಯಿಂದ ಬಿಡುವ ಕೆಲಸಕ್ಕೂ ಕಲ್ಲು ಹಾಕುವ ಕೆಲಸ ಮಾಡಲಾಗಿದೆ. ಇದಕ್ಕೆ ದುರ್ಬುದ್ಧಿ ಅಂತ ಹೇಳದೆ ಇನ್ನೇನು ಹೇಳಲು ಸಾಧ್ಯ ಎಂದರು ಟೀಕಿಸಿದರು.

ರಾಜ್ಯದ ಸಿಎಂ ಆದವರು ರಾಜ್ಯದ ಅಭಿವೃದ್ಧಿಗೆ ಗಮನ ಕೊಡದೆ, ರಾಜ್ಯವನ್ನು ಒಡೆಯುವಂತಹ ಕೆಲಸ ಮಾಡುತ್ತಿದ್ದಾರೆ. ಇವತ್ತು ಬ್ರಿಟಿಷ್ ಹಾಗೂ ಟಿಪ್ಪು, ನಿಜಾಮರ ಆಳ್ವಿಕೆಯನ್ನು ನಾಚಿಸುವಂತೆ ಆಡಳಿತ ನಡೆಸುತ್ತಿದ್ದಾರೆ ಎಂದು ಬಿ.ವೈ. ವಿಜಯೇಂದ್ರ ಕಿಡಿಕಾರಿದರು.

> ಎರಡು ದಿನ ನಡೆದ ಬಿಜೆಪಿ ರಾಜಕೀಯ ಮುಖಂಡರ ಚಿಂತನ ಸಭೆಯಲ್ಲಿ ನಾವೆಲ್ಲರೂ ಒಂದು ಎಂದು ಘೋಷಣೆ ಮಾಡಿದ್ದೇವೆ. ಯಾವುದೇ ಜಾತಿ ಪಂಥ ಇದ್ದರೂ ಸಹ ಧರ್ಮದ ಕಾಲಂನಲ್ಲಿ ಹಿಂದೂ ಅಂತಾನೇ ಬರೆಯಿಸಬೇಕೆಂದು ವಿನಂತಿಸಿಕೊಂಡಿದ್ದೇವೆ.
>
> ಬಿ. ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಹಿಂದೂ ಸಮಾಜ ಒಡೆಯುವ ತಂತ್ರ

ಹುಬ್ಬಳ್ಳಿ: ರಾಜ್ಯ ಕಾಂಗ್ರೆಸ್ ಸರಕಾರ ನಡೆಸುತ್ತಿರುವ ಜಾತಿ-ಜನಗಣತಿ ಸಮೀಕ್ಷೆಗೆ ಯಾವುದೇ ಅಧಿಕೃತ ಮಾನ್ಯತೆಯಿಲ್ಲ, ಅರ್ಥವೂ ಇಲ್ಲವೆಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸರಕಾರ ಜನಗಣತಿ ಮಾಡುತ್ತದೆ. ಆ ಅಧಿಕಾರ ಇರುವುದು ಕೇಂದ್ರಕ್ಕೆ ಮಾತ್ರ. ರಾಜ್ಯ ಸರಕಾರ ನಡೆಸುತ್ತಿರುವುದು ಸಮೀಕ್ಷೆಯಷ್ಟೇ. ಇದಕ್ಕೆ ಯಾವುದೇ ಅರ್ಥವಿಲ್ಲ ಎಂದು ಹೇಳಿದರು. ಸಮಾಜ ದ್ರೋಹಿಗಳಿಗೆ, ಸಮಾಜದಲ್ಲಿ ಸೌಹಾರ್ದತೆ ಕೆಡಿಸುವವರಿಗೆ, ಮತೀಯ ಭಾವನೆ ಕೆರಳಿಸುವವರಿಗೆ ಕಾಂಗ್ರೆಸ್ ಸರಕಾರ ಬೆಂಬಲ ಮತ್ತು ಕುಮ್ಮಕ್ಕು ನೀಡುತ್ತಿದೆ. ಈಗ ನಡೆಸುತ್ತಿರುವ ಜಾತಿಗಣತಿ ಸಮೀಕ್ಷೆಯಲ್ಲಿ ಸಹ ಇದರ ಪರಿಣಾಮ ಕಾಣುತ್ತಿದೆ ಎಂದು ತೀವ್ರವಾಗಿ ಖಂಡಿಸಿದರು.

ಹಿಂದೂ ಸಮಾಜ ಒಡೆಯುವ ಷಡ್ಯಂತ್ರ: ನಕಲಿ ಗಾಂಧಿಗಳ ಅಣತಿಯಂತೆ ಸಿಎಂ ಸಿದ್ದರಾಮಯ್ಯ ಅವರು ಹಿಂದೂ ಸಮಾಜವನ್ನು ಒಡೆಯುವ ಷಡ್ಯಂತ್ರ ನಡೆಸಿದ್ದಾರೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಪ್ರೇರಣೆ, ಸೂಚನೆಯಂತೆ ನುಸುಳುಕೋರರಿಗೆ ವೋಟಿಂಗ್ ಹಕ್ಕು ಕೊಟ್ಟು ದೇಶವನ್ನು ಅಶಕ್ತಗೊಳಿಸುವ ಷಡ್ಯಂತ್ರದ ಭಾಗ ಇದಾಗಿದೆ ಎಂದು ಕಿಡಿಕಾರಿದರು.

> ಮಸೀದಿ ಮೇಲಿಂದ ಕಲ್ಲು ಹೊಡೆಯುತ್ತಾರೆ. ವೀರೇಂದ್ರ ಹೆಗ್ಗಡೆ ಅವರ ಬಗ್ಗೆ, ಧರ್ಮಸ್ಥಳ ಬಗ್ಗೆ ಏನೇನೋ ಹೇಳುತ್ತಾರೆ. ಅಂಥ ಅದೆಷ್ಟು ಜನರನ್ನು ಬಂಧಿಸಿದಿರಿ? ಧರ್ಮಸ್ಥಳಕ್ಕೆ ಬುಲ್ಡೋಜರ್ ಹಚ್ಚಬೇಕು ಎಂದವರನ್ನು ಬಿಟ್ಟು ಮಸೀದಿಗೆ ಬುಲ್ಡೋಜರ್ ಹಚ್ಚಬೇಕು ಎಂದವರ ವಿರುದ್ಧ ಕ್ರಮ ಕೈಗೊಳ್ಳುತ್ತೀರಿ. ರಾಜ್ಯ ಕಾಂಗ್ರೆಸ್ ಸರಕಾರ ಸಂಪೂರ್ಣ ಮತಾಂಧರ ಪರವಿರುವಂಥ ಕೆಟ್ಟ ಸರಕಾರವಾಗಿದೆ.
>
> ಪ್ರಲ್ಹಾದ ಜೋಶಿ , ಕೇಂದ್ರ ಸಚಿವ

ಸಮೀಕ್ಷೆಯಿಂದ ಜನ ಹೊರಗುಳಿಯದಂತೆ ಸರಕಾರ ನೋಡಿಕೊಳ್ಳಲಿ

ಹಿಂದೂ ಭೋವಿ ಎಂದೇ ಬರೆಸಿ: ಇಮ್ಮಡಿ ಶ್ರೀ

ಚಿತ್ರದುರ್ಗ: ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಿಂದ ಯಾರು ಕೂಡ ಹೊರಗುಳಿಯದಂತೆ ನೋಡಿಕೊಳ್ಳಬೇಕಿದೆ ಎಂದು ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸರಕಾರಕ್ಕೆ ಒತ್ತಾಯಿಸಿದ್ದಾರೆ.

ಚಿತ್ರದುರ್ಗ ಹೊರವಲಯದ ಭೋವಿ ಗುರುಪೀಠದಲ್ಲಿ ಭಾನುವಾರ ಮಾತನಾಡಿದ ಅವರು, ಸಮೀಕ್ಷೆಯ ಕಾಲಂನಲ್ಲಿ ಧರ್ಮದ ಕಾಲಂನಲ್ಲಿ ಹಿಂದೂ, ಜಾತಿ ಕಾಲಂನಲ್ಲಿ ಭೋವಿ, ಉಪಜಾತಿ ಕಾಲಂನಲ್ಲಿ ವಡ್ಡರ್ ಎಂದು ಬರೆಸಲು ಕರೆ ನೀಡಿದರು.

ರಾಜ್ಯ ಸರಕಾರ ಇಂದಿನಿಂದ ನಡೆಸಲು ಉದ್ದೇಶಿಸಿರುವ ಸಾಮಾಜಿಕ, ಶೈಕ್ಷಣಿಕ ಗಣತಿಯನ್ನು ರಾಜ್ಯದಲ್ಲಿನ 7 ಕೋಟಿ ಜನರ ಸಮೀಕ್ಷೆಯಾಗುವವರೆಗೂ ನಡೆಸಬೇಕು. ಇದಕ್ಕೆ ಯಾವುದೇ ರೀತಿಯಲ್ಲಿ ಕಾಲಮಿತಿಯನ್ನು ಹಾಕುವುದು ಬೇಡ. ಸಾಮಾಜಿಕ ಶೈಕ್ಷಣಿಕ ಗಣತಿ ನಡೆಸುತ್ತಿರುವುದಕ್ಕೆ ಸ್ವಾಗತ. ಈ ಸಮೀಕ್ಷೆ ರಾಜ್ಯದಲ್ಲಿ ವಿವಿಧ ಜಾತಿಗಳ ಪ್ರಗತಿಗೆ ಕಾರಣವಾಗಲಿದೆ. ಸಮೀಕ್ಷೆಯನ್ನು ಯಾರೂ ನಿರ್ಲಕ್ಷ್ಯ ಮಾಡಬಾರದು. ಗಣತಿದಾರರು ಕೇಳುವ ಪ್ರಶ್ನೆಗಳಿಗೆ ಎಲ್ಲರು ಸರಿಯಾದ ಉತ್ತರವನ್ನು ನೀಡುವುದರ ಮೂಲಕ ನಿಮ್ಮ ನಿಮ್ಮ ಜಾತಿಯನ್ನು ಗುರುತಿಸಿಕೊಳ್ಳಬೇಕಿದೆ. ಬೇರೆ ರಾಜ್ಯಗಳಿಗೆ ಹೊಲಸೆ ಹೋದ ನಮ್ಮ ರಾಜ್ಯದ ಜನರನ್ನು ಗಣತಿಯಲ್ಲಿ ಒಳಪಡಿಸಬೇಕಿದೆ. ಕಟ್ಟಡ ಕೆಲಸಕ್ಕಾಗಿ ಬೆಂಗಳೂರು ಸೇರಿದಂತೆ ಮಹಾನಗರಗಳಿಗೆ ಹೋಗಿದ್ದಾರೆ. ಉತ್ತರ ಕರ್ನಾಟಕದಿಂದ ಕಾಫಿ ತೋಟಗಳಲ್ಲಿ ಕೆಲಸ ಮಾಡಲು ಹೋಗಿದ್ದಾರೆ. ಕೊಪ್ಪಳ, ಬಳ್ಳಾರಿ ಸೇರಿದಂತೆ ನಾನಾ ಜಿಲ್ಲೆಗಳಿಂದ ಜಿಲ್ಲೆಯನ್ನು ಬಿಟ್ಟು ಹೊರಗಡೆ ಹೋಗಿರುತ್ತಾರೆ. ಇಂತಹವರ ಸಮೀಕ್ಷೆ ಮಾಡಲು ಪ್ರತ್ಯೇಕವಾದ ತಂಡವನ್ನು ನೇಮಕ ಮಾಡುಬೇಕೆಂದು ಸರಕಾರಕ್ಕೆ ಆಗ್ರಹಿಸಿದರು.

> 48 ಕ್ರೈಸ್ತ ಜಾತಿಗಳಲ್ಲಿ 33 ಜಾತಿಗಳನ್ನು ಕೈ ಬಿಡಲು ಆಯೋಗದ ನಿರ್ಧಾರವಾಗಿದೆ. ವೊಡ್ಡ ಕ್ರಿಶ್ಚಿಯನ್ ಹಾಗೂ ಪರಿಶಿಷ್ಟ ಜಾತಿಗಳನ್ನು ಕ್ರೈಸ್ತ ಪಟ್ಟಿಯಿಂದ ಕೈಬಿಡಬೇಕು. ಡಾ.ಬಿ.ಆರ್. ಅಂಬೇಡ್ಕರ್ ಅವರು ರಚಿಸಿದ ಸಂವಿಧಾನದ ಅಡಿಯಲ್ಲಿ ಹಿಂದೂ ಬಿಲ್ ಕೋಡ್‌ನಲ್ಲಿ ಬರುವ ಭೋವಿ ಜನಾಂಗವನ್ನು ಧರ್ಮ- ಹಿಂದೂ, ಜಾತಿ- ಭೋವಿ, ಉಪಜಾತಿ-ವಡ್ಡರ ಎಂದು ಬರೆಯಿಸಿ. ಜಾತಿಯ ಪರ್ಯಾಯ ಪದಗಳನ್ನು ಕೋಡ್ ನಂ ಬಿ.23.2 ರಿಂದ ಬಿ.23.10 ರವರಿಗೆ ನಮೂದಿಸಬೇಕು.
>
> - ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ , ಭೋವಿ ಗುರುಪೀಠ

ನಾಗಮೋಹನ್ ದಾಸ್ ವರದಿ ಸರಿಯಿಲ್ಲ

2011ರ ಗಣತಿಯಲ್ಲಿ ಪ. ಜಾತಿ ಸಮಾಜದ ಜನಸಂಖ್ಯೆ 1.08 ಕೋಟಿ ಇತ್ತು. ಆದರೆ ನಾಗ ಮೋಹನ್ ದಾಸ್ ಆಯೋಗದ ವರದಿಯಲ್ಲಿ ಪರಿಶಿಷ್ಟ ಜಾತಿಯವರ ಸಮೀಕ್ಷೆಯನ್ನು ಮಾಡುವಾಗ 1.05 ಕೋಟಿ ಎಂದು ತೋರಿಸಿದ್ದಾರೆ. ಇದು ಸರಿಯಾದ ಸಮೀಕ್ಷೆಯಲ್ಲ. ಹತ್ತು ವರ್ಷದಲ್ಲಿ ಪರಿಶಿಷ್ಟ ಜಾತಿ ಸಮುದಾಯದವರು ಕನಿಷ್ಠ 25 ಲಕ್ಷ ಹಾಗೂ ಭೋವಿ ಸಮುದಾಯ ಕನಿಷ್ಠ 3 ಲಕ್ಷದಿಂದ 5 ಲಕ್ಷದವರೆಗೆ ಜನಸಂಖ್ಯೆ ಏರಿಕೆ ಯಾಗಿರುತ್ತದೆ. ಆದರೆ, ಆಯೋಗವೂ ಕಡಿಮೆ ಜನಸಂಖ್ಯೆಯನ್ನು ತೋರಿಸಿದೆ. ಆದರೆ, ಈ ಬಾರಿಯ ಸಮೀಕ್ಷೆಯಲ್ಲಿ ಈ ರೀತಿಯಾಗದಂತೆ ನೋಡಿಕೊಳ್ಳಬೇಕಿದೆ ಎಂದು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

ಸಮೀಕ್ಷೆ: ಕೆಲವರಿಂದ ವಿನಾಕಾರಣ ಗೊಂದಲ

ಮಂಗಳೂರು: ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಗಳ ಸಮೀಕ್ಷೆ ವಿಚಾರದಲ್ಲಿ ಕೆಲವರು ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬ್ರಾಹ್ಮಣ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್, ಗೌಡ ಕ್ರಿಶ್ಚಿಯನ್ ಮೊದಲಾದವುಗಳು ಹಿಂದಿನ ಆಯೋಗಗಳು ಸಮೀಕ್ಷೆ ಮಾಡಿದಾಗ ಜನರೇ ಹೇಳಿರುವುದು. ಆಯೋಗ ಅಥವಾ ಸರಕಾರ ಸೃಷ್ಟಿ ಮಾಡಿರುವುದಲ್ಲ ಎಂದು ತಿಳಿಸಿದರು. ಹಿಂದಿನ ಸಮೀಕ್ಷೆಗಳಲ್ಲಿ ಜನ ಏನು ಹೇಳಿ ದ್ದಾರೆ ಅದನ್ನು ಅವರು ಬರೆದುಕೊಂಡಿ ದ್ದಾರೆ. ಆದರೆ ಈ ರೀತಿ ಬರಬಾರದು ಎಂದು ನಾನು ಸಚಿವರಿಗೆ ಪತ್ರ ಬರೆದಿ ದ್ದೇನೆ ಅಷ್ಟೇ. ಇದೊಂದು ದೊಡ್ಡ ಗಂಭೀರ ವಿಚಾರವಲ್ಲ ಎಂದರು.

ಆಯೋಗ ತಯಾರಿಸಿರುವ ಈ ಪಟ್ಟಿ ಬಿಜೆಪಿ ಸರಕಾರ ಇದ್ದಾಗಲೂ ಇತ್ತು. ಬಹಳಷ್ಟು ಜನರಿಗೆ ಪೂರ್ತಿ ಮಾಹಿತಿಯಿಲ್ಲದೆ ಗೊಂದಲ ಸೃಷ್ಟಿಯಾಗಿದೆ ಎಂದರು.

ವಿಶ್ವವಾಣಿ

ಸಂಪಾದಕೀಯ

ತುಘಲಕ್ ಆಟದ ಝಲಕ್!

ಕ್ಷಣ ಚಿತ್ತ, ಕ್ಷಣ ಪಿತ್ತ' ಎಂಬ ಗ್ರಹಿಕೆಗೆ ಹೊಂದುವಂಥ ಆಸಾಮಿಯ ಉದಾಹರಣೆಯೇನಾದರೂ ಬೇಕಿದ್ದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕಡೆಗೊಮ್ಮೆ ಕಣ್ಣುಹಾಯಿಸಬಹುದು. ಮೊದಲ ಅಧಿಕಾರಾವಧಿಯ ಸಂದರ್ಭದಲ್ಲೇ ತಮ್ಮ ವಿಲಕ್ಷಣ ನಡೆಗಳ ಝಲಕ್ ನೀಡಿದ್ದ ಟ್ರಂಪ್, ಈಗ ಎರಡನೇ ಅವಧಿಯಲ್ಲಿ ಅದರ ಮುಂದುವರಿದ ಭಾಗಗಳನ್ನೂ ಬಿಂಬಿಸುತ್ತಿದ್ದಾರೆ. ಅಮೆರಿಕಕ್ಕೆ ಬಂದು ಬೀಳುವ ವಿವಿಧ ದೇಶಗಳ ಸರಕು-ಸಾಮಗ್ರಿಗಳ ಮೇಲೆ ಅತಿರೇಕದ ಸುಂಕ ವಿಧಿಸುವ ಹೆಜ್ಜೆಯಿಟ್ಟಿದ್ದು ಈ ಪೈಕಿ ಎದ್ದುಕಾಣುವಂಥದ್ದು. ಅದರಲ್ಲೂ ಚೀನಾದ ಮೇಲೆ ಟ್ರಂಪ್ ಮಹಾಶಯರು ತೂರಿದ 'ಸುಂಕಾಸ್ತ್ರ'ವು ಭಾರಿ ತೀಕ್ಷ್ಣವಾಗಿದ್ದುದು ಗೊತ್ತಿರುವ ಸಂಗತಿಯೇ. ಆದರೆ, 'ಭಾರತವು ಅಮೆರಿಕದ ಆಪ್ತಮಿತ್ರ' ಎಂದು ಹೇಳುತ್ತಲೇ ಇದ್ದ ಟ್ರಂಪ್ ಭಾರತದ ಮೇಲೂ ತಮ್ಮ ಕೆಂಗಣ್ಣು ಬೀರಿ ಸುಂಕದ ಪ್ರಮಾಣವನ್ನು ಶೇ.50ರ ಮಟ್ಟಕ್ಕೆ ಹೆಚ್ಚಿಸಿದಾಗ, ಅವರ ಇಬ್ಬಂದಿತನ ಇನ್ನಷ್ಟು ಢಾಳಾಗಿ ಗೋಚರಿಸಿತು. ಅದಕ್ಕೆ ಭಾರತ 'ಕ್ಯಾರೇ' ಎನ್ನದಿದ್ದಾಗ, ಮತ್ತೊಮ್ಮೆ ಸಂಬಂಧ ಕುದುರಿಸಿಕೊಳ್ಳುವ ಕಸರತ್ತಿನ ಭಾಗವಾಗಿ ಪ್ರಧಾನಿ ಮೋದಿಯವರಿಗೆ ಅವರು 4 ಸಲ ಕರೆಮಾಡಿದ್ದುಂಟು. ಆದರೆ ಅದನ್ನು ಮೋದಿ ಸ್ವೀಕರಿಸಲಿಲ್ಲ. ತರುವಾಯ ಮೋದಿಯವರ ಹುಟ್ಟುಹಬ್ಬದ ಸಂದರ್ಭವನ್ನು ನೆಪವಾಗಿಸಿಕೊಂಡು, ಮತ್ತೊಮ್ಮೆ ಭಾರತದ ಗುಣಗಾನಕ್ಕೆ ಟ್ರಂಪ್ ಮುಂದಾದಾಗ, ನಮ್ಮೆಡೆಗೆ ಅಮೆರಿಕ 'ಸಾಫ್ಟ್ ಕಾರ್ನರ್' ತೋರಬಹುದು ಎಂದೇ ಭಾವಿಸಲಾಗಿತ್ತು. ಆದರೀಗ ಟ್ರಂಪ್ ಮತ್ತೊಮ್ಮೆ ತಮ್ಮ ನಿಜ ಬಣ್ಣವನ್ನು ಬಯಲುಮಾಡಿಕೊಂಡಿದ್ದಾರೆ. ಎಚ್ 1ಬಿ ವೀಸಾದ ವಾರ್ಷಿಕ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಏರಿಸಿ ಭಾರತೀಯ ಐಟಿ ಉದ್ಯೋಗಿಗಳಿಗೆ ಶಾಕ್ ನೀಡಿದ್ದಾರೆ. ಇದನ್ನು ಕಂಡು ಮೋದಿಯವರು ಮತ್ತೊಮ್ಮೆ 'ಆತ್ಮನಿರ್ಭರತೆಯ ಮಂತ್ರ' ಜಪಿಸಿರುವುದು ಸರಿಯಾಗೇ ಇದೆ.

ಸೊಂಪಾದಕೀಯ

ಜಾತಿಗೆ ಧರ್ಮ ಮಿಕ್ಸ್

ರಾಜ್ಯದಲ್ಲಿ ಸಿದ್ದರಾಮಯ್ಯ ಅವರ ಕಾಂಗ್ರೆಸ್ ಸರಕಾರ ಜಾತಿಗಣತಿ ಮಾಡ್ತಾ ಇರೋದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಈ ಜಾತಿಗಣತಿ ಫೇಕ್ ಅನ್ನಿಸುವಂಥ ಮಾತುಗಳು ಎಲ್ಲ ಕಡೆ ಕೇಳಿಬರುತ್ತಿವೆ. ಯಾಕಂದ್ರೆ, ಇದರ ಪ್ರಕಾರ ಮನೆಮನೆಗೆ ಭೇಟಿ ಕೊಟ್ಟು ಅಂಕಿ-ಅಂಶಗಳನ್ನು ಲೆಕ್ಕ ಹಾಕುವ ಕೆಲಸ ಆಗ್ತಾ ಇಲ್ಲ. ಬದಲಾಗಿ ಮನೆಗಳಿಗೆ ಭೇಟಿ ಕೊಟ್ಟು ಚೀಟಿ ಅಂಟಿಸುವ ಕೆಲಸ ಮಾತ್ರ ಆಗ್ತಾ ಇದೆ. ಮನೆಯ ಯಾರನ್ನೂ ಮಾತಾಡಿಸದೇ ಯಾರಿಗೂ ಗೊತ್ತಿಲ್ಲದಂತೆ 'ಜಾತಿಗಣತಿ ಮಾಡಲಾಗಿದೆ' ಅಂತ ಚೀಟಿ ಅಂಟಿಸಿ ಹೋಗಲಾಗುತ್ತಿದೆ. ಅದರ ಜತೆಗೆ 'ಈ ಚೀಟಿಯನ್ನು ಕೀಳಬೇಡಿ' ಅಂತ ಎಚ್ಚರಿಕೆಯ ಸಂದೇಶವನ್ನೂ ರವಾನೆ ಮಾಡಲಾಗುತ್ತಿದೆ. ಈಗ ಈ ಜಾತಿಗಣತಿಯ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರೋಕೆ ಕಾರಣವಾದ ಗ್ಯಾರಂಟಿಗಳ ಪಟ್ಟಿಯಲ್ಲಿರುವ ಗೃಹಲಕ್ಷ್ಮಿ ಯೋಜನೆಯನ್ನು ತಳಕುಹಾಕುವ ಕೆಲಸ ಕೂಡಾ ಆಗ್ತಾ ಇದೆಯಂತೆ. ಇದರಂತೆ ಗೃಹಲಕ್ಷ್ಮಿ ಹಣ ಬೇಕು ಅಂದ್ರೆ, ಜಾತಿ ಪ್ರಮಾಣಪತ್ರ ಕೊಡಬೇಕಾ? ಅನ್ನೋ ಪ್ರಶ್ನೆ ಎದ್ದಿದೆ. ಇದರ ಜತೆಗೆ ಈಗ ಸದ್ದು ಮಾಡ್ತಾ ಇರೋದು ಅಂದ್ರೆ ಇನ್ನೊಂದು ಗಣತಿ. ಸೋಷಿಯಲ್ ಮೀಡಿಯಾದಲ್ಲಿ ಹರಿದಾಡುತ್ತಿರುವ ಈ ಜಾತಿಗಳ ಪಟ್ಟಿ ನೋಡಿದರೆ ತಲೆತಿರುಗುತ್ತದೆ. ಅದಕ್ಕೆ ಕಾರಣ ಹಿಂದೂ ಮತ್ತು ಕ್ರಿಶ್ಚಿಯನ್ ಧರ್ಮಗಳ ನಡುವೆ ಆಗಿರುವ ಸ್ಯಾಂಡ್‌ವಿಚ್. ಹಿಂದೂ ಧರ್ಮದಲ್ಲಿ ಇರೋ ಬರೋ ಜಾತಿಗಳನ್ನೆಲ್ಲಾ ಕ್ರಿಶ್ಚಿಯನ್ ಧರ್ಮದೊಂದಿಗೆ ತಳಕು ಹಾಕಿ ಬ್ರಾಹ್ಮಣ ಕ್ರಿಶ್ಚಿಯನ್, ವೈಶ್ಯ ಕ್ರಿಶ್ಚಿಯನ್, ಬ್ರಾಹ್ಮಣ ವೈಶ್ಯ ಕ್ರಿಶ್ಚಿಯನ್, ಶೂದ್ರ ಕ್ರಿಶ್ಚಿಯನ್ ಅಂತೆಲ್ಲಾ ಮಸಾಲಾ ಸೋಡಾ ಮಾಡುವ ಅಂಗಡಿಗಳಲ್ಲಿನ ಸೋಡಾ, ನಿಂಬು ಸೋಡಾ, ನಿಂಬೂ ಮಸಾಲಾ ಸೋಡಾ ಎಂಬ ಬೋರ್ಡುಗಳ ಥರ ಜಾತಿಗಣತಿಯಲ್ಲಿ ಕೆಟಗರಿಗಳನ್ನು ಮಾಡಲಾಗಿದೆ. ಇದನ್ನು ನೋಡಿದರೆ ಇದು ಹಿಂದೂ ಮತ್ತು ಕ್ರಿಶ್ಚಿಯನ್ ಧರ್ಮಗಳನ್ನು ಸೇರಿಸಿ 'ಒಟ್ಟಿಗೇ ಬಾಳುವ ತೆರದಲಿ ಹರಸು' ಅನ್ನೋ ಕವಿವಾಣಿಯನ್ನು ನಿಜ ಮಾಡಲು ಹೊರಟಂತಿದೆ ಅನ್ನಿಸಿದರೆ ಅದು ಒಳ್ಳೆ ಕೆಲಸವೇ ಎನಿಸಿಕೊಳ್ಳುತ್ತದೆ ಅಂದುಕೊಂಡು ಸುಮ್ಮನಾಗ ಬೇಕು ಅಷ್ಟೇ.

ಸಂಪಾದಕರ ಸದ್ಯಶೋಧನೆ

ಪಾಸ್‌ಪೋರ್ಟ್ ಪ್ರಬಲ, ಪ್ರಯಾಣ ವಿರಳ

ಜಗತ್ತಿನ ಅತ್ಯಂತ ಶಕ್ತಿಶಾಲಿ ಪಾಸ್‌ಪೋರ್ಟ್‌ಗಳ ಪಟ್ಟಿಯಲ್ಲಿ ಜಪಾನ್‌ಗೆ ಸತತ ಅಗ್ರಸ್ಥಾನ. 2024ರ ಅಂತ್ಯದ ವೇಳೆಗೆ, ಜಪಾನಿನ ಪಾಸ್‌ಪೋರ್ಟ್ ಜಾಗತಿಕವಾಗಿ ಎರಡನೇ ಅತ್ಯಂತ ಪ್ರಬಲ ಎಂದು ಪರಿಗಣಿತವಾಗಿದೆ. ಆ ನಾಗರಿಕರು ವೀಸಾ ಇಲ್ಲದೇ ಅಥವಾ 'ವೀಸಾ-ಆನ್-ಅರೈವಲ್' ಸೌಲಭ್ಯದೊಂದಿಗೆ ವಿಶ್ವದ ಹಲವಾರು ದೇಶಗಳಿಗೆ ಪ್ರಯಾಣಿಸಬಹುದು. ಆದರೆ, ಈ ವಿಶೇಷ ಸೌಲಭ್ಯದ ಹೊರತಾಗಿಯೂ, ಜಪಾನಿನ ಕೇವಲ ಶೇ.17ರಷ್ಟು ನಾಗರಿಕರು ಮಾತ್ರ ಮಾನ್ಯವಾದ ಪಾಸ್‌ಪೋರ್ಟ್ ಹೊಂದಿದ್ದಾರೆ ಎಂಬುದು ಆಶ್ಚರ್ಯಕರವಾದರೂ ಸತ್ಯ. ಇದು ಇತರ ಮುಂದುವರಿದ ಆರ್ಥಿಕತೆಗಳಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಪ್ರಮಾಣವಾಗಿದೆ. 2013ರಲ್ಲಿ ಸುಮಾರು ಶೇ.24ರಷ್ಟಿದ್ದ ಈ ಪ್ರಮಾಣವು ಕಳೆದ ದಶಕದಲ್ಲಿ ಗಣನೀಯವಾಗಿ ಇಳಿಕೆಯಾಗಿದೆ. ಜಗತ್ತನ್ನು ನೋಡುವ ಅಪಾರ ಅವಕಾಶಗಳಿದ್ದರೂ, ಜಪಾನಿಯರು ವಿದೇಶ ಪ್ರಯಾಣಕ್ಕೆ ಏಕೆ ಹಿಂದೇಟು ಹಾಕುತ್ತಿದ್ದಾರೆ? ಇದರ ಹಿಂದೆ ಕೇವಲ ಆರ್ಥಿಕ ಕಾರಣಗಳಿವೆಯೇ ಅಥವಾ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳೂ ಅಡಗಿವೆಯೇ? ಜಪಾನಿಯರ ವಿದೇಶಿ ಪ್ರಯಾಣದ ಆಸಕ್ತಿ ಕಡಿಮೆಯಾಗಲು ಪ್ರಮುಖ ಮತ್ತು ತಕ್ಷಣದ ಕಾರಣವೆಂದರೆ ಆರ್ಥಿಕ ಸಂಕಷ್ಟ. ಜಪಾನಿನ ಕರೆನ್ಸಿಯಾದ 'ಯೆನ್' ಕಳೆದ ಕೆಲವು ವರ್ಷಗಳಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ, ವಿಶೇಷವಾಗಿ ಅಮೆರಿಕದ ಡಾಲರ್ ಎದುರು ತೀವ್ರವಾಗಿ ಕುಸಿದಿದೆ. ಇದು ಜಪಾನಿನ ನಾಗರಿಕರಿಗೆ ವಿದೇಶ ಪ್ರಯಾಣವನ್ನು ದುಬಾರಿಯನ್ನಾಗಿ ಮಾಡಿದೆ. ಹಿಂದೆ ಹತ್ತು ಸಾವಿರ ಯೆನ್‌ಗೆ ಉತ್ತಮ ಮೌಲ್ಯ ಸಿಗುತ್ತಿದ್ದ ದೇಶಗಳಲ್ಲಿ ಈಗ ಅದೇ ಹಣಕ್ಕೆ ಕಡಿಮೆ ಸೇವೆ ಅಥವಾ ವಸ್ತುಗಳು ಲಭ್ಯವಾಗುತ್ತಿವೆ. ವಿಮಾನಯಾನ, ಹೋಟೆಲ್, ಆಹಾರ ಮತ್ತು ಇತರ ಪ್ರವಾಸಿ ಚಟುವಟಿಕೆಗಳ ವೆಚ್ಚಗಳು ಗಗನಕ್ಕೇರಿವೆ. ಉದಾಹರಣೆಗೆ, ಅಮೆರಿಕ ಅಥವಾ ಯುರೋಪ್ ಪ್ರವಾಸದ ಕನಸು ಕಾಣುತ್ತಿದ್ದ ಮಧ್ಯಮ ವರ್ಗದ ಕುಟುಂಬವೊಂದು, ಈಗ ದುರ್ಬಲ ಯೆನ್‌ನಿಂದಾಗಿ ತಮ್ಮ ಬಜೆಟ್‌ಗಿಂತ ಎರಡು ಪಟ್ಟು ಹೆಚ್ಚು ಖರ್ಚು ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ. ಇದು ಅನೇಕರನ್ನು ತಮ್ಮ ವಿದೇಶ ಪ್ರಯಾಣದ ಯೋಜನೆಗಳನ್ನು ಮುಂದೂಡಲು ಅಥವಾ ಸಂಪೂರ್ಣವಾಗಿ ಕೈಬಿಡಲು ಪ್ರೇರೇಪಿಸಿದೆ. ಇದಲ್ಲದೇ ಜಾಗತಿಕ ಹಣದುಬ್ಬರ ಮತ್ತು ಇಂಧನ ಬೆಲೆ ಏರಿಕೆಯು ವಿಮಾನಯಾನದ ಟಿಕೆಟ್ ದರಗಳನ್ನು ಇನ್ನಷ್ಟು ಹೆಚ್ಚಿಸಿದ್ದು, ಸಾಮಾನ್ಯ ಜಪಾನಿ ಪ್ರಜೆಗಳಿಗೆ ವಿದೇಶ ಪ್ರಯಾಣವು ಕೈಗೆಟುಕದಾಗಿದೆ. ಜಪಾನಿನ ಪಾಸ್‌ಪೋರ್ಟ್ ಹೊಂದುವವರ ಸಂಖ್ಯೆ ಇಳಿಮುಖವಾಗಲು ಮತ್ತೊಂದು ಪ್ರಮುಖ ಕಾರಣವೆಂದರೆ ಯುವಪೀಳಿಗೆಯಲ್ಲಿ ಅಂತಾರಾಷ್ಟ್ರೀಯ ಪ್ರಯಾಣ ಮತ್ತು ವಿದೇಶಿ ಶಿಕ್ಷಣದ ಬಗ್ಗೆ ಆಸಕ್ತಿ ಕಡಿಮೆಯಾಗಿರುವುದು. ಹಿಂದಿನ ತಲೆಮಾರಿನ ಯುವಕರಲ್ಲಿ ವಿದೇಶಕ್ಕೆ ಹೋಗಿ ಕಲಿಯುವುದು, ಹೊಸ ಸಂಸ್ಕೃತಿಗಳನ್ನು ಅನ್ವೇಷಿಸುವುದು ಒಂದು ದೊಡ್ಡ ಕನಸಾಗಿತ್ತು. ಆದರೆ ಇಂದಿನ ಯುವಕರು ಹೆಚ್ಚು 'ಒಳಮುಖಿ' (inward-looking) ಧೋರಣೆಯನ್ನು ಹೊಂದಿದ್ದಾರೆ. ಇದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದಾಗಿ, ಜಪಾನ್‌ನಲ್ಲಿಯೇ ಅತ್ಯುತ್ತಮವಾದ ಜೀವನಶೈಲಿ, ಮನರಂಜನೆ ಮತ್ತು ತಂತ್ರಜ್ಞಾನ ಲಭ್ಯವಿವೆ. ಇಂಟರ್ನೆಟ್ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಜಗತ್ತಿನ ಯಾವುದೇ ಮೂಲೆಯ ಮಾಹಿತಿಯನ್ನು ಸುಲಭವಾಗಿ ಪಡೆಯಬಹುದಾದ್ದರಿಂದ, ಭೌತಿಕವಾಗಿ ಅಲ್ಲಿಗೆ ಹೋಗಬೇಕೆಂಬ ಹಂಬಲ ಕಡಿಮೆಯಾಗಿದೆ. ಎರಡನೆಯದಾಗಿ, ವಿದೇಶಗಳಲ್ಲಿನ ಭಾಷೆಯ ತೊಡಕು, ಸುರಕ್ಷತೆಯ ಬಗ್ಗೆ ಇರುವ ಆತಂಕ ಮತ್ತು ಅನಿಶ್ಚಿತತೆಯ ಭಾವನೆಗಳು ಯುವಕರನ್ನು ತಮ್ಮ 'ಕಂಫರ್ಟ್ ಜೋನ್' ಬಿಟ್ಟು ಹೊರಬರಲು ಹಿಂಜರಿಯುವಂತೆ ಮಾಡಿವೆ. ವಿದೇಶಿ ವ್ಯಾಸಂಗಕ್ಕೆ ಸಂಬಂಧಿಸಿದಂತೆ, ಅದರ ವೆಚ್ಚ ಗಣನೀಯವಾಗಿ ಹೆಚ್ಚಾಗಿದೆ. ಜತೆಗೆ, ಜಪಾನ್‌ನಲ್ಲಿಯೇ ಉತ್ತಮ ಉದ್ಯೋಗಾವಕಾಶಗಳು ಲಭ್ಯವಿರುವಾಗ, ವಿದೇಶಕ್ಕೆ ಹೋಗಿ ಕಷ್ಟಪಟ್ಟು ಕಲಿಯುವ ಅಗತ್ಯವಿಲ್ಲ ಎಂಬ ಮನೋಭಾವವೂ ಯುವಕರಲ್ಲಿ ಬೆಳೆಯುತ್ತಿದೆ. ಈ ಹಿಂದೆ ಅಮೆರಿಕ ಮತ್ತು ಯುರೋಪಿಯನ್ ವಿಶ್ವವಿದ್ಯಾಲಯಗಳಿಗೆ ಹೋಗುತ್ತಿದ್ದ ಜಪಾನಿ ವಿದ್ಯಾರ್ಥಿಗಳ ಸಂಖ್ಯೆಯು ಗಣನೀಯವಾಗಿ ಕುಸಿದಿದೆ. ಜಪಾನಿನ ವಿಶಿಷ್ಟ ಕೆಲಸದ ಸಂಸ್ಕೃತಿಯು ವಿದೇಶಿ ಪ್ರಯಾಣಕ್ಕೆ ಒಂದು ದೊಡ್ಡ ಅಡ್ಡಿಯಾಗಿದೆ. ಜಪಾನಿನ ಕಂಪನಿಗಳಲ್ಲಿ ದೀರ್ಘಕಾಲದ ಕೆಲಸದ ಅವಧಿಗಳು ಸಾಮಾನ್ಯ. ನೌಕರರು ತಮ್ಮ ಕಂಪನಿಗೆ ನಿಷ್ಠೆ ಮತ್ತು ಸಮರ್ಪಣೆಯನ್ನು ತೋರಿಸುವುದು ಬಹಳ ಮುಖ್ಯವೆಂದು ಪರಿಗಣಿಸಲಾಗುತ್ತದೆ. ವಾರ್ಷಿಕವಾಗಿ ರಜೆಗಳು ಲಭ್ಯವಿದ್ದರೂ, ದೀರ್ಘಕಾಲದ ರಜೆ ತೆಗೆದುಕೊಳ್ಳುವುದು ಅಷ್ಟು ಸುಲಭವಲ್ಲ. ಸಹೋದ್ಯೋಗಿಗಳಿಗೆ ತೊಂದರೆಯಾಗುತ್ತದೆ ಅಥವಾ ಕಂಪನಿಯ ಕೆಲಸದ ಮೇಲೆ ಪರಿಣಾಮ ಬೀರಬಹುದು ಎಂಬ ಭಾವನೆಯಿಂದ ಅನೇಕರು ದೀರ್ಘ ರಜೆಗಳನ್ನು ತೆಗೆದುಕೊಳ್ಳಲು ಹಿಂಜರಿಯುತ್ತಾರೆ.

ವಿಜಯೇಂದ್ರ ಬೆನ್ನಿಗೆ ಈಗ ಸಂತೋಷ್ ನಿಂತರು

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ಯಲಹಂಕದ 'ರಮಡ' ರೆಸಾರ್ಟ್‌ನಲ್ಲಿ ಬಿಜೆಪಿಯ ಮಹತ್ವದ ಸಭೆ ನಡೆಯಿತು. ಈ ಸಭೆಯಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಒಂದು ಫರ್ಮಾನು ಹೊರಡಿಸಿದ್ದಾರೆ. 'ಮುಂದಿನ ದಿನಗಳಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ದೃಷ್ಟಿಯಿಂದ ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕು. ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ಸಂಘಟನೆಯನ್ನು ಬಲಿಷ್ಠಗೊಳಿಸಬೇಕು' ಎಂಬುದು ಈ ಫರ್ಮಾನು.

ಹೀಗೆ ಬಿ.ವೈ.ವಿಜಯೇಂದ್ರ ಅವರ ನೇತೃತ್ವದಲ್ಲಿ ಪಕ್ಷ ಸಂಘಟನೆ ಮಾಡಬೇಕು ಅಂತ ಅವರು ಹೇಳಿದಾಗ ಅಲ್ಲಿದ್ದ ಕೆಲ ನಾಯಕರಿಗೆ ಕಸಿವಿಸಿಯಾಗಿರುವುದೇನೋ ನಿಜ. ಯಾಕೆಂದರೆ ವಿಜಯೇಂದ್ರ ಅವರು ಪಕ್ಷದ ರಾಜ್ಯಾಧ್ಯಕ್ಷರಾದ ನಂತರ ಸಂತೋಷ್ ಅವರು ಒಂದು ಅಂತರ ಕಾಯ್ದುಕೊಂಡೇ ಬಂದಿದ್ದರು. ಅರ್ಥಾತ್, ಅವರಿಗೆ ವಿಜಯೇಂದ್ರ ಅವರು ರಾಜ್ಯಾಧ್ಯಕ್ಷ ಸ್ಥಾನದಲ್ಲಿ ಕೂತಿದ್ದು ಅಷ್ಟು ಸಹನೆಯಾಗಿರಲಿಲ್ಲ.

ವಿಜಯೇಂದ್ರ ಅವರ ವಿಷಯದಲ್ಲಿ ಸಂತೋಷ್ ಅವರಿಗಿದ್ದ ಈ ಅಸಹನೆಯೇ ರಾಜ್ಯ ಬಿಜೆಪಿಯಲ್ಲಿರುವ ಯಡಿಯೂರಪ್ಪ ವಿರೋಧಿ ಬಣಕ್ಕೆ ಪಾಸಿಟಿವ್ ಆಗಿ ಕಂಡಿತ್ತು. ಯಾಕೆಂದರೆ, ಮುಂದಿನ ದಿನಗಳಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ತಾವು ಸಿಎಂ ಆಗಬೇಕು ಎಂಬ ಲೆಕ್ಕಾಚಾರ ಇಂಥವರಲ್ಲಿದೆಯಲ್ಲ? ಹೀಗಾಗಿ ಈ ನಾಯಕರ ಲೆಕ್ಕಾಚಾರಕ್ಕೆ ಸಂತೋಷ್ ಅವರ ಮನಃಸ್ಥಿತಿ ಪೂರಕವಾಗಿ ಕಂಡಿತ್ತು. ಪರಿಣಾಮ? ಬಸನಗೌಡ ಪಾಟೀಲ್ ಯತ್ನಾಳ್ ಅವರಿಂದ ಹಿಡಿದು ಬಸವರಾಜ ಬೊಮ್ಮಾಯಿ ಅವರ ತನಕ, ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರಿಂದ ಹಿಡಿದು ಕೇಂದ್ರ ಸಚಿವ ವಿ.ಸೋಮಣ್ಣ ಅವರ ತನಕ ದೊಡ್ಡದೊಂದು ಪಡೆಯೇ ವಿಜಯೇಂದ್ರ ಅವರ ವಿರುದ್ಧ ತಿರುಗಿಬಿದ್ದು ಹೋರಾಟ ನಡೆಸಿತ್ತು.

ಆದರೆ ಕಳೆದ ವಾರ ಯಲಹಂಕದ 'ರಮಡ' ರೆಸಾರ್ಟ್‌ನಲ್ಲಿ ನಡೆದ ಪಕ್ಷದ ಸಭೆಯಲ್ಲಿ ಸಂತೋಷ್ ಅವರು ಮಾತನಾಡಿದ ರೀತಿ ಯಡಿಯೂರಪ್ಪ ವಿರೋಧಿ ಬಣವನ್ನು ವಿಸ್ಮಯಕ್ಕೆ ದೂಡಿದೆ. ಅಷ್ಟೇ ಅಲ್ಲ, ವಿಜಯೇಂದ್ರ ವಿರುದ್ಧದ ಹೋರಾಟಕ್ಕೆ ಅದು ಹಿನ್ನಡೆಯಾಗಿಯೂ ಕಾಣಿಸಿದೆ.

ಅಂದ ಹಾಗೆ, ಪಕ್ಷದ ಶಾಸಕರು, ಸಂಸದರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳು ಸೇರಿದಂತೆ ಪಕ್ಷದ ಫ್ರಂಟ್ ಲೈನ್ ಪಡೆ ಹಾಜರಿದ್ದ ಈ ಸಭೆಯಲ್ಲಿ ಸಂತೋಷ್ ಸಮಾರೋಪ ಭಾಷಣ ಮಾಡಲು ಶುರುಮಾಡಿದಾಗ, ವಿಜಯೇಂದ್ರ ಅವರಿಗೆ ಎಚ್ಚರಿಕೆಯ ಸಂದೇಶ ರವಾನಿಸಬಹುದು ಅಂತ ಹಲವು ನಾಯಕರು ನಿರೀಕ್ಷಿಸಿದ್ದಾರೆ. ಆದರೆ ಭಾಷಣದ ಶುರುವಿನಿಂದಲೇ ವಿಜಯೇಂದ್ರ ಅವರ ನಾಯಕತ್ವಕ್ಕೆ ಪಾಸಿಟಿವ್ ಆಗಿ ಮಾತನಾಡಿದ ಸಂತೋಷ್ ಅವರು, ''ವಿಜಯೇಂದ್ರ ಅನುಭವಿ ಅಲ್ಲ, ಕಿರಿಯರು ಅಂತ ಇವತ್ತು ಕೆಲವರು ಹೇಳುತ್ತಾರೆ. ಆದರೆ ಗಮನಿಸಬೇಕಾದ ವಿಷಯವೆಂದರೆ ಸಂಘಟನೆಯನ್ನು ಕಟ್ಟುವ ವಿಷಯದಲ್ಲಿ ವಿಜಯೇಂದ್ರ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನೆನಪಿಡಬೇಕಾದ ವಿಷಯವೆಂದರೆ, ಇವತ್ತು ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿರುವ ಯೋಗಿ ಆದಿತ್ಯನಾಥ್ ಅವರು ಪಕ್ಷ ಸಂಘಟನೆಯ ಜವಾಬ್ದಾರಿ ವಹಿಸಿಕೊಂಡಾಗ ಅವರಿಗೆ ಬರೀ ಇಪ್ಪತ್ತೊಂಬತ್ತು ವರ್ಷ. ಹೀಗಾಗಿ ಕರ್ನಾಟಕದಲ್ಲಿ ಪಕ್ಷ ಸಂಘಟನೆಯ ಜವಾಬ್ದಾರಿಯನ್ನು ವಿಜಯೇಂದ್ರ ಸಮರ್ಥವಾಗಿ ಹೊರಬಲ್ಲರು'' ಅಂತ ಸಂತೋಷ್ ಅವರು ಸರ್ಟಿಫಿಕೇಟು ಕೊಟ್ಟಾಗ ಸಭೆಯಲ್ಲಿದ್ದ ವಿಜಯೇಂದ್ರ ವಿರೋಧಿ ಪಡೆ ಮೌನವಾಗಿದೆ.

ಅಲ್ಲಿಗೆ ಸ್ಪಷ್ಟವಾದ ವಿಷಯವೆಂದರೆ, ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಲು ನಡೆಯುತ್ತಿರುವ ಹೋರಾಟವೇನಿದೆ, ಅದರ ಶಕ್ತಿ ಕುಸಿದಂತೆ ಭಾಸವಾಗಿ, ವಿಜಯೇಂದ್ರ ಅವರೇ ರಾಜ್ಯ ಬಿಜೆಪಿಯ ಭವಿಷ್ಯದ ನಾಯಕರಾಗಿ ಎಮರ್ಜ್ ಆಗುವುದು ನಿಶ್ಚಿತವಾದಂತಿದೆ.

ಅಮಿತ್ ಶಾ ಲೆಕ್ಕಾಚಾರ ಏನು?

ಅಂದ ಹಾಗೆ, ಬಿ.ಎಲ್.ಸಂತೋಷ್ ಅವರು ಇದ್ದಕ್ಕಿದ್ದಂತೆ ವಿಜಯೇಂದ್ರ ಅವರ ಪರ ನಿಂತಿರುವುದೇಕೆ? ಬಿಜೆಪಿ ಮೂಲಗಳ ಪ್ರಕಾರ, ಸಂತೋಷ್ ಅವರು ಇದ್ದಕ್ಕಿದ್ದಂತೆ ಬದಲಾಗುವುದಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕಾರಣ. ಇದೇ ಮೂಲಗಳ ಪ್ರಕಾರ, ಅಮಿತ್ ಶಾ ಅವರು ಕರ್ನಾಟಕದ ರಾಜಕಾರಣದಲ್ಲಿ ಉಂಟಾಗಲಿರುವ ತಲ್ಲಣದ ಮೇಲೆ ಗಮನ ನೆಟ್ಟಿದ್ದಾರೆ. ಅವರಿಗಿರುವ ಮಾಹಿತಿಯ ಪ್ರಕಾರ, ಕರ್ನಾಟಕದಲ್ಲಿರುವ ಕಾಂಗ್ರೆಸ್ ಸರಕಾರ ನವೆಂಬರ್ ನಂತರ ಕ್ಷೋಭೆಗೆ ಒಳಗಾಗಲಿದೆ. ಕಾರಣ? ಅಧಿಕಾರ ಹಂಚಿಕೆಯ ಮಾತು ಚಾಲ್ತಿಯಲ್ಲಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಬಿಟ್ಟು ಕೊಡಲು ತಯಾರಾಗುವುದಿಲ್ಲ.

ಹೀಗೆ ಅವರು ಪಟ್ಟ ಬಿಟ್ಟುಕೊಡುವುದಿಲ್ಲ ಎಂದರೆ ಪಕ್ಷದ ವರಿಷ್ಠರು ಹಠ ಮಾಡುವುದಿಲ್ಲ. ಕಾರಣ? ಕರ್ನಾಟಕದಲ್ಲಿ ಅಹಿಂದ ವರ್ಗಗಳನ್ನು ಸಿದ್ದರಾಮಯ್ಯ ಯಾವ ಲೆವೆಲ್ಲಿನಲ್ಲಿ ಕನ್‌ಸಾಲಿಡೇಟ್ ಮಾಡಿದ್ದಾರೆಂದರೆ, ಅವರ ಇಚ್ಛೆಗೆ ವಿರುದ್ಧವಾದ ತೀರ್ಮಾನ ತೆಗೆದುಕೊಂಡರೆ ಸರಕಾರ ಅಲುಗಾಡುವುದು ನಿಶ್ಚಿತ. ಹೀಗಾದಾಗ ಸಿಎಂ ಹುದ್ದೆಗೆ ಲಗ್ಗೆ ಹಾಕಿರುವ ಡಿಸಿಎಂ ಡಿಕೆಶಿ, ತಮ್ಮ ಬೆಂಬಲಿಗರೊಡನೆ ಕಾಂಗ್ರೆಸ್ ತೊರೆಯುತ್ತಾರೆ. ಹೀಗೆ ಹೊರಬರಲಿರುವ ಡಿಕೆಶಿ ಜತೆ ಗಣನೀಯ ಸಂಖ್ಯೆಯ ಶಾಸಕರು ಬರದೇ ಇರಬಹುದು. ಆದರೆ ಅವರ ಜತೆ ಒಂದಷ್ಟು ಶಾಸಕರು ಹೊರಬಂದರೆ ಸರಕಾರವನ್ನು ಅಲುಗಾಡಿಸುವ ಕಸರತ್ತು ಆರಂಭ

ವಾಗಲಿದೆ. ಒಂದು ಸಲ ಈ ಕಸರತ್ತು ಆರಂಭವಾದರೆ ಬಹುಬೇಗ ಅದನ್ನು ತಾರ್ಕಿಕ ಅಂತ್ಯಕ್ಕೆ ತಲುಪಿಸಬಹುದು ಎಂಬುದು ಅಮಿತ್ ಶಾ ಲೆಕ್ಕಾಚಾರ.

ಅವರ ಈ ಲೆಕ್ಕಾಚಾರದ ಅರ್ಥವೆಂದರೆ, ಕರ್ನಾಟಕದಲ್ಲಿ ಮಧ್ಯಂತರ ಚುನಾವಣೆಗೆ ವೇದಿಕೆ ಸಿದ್ಧವಾಗಲಿದೆ ಎಂಬುದೇ ಹೊರತು ಬೇರೇನಲ್ಲ. ಹೀಗೆ ಕರ್ನಾಟಕದ ರಾಜಕಾರಣದ ಬಗ್ಗೆ ಅಮಿತ್ ಶಾ ಹಾಕಿದ ಲೆಕ್ಕಾಚಾರವೇನಿದೆ, ಅದಕ್ಕೆ ಪೂರಕವಾದ ಹೆಜ್ಜೆ ಇಡಲು ಸಂತೋಷ್ ಹೊರಟಿದ್ದಾರೆ. ಯಾಕೆಂದರೆ, ಕರ್ನಾಟಕದಲ್ಲಿ ರಾಜಕೀಯ ಕ್ಷೋಭೆ ಶುರುವಾಗುವ ಕಾಲದಲ್ಲಿ ರಾಜ್ಯ ಬಿಜೆಪಿಯ ಸೈನ್ಯ ಒಗ್ಗಟ್ಟಿನ ಪ್ರತಿರೂಪವಾಗಿರಬೇಕು. ಅಮಿತ್ ಶಾ ಇದನ್ನೇ ಬಯಸುತ್ತಿದ್ದಾರೆ ಎಂಬುದು ಬಿ.ಎಲ್.ಸಂತೋಷ್ ಅವರಿಗೆ ಗೊತ್ತು ಮತ್ತು ಇದು ಸಾಧ್ಯವಾಗಬೇಕು ಎಂದರೆ ವಿಜಯೇಂದ್ರ ಅವರನ್ನು ಅಲುಗಾಡಿಸುವ ಯತ್ನಗಳಿಗೆ ಬೆಂಬಲ ನೀಡಬಾರದು ಎಂಬುದೂ ಗೊತ್ತು.

ಹಾಗಂತಲೇ ಕಳೆದ ವಾರ ಯಲಹಂಕದ 'ರಮಡ' ರೆಸಾರ್ಟ್‌ನಲ್ಲಿ ನಡೆದ ಪಕ್ಷದ ಸಭೆಯಲ್ಲಿ ಅವರು ಶಾಂತಿ ಮಂತ್ರ ಜಪಿಸಿದ್ದಾರೆ. ಅಷ್ಟೇ ಅಲ್ಲ, ''ಇನ್ನು ಮುಂದೆ ಪ್ರತಿ ವಾರ ಕರ್ನಾಟಕಕ್ಕೆ ಬರುತ್ತೇನೆ. ಸಂಘಟನೆಯನ್ನು ಬಲಿಷ್ಠಗೊಳಿಸುವ ಯತ್ನಕ್ಕೆ ಕೈ ಜೋಡಿಸುತ್ತೇನೆ'' ಅಂತ ಹೇಳಿ ಹೋಗಿದ್ದಾರೆ.

ಅಧಿಕಾರ ಹಸ್ತಾಂತರದ ಮಾತು ಮಾರ್ಚ್‌ಗೆ?

ಹೀಗೆ ರಾಜ್ಯ ಬಿಜೆಪಿ ಪಾಳಯ ಡಿಸೆಂಬರ್ ಕ್ರಾಂತಿಗೆ ಸಜ್ಜಾಗುತ್ತಿದ್ದರೆ, ಇನ್ನೊಂದೆಡೆ ಕಾಂಗ್ರೆಸ್ ಪಾಳಯದಿಂದ ಕುತೂಹಲಕಾರಿ ಸುದ್ದಿಯೊಂದು ಹೊರಬಿದ್ದಿದೆ. ಅದರ ಪ್ರಕಾರ, ಅಧಿಕಾರ ಹಸ್ತಾಂತರದ ಮಾತು ಡಿಸೆಂಬರ್ ಬದಲು ಮಾರ್ಚ್ ವೇಳೆಗೆ ಕೇಳಲಿದೆ. ಕಾರಣ? ಬಿಹಾರ ವಿಧಾನಸಭೆ ಚುನಾವಣೆ ಮುಗಿದ ತಕ್ಷಣ ಸಿಎಂ ಹುದ್ದೆ ಬಿಟ್ಟುಕೊಡಿ ಅಂತ ಸಿದ್ದರಾಮಯ್ಯ ಅವರನ್ನು ಕೇಳಲು ರಾಹುಲ್ ಗಾಂಧಿ ಸಿದ್ದರಿಲ್ಲ.

ಆದರೆ ಬಿಹಾರ ವಿಧಾನಸಭೆ ಚುನಾವಣೆಯ ನಂತರ ನಡೆಯಬಹುದಾದ ಇನ್ನೊಂದು ಬೆಳವಣಿಗೆಯ ಮೇಲೆ ರಾಹುಲ್ ಗಮನವಿದೆ. ಅದೆಂದರೆ ಎಐಸಿಸಿ ಅಧ್ಯಕ್ಷ ಪಟ್ಟದ ಮೇಲೆ ತಾವು ಇಲ್ಲವೇ ಪ್ರಿಯಾಂಕಾ ಗಾಂಧಿ ಬಂದು ಕೂರುವುದು. ಅವರ ಪ್ರಕಾರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮಿತ್ರಕೂಟ ಅಧಿಕಾರದ ಸನಿಹಕ್ಕೆ ಬರುವುದು ನಿಶ್ಚಿತ. ಒಂದು ವೇಳೆ ಗೆಲುವಿನ ಸಮೀಪಕ್ಕೆ ಬಂದು ಎಡವಿದರೂ ಒಟ್ಟಾರೆಯಾಗಿ ಕಾಂಗ್ರೆಸ್ ಮಿತ್ರಕೂಟದ ಸಾಧನೆ ದೇಶದ ಗಮನ ಸೆಳೆಯುವಂತೆ ಇರಲಿದೆ. ಹಾಗಾದಾಗ ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಚೈತನ್ಯ ತುಂಬಲು ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಪ್ರಿಯಾಂಕಾ ಗಾಂಧಿ ಇಲ್ಲವೇ ತಾವು ಬಂದು ಕೂರುವುದು ರಾಹುಲ್ ಲೆಕ್ಕಾಚಾರ.

ಆದರೆ ಈ ಲೆಕ್ಕಾಚಾರಕ್ಕಿರುವ ಒಂದು ಅಡ್ಡಿ ಎಂದರೆ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ. ಇವತ್ತಿನ ಸ್ಥಿತಿಯಲ್ಲಿ ಖರ್ಗೆಯವರ ಅಧ್ಯಕ್ಷಾವಧಿ ಇನ್ನೂ ಒಂದು ವರ್ಷ ಬಾಕಿ ಇದೆ. ಹೀಗೆ ಅಧ್ಯಕ್ಷ ಅವಧಿ ಬಾಕಿ ಇರುವಾಗಲೇ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೆಳಗಿಳಿಸುವುದು ಕಷ್ಟ. ಕಾರಣ? ಅವರನ್ನು ದಿಢೀರನೆ ಕೆಳಗಿಳಿಸಿ ತಾವೋ, ಪ್ರಿಯಾಂಕಾ ಗಾಂಧಿಯೋ ಬಂದು ಕುಳಿತರೆ ಅದರಿಂದ ವ್ಯತಿರಿಕ್ತ ಸಂದೇಶ ರವಾನೆಯಾಗುತ್ತದೆ. ಅರ್ಥಾತ್, ಅವಧಿಗೂ ಮುನ್ನ ಮಲ್ಲಿಕಾರ್ಜುನ ಖರ್ಗೆಯವರನ್ನು ಕೆಳಗಿಳಿಸಿದರೆ ಪಕ್ಷಕ್ಕೆ ದಲಿತ ವಿರೋಧಿ ಹಣೆಪಟ್ಟಿ ತಗಲುತ್ತದೆ.

ಹಾಗಾಗಬಾರದು ಎಂದರೆ ಖರ್ಗೆಯವರನ್ನು ಇಳಿಸುವ ಕಾಲಕ್ಕೆ ಪರ್ಯಾಯ ಜಾಗವೊಂದನ್ನು ಅವರಿಗಾಗಿ ಸೃಷ್ಟಿಸಬೇಕು. ಸದ್ಯದ ಸ್ಥಿತಿಯಲ್ಲಿ ಖರ್ಗೆಯವರಿಗಾಗಿ ಸೃಷ್ಟಿಸಬಹುದಾದ ಏಕೈಕ ಜಾಗವೆಂದರೆ ಮುಖ್ಯಮಂತ್ರಿ ಹುದ್ದೆ. ಆದರೆ ಅದನ್ನು ಖರ್ಗೆಯವರಿಗಾಗಿ ತೋರಿಸಬೇಕು ಎಂದರೆ ಸಿದ್ದರಾಮಯ್ಯ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಆದರೆ ಹೀಗೆ ಸಿದ್ದರಾಮಯ್ಯ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವಾಗ ರಾಷ್ಟ್ರ ರಾಜಕಾರಣದಲ್ಲಿ ಕಾಂಗ್ರೆಸ್ ಪಕ್ಷಕ್ಕಿರುವ ಅನಿವಾರ್ಯತೆಯನ್ನು ಅವರಿಗೆ ವಿವರಿಸಬೇಕು.

ಯಾಕೆಂದರೆ ಗಾಂಧಿ ಕುಟುಂಬದವರು ಪಕ್ಷದ ಸಾರಥ್ಯ ವಹಿಸದೆ ಹೋದರೆ ಮುಂದಿನ ದಿನಗಳಲ್ಲಿ ದಿಲ್ಲಿ ಗದ್ದುಗೆಯ ಮೇಲೆ ಕಣ್ಣಿಡುವುದು ಕಷ್ಟ ಅಂತ ಸ್ವತಃ ಸಿದ್ದರಾಮಯ್ಯ ಅವರಿಗೂ ಗೊತ್ತಿದೆ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಿಗಾಗಿ ಜಾಗ ಬಿಟ್ಟುಕೊಡುವಂತೆ ಕೇಳಿಕೊಂಡರೆ ಸಿದ್ದರಾಮಯ್ಯ ತುಂಬ ವಿರೋಧ ವ್ಯಕ್ತ ಮಾಡಲಾರರು. ಎಷ್ಟೇ ಆದರೂ ಕರ್ನಾಟಕದಲ್ಲಿ ತಮ್ಮ ದಾರಿ ಸುಗಮವಾಗಿರಲು ಖರ್ಗೆ ತ್ಯಾಗ ಮಾಡಿದ್ದಾರೆ ಮತ್ತು ಇದೇ ಕಾರಣಕ್ಕೆ ತಮ್ಮ ಮೇಲೆ ಒಂದು ಅಪವಾದ ಕುಳಿತಿದೆ. ಇದನ್ನು ತೊಡೆದುಹಾಕಲು ಖರ್ಗೆಯವರಿಗಾಗಿ ತಾವು ತ್ಯಾಗ ಮಾಡಬೇಕು ಎಂಬ ಭಾವನೆ ಸಿದ್ದರಾಮಯ್ಯ ಅವರಿಗೆ ಬರಬಹುದು.

ಎಷ್ಟೇ ಆದರೂ ಕರ್ನಾಟಕದಲ್ಲಿ ಶುರುವಾಗಿರುವ ದಲಿತ ಸಿಎಂ ಕೂಗಿಗೆ ಸಿದ್ದರಾಮಯ್ಯ ಅವರ ಪರೋಕ್ಷ ಬೆಂಬಲ ಇದ್ದೇ ಇದೆ. ಇವತ್ತು ಡಿಕೆಶಿ ಅವರಿಗಾಗಿ ತ್ಯಾಗ ಮಾಡಿ ಎಂದರೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಹೆಸರು ಎದ್ದು ನಿಲ್ಲುತ್ತದೆ. ಆದರೆ ಅದನ್ನು ಮಾಡುವ ಬದಲು ಖರ್ಗೆಯವರಿಗಾಗಿ ತ್ಯಾಗ ಮಾಡಿ ಎಂದರೆ ಸಿದ್ದರಾಮಯ್ಯ ಅವರು ಸಹಕಾರ ನೀಡುತ್ತಾರೆ ಎಂಬುದು ರಾಹುಲ್ ಗಾಂಧಿ ಲೆಕ್ಕಾಚಾರ.

ಹೀಗಾಗಿ ಈ ಲೆಕ್ಕಾಚಾರಕ್ಕೆ ಡಿಸೆಂಬರ್ ಬದಲು ಮಾರ್ಚ್ ಸೂಟಬಲ್ಲು ಎಂಬುದು ಅವರ ಯೋಚನೆ.

ಮರೆಯಲಾಗದ ಮಹಾಚೇತನ: ಅನಂತ್ ಕುಮಾರ್

ಅನಂತ್ ಕುಮಾರ್ ಕೇಂದ್ರದ ಮಂತ್ರಿಯಾಗಿ 9 ವಿವಿಧ ಖಾತೆಗಳನ್ನು ನಿಭಾಯಿಸಿ, ಅಚ್ಚಳಿಯದ ಹೆಜ್ಜೆಗುರುತುಗಳನ್ನು ಮೂಡಿಸಿದರು. ಇವತ್ತು ಕರ್ನಾಟಕ ಹಾಗೂ ಬೆಂಗಳೂರು ದೇಶದ ಟೆಕ್ ರಾಜಧಾನಿಯಾಗಲು ಅವರು ನೀಡಿದ ಕೊಡುಗೆಗಳು ಕಾರಣವಾಗಿವೆ.

ಅನಂತ ಸ್ಮರಣೆ
ಜಿ.ಎಂ. ಇನಾಂದಾರ್
vveditoped@gmail.com

ಅನಂತ್ ಕುಮಾರ್ ಈ ದೇಶ ಕಂಡ ವಿಶಿಷ್ಟ ರಾಜಕಾರಣಿ, ನೇತಾರ, ಮುತ್ಸದ್ದಿ. ಇಂದು (ಸೆ.22) ಅವರ ಜನ್ಮದಿನ. ಇದರ ಆಚರಣೆಯು ಬೆಂಗಳೂರಿನ 'ಅದಮ್ಯ ಚೇತನ' ಸಂಸ್ಥೆಯ ಎದುರಿಗೆ ಇರುವ ದೋಂಡುಸಾ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಅವರ ವ್ಯಕ್ತಿತ್ವದ ಕೆಲವು ಝಲಕ್‌ಗಳನ್ನು ಇಲ್ಲಿ ಅವಲೋಕಿಸೋಣ.

ಅನಂತ್ ಕುಮಾರ್ ಅತ್ಯಂತ ಸಾಮಾನ್ಯ ಕುಟುಂಬದಿಂದ ರಾಜಕಾರಣಕ್ಕೆ ಕಾಲಿಟ್ಟು ಯಶಸ್ವಿಯಾದ ರಾಜಕಾರಣಿ. ಬೇರುಮಟ್ಟದಿಂದಲೇ ದಕ್ಕಿದ ದಟ್ಟ ಜೀವನಾನುಭವವು ಅವರ ಯಶಸ್ಸಿಗೆ ಕಾರಣ ಎಂದರೆ ಅತಿಶಯೋಕ್ತಿಯಲ್ಲ. ಅನಂತ್ ಕುಮಾರ್, ಆರೆಸ್ಸೆಸ್ ಹಾಗೂ ಎಬಿವಿಪಿ ಗರಡಿಗಳಲ್ಲಿ ತಯಾರಾದ ಕಾರ್ಯಕರ್ತ. ಹಾಗಾಗಿ ಅವರು ಅನೇಕ ಸಂದರ್ಭಗಳಲ್ಲಿ ಪ್ರತಿಕ್ರಿಯಿಸಿದ ಪರಿ ಉಳಿದ ರಾಜಕಾರಣಿಗಳಿಗಿಂತ ಭಿನ್ನ.

ಅನಂತ್ ಕುಮಾರ್ ಬಿಜೆಪಿಯನ್ನು ಪ್ರವೇಶಿಸಿದ್ದು 1987ರಲ್ಲಿ. ಅದಾದ ನಂತರ ಪ್ರತಿ ಚುನಾವಣೆಯಲ್ಲಿ ಟಿಕೆಟ್ ನೀಡುವಾಗ ಮಹತ್ವದ ಪಾತ್ರ ವಹಿಸುತ್ತಿದ್ದ ಅವರು, ತಮಗೆಂದೂ ಟಿಕೆಟ್ ಕೊಟ್ಟುಕೊಂಡಿರಲಿಲ್ಲ. ಆದರೆ 1996ರ ಲೋಕಸಭೆ ಚುನಾವಣೆಗೆ ಅವರಿಗೆ ಟಿಕೆಟ್ ಘೋಷಣೆಯಾದಾಗ ಅದು ಅವರಿಗೆ ಅನಿರೀಕ್ಷಿತವೇ ಆಗಿತ್ತು. ಆಗಷ್ಟೇ ತಮ್ಮ ತಾಯಿ ಗಿರಿಜಾ ಶಾಸ್ತ್ರಿಯವರ ನಿಧನದ ನಂತರದ ಕಾರ್ಯಗಳಲ್ಲಿ ಅನಂತ್ ಕುಮಾರ್ ವ್ಯಸ್ತರಾಗಿದ್ದರು. ಅವರ ತಾಯಿಯ ವೈಕುಂಠ ಸಮಾರಾಧನೆಗೆ ಬಂದ ಬಿಜೆಪಿಯ ಎಲ್ಲಾ ನಾಯಕರು, ಅನಂತ್ ಕುಮಾರ್ ಅವರು ಚುನಾವಣೆಗೆ ನಿಲ್ಲುವ ಕುರಿತು ಸರ್ವಾನುಮತದಿಂದ ಘೋಷಣೆ ಮಾಡಿದರು. ಆ ಚುನಾವಣೆಯಲ್ಲಿನ ಗೆಲುವಿನ ನಂತರ ಅನಂತ್ ಕುಮಾರ್ ಸೋತಿದ್ದೇ ಇಲ್ಲ. ಟಿಕೆಟ್‌ಗಾಗಿ ದಿನ ಬೆಳಗಾದರೆ ಜಗಳ ನಡೆಯುವ ಈ ಕಾಲದಲ್ಲಿ, 18 ವರ್ಷಗಳಷ್ಟು ಸುದೀರ್ಘ ಕಾಲ ಟಿಕೆಟ್‌ಗಾಗಿ ಆಶಿಸದೆ ಅವರು ಸಂಘಟನೆಯ ಕೆಲಸದಲ್ಲಿ ಸಕ್ರಿಯರಾಗಿದ್ದು ಅಪರೂಪವೇ ಸರಿ.

ಅನಂತ್ ಕುಮಾರ್ ಕೇಂದ್ರದ ಮಂತ್ರಿಯಾಗಿ 9 ವಿವಿಧ ಖಾತೆಗಳನ್ನು ನಿಭಾಯಿಸಿದರು, ಪ್ರತಿಯೊಂದು ಖಾತೆಯಲ್ಲೂ ಅಚ್ಚಳಿಯದ ಹೆಜ್ಜೆಗುರುತುಗಳನ್ನು ಮೂಡಿಸಿದರು. ದೇಶಕ್ಕೆ ಮತ್ತು ಕರ್ನಾಟಕಕ್ಕೆ ಅವರು ನೀಡಿದ ಕೊಡುಗೆಗಳು ತುಂಬಾ ಮಹತ್ವದ್ದಾಗಿವೆ. ಇವತ್ತು ಕರ್ನಾಟಕ ಹಾಗೂ ಬೆಂಗಳೂರು ದೇಶದ ಟೆಕ್ ರಾಜಧಾನಿಯಾಗಲು ಇಲ್ಲಿಯ ಮೂರು ಪ್ರಮುಖ ಮೂಲಸೌಕರ್ಯಗಳು ಕಾರಣವಾಗಿವೆ. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು ಮೆಟ್ರೋ ಹಾಗೂ ಸುವರ್ಣ ಚತುಷ್ಪಥ ಹೆದ್ದಾರಿ ಈ ಮೂರು ಮೂಲಸೌಕರ್ಯಗಳಿಗೆ ಅಡಿಪಾಯ ಹಾಕಿದ್ದು ಅನಂತ್ ಕುಮಾರ್ ಅವರೇ ಎನ್ನುವುದು ವಿಶೇಷ.

ಅನಂತ್ ಕುಮಾರ್ ಮಂತ್ರಿಯಾದ ತಕ್ಷಣ ತಮ್ಮ ಗೆಳೆಯರಾದ ಡಾ.ವಾಮನಾಚಾರ್ಯ, ವೈ.ಬಿ.ರಾಮಕೃಷ್ಣ, ಎಂ.ಪಿ.ಕುಮಾರ್, ಎಂ.ಎಚ್.ಶ್ರೀಧರ್ ಮುಂತಾದವರ ಎದುರು, ದೇಶದ ಪ್ರಗತಿಗೆ ಕಾರಣವಾಗಬಹುದಾದ ಯೋಜನೆಗಳ ಬಗೆಗೆ ಚಿಂತನ-ಮಂಥನ ನಡೆಸಿದರು. ದೇಶದ ಪ್ರಮುಖ ನಗರಗಳನ್ನು ಜೋಡಿಸುವ ಹೆದ್ದಾರಿಯ ನಿರ್ಮಾಣದ ಜತೆಗೆ, ಗ್ರಾಮೀಣ ಪ್ರದೇಶಗಳನ್ನು ಈ ಜಾಲಕ್ಕೆ ಜೋಡಿಸುವ ಅವಶ್ಯಕತೆ ಇರುವುದೂ ಆ ಚರ್ಚೆಯ ವೇಳೆ ತಿಳಿದುಬಂತು. ಈ ಕುರಿತು ಒಂದು 'ಪವರ್ ಪಾಯಿಂಟ್ ಪ್ರೆಸೆಂಟೇಷನ್' ಅನ್ನು ವೈ.ಬಿ. ರಾಮಕೃಷ್ಣ ಸಿದ್ಧಪಡಿಸಿಕೊಟ್ಟರು. ಆಗ ಸುವರ್ಣ ಚತುಷ್ಪಥ ಹೆದ್ದಾರಿ ಸಮಿತಿಯ ನೇತೃತ್ವ ವಹಿಸಿದ್ದವರು ಜಸ್ವಂತ್ ಸಿಂಗ್. ಈ ಸಮಿತಿಯಲ್ಲಿ ಅನಂತ್ ಕುಮಾರ್ ಕೂಡ ಸದಸ್ಯರಾಗಿದ್ದರು.

ಮುಂಚಿನ ಯೋಜನೆಯಲ್ಲಿ ಉತ್ತರದಿಂದ ದಕ್ಷಿಣಕ್ಕೆ ಹಾಗೂ ಪೂರ್ವದಿಂದ ಪಶ್ಚಿಮಕ್ಕೆ ಶಿಲುಬೆ ಆಕಾರದ ಯೋಜನೆಯ ಕರಡು ರೂಪುಗೊಂಡಿತ್ತು. ಇದರ ನೆರಳು ಕೂಡ ಕರ್ನಾಟಕದ ಮೇಲೆ ಬೀಳುತ್ತಿರಲಿಲ್ಲ. ಇದರ ಬದಲು ನಾಲ್ಕು ದಿಕ್ಕುಗಳನ್ನು ಆಯತಾಕಾರದಲ್ಲಿ ಬೆಸೆಯುವ ಸುವರ್ಣ ಚತುಷ್ಪಥ ಹೆದ್ದಾರಿ ಹೆಚ್ಚು ಉಪಯುಕ್ತವೆಂದು ಅನಂತ್ ಕುಮಾರ್ ವಾದಿಸಿ, ಜಸ್ವಂತ್ ಸಿಂಗರ ಮನವೊಲಿಸುವಲ್ಲಿ ಯಶಸ್ವಿಯಾದರು. ಹೀಗೆ ನಿರ್ಮಾಣವಾದ ಸುವರ್ಣ ಚತುಷ್ಪಥ ಹೆದ್ದಾರಿಯು ಕರ್ನಾಟಕದಲ್ಲಿ 706 ಕಿಲೋಮೀಟರ್ ಕ್ರಮಿಸಿ, ಕರ್ನಾಟಕದ ಪ್ರಗತಿಗೆ ಕಾರಣವಾಗಿದೆ.

ಅನಂತ್ ಕುಮಾರ್ ಕೇಂದ್ರ ವಿಮಾನಯಾನ ಖಾತೆ ಸಚಿವರಾಗಿದ್ದಾಗ, ಆಗಿನ ಮುಖ್ಯಮಂತ್ರಿಗಳಾದ ಜೆ.ಎಚ್.ಪಟೇಲರ ಜತೆಗಿನ M.O.U. ಬೆಂಗಳೂರಿನ ಹೊಸ ವಿಮಾನ ನಿಲ್ದಾಣಕ್ಕೆ ಅಡಿಗಲ್ಲಾಯಿತು. ಈ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿಡಲು ಕೂಡ ಅವರೇ ಕಾರಣ. 2001ರಲ್ಲಿ ಅನಂತ್ ಕುಮಾರ್ ನಗರಾಭಿವೃದ್ಧಿ ಸಚಿವರಾಗಿದ್ದಾಗ, ಬೆಂಗಳೂರಿನಂಥ ಬೆಳೆಯುತ್ತಿರುವ ನಗರಕ್ಕೆ ಮೆಟ್ರೋ ಸಾರಿಗೆ ತುಂಬಾ ಅವಶ್ಯಕ ಎಂಬುದು ಅವರಿಗಾಗಲೇ ಮನವರಿಕೆಯಾಗಿತ್ತು. ಬೆನ್ನು ಬಿಡದ ತ್ರಿವಿಕ್ರಮನಂತೆ ಮೆಟ್ರೋ ಹಿಂದೆ ಬಿದ್ದ ಅನಂತ್ ಕುಮಾರ್, ಯೋಜನಾ ಆಯೋಗದ ಅನುಮತಿ ಸಿಗುವವರೆಗೆ ವಿರಮಿಸಿರಲಿಲ್ಲ.

2001ರಲ್ಲಿ ಅನಂತ್ ಕುಮಾರ್ ಮತ್ತು ಎಸ್.ಎಂ.ಕೃಷ್ಣ (ಅಂದಿನ ಮುಖ್ಯಮಂತ್ರಿ) ಅವರಿಗೆ ವಿಧಾನಸೌಧದಲ್ಲಿ ಪ್ರಾತ್ಯಕ್ಷಿಕೆಯೊಂದನ್ನು ಕೊಡಲಾಗಿತ್ತು. ಆಗ Bangalore Mass Rapid Transit Ltd (BMRTL) ಎಂಬ ರಾಜ್ಯ ಸರಕಾರದ ಸಂಸ್ಥೆಗೆ ಬೆಂಗಳೂರಿಗೆ ಮೆಟ್ರೋವನ್ನು ಒದಗಿಸುವ ಹೊಣೆಯನ್ನು ವಹಿಸಲಾಗಿತ್ತು. ಈ ಸಂಸ್ಥೆಯು ಯು.ಬಿ.ಗ್ರೂಪ್ ಜತೆಗೆ ಒಪ್ಪಂದ ಮಾಡಿಕೊಂಡು ಬೆಂಗಳೂರಿಗೆ ಮೆಟ್ರೋವನ್ನು ತರಲು ಯೋಚಿಸುತ್ತಿತ್ತು. ಆದರೆ ಈ ಇಡೀ ಯೋಜನೆಯಲ್ಲಿ ಯು.ಬಿ.ಗ್ರೂಪ್‌ನವರು ಸೂಚಿಸಿದ್ದ ಮಾರ್ಗ ಹಾಗೂ ಪ್ರಸ್ತಾವಿತ ಪ್ರಯಾಣದರಗಳು ತುಂಬಾ ದುಬಾರಿಯಾಗಿದ್ದವು. ಅನಂತ್ ಕುಮಾರ್ ಅವರು ನಗರಾಭಿವೃದ್ಧಿ ಸಚಿವರಾದ ಮೇಲೆ ಈ ಒಪ್ಪಂದವನ್ನು ರದ್ದುಮಾಡಿದರು. ದೆಹಲಿ ಮೆಟ್ರೋದ ಪ್ರಮುಖರಾಗಿದ್ದ ಶ್ರೀಧರನ್ ಅವರ ಮುಖಾಂತರ ಬೆಂಗಳೂರಿಗೆ ಹೊಸ ಯೋಜನೆಯನ್ನೇ ಮಾಡಿಸಿದ್ದರು ಹಾಗೂ ಇದಕ್ಕೆ ರಾಜ್ಯದಿಂದ ಮತ್ತು ಕೇಂದ್ರದಿಂದ ಸಮಪ್ರಮಾಣದಲ್ಲಿ ಈಕ್ವಿಟಿ ಹೂಡಿಕೆ ಮಾಡಿಸಿ, ಉಳಿದ ಹಣವನ್ನು Japan Bank of International Co-operation- JBIC ನಿಂದ ಅತಿಕಡಿಮೆ ಬಡ್ಡಿದರದಲ್ಲಿ ದೀರ್ಘಾವಧಿಗೆ ಹೂಡಿಕೆ ಮಾಡುವುದೆಂದು ನಿರ್ಧರಿಸಲಾಯಿತು. ರಾಜ್ಯ ಸರಕಾರವು ಅದಾಗಲೇ ಬೆಂಗಳೂರಿನಲ್ಲಿ ಮಾರಾಟವಾಗುವ ಪೆಟ್ರೋಲ್ ಹಾಗೂ ಡೀಸೆಲ್ ಮೇಲೆ 'ಸೆಸ್' ವಿಧಿಸಿ ಕೂಡಿಟ್ಟಿದ್ದ ಅಂದಾಜು 700 ಕೋಟಿ ರುಪಾಯಿಗಳನ್ನು ರಾಜ್ಯದ ಪಾಲಾಗಿ ಹೂಡಿಕೆಮಾಡಲು ಯೋಚಿಸಲಾಯಿತು.

ಹೀಗೆ ನಾಡು-ನುಡಿ, ನೆಲ-ಜಲದ ಬಗ್ಗೆ ಸದಾ ತುಡಿಯುತ್ತಿದ್ದ ಒಬ್ಬ ವಿಶಿಷ್ಟ ಮುತ್ಸದ್ದಿಯಾಗಿ ಅನಂತ್ ಕುಮಾರ್ ಸದಾ ನಮ್ಮ ಮುಂದೆ ಕಾಣುತ್ತಿರುತ್ತಾರೆ. ಅನಂತ್ ಕುಮಾರ್ ನಮ್ಮನ್ನು ಅಗಲಿ 7 ವರ್ಷಗಳಾದರೂ, ಇವತ್ತಿಗೂ ಅನೇಕ ಸಂದರ್ಭಗಳಲ್ಲಿ 'ಅನಂತ್ ಕುಮಾರ್ ಅವರು ಇರಬೇಕಿತ್ತು' ಅನ್ನಿಸುವುದು ಸುಳ್ಳಲ್ಲ.

(ಲೇಖಕರು ಅನಂತ್ ಕುಮಾರ್‌ರವರ ಮಾಜಿ ವಿಶೇಷ ಕರ್ತವ್ಯಾಧಿಕಾರಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಮನಮುಟ್ಟುವ ಲೇಖನ

ಶಿಶಿರ್ ಹೆಗಡೆಯವರ 'ಅಭಿಪ್ರಾಯ ಬಯಸುವ ನಮಗೆ ಟೀಕೆ ಏಕೆ ಸಹ್ಯವಾಗುವುದಿಲ್ಲ?' ಎಂಬ ಶೀರ್ಷಿಕೆಯ ಅಂಕಣಬರಹ (ಸೆ.19) ತುಂಬಾ ಚೆನ್ನಾಗಿತ್ತು. ಹೆಚ್ಚಿನವರು ತಮ್ಮ ಕುರಿತಾದ ಟೀಕೆಗಳನ್ನು ಒಪ್ಪಿಕೊಳ್ಳುವುದಿಲ್ಲ. ಯಾರಾದರೂ ಒಳ್ಳೆಯ ಉದ್ದೇಶವಿಟ್ಟುಕೊಂಡು ನಮ್ಮ ತಪ್ಪನ್ನು ಎತ್ತಿ ತೋರಿಸಿದರೆ, ಅದನ್ನು ಸ್ವಾಗತಿಸಿ ತಪ್ಪನ್ನು ತಿದ್ದಿಕೊಳ್ಳುವುದು ವಿವೇಕ ಮತ್ತು ಜಾಣತನ ಎನಿಸಿಕೊಳ್ಳುತ್ತದೆ. ಹೀಗೆ ಮಾಡುವುದರಿಂದ ನಾವು ಮತ್ತಷ್ಟು ಬೆಳೆಯಲು ಸಾಧ್ಯ. ಆದರೆ, ಕಾಲೆಳೆಯಲು, ಹೊಟ್ಟೆ ಕಿಚ್ಚಿನಿಂದ ಮತ್ತು ದುರುದ್ದೇಶದಿಂದ ಮಾಡುವ ಟೀಕೆಗಳನ್ನು ಉದಾಸೀನ ಮಾಡಲು ಕಲಿಯಬೇಕು. 'ಹೊಗಳಿದವರೆಲ್ಲಾ ಒಳ್ಳೆಯವರು, ತೆಗಳಿದವರೆಲ್ಲಾ ಕೆಟ್ಟವರು' ಎಂಬ ಅಭಿಪ್ರಾಯಕ್ಕೆ ಒಮ್ಮೆಲೇ ಬರಬಾರದು. ಅಷ್ಟಾ'ವಕ್ರ'ನ ವೃತ್ತಾಂತವನ್ನು 'ನೇರ'ವಾಗಿ ಮನಮುಟ್ಟುವಂತೆ ಬರೆದಿದ್ದಾರೆ ಲೇಖಕರು.

ಅಂದಹಾಗೆ, ಉದ್ದೇಶಿತ ವಿಷಯದ ಬಗೆಗೆ ಬೆಳಕು ಚೆಲ್ಲಿದ ಈ ಲೇಖನ ನಿಜವಾಗಿಯೂ ಚೆನ್ನಾಗಿದೆ, 'ಟೀಕೆ' ಮಾಡುವಂಥದ್ದು ಏನೂ ಇಲ್ಲ!

- ರಾಘವೇಂದ್ರ ಜೋಯಿಸ್, ಮೈಸೂರು

ಕಾಮಾತುರಾಣಾಂ ನ ಭಯಂ...

ವಿಶ್ವವಾಣಿಯ ಸೆ. 19ರ ಸಂಪಾದಕೀಯವನ್ನು ಓದಿದಾಗ, ನನಗಾದ ಅನುಭವವೊಂದು ನೆನಪಿಗೆ ಬಂತು.

ಹಿಂದೊಮ್ಮೆ ಕಾರಿನ ಡ್ರೈವಿಂಗ್ ಕಲಿಯಲು ಆಸೆ ಪಟ್ಟ ನಾನು ಅದಕ್ಕಾಗಿ ಪ್ರತಿಷ್ಠಿತ ತರಬೇತಿ ಕೇಂದ್ರವೊಂದಕ್ಕೆ ಸೇರಿಕೊಂಡೆ. ಅಲ್ಲಿ ಒಬ್ಬರೇ ತರಬೇತುದಾರರ ಬದಲು ದಿನಕ್ಕೊಬ್ಬರಂತೆ ಬೇರೆ ಬೇರೆಯವರು ಬಂದು ಹೇಳಿಕೊಡುತ್ತಿದ್ದರು. ನಾನು ಸೇರಿಕೊಂಡ ನಾಲ್ಕನೆಯ ದಿನ ಬಂದ ತರಬೇತುದಾರನೊಬ್ಬ, 'ಮೇಡಂ, ನೀವು ಬೇಗನೆ ಡ್ರೈವಿಂಗ್ ಕಲಿಯಬೇಕೆಂದರೆ ನಾನು ಖಾಸಗಿಯಾಗಿ/ಪ್ರತ್ಯೇಕವಾಗಿ ನಿಮಗೆ ಹೇಳಿಕೊಡುತ್ತೇನೆ. ಇದು ಕಂಪನಿಗೆ ಗೊತ್ತಾಗುವುದು ಬೇಡ. ನಾನು ನಿಮಗೆ ಬೆಳಗ್ಗೆ 5.30 ಗಂಟೆಗೆ, ಇಲ್ಲವೇ ರಾತ್ರಿ 10 ಗಂಟೆಯಿಂದ ಒಂದು ಗಂಟೆಗಳ ಕಾಲ ಡ್ರೈವಿಂಗ್ ಕಲಿಸುತ್ತೇನೆ' ಎಂದ. ಅದಕ್ಕೆ ನಾನು, 'ಈ ಟೈಮಿಂಗ್ ನನಗೆ ಸೆಟ್ ಆಗುವುದಿಲ್ಲ, ಬೇಡ' ಎಂದು ಹೇಳಿದೆ. ನನ್ನ ಟ್ರೈನಿಂಗ್ ಮುಗಿದ ಎಷ್ಟೋ ದಿನದ ನಂತರ, ಪತ್ರಿಕೆಯಲ್ಲಿ ಬಂದ ಸುದ್ದಿಯಿಂದ ನನಗೆ, ಆತ ಹೀಗೆಯೇ ಬೆಳಗಿನ ಜಾವ ಐದೂವರೆ ಗಂಟೆಗೆ ಕಾರ್ ಡ್ರೈವಿಂಗ್ ಕಲಿಸುತ್ತೇನೆ ಎಂದು ಹೇಳಿ ಯಾವುದೋ ಹುಡುಗಿಯನ್ನು ಕರೆದುಕೊಂಡು ಹೋಗಿ ಅಸಭ್ಯವಾಗಿ ವರ್ತಿಸಿದ್ದಾನೆ, ಆತನ ಮೇಲೆ ಪೊಲೀಸ್ ಕಂಪ್ಲೇಟ್ ಆಗಿ ಬಂಧಿಸಲಾಗಿದೆ ಎಂದು ತಿಳಿದುಬಂತು. 'ಕಾಮಾತುರಾಣಾಂ ನ ಭಯಂ ನ ಲಜ್ಜಾ' ಎಂಬ ಮಾತು ಸಾಬೀತಾದಂತಾಯಿತು.

- ಶೈಲಜಾ ವಾಸುಕಿ, ಬೆಂಗಳೂರು

ಅಂಕಣಗಳ ಮೈಲಿಗಲ್ಲು

ತಿಳಿರು ತೋರಣ' ಅಂಕಣಕಾರ ಶ್ರೀವತ್ಸ ಜೋಶಿಯವರ ಐನೂರು ಅಂಕಣಗಳ ಸಾಧನೆ ಚಿಕ್ಕ ವಿಷಯವಲ್ಲ. ಪ್ರತಿ ವಾರವೂ ಅಂಕಣ ಬರಹದ ವಿಷಯಕ್ಕಾಗಿ ಸಿದ್ಧತೆ, ಅದಕ್ಕಾಗಿ ಓದು, ಸಂಶೋಧನೆ ಇವುಗಳೆಲ್ಲವನ್ನು ತಮ್ಮ ಉದ್ಯೋಗದ ನಡುವೆಯೇ ಜೋಶಿಯವರು ಸಾಧಿಸಿರುವುದು ಹೆಮ್ಮೆಯ ಸಂಗತಿ. ಇದು ಸಮಯದ ಸದುಯೋಗಕ್ಕೆ ಒಂದು ಉತ್ತಮ ಉದಾಹರಣೆ. ಕನ್ನಡ ಬರಹ ಮತ್ತು ಓದು ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ, ಸತತ ಐನೂರು ಅಂಕಣಗಳ ಮೈಲಿಗಲ್ಲು ಸಾಧಿಸಿದ್ದು ಗಮನ ಸೆಳೆಯುತ್ತದೆ. ಇಂಥ ಸಾಧನೆಯ ಹಿಂದೆ ಅವರ ಅವಿರತ ಪರಿಶ್ರಮವಿರುವುದು ಎದ್ದುಕಾಣುತ್ತದೆ. ವೈವಿ ಧ್ಯಮಯ ವಿಷಯಗಳ ಮಂಡನೆಗಳಿಂದ ಜೋಶಿಯ ವರು ಅಂಕಣಕ್ಕೆ ಹೊಸತನದ ಛಾಪು ಅವ್ಯಾಹತವಾಗಿ ಒದಗುವಂತೆ ಮಾಡಿದ್ದಾರೆ. ಒಂದು ನಿರ್ದಿಷ್ಟ ವರ್ಗದ ಅಭಿರುಚಿಯ ಚೌಕಟ್ಟಿಗೆ ಜೋತುಬೀಳದಿರುವುದು ಇವರ ಅಂಕಣಗಳ ವಿಶೇಷತೆ. ಒಬ್ಬ ಸಂಪಾದಕನಿಗೆ, ಅಂಕಣಕಾರನಿಂದ ಏನು ನಿರೀಕ್ಷೆಗಳು ಇರುತ್ತವೋ, ಅವೆಲ್ಲವನ್ನೂ ಜೋಶಿಯವರು ಸಮರ್ಥವಾಗಿ ಪೂರೈಸಿರುವುದಕ್ಕೆ ಅವರ ಈ ನಿರಂತರತೆಯೇ ಸಾಕ್ಷಿ. ಓದುಗರ ಜತೆಗಿನ ಇವರ ನಿರಂತರ ಸಂವಹನವು, ಅರ್ಥಗರ್ಭಿತ ವಿಚಾರ ವಿನಿಮಯಕ್ಕೆ ದಾರಿಯಾಗಿದೆ. ಅಂಕಣ ಬರಹದ ಜತೆಗೆ, ಸ್ವಚ್ಛ ಭಾಷಾ ಅಭಿಯಾನ, ಹೊಸ ಪದಗಳ ಕಟ್ಟುವಿಕೆ ಹೀಗೆ ಅನೇಕ ರೀತಿಯಿಂದ ಇವರು ಕನ್ನಡ ಭಾಷೆಗೆ ಸೇವೆ ಸಲ್ಲಿಸುತ್ತಿದ್ದಾರೆ. ಓದುಗರು ಮತ್ತು ಬರಹಗಾ ರರು ಈ ಇಬ್ಬರಿಗೂ ಜೋಶಿಯವರು ಅನುಕರಣೀಯರು. ಇವರ ಅಂಕಣ ಬರಹದ ಸುಂದರ ಪಯಣವು ಹೀಗೇ ಮುಂದುವರಿಯಲಿ, ಸಾವಿರ ಕಂತುಗಳ ಮೈಲಿಗಲ್ಲು ಅವರದಾಗಲಿ ಎಂದು ಹಾರೈಸುವೆ.

- ವಿದ್ಯಾಶಂಕರ ಶರ್ಮ, ಬೆಂಗಳೂರು

ಹೊಸದಾಗಿ ಕಂಡಿತು

ಇಸ್ರೇಲಿನಲ್ಲಿ ಹಣದಂತೆ ನೀರನ್ನೂ ಆಡಿಟ್ ಮಾಡುತ್ತಾರೆ ಎಂಬ ಸಂಗತಿಯನ್ನು ಒಳಗೊಂಡಿದ್ದ 'ಇದೇ ಅಂತರಂಗ ಸುದ್ದಿ' ಅಂಕಣಬರಹ (ಸೆ.21) ಹೊಸದಾಗಿ ಕಂಡಿತು. ಸಾಮಾನ್ಯವಾಗಿ, ಯಾವ ವಸ್ತು ವಿರಳವೋ ಅಥವಾ ಗಳಿಸಲು ಕಷ್ಟವೋ, ಅದನ್ನು ಬಳಕೆ ಮಾಡುವಾಗ ಬಹಳ ಕಾಳಜಿ ವಹಿಸುವುದು ಸಹಜ. ಈ ದೃಷ್ಟಿಯಲ್ಲಿ, 'ಆಡಿಟ್' ಪದಬಳಕೆ ಕೇವಲ ಹಣಕ್ಕಷ್ಟೇ ಸೀಮಿತ ಅಂತ ನಾವು ತಿಳಿದಿದ್ದೇವೆ. ಆದರೆ ಇಸ್ರೇಲಿನಲ್ಲಿ ನೀರಿನ ಬಳಕೆಯ ವಿಷಯದಲ್ಲೂ ಈ ಪದಬಳಕೆ ಇದೆ ಎಂಬುದು ಹೊಸ ವಿಚಾರವೇ ಸರಿ.

ಇನ್ನು, ಯಾವುದೇ ಸಂಘ-ಸಂಸ್ಥೆಗಳಲ್ಲಿ ಹಣದ ವ್ಯವಹಾರ ಸರಿಯಾಗಿ, ಪಾರದರ್ಶಕವಾಗಿ ಸಾಗುತ್ತಿದೆಯೇ ಎಂಬುದನ್ನು ಅರಿತು, ಅನವಶ್ಯಕ ಖರ್ಚುಗಳಾಗಿದ್ದರೆ ಅವುಗಳನ್ನು ಸರಿಪಡಿಸಿಕೊಳ್ಳಲೂ ಈ ಆಡಿಟ್ ಬೇಕೇ ಬೇಕು. ಗಳಿಸಿದ್ದನ್ನು ಉಳಿಸಿಕೊಳ್ಳಲೂ ಆಡಿಟ್ ಬೇಕು, ಅದು ಒಬ್ಬರ ವೈಯಕ್ತಿಕ ಬದುಕಿನಲ್ಲೂ ಇರಬೇಕು. ನಮಗೆ ನಾವೇ ಆಡಿಟ್ ಮಾಡಿಕೊಳ್ಳಬೇಕು. A penny saved is a penny earned ಅಂತ ಹೇಳುವುದೂ ಇದಕ್ಕಾಗಿಯೇ. 'ಒಂದೊಮ್ಮೆ ಗಳಿಸಲಾಗದಿದ್ದರೂ, ಇರುವುದನ್ನಾದರೂ ಉಳಿಸಿಕೋ' ಅಂತಲೂ ಹಿರಿಯರು ಹೇಳುವುದನ್ನೂ ಕೇಳಿರಬಹುದು. ಹಣವನ್ನಾದರೂ ಗಳಿಸಬಹುದು, ಆದರೆ ನೀರನ್ನು ಗಳಿಸಲು ಸಾಧ್ಯವೇ ಇಲ್ಲ. ಹೀಗಾಗಿ ಅದಕ್ಕಿರುವ ಒಂದೇ ಮಾರ್ಗವೆಂದರೆ, ಇದ್ದ ನೀರನ್ನು ಉಳಿಸುತ್ತಾ ಬರುವುದು...

- ಶಂಕರನಾರಾಯಣ ಭಟ್, ಮಾಡಗೇರಿ

ಐನೂರು ಸಾವಿರವಾಗಲಿ

ಶ್ರೀವತ್ಸ ಜೋಶಿ ಅವರ 'ತಿಳಿರು ತೋರಣ' ಅಂಕಣ ಬರಹವು ಐನೂರರ ಮೈಲಿಗಲ್ಲು ತಲುಪಿ ದಾಖಲೆ ಬರೆದಿರುವುದು ಸಂತಸದ ಸಂಗತಿ. ವೈವಿಧ್ಯಮಯ ಹೂರಣವನ್ನು ಒಳಗೊಂಡ ವಿಚಾರಪೂರ್ಣ ಹಾಗೂ ಮಾಹಿತಿಪೂರ್ಣ ಲೇಖನಗಳ ಈ ಅಂಕಣ ಓದುಗರ ಮನವನ್ನು ಗೆದ್ದಿದೆ. ಈ ಅಂಕಣಬರಹ ಮಾತ್ರವಲ್ಲದೆ, ಇತರ ಅನೇಕ ಚಟುವಟಿಕೆಗಳಲ್ಲೂ ಶ್ರೀವತ್ಸ ಜೋಶಿಯವರು ಸಕ್ರಿಯರಾಗಿದ್ದಾರೆ. ಅವರು ಓದುಗರ ಪ್ರತಿಕ್ರಿಯೆಗಳಿಗೆ ಕ್ಷಿಪ್ರವಾಗಿ ಸ್ಪಂದಿಸುತ್ತಾರೆ, ಸಂದೇಹಗಳಿಗೆ ಸಮಾಧಾನ ನೀಡುತ್ತಾರೆ. ಅಗತ್ಯವಿದ್ದಲ್ಲಿ ಪೂರಕ ಮಾಹಿತಿಗಳನ್ನು ಒದಗಿಸುತ್ತಾರೆ. ತನ್ಮೂಲಕ ಅವರು ಅಸಂಖ್ಯ ಓದುಗರೊಡನೆ ನಿಕಟ ಬಾಂಧವ್ಯವನ್ನು ಬೆಸೆದುಕೊಂಡಿದ್ದಾರೆ. ತಮ್ಮ ವೃತ್ತಿಯ ಜತೆಜತೆಗೆ ಈ ಎಲ್ಲಾ ಪ್ರವೃತ್ತಿಗಳನ್ನೂ ಸರಾಗವಾಗಿ ಸಾಗಿಸಿಕೊಂಡು ಬರುತ್ತಿರುವ ಶ್ರೀವತ್ಸ ಜೋಶಿಯವರ ಸಮಯ ನಿರ್ವಹಣೆಯ ಸಾಮರ್ಥ್ಯ ವಿಸ್ಮಯವನ್ನು ಮೂಡಿಸುತ್ತದೆ. ಈಗ ಐನೂರು ತಲುಪಿರುವ ಅವರ ಅಂಕಣಬರಹ ಸಾವಿರವಾಗಲಿ. ಅವುಗಳಿಂದ ಓದುಗರ ಅರಿವಿನ ಪರಿಧಿ ಮತ್ತಷ್ಟು ವಿಸ್ತರಿಸಲಿ.

- ಮಂಜುನಾಥ ಡಿ.ಎಸ್., ಬೆಂಗಳೂರು

ಭಟ್ಟರ್ ಸ್ಕಾಚ್

- **ಗಿಡಗೋಪಾಲ, ಶ್ರೀರಂಗಪಟ್ಟಣ**
  ಭಟ್ರೇ, ಶುದ್ಧ ಕನ್ನಡ ಮಣ್ಣಿನ ಸೊಗಡಿನ ದೇಸೀ ಬೈಗುಳ 'ಬಡ್ಡಿ ಮಕ್ಳಾ' ಪದ ಬಳಕೆ ಸ್ಫೂರ್ತಿ ಯಾರಿಂದ ಸಿಕ್ತು?
  – **ಬಡ್ಡಿ (buddy) ಎನ್ನುತ್ತಿದ್ದ ಇಂಗ್ಲಿಷರ ಪ್ರಭಾವ ಇರಬಹುದಾ!?**

- **ಪೂರ್ಣಯ್ಯ, ಮೈಸೂರು**
  ಭಟ್ರೇ, 'ದೂರ ದೂರ ಅಲ್ಲೇ ಇರಿ ನನ್ನ ದೇವರೇ' ಎಂದು ಏಕಾಂತದಲ್ಲಿ ನುಡಿವ ಮಡದಿ ವರ್ತನೆಯಲ್ಲಿ ಬದಲಾದರೆ ಏನೆಂದು ಹಾಡಬಹುದು?
  – **'ನೀ ಇದ್ದರೇನು ಹತ್ತಿರ ಎಷ್ಟೊಂದು ನಡುವೆ ಅಂತರ.... ಅಂತ!**

- **ಎಸ್.ರಾಘವೇಂದ್ರ, (ಇಮೇಲ್ ಮೂಲಕ)**
  ವಿಶ್ವವಾಣಿ ಭಟ್ಟರ ತಮ್ಮ ಇ-ಮೇಲ್ ಐಡಿ ಅನ್ನು ಮೋಡದ ಮರೆಯಲ್ಲಿ ಮರೆಮಾಡಿಕೊಳ್ಳಲು ಪಡೆದುಕೊಂಡ ಸ್ಫೂರ್ತಿ ಯಾವುದು?
  – **ಚಿ.ಉದಯಶಂಕರರ ಹಾಡಿನ ಸಾಲು.. 'ಮೋಡದ ಮರೆಯ ಚಂದಿರ ಚಂದ, ಸೆರಗಿನ ಮರೆಯ ಚೆಲುವೇ ಅಂದ...'!**

- **ರಘು, ಹಾಸನ**
  ಭಟ್ರೇ, ಜಗದ್ಗುರುಗಳಲ್ಲಿ ಜಾತಿ ಹುಟ್ಟಾಟದಲ್ಲಿ ಬಿದ್ದಿದ್ದಾರಲ್ಲ?
  – **ಹೂಂ... ಅವರನ್ನು 'ಜಗದ್ಗುರುಗಳು' ಎನ್ನುವ ಬದಲು 'ಜಾತಿಗುರುಗಳು' ಎಂದು ಕರೆಯುವುದೇ ವಾಸಿ!**

- **ವಿಠೋಬ ಸಿಂಹಿ, ಹುಬ್ಬಳ್ಳಿ**
  ಭಟ್ರೇ, ಕುಮಾರಣ್ಣ-ಡಿಕೆಶಿ ಹೇಕ್ ಹ್ಯಾಂಡ್ ಮಾಡಿಕೊಂಡರಂತೆ?
  – **ಆದರೆ ಒಬ್ಬರಿಗೊಬ್ಬರು ಕಣ್ಣಲ್ಲಿ ಕಣ್ಣಿಟ್ಟು ನೋಡಲಿಲ್ಲವಂತೆ!**

- **ಸತ್ಯ, (ಇಮೇಲ್ ಮೂಲಕ)**
  ಭಟ್ರೇ, ಗಂಡಸೂ ಅಲ್ಲ, ಹೆಂಗಸೂ ಅಲ್ಲ, ಹಾಗಾದರೆ ನಾನ್ಯಾರು ಅಂತ ಕೇಳ್ತಾನಲ್ಲ?
  – **ಹಾಗಾದರೆ ಅವನು 'ನಾನು ಗೌರಿ'!**

- **ದಿವಾಕರ ಕೆಂಗೇರಿ, ಬೆಂಗಳೂರು**
  ಭಟ್ರೇ, ಪ್ರೀತಿಯಲ್ಲಿ ಏನು ಮಾಡಿದರೂ ಓಕೆನಾ?
  – **ಅದಕ್ಕಾಗಿಯೇ ಕೆಲವರು ಮಾಡುವಾರದ್ದನ್ನು ಮಾಡ್ತಾರೆ!**

- **ಸಿದ್ದೇಶ ಆರಸೀಕೆರೆ, (ಇಮೇಲ್ ಮೂಲಕ)**
  ಭಟ್ರೇ, ಹುಡುಗಿಯರು ಚುಂಬಿಸುವಾಗ ಕಣ್ಣು ಮುಚ್ಚುತ್ತಾರಲ್ಲ?
  – **ಕಟ್ಟಿದ್ದನ್ನು ನೋಡಬಾರದು ಎಂದು ಬಾಲ್ಯದಲ್ಲಿ ಕೇಳಿರುತ್ತಾರಲ್ಲ!**

ಇವರು ಎಂಥಾ ಲಾಂ(ಗಲೀ)ಜು ಜನ...!!?

ನಮ್ಮಲ್ಲಿ ಒಂದು ವರ್ಗದ ಜನರಿದ್ದಾರೆ. ಅವರು ಯಾವುದೋ ಬ್ಯಾಂಕಿನಿಂದ ಕ್ರೆಡಿಟ್ ಕಾರ್ಡ್ ಪಡೆದುಕೊಂಡರು ಅಂದುಕೊಳ್ಳಿ, ವಿಮಾನ ಪ್ರಯಾಣ ಮಾಡುವಾಗ ಲಾಂಜಿನ ಪ್ರವೇಶದ್ವಾರದ ಬಳಿ ಹೋಗಿ ಕಾರ್ಡನ್ನು ತೆಗೆದು ಇಡುತ್ತಾರೆ. ಅಲ್ಲಿಯ ಉದ್ಯೋಗಿ 'ಈ ಕಾರ್ಡ್ ನಡೆಯುವುದಿಲ್ಲ, ಲಾಂಜ್ ಒಳಗೆ ಹೋಗಬಹುದು, ಆದರೆ ಹತ್ತೋ ಇಪ್ಪತ್ತೋ ಡಾಲರ್ ಕೊಡಬೇಕಾಗುತ್ತದೆ' ಎಂದಾಗ ವಾದಕ್ಕಿಳಿಯುತ್ತಾರೆ.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೇನ್
dhyapaa@gmail.com

ಇಲ್ಲಪ್ಪ ಇಲ್ಲ, ಸಾಧ್ಯವೇ ಇಲ್ಲ. ಇಂಥ ಜನರನ್ನು ಸಹಿಸಿಕೊಳ್ಳುವುದು ಮಾತ್ರ ಸಾಧ್ಯವಿಲ್ಲ. ಇವರೇನು ತಿಳಿದು ಮಾಡುತ್ತಾರೋ ಅಥವಾ ತಿಳಿಯದೆ ಮಾಡುತ್ತಾರೋ ಒಂದೂ ಅರ್ಥವಾಗುವುದಿಲ್ಲ. ಹೇಗೇ ಮಾಡಿದರೂ ಅದು ಸರಿಯಲ್ಲ. ಕಳೆದ ಇಪ್ಪತ್ತು-ಇಪ್ಪತ್ತೈದು ವರ್ಷಗಳ ಹಿಂದೆ ಹೀಗಿರಲಿಲ್ಲ. ಇದು ಇತ್ತೀಚಿಗಿನ ಟ್ರೆಂಡ್. ತಾಳ್ಮೆ, ಸಹನೆ ಶಿಸ್ತುಗಳೆಲ್ಲ ಇವರ ಡಿಕ್ಷನರಿಯಲ್ಲೇ ಇಲ್ಲ. ಅಥವಾ ಇವರೆಲ್ಲ ಬರಗಾಲ ಪ್ರದೇಶದಿಂದ ಬಂದವರು, ತೀರಾ ಬರಗೆಟ್ಟುಹೋದವರು. ನಿಜ ಹೇಳುತ್ತೇನೆ, ಭಿಕ್ಷುಕರೂ ಈ ರೀತಿ ವರ್ತಿಸುವುದಿಲ್ಲ. ನೀವು ಭಿಕ್ಷೆ ಹಾಕಿದರೆ ನಿಮ್ಮ ಎದುರಿಗೇ ನಿಂತು ತಿನ್ನುವುದಿಲ್ಲ. ಭಿಕ್ಷೆ ಪಡೆದು ಬೇರೆ ಯಾವುದೋ ಒಂದು ಜಾಗಕ್ಕೆ ಹೋಗಿ ಕುಳಿತು ತಿನ್ನುತ್ತಾರೆ. ಅದಲ್ಲದಿದ್ದರೆ ಅವರು ಮಾನಸಿಕ ಅಸ್ವಸ್ಥರೇ ಆಗಿರಬೇಕು.

ನಾನು ಈಗ ಹೇಳಲು ಹೊರಟಿರುವುದು ವಿಮಾನ ನಿಲ್ದಾಣದ ಒಳಗೆ ಇರುವ ಲಾಂಜ್ ಬಳಸುವ ಜನರ ಕುರಿತು. ಎಲ್ಲರೂ ಅಲ್ಲದಿದ್ದರೂ ಇಂಥವರ ಸಂಖ್ಯೆ ಸಾಕಷ್ಟು ಇದೆ ಎಂದೇ ಹೇಳಬಹುದು. ಒಮ್ಮೆ ಅಬು ಧಾಬಿಯ ವಿಮಾನ ನಿಲ್ದಾಣದ ಲಾಂಜಿನಲ್ಲಿ ಕುಳಿತುಕೊಂಡಿದ್ದೆ. ನೋಡಿದರೆ ಸುಮಾರು ನಲವತ್ತರಿಂದ ನಲವತ್ತೈದು ವರ್ಷದವನಂತೆ ಕಾಣುತ್ತಿದ್ದ ವ್ಯಕ್ತಿಯೊಬ್ಬ ಒಳಗೆ ಬಂದ. ಅವನೊಂದಿಗೆ ಅಂದಾಜು ಹದಿನಾಲ್ಕೋ-ಹದಿನೈದೋ ವರ್ಷದ ಒಬ್ಬ ಹುಡುಗನೂ ಬಂದಿದ್ದ. ಇಬ್ಬರೂ ನನ್ನ ಪಕ್ಕದ ಟೇಬಲ್‌ನಲ್ಲೇ ಕುಳಿತರು. ಅವರು ಧರಿಸಿದ ಉಡುಪು ನೋಡಿದರೆ, ಪಾಕಿಸ್ತಾನ ಅಥವಾ ಅಫ್ಘಾನಿಸ್ತಾನದವರಿರಬೇಕು. ತಿಂಡಿ ತಿಂದು ತಮಗೆ ಬೇಕಾದ ಜ್ಯೂಸ್ ಕುಡಿದು ಇಬ್ಬರೂ ಹೊರಗೆ ಹೋದರು. ಐದೇ ನಿಮಿಷದ ಅವಧಿಯಲ್ಲಿ ಅದೇ ವ್ಯಕ್ತಿ ಇನ್ನೊಬ್ಬ ಹತ್ತೋ-ಹನ್ನೊಂದೋ ವರ್ಷದ ಹುಡುಗನೊಂದಿಗೆ ಬಂದ. ಪುನಃ ಲಾಂಜಿನಲ್ಲಿರುವ ತಿಂಡಿ ತಿನಿಸುಗಳ ಸೇವನೆ ಆಯಿತು. ಅವನನ್ನು ಹೊರಗೆ ಬಿಟ್ಟು, ಐದೇ ನಿಮಿಷದಲ್ಲಿ ಮತ್ತೊಬ್ಬ ಹುಡುಗನೊಂದಿಗೆ ಒಳಗೆ ಬಂದ. ಈ ಬಾರಿ ಜತೆಯಲ್ಲಿ ಬಂದ ಹುಡುಗನಿಗೆ ಆರೋ-ಏಳೋ ವರ್ಷ ವಯಸ್ಸಿರಬಹುದು. ಅವನಿಗೂ ತಿಂಡಿ ತಿನ್ನಿಸಿ, ಹೊರಗಡೆ ಬಿಟ್ಟು ಮೂರೋ-ನಾಲ್ಕೋ ವರ್ಷದ ಇನ್ನೊಬ್ಬನ ಬಾಲ ಕನನ್ನು ಕರೆದುಕೊಂಡು ಬಂದ. ನಾನು ನೋಡುತ್ತಲೇ ಇದ್ದೆ. ಆದರೆ ವಿಷಯ ನನಗೆ ಅರ್ಥವಾಗುತ್ತಿರಲಿಲ್ಲ.

ಸ್ವಲ್ಪ ಹೊತ್ತಿನ ನಂತರ ಆತನನ್ನೂ ಬಿಟ್ಟು ಒಬ್ಬ ಮಹಿಳೆಯೊಂದಿಗೆ ಒಳಗೆ ಬಂದು ಕುಳಿತು ತಿಂಡಿ ತಿನ್ನುತ್ತಿರುವಾಗ ಲಾಂಜಿನ ರಿಸೆಪ್ಷನಿಸ್ಟ್ ಆತನ ಬಳಿ ಬಂದು, "ನೀವು ಎಷ್ಟು ಜನರನ್ನು ಒಳಗೆ ಕರೆದುಕೊಂಡು ಬಂದಿದ್ದೀರಾ?" ಎಂದು ಪ್ರಶ್ನಿಸಿದರು. ಮೊದಲು ಆತ ಆ ಪ್ರಶ್ನೆ ಅರ್ಥವಾಗದವನಂತೆ ನಟಿಸಿದ. ರಿಸೆಪ್ಷನಿಸ್ಟ್ ಬಿಡಲಿಲ್ಲ. ಅವನ ಭಾಷೆ ಅರ್ಥವಾಗುವ ತನ್ನ ಮೇಲಿನ ಅಧಿಕಾರಿಯನ್ನು ಕರೆದು ವಿಚಾರಿಸುವಂತೆ ಎಂದು ವಿವರಿಸಿದಳು. ಅಧಿಕಾರಿ ಅವನ ಭಾಷೆಯಲ್ಲಿ ಪ್ರಶ್ನಿಸಿದ. ಆತ, "ಇವರು ನನ್ನ ಹೆಂಡತಿ, ಮೊದಲು ನನ್ನ ಜತೆ ಬಂದು ಹೋದವರು ನನ್ನ ಮಕ್ಕಳು. ನನ್ನದೇ ಹೆಂಡತಿ-ಮಕ್ಕಳನ್ನು ಕರೆದುಕೊಂಡು ಬಂದರೆ ತಪ್ಪೇನು?" ಎಂದು ಕೇಳಿದ. ಆಗ ಲಾಂಜ್ ಅಧಿಕಾರಿ, "ನಿಮ್ಮ ಕಾರ್ಡ್ ಪ್ರಕಾರ, ಲಾಂಜಿಗೆ ಪ್ರವೇಶ ಇರುವುದು ನಿಮಗೆ ಮತ್ತು ನಿಮ್ಮ ಜತೆ ಒಬ್ಬ ಅತಿಥಿಗೆ ಮಾತ್ರ. ಆದರೆ ನೀವು ಈಗಾಗಲೇ ಐದು ಜನರನ್ನು ಕರೆದುಕೊಂಡು ಬಂದಿದ್ದೀರಿ. ಇದು ನಿಯಮದ ವಿರುದ್ಧ. ಪ್ರತಿಯೊಬ್ಬ ಹೆಚ್ಚಿನ ಅತಿಥಿಗೆ ನಾವು ಇಪ್ಪತ್ತು ಡಾಲರ್ ಚಾರ್ಜ್ ಮಾಡುತ್ತೇವೆ. ನೀವು ಎಷ್ಟು ಜನರನ್ನು ಕರೆದುಕೊಂಡು ಬಂದಿದ್ದೀರಿ ಎಂದು ನಾವು ಲೆಕ್ಕ ಇಟ್ಟಿಲ್ಲ. ಆದರೆ ನೀವು ಈಗಾಗಲೇ ಒಬ್ಬರಾದ ಮೇಲೆ ಒಬ್ಬರಂತೆ ಬಹಳಷ್ಟು ಜನ ಮಕ್ಕಳನ್ನು ಕರೆದುಕೊಂಡು ಬಂದಿದ್ದೀರಿ. ಇದು ಸರಿಯಲ್ಲ" ಎಂದರು. ಆತ ಅಧಿಕಾರಿಯೊಡನೆ ವಾದಕ್ಕಿಳಿದ. ಆಗ ಅಧಿಕಾರಿ, "ನೀವು ವಾದವನ್ನೇ ಮಾಡುವುದಾದರೆ, ನಮ್ಮಲ್ಲಿ ಸಿಸಿಟಿವಿ ಕ್ಯಾಮರಾ ಇದೆ. ನಾವು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ದಾಖಲೆ ನೀಡುತ್ತೇವೆ. ಅದರಿಂದ ನಿಮಗೇ ತೊಂದರೆ. ಸುಮ್ಮನೆ ವಾದ ಮಾಡಬೇಡಿ, ತಪ್ಪು ಒಪ್ಪಿಕೊಳ್ಳಿ. ಇನ್ನು ಮುಂದೆ ಹೀಗೆ ಮಾಡಬೇಡಿ" ಎಂದು ಹೇಳಿದಾಗ ಆತ ಒಪ್ಪಿಕೊಂಡು ಹೊರಗೆ ನಡೆದ.

ನಿಜ, ಕೆಲವು ಬ್ಯಾಂಕಿನವರು ಕ್ರೆಡಿಟ್ ಕಾರ್ಡ್ ಹೊಂದಿದವರಿಗೆ ಮಾತ್ರವಲ್ಲ, ಅವರ ಜತೆ ಇನ್ನೊಬ್ಬ ಅತಿಥಿಗೂ ಈ ಅವಕಾಶವನ್ನು ಒದಗಿಸಿಕೊಡುತ್ತಾರೆ. ಗಂಡ-ಹೆಂಡತಿ, ಒಂದೇ ಕಂಪನಿಯ ಇಬ್ಬರು ಸಹೋದ್ಯೋಗಿಗಳು ಅಥವಾ ಇಬ್ಬರು ಉದ್ಯಮಿಗಳು ಒಟ್ಟಿಗೇ ಪ್ರಯಾಣಿಸುವಾಗ ಒಬ್ಬರನ್ನು ಬಿಟ್ಟು ಇನ್ನೊಬ್ಬರು ಒಳಗೆ ಕುಳಿತುಕೊಳ್ಳಲಾಗುವುದಿಲ್ಲ ಎಂಬ ಕಾರಣಕ್ಕೋ, ವಿಮಾನ ನಿಲ್ದಾಣದ ಗೌಜಿನಿಂದ ದೂರ, ದ್ವಾರದ ಬಳಿ ಹೋಗಿ ತಮ್ಮ ಕಾರ್ಡನ್ನು ತೆಗೆದು ಇಡುತ್ತಾರೆ. ಅಲ್ಲಿಯ ಉದ್ಯೋಗಿ "ಈ ಕಾರ್ಡ್ ನಡೆಯುವುದಿಲ್ಲ, ಲಾಂಜ್ ಒಳಗೆ ಹೋಗಬಹುದು, ಆದರೆ ಹತ್ತೋ ಇಪ್ಪತ್ತೋ ಡಾಲರ್ ಕೊಡಬೇಕಾಗುತ್ತದೆ" ಎಂದು ಹೇಳಿದಾಗ ಅವರೊಂದಿಗೆ ವಾದಕ್ಕಿಳಿಯುತ್ತಾರೆ. "ಕ್ರೆಡಿಟ್ ಕಾರ್ಡ್ ಇದ್ದವರಿಗೆ ಲಾಂಜಿನಲ್ಲಿ ಉಚಿತ ಪ್ರವೇಶ ಇರುತ್ತದೆ, ನೀವು ಯಾಕೆ ನಮ್ಮನ್ನು ಒಳಗೆ ಬಿಡುವುದಿಲ್ಲ?" ನಮಗೆ ಬ್ಯಾಂಕಿನವರು ಕ್ರೆಡಿಟ್ ಕಾರ್ಡ್ ಕೊಡುವಾಗ ಲಾಂಜ್ ಆಕ್ಸೆಸ್ ಇದೆ ಎಂದು ಹೇಳಿದ್ದಾರೆ" ಎಂದು ವಾದ ಮಾಡುತ್ತಿರುತ್ತಾರೆ.

ಸ್ವಲ್ಪ ಸಮಾಧಾನದಲ್ಲಿ ಕುಳಿತು ಊಟ-ತಿಂಡಿ ಮುಗಿಸಲೆಂದೋ, ವಿಮಾನ ಹೊರಡುವುದಕ್ಕೂ ಮೊದಲು ಮುಂದಿನ ಮೀಟಿಂಗಿಗೆ ತಯಾರಿ ನಡೆಸಲೆಂದೋ ಈ ಅವಕಾಶ ಕಲ್ಪಿಸಿಕೊಡುವುದಿದೆ. ಅಷ್ಟಕ್ಕೂ ಈ ಲಾಂಜುಗಳು ಇರುವುದೇ ಪ್ರಯಾಣದ ಪೂರ್ವಸಿದ್ಧತೆ ಮಾಡಿಕೊಳ್ಳುವುದಕ್ಕೆ. ಆದರೆ ಇದನ್ನು ದುರ್ಬಳಕೆ ಮಾಡಿಕೊಳ್ಳುವುದು ತೀರಾ ಅಸಹ್ಯ.

ಆ ಕ್ಷಣದಲ್ಲಿ ನನಗನಿಸಿದ್ದೇನೆಂದರೆ, ಆ ವ್ಯಕ್ತಿ ತನ್ನ ಮಕ್ಕಳನ್ನೇ ಕರೆದುಕೊಂಡು ಬಂದಿರಬಹುದು. ಆದರೆ ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ಆತ ಕೊಟ್ಟ ಹಾಗಾಯಿತು? ಮಕ್ಕಳು ಅಪ್ಪನಿಂದ ಏನು ಕಲಿತಂತಾಯಿತು? ಅವರು ಬೆಳೆದು ದೊಡ್ಡವರಾದ ಮೇಲೆ ಯಾವ ರೀತಿಯ ಪ್ರಜೆಗಳಾಗಬಹುದು?

ನಮ್ಮಲ್ಲಿ ಇನ್ನೂ ಒಂದು ವರ್ಗದ ಜನರಿದ್ದಾರೆ. ಅವರು ಯಾವುದೋ ಬ್ಯಾಂಕಿನಿಂದ ಕ್ರೆಡಿಟ್ ಕಾರ್ಡ್ ಪಡೆದುಕೊಂಡರು ಅಂದುಕೊಳ್ಳಿ. ಅವರು ವಿಮಾನ ಪ್ರಯಾಣ ಮಾಡುವಾಗ ಸೀದಾ ಲಾಂಜಿನ ಪ್ರವೇಶ ದ್ವಾರದ ಬಳಿ ಹೋಗಿ ತಮ್ಮ ಕಾರ್ಡನ್ನು ತೆಗೆದು ಇಡುತ್ತಾರೆ.

ನಾನು ಕಂಡಂತೆ, ಈ ರೀತಿ ವಾದ ಮಾಡುವವರಲ್ಲಿ ನೂರಕ್ಕೆ ತೊಂಬತ್ತರಷ್ಟು ಭಾರತೀಯರೇ ಇರುತ್ತಾರೆ. ಅವರ ಬಳಿ ಕಾರ್ಡ್ ಇರುವುದು ನಿಜವಾದರೂ, ಲಾಂಜ್ ಪ್ರವೇಶ ನಿಷೇಧಕ್ಕೆ ಪ್ರಮುಖವಾಗಿ ಎರಡು ಕಾರಣಗಳಿರುತ್ತವೆ. ಪಡೆದಿದ್ದು ಕ್ರೆಡಿಟ್ ಕಾರ್ಡ್ ಆದರೂ ಅದರಲ್ಲೇ ಎರಡು ವಿಧವಿರುತ್ತದೆ. ಒಂದು, ಸೀದಾಸಾದಾ ಕ್ರೆಡಿಟ್ ಕಾರ್ಡ್. ಇನ್ನೊಂದು ಲಾಂಜಿಗೆ ಪ್ರವೇಶ ಇರುವ ಕ್ರೆಡಿಟ್ ಕಾರ್ಡ್. ಲಾಂಜ್ ಆಕ್ಸೆಸ್ ಇರುವ ಕ್ರೆಡಿಟ್ ಕಾರ್ಡಿಗೆ ವಾರ್ಷಿಕ ಶುಲ್ಕ ಸ್ವಲ್ಪ ಹೆಚ್ಚಾಗಿರುತ್ತದೆ. ಕೆಲವೊಮ್ಮೆ ಅದರೊಂದಿಗೆ ಹೆಲ್ತ್ ಇನ್ಶೂರೆನ್ಸ್, ಅಪಘಾತ ವಿಮೆ ಇತ್ಯಾದಿ ಇತರೆಗಳೂ ಸೇರಿಕೊಂಡಿರುತ್ತವೆ. ಎರಡನೆಯದಕ್ಕೆ ವಾರ್ಷಿಕ ಶುಲ್ಕ ಹೆಚ್ಚಾಗಿರುತ್ತದೆ. ನಾವು ಯಾವುದನ್ನು ಆರಿಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ಲಾಂಜ್ ಪ್ರವೇಶ ನಿರ್ಧಾರವಾಗುತ್ತದೆ. ಎರಡನೆಯ ಕಾರಣ, ಎಲ್ಲ ಕ್ರೆಡಿಟ್ ಕಾರ್ಡುಗಳೂ ಎಲ್ಲಾ ಲಾಂಜುಗಳಲ್ಲೂ ನಡೆಯುವುದಿಲ್ಲ. ಕೆಲವು ನಿರ್ದಿಷ್ಟ ಲಾಂಜುಗಳಿಗೆ ಸೀಮಿತವಾಗಿರುತ್ತವೆ. ಒಂದೇ ವಿಮಾನ ನಿಲ್ದಾಣದಲ್ಲಿ ನಾಲ್ಕೋ-ಐದೋ ಲಾಂಜ್ ಇರುವುದನ್ನು ನಾವು ನೋಡುತ್ತೇವೆ. ಒಂದೇ ಕಾರ್ಡ್ ಹಿಡಿದುಕೊಂಡು ಎಲ್ಲಾ ಲಾಂಜುಗಳ ಒಳಗೆ ಹೋಗಲು ಸಾಧ್ಯವಿಲ್ಲ. ನಾವು ಯಾವ ಕಾರ್ಡ್ ಹೊಂದಿದ್ದೇವೆ ಎನ್ನುವುದರ ಮೇಲೆ ಪ್ರವೇಶ ಸಾಧ್ಯವೋ ಇಲ್ಲವೋ ಎಂಬುದು ನಿರ್ಧಾರವಾಗುತ್ತದೆ. ಕೆಲವು ಲಾಂಜುಗಳಲ್ಲಿ ಯಾವ ಕಾರ್ಡುಗಳೂ ನಡೆಯುವುದಿಲ್ಲ. ಉದಾಹರಣೆಗೆ, ಏರ್‌ಲೈನ್ಸ್ ಲಾಂಜುಗಳು. ಆಯಾ ಸಂಸ್ಥೆಗೆ ಸಂಬಂಧಿಸಿದ ವಿಮಾನದಲ್ಲಿ ಬ್ಯುಸಿನೆಸ್ ಕ್ಲಾಸ್ ಟಿಕೆಟ್ ಖರೀದಿಸಿ ಪ್ರಯಾಣಿಸುವವರಿಗೆ ಮಾತ್ರ ಒಳಗೆ ಪ್ರವೇಶವಿರುತ್ತದೆ. ಅದ್ದರಿಂದ ಒಂದು ಲಾಂಜಿನ ಪ್ರವೇಶ ದ್ವಾರದಲ್ಲಿರುವವರು ಕಾರ್ಡ್ ನಡೆಯುವುದಿಲ್ಲ ಎಂದರೆ, ವೃಥಾ ತರ್ಕದಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಇಂಥವರ ಬದಲು ಸಮಯದ ಜತೆಗೆ, ಸರತಿಯಲ್ಲಿ ಕಾಯುತ್ತಿರುವವರ ಸಮಯ ಹಾಳುಮಾಡಿದ್ದಷ್ಟೇ ಲಾಭ!

ಇನ್ನು, ಲಾಂಜಿನ ಒಳಗೆ ಬಂದರೆ ಬಹುತೇಕ ಎಲ್ಲಾ ಲಾಂಜುಗಳಲ್ಲಿಯೂ ಊಟ, ತಿಂಡಿ, ಜ್ಯೂಸ್, ಸಲಾಡ್, ಸ್ವೀಟ್ ಎಲ್ಲವೂ ಇರುತ್ತದೆ. ಬಹುತೇಕ ಲಾಂಜುಗಳಲ್ಲಿ ಮದ್ಯವನ್ನೂ ಸರಬರಾಜು ಮಾಡುತ್ತಾರೆ. ಮೊದಲೆಲ್ಲ ಕೆಲವು ಲಾಂಜುಗಳಲ್ಲಿ ಮದ್ಯ ಪೂರೈಸುವುದಕ್ಕೆ ಮಿತಿ ಇರಲಿಲ್ಲ. ತೃಷೆ ತೀರುವವರೆಗೂ ಕುಡಿಯಬಹುದಾಗಿತ್ತು. ಇತ್ತೀಚೆಗೆ ಬಹುತೇಕ ಲಾಂಜುಗಳಲ್ಲಿ ಇದಕ್ಕೆ ಕಡಿವಾಣ ಹಾಕಿ, ಒಂದು ಮಿತಿಯಲ್ಲಿಯೇ ಸರಬರಾಜು ಮಾಡುತ್ತಾರೆ. ಪುಕ್ಕಟೆ ಸಿಕ್ಕಿದೆ ಎಂದು ಅತಿಯಾಗಿ ಕುಡಿದು ವಿಮಾನ ತಪ್ಪಿಸಿಕೊಂಡವರೂ ಇದ್ದಾರೆ ಎನ್ನುವುದು ಕಡಿವಾಣಕ್ಕೆ ಒಂದು ಕಾರಣವಾಗಿರಬಹುದೇ? ಗೊತ್ತಿಲ್ಲ.

ಸಾಮಾನ್ಯವಾಗಿ ಎಲ್ಲ ಲಾಂಜುಗಳಲ್ಲಿ ಬೆಳಗ್ಗೆ, ಮಧ್ಯಾಹ್ನ, ಸಾಯಂಕಾಲ, ರಾತ್ರಿ, ಹೀಗೆ ಕಾಲಕ್ಕೆ ತಕ್ಕಂತೆ ಆಹಾರವನ್ನೂ ಬದಲಾಯಿಸುತ್ತಿರುತ್ತಾರೆ. ಅವರ ಸ್ವಲ್ಪ ಒಂದಿಷ್ಟು ನೀಟಾಗಿ ಹೊಂದಿಸಿ ಇಟ್ಟಿರುತ್ತಾರೆ. ನಮ್ಮ ಮನೆಯ ಕಾರ್ಯಗಳಲ್ಲಿ ಹೊಂದಿಸಿ ಇಡುವಂತೆ (ಬಫೆ) ಲಾಂಜಿನಲ್ಲೂ ಇಟ್ಟಿರುತ್ತಾರೆ. ಅಲ್ಲಿ ಎಷ್ಟು ಬೇಕಾದರೂ ತಿನ್ನಬಹುದು, ಯಾರೂ ಏನೂ ಕೇಳುವುದಿಲ್ಲ, ಹೇಳುವುದಿಲ್ಲ. ಹಾಗೆಯೇ ಕುಳಿತು ತಿನ್ನುವುದಕ್ಕೆ ಒಂದು ನಿರ್ದಿಷ್ಟವಾದ ಸ್ಥಳವನ್ನೂ, ನಂತರ ಆರಾಮವಾಗಿ ಕುಳಿತುಕೊಳ್ಳುವುದಕ್ಕೋ, ಕೆಲಸ ಮಾಡುವುದಕ್ಕೋ, ಮಲಗುವುದಕ್ಕೋ ಒಂದು ಜಾಗವನ್ನು ನಿಗದಿ ಮಾಡಿರುತ್ತಾರೆ. ಲೆಕ್ಕದಂತೆ ಊಟ-ತಿಂಡಿ ಬಡಿಸಿಕೊಂಡು, ಅದನ್ನು ತಿನ್ನಲು ನಿಗದಿಪಡಿಸಿದ ಜಾಗದಲ್ಲಿ ಕುಳಿತು ತಿನ್ನಬೇಕು. ಅದು ನಿಯಮ ಅನ್ನುವುದಕ್ಕಿಂತಲೂ, ಅದೊಂದು ಶಿಸ್ತು. ಆದರೆ ಇತ್ತೀಚಿಗೆ ಲಾಂಜಿನಲ್ಲಿ ಊಟ ಇಟ್ಟ ಸ್ಥಳದಲ್ಲೇ ನಿಂತು ತಿನ್ನುವವರ ಸಂಖ್ಯೆ ಹೆಚ್ಚುತ್ತಿದೆ. ಅದೂ ಹೇಗೆ ಎಂದರೆ, ಪ್ಲೇಟಿನಲ್ಲಿ ಊಟ ಬಡಿಸಿಕೊಳ್ಳಲೂ ಪುರುಸೊತ್ತಿಲ್ಲ, ಅಲ್ಲೇ ತಿನ್ನಲು ಆರಂಭಿಸುತ್ತಾರೆ. ಅನ್ನ-ಪದಾರ್ಥದ ಬಳಿ ತಲುಪುವುದಕ್ಕೂ ಮುಂಚೆ, ಮೊದಲು ತಾಟಿನಲ್ಲಿ ಹಾಕಿಕೊಂಡಿದ್ದ ಸಲಾಡ್ ಖಾಲಿ ಆಗಬೇಕು ಎಂದು ಆಣೆ ಮಾಡಿದವರಂತೆ ತಿನ್ನುತ್ತಲೇ ಮುಂದೆ ನಡೆಯುತ್ತಾರೆ. ಅಂಥವರನ್ನು ನೋಡಿದಾಗ ಮಾತ್ರ ತೀರಾ ಅಸಹ್ಯ ಎನಿಸುತ್ತದೆ. ಏಕೆಂದರೆ, ತಿನ್ನುವಾಗ ಎಲ್ಲಾದರೂ ಅವರು ತಿನ್ನುತ್ತಿದ್ದ ತಟ್ಟೆಯಿಂದ ಬಫೆಯಲ್ಲಿಟ್ಟಿರುವ ಆಹಾರ ಪದಾರ್ಥದಲ್ಲಿ ಬಿದ್ದರೆ ಏನು ಮಾಡುವುದು? ಅಂಥವರಿಗೆ ಕುಳಿತುಕೊಳ್ಳಲು ಏನಾದರೂ ತೊಂದರೆ ಇರಬಹುದು, ಆರೋಗ್ಯದ ಸಮಸ್ಯೆ ಇದ್ದಿರಬಹುದು, ಸೊಂಟದ ಮೂಳೆ ಬಗ್ಗುವುದಿಲ್ಲ ಎಂದೇ ಇಟ್ಟುಕೊಳ್ಳೋಣ. ಅಂಥವರು ನಿಂತೇ ತಿನ್ನಲಿ, ಅಭ್ಯಂತರವಿಲ್ಲ. ಆದರೆ ಸ್ವಲ್ಪ ದೂರ ನಿಂತು ತಿನ್ನಬೇಕು. ಆಹಾರವನ್ನು ಬಡಿಸಿಕೊಳ್ಳುವಾಗ ತಿನ್ನುವುದು ಬಿಡಿ, ಯಾರೊಂದಿಗೂ ಮಾತನ್ನೂ ಆಡಬಾರದು.

ಪೋಲಿಸಲಾಗಿಯೂ ಮಾತನಾಡಬಾರದು. ಏಕೆಂದರೆ ಅಂಥ ಸಂದರ್ಭದಲ್ಲಿ, ನೂರಾರು ಜನರು ಊಟ ಮಾಡುವ ಆಹಾರ ಪದಾರ್ಥದಲ್ಲಿ ನಮ್ಮ ಉಗುಳು ಬೀಳುವ ಸಾಧ್ಯತೆ ಇರುತ್ತದೆ. ಶುಚಿತ್ವ ಅಥವಾ ನೂರಾರು ಜನರ ಆರೋಗ್ಯದ ಬಗ್ಗೆ ಕಾಳಜಿ ಇರುವ ಯಾವ ವ್ಯಕ್ತಿಯೂ ಅವರಾಗಿ ಬಡಿಸಿಕೊಂಡು ಅಲ್ಲಿಯೇ ನಿಂತು ತಿನ್ನುವುದಿಲ್ಲ. ಈ ಮಾತು ಕೇವಲ ವಿಮಾನ ನಿಲ್ದಾಣದ ಒಳಗಿರುವ ಲಾಂಜಿಗಷ್ಟೇ ಸೀಮಿತವಲ್ಲ, ನಮ್ಮ ಮನೆಯ ಕಾರ್ಯಗಳಲ್ಲಿ ಅಥವಾ ಇನ್ಯಾವುದೇ ಸಾರ್ವಜನಿಕ ಸಭೆಯ ಬಫೆ ಊಟಕ್ಕೆ ಬಂದು, ಊಟ ಇಟ್ಟಲ್ಲಿಯೇ ನಿಂತು ತಿನ್ನುವವರಿಗೂ ಅನ್ವಯಿಸುತ್ತದೆ.

ಲಾಂಜಿನಲ್ಲಿ ಕೆಲವರು ಅಷ್ಟಕ್ಕೇ ನಿಲ್ಲಿಸುವುದಿಲ್ಲ. ಅಲ್ಲಿ ನೀರಿನ ಬಾಟಲ್, ಜ್ಯೂಸಿನ ಟೆಟ್ರಾ ಪ್ಯಾಕ್, ಪೆಪ್ಸಿ, ಕೋಲಾ ಇತ್ಯಾದಿಗಳು ಯಥೇಚ್ಛವಾಗಿರುತ್ತವೆ. ಅದೆಲ್ಲ ಅಲ್ಲಿಯೇ ಕುಡಿಯುವುದಕ್ಕೆ ಇರುವಂಥದ್ದು. ಕೆಲವರು ಅದನ್ನೂ ತಮ್ಮ ಬ್ಯಾಗಿನೊಳಗೆ ತುಂಬಿಸಿಕೊಳ್ಳುತ್ತಾರೆ. ಬೆಂಗಳೂರಿನ ಒಂದು ಪ್ರತಿಷ್ಠಿತ ಲಾಂಜಿನಲ್ಲಿ ಏನಿಲ್ಲ ಎಂದರೂ ಹತ್ತು ಕೋಕೋ ಕೋಲಾ ಕ್ಯಾನನ್ನು ಚೀಲದೊಳಗೆ ತುಂಬಿಕೊಂಡ ವ್ಯಕ್ತಿಯನ್ನು ನಾನು ಕಣ್ಣಾರೆ ನೋಡಿದ್ದೇನೆ. ನಿಜವಾಗಿಯೂ ಇಂಥವರು ಗಲೀಜು ಜನವೋ ಹೊರತು ಲಾಂಜಿಗೆ ಯೋಗ್ಯರಾದ ಜನ ಅಲ್ಲ. ಹಾಗಾದರೆ ಇದಕ್ಕೆ ಯಾರು ಕಡಿವಾಣ ಹಾಕಬೇಕು? ಲಾಂಜಿನವರೂ ಸಾಧ್ಯವಾದಷ್ಟು ಹೇಳುತ್ತಾರೆ. ಆದರೆ ಅವರಿಗೂ ಒಂದು ಮಿತಿಯಿದೆ. ಕ್ರೆಡಿಟ್ ಕಾರ್ಡ್ ಕೊಡುವ ಬ್ಯಾಂಕುಗಳು ಪರಿಶೀಲಿಸಬೇಕೇ? ಈ ಸಾಧ್ಯತೆಗಳೂ ಕಡಿಮೆಯೇ. ಬ್ಯಾಂಕಿಗೆ ಬರುವ ಗ್ರಾಹಕ ಲಾಂಜಿನಲ್ಲಿ ಹೇಗೆ ವರ್ತಿಸುತ್ತಾನೆ ಎಂದು ಅವರಿಗಾದರೂ ಹೇಗೆ ತಿಳಿಯಬೇಕು? ಲಾಂಜಿಗೆ ಹೋಗುವ ಜನರೇ ಇದನ್ನು ತಿಳಿದುಕೊಳ್ಳಬೇಕು ಅಷ್ಟೇ.

1939ರಲ್ಲಿ ಅಮೆರಿಕನ್ ಏರ್‌ಲೈನ್ಸ್ ಅಧ್ಯಕ್ಷ ಸಿ. ಆರ್. ಸ್ಮಿತ್ ಲಾಂಜ್ ಸಂಸ್ಕೃತಿಗೆ ಅಡಿಗಲ್ಲು ಹಾಕಿದನಂತೆ. ನ್ಯೂಯಾರ್ಕ್ ನಗರದ ಲಾಗಾರ್ಡಿಯಾ ಏರ್‌ಪೋರ್ಟಿನಲ್ಲಿ ಅಂದು 'ಅಡ್ಮಿರಲ್ ಲಾಂಜ್' ಆರಂಭಗೊಂಡಿತ್ತು. ಆದರ ಮೂಲ ಉದ್ದೇಶ, ತಮ್ಮ ಏರ್‌ಲೈನ್ಸ್‌ನಲ್ಲಿ ಪ್ರಯಾಣಿಸುವ ಗಣ್ಯರು ಹಾರಾಟಕ್ಕಿಂತ ಮೊದಲು ಕುಳಿತುಕೊಳ್ಳಲು, ರಿಲ್ಯಾಕ್ಸ್ ಆಗಲು ಅಥವಾ ಕೆಲಸ ಮಾಡಿಕೊಳ್ಳಲು ವ್ಯವಸ್ಥೆ ಮಾಡಿಕೊಡುವುದಾಗಿತ್ತು. ಕ್ರಮೇಣ ಇದರ ರೂಪ ಬದಲಾಯಿತು. ಸ್ಮಿತ್ ಈಗೇನಾದರೂ ಲಾಂಜಿಗೆ ಬಂದು ನೋಡಿದರೆ, ಅಲ್ಲಿಯೇ ತಗ್ಗ ಹಾಕಿಕೊಳ್ಳುವಂತಾಗಿದೆ. ಕಾಲಕ್ಕೆ ತಕ್ಕಂತೆ ಎಲ್ಲವೂ ಬದಲಾಗಬೇಕು. ಆದರೆ ಆ ಬದಲಾವಣೆ ಒಳ್ಳೆಯದಾಗಿರಬೇಕು. ಅದಿಲ್ಲವಾದರೆ ಮುಂದೊಂದು ದಿನ ಇಂಥವರನ್ನು ಸಹಿಸಿಕೊಳ್ಳಲಾಗದೆ ಲಾಂಜುಗಳನ್ನೇ ಮುಚ್ಚುವ ಪರಿಸ್ಥಿತಿ ಬರುತ್ತದೆ.

ನಿಶ್ಶೂನ್ಯ ಬಸವ ಸಂಸ್ಕೃತಿ ಅಭಿಯಾನದ ಒಂದು ಪಕ್ಷಿನೋಟ, ನಿಮಗಾಗಿ!

ಆಧ್ಯಾತ್ಮಿಕ ಅರುಹಿನ ಕುರುಹಾದ ಇಷ್ಟಲಿಂಗವನ್ನು ಯಃಕಶ್ಚಿತ್ ಎರಡು ತೊಲದ ಕಾರ್ಬನ್ ಮಾಡಿ, ಆಧ್ಯಾತ್ಮಿಕ ಬಸವಣ್ಣನನ್ನು ಭೌತಿಕ ವಿಜ್ಞಾನಿ ಮಾಡಿ, ತಹತಹಿಯ ಸಂಕಥನವನ್ನು ಓರ್ವ ಮತಾಧಿಪತಿಗಳು ಹೊಸೆಯುವ ಮೂರ್ಖತನದ ಧಾರ್ಷ್ಟ್ಯದ ಅನಿವಾರ್ಯತೆ ಏನು? ಹೀಗೆ ತೆಪರು ತೆಪರಾಗಿ ತಾವೇ ತಾವಾಗಿ ಬಟಾಬಯಲು ಬೆತ್ತಲಾಗುವ ಜರೂರತ್ತು ಇವರಿಗೆ ಬೇಕಿತ್ತೆ?

ಬಸವ ಮಂಟಪ

ರವಿ ಹಂಜ್
vveditoped@gmail.com

ಒಂದು ಪಕ್ಷದ ಅದರಲ್ಲೂ ಓರ್ವ ರಾಜಕಾರಣಿಯ ಭಟ್ಟಂಗಿಗಳಾದ ಲಿಂಗಾಯತ ಭಜಕ ಕಾವಿಧಾರಿಗಳು, ತಮ್ಮ ನಾಯಕನ ಕುರ್ಚಿ ಅಲುಗಾಡುತ್ತಿದ್ದಂತೆಯೇ ಎಚ್ಚೆತ್ತು ಬಸವಣ್ಣ, ವಚನ, ಶರಣ, ಕಲ್ಯಾಣ ಮತ್ತಿತರ ಹೆಸರಿನಲ್ಲಿ ತಮ್ಮ ಭಜಕತನದ ಸ್ವಾರ್ಥಿಯನ್ನು ಉತ್ಕರ್ಷಿಸುತ್ತಾರೆ. ಹಾಗೆ ಸ್ವಾರ್ತಿಗೊಂಡು ಉತ್ಕರಿದ ಭಜಕತನಕ್ಕೆ ಮತ್ತೆ ಕಲ್ಯಾಣ, ನಿತ್ಯ ಬಸವ, ದಿನಕ್ಕೊಂದು ವಚನ, ಶರಣ ಸ್ಮೃತಿ ಮುಂತಾದ ಹೊಸ ಹೊಸ ರಂಗ ಪರಿಕರಗಳೊಂದಿಗೆ ರಂಗುರಂಗಿನ ಸಮ್ಮೇಳನ, ಸಮಾವೇಶ ಮುಂತಾದ ರಂಗಪ್ರಯೋಗಗಳನ್ನು ಏರ್ಪಡಿಸುತ್ತಾರೆ. ಆ ಎಲ್ಲಾ ರಂಗಪ್ರಯೋಗಗಳಲ್ಲಿ ಅವರು ಹೊಸ ಹೊಸ ರಾಗಗಳಲ್ಲಿ ಭಜಿಸುವುದು, ಅದೇ ಏಕತಾನತೆಯ ದ್ವಂದ್ವದ ಹಳೆಯ ಸುಳ್ಳಿನ ವಿಜೃಂಭಿತ ಹಾಡುಗಳನ್ನೇ! ಇವರ ಇಂಥ ಇತ್ತೀಚಿನ ರಂಗಪ್ರಯೋಗವೇ 'ಬಸವ ಸಂಸ್ಕೃತಿ ಅಭಿಯಾನ'!

ಇವರ ಎಲ್ಲಾ ಬಹು ಭೈರವಿ ರಾಗದ ಹಿನ್ನೆಲೆಯ ಸಂಕೀರ್ಣಗಳನ್ನು 'ವಿಶ್ವವಾಣಿ'ಯು ಒಂದೇ ಬೆಳ್ಳಿ ಭೈರವಿಯಾಗಿ ಭಿನ್ನ ಹಾಕಿ ಭಿದ್ರಗೊಳಿಸಿದೆ. ಒಂದು ಸದ್ದಿನ ಮುಂದೆ ಲಕ್ಷ ಸುಳ್ಳುಗಳೂ ಶೂನ್ಯವಾಗುತ್ತವೆ ಎಂಬುದನ್ನು ವಿಶ್ವವಾಣಿಯ ಮೂಲಕ ಸಮಾಜ ಅರಿತಿದೆ. ಅಲ್ಲದೇ ಇಂಥ ಎಲ್ಲಾ ಭಜಕ ಸಮಾವೇಶಗಳಲ್ಲಿಯೂ ಆಧ್ಯಾತ್ಮ ಶೂನ್ಯರಾದ ಇವರನ್ನು ಬಸವಣ್ಣನು ಪರೋಕ್ಷವಾಗಿ ಬೆತ್ತಲು ಮಾಡುತ್ತಲೇ ಇದ್ದಾನೆ! ಸದ್ಯದ ರಂಗ ಪ್ರಯೋಗವಾದ 'ಬಸವ ಸಂಸ್ಕೃತಿ ಅಭಿಯಾನ'ದಲ್ಲೂ ಅದೇ ನಡೆಯುತ್ತಿದೆ.

ಹೇಗೆ? ಬನ್ನಿ ನೋಡೋಣ.

ಸದ್ಯದ 'ಬಸವ ಸಂಸ್ಕೃತಿ ಅಭಿಯಾನ' ಎಂಬ ಪ್ರಹಸನಕ್ಕೆ ರಾಜ್ಯ ಸಾಕ್ಷಿಯಾಗುತ್ತಿದೆ. ಇದು ಪ್ರಹಸನ ಏಕೆಂದರೆ, ಇದರಲ್ಲಿ ನಾಟಕೀಯತೆ ಇದೆ, ರಂಗಜಂಗಮರಿದ್ದಾರೆ, ಸಂಗೀತ, ಸಂಭಾಷಣೆ, ಹಾಸ್ಯ, ದ್ವಂದ್ವಾರ್ಥಗಳೊಂದಿಗೆ ಎಲ್ಲಾ ಪ್ರಹಸನಕಳಿವೆ. ಅದರಲ್ಲೂ ಕಲ್ಯಾಣದ ನಾಟಕಗಳಿರುವ ಒಂದೊಂದು ಊರಿನಲ್ಲಿ ನಿತ್ಯ ಕ್ಯಾಂಪ್ ಹಾಕಿ ಜನರಿಗೆ ಭರಪೂರ ಮನರಂಜನೆಯನ್ನು ನೀಡಲಾಗುತ್ತಿದೆ. ವಿಶೇಷವೆಂದರೆ ಕಾವಿಧಾರಿ ಸನ್ಯಾಸಿಗಳ ಸಮೂಹವು ಇಷ್ಟರ ಮಟ್ಟಿನ ಮನರಂಜನೆ ನೀಡಿದ್ದನ್ನು ನಾಡು ಹಿಂದೆಂದೂ ಕಂಡಿರಲಿಲ್ಲ. ಇದಲ್ಲದೆಯೂ ಪ್ರೌಢ ಅಖಿಲ ವೀರಶೈವ ಲಿಂಗಾಯತ ಧರ್ಮಗಳು ಹಿಂದೆಲ್ಲಾ ಕಂಡಿದ್ದರೂ ಈ ಪ್ರಹಸನದಲ್ಲಿ ವಿಶೇಷವಾಗಿ ಕಾಲೇಜು ಯುವಕ-ಯುವತಿಯರು ಕಾಣುತ್ತಿದ್ದಾರೆ. ಈ ಅಭಿಯಾನದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ಎಂಬ ಪೂರ್ವಭಾವಿ ತಯಾರಿಯ ಪ್ರಶ್ನೋತ್ತರ ಸಂವಾದ ನಡೆಯುತ್ತಿದೆ. ಈ ಸಂವಾದವನ್ನು ನೋಡಿದ ಯಾರಿಗಾದರೂ ಇದು ಪೂರ್ವಭಾವಿಯಾಗಿ ತಾಲೀಮು ನಡೆಸಿದ ಸಂವಾದ ಎಂದು ಮೇಲ್ನೋಟಕ್ಕೆ ಕಾಣುತ್ತದೆ. ಇರಲಿ, ಇದು ನಿಜದ ಸಂವಾದ ಎಂದುಕೊಂಡೇ ವಿಶ್ಲೇಷಿಸೋಣ.

ಸಂವಾದದಲ್ಲಿ ಓರ್ವ ವಿದ್ಯಾರ್ಥಿನಿ, "ಇಷ್ಟಲಿಂಗದ ಪರಿಕಲ್ಪನೆ ಹಿನ್ನೆಲೆ ಏನು?" ಎಂದು ಕೇಳಿದಳು.

ಅದಕ್ಕೆ ಇಳಕಲ್ ಸ್ವಾಮಿಗಳು, "ಇಷ್ಟಲಿಂಗ, ಧರ್ಮದ ಕುರುಹಲ್ಲ. ಅದಕ್ಕೆ ಸೈಂಟಿಫಿಕ್ ಕಾರಣ ಇದೆ. ಮನುಷ್ಯನ ಮನಸ್ಸಿನಲ್ಲಿ ದುರ್ಭಾವನೆ ಮತ್ತು ಸದ್ಭಾವನೆ ಎಂಬ ಪಾಸಿಟಿವ್ ಮತ್ತು ನೆಗೆಟಿವ್ ಅಂಶಗಳು ಇರುವುದು. ಬಸವಣ್ಣೋರು ನೆಗೆಟಿವ್ ಅಂಶ ತೆಗೆಯಲಿಕ್ಕೆ ಇಷ್ಟಲಿಂಗ ಕೊಟ್ಟಾರ. ಸಣ್ಣ ಕೂಸುಗಳಿಗೆ ಕಾಡಿಗಿ ಹಚ್ಚುತ್ತಾರ, ಕೂಸಿಗೆ ಊಟ ಮಾಡಿಸುವಾಗ ಯಾರದ ಬಂದರ ಊಟದ ಬಟ್ಟಲ ಸೆರಗಿನಿಂದ ಮುಚ್ಚುವುದು ಎಲ್ಲಾ ಕೆಟ್ಟ ದೃಷ್ಟಿ ಬೀಳಬಾರದು ಅಂತ ಮಾಡುವುದು. ಕಾಡಿಗಿ ಕೆಟ್ಟ ದೃಷ್ಟಿಯನ್ನ ಹೀರಿಕೊಳ್ತದ. ಬಸವಣ್ಣನವರು ಆಯುರ್ವೇದಿಕ್ ಪಂಡಿತರಿದ್ದರು. ಕಾಡಿಗೆ ಎಂಬ ಕಾರ್ಬನ್ ಅನ್ನ ನಮಗ ಲಿಂಗ ಮಾಡಿಕೊಟ್ಟು ತುಂಬರಿಸಿದರು. ಈ ಕಾರ್ಬನ್ ನಮ್ಮೆಲ್ಲ ನೆಗೆಟಿವ್ ಎನರ್ಜಿ ಹೀರಿಕೊಂಡು ಬಿಡ್ತದ. ನಾವು ಸುಮ್ಮನ ಅದನ್ನ ನೋಡ್ಕೋತ ಕೂತುಕೊಂಡರ ನಿವಲ್ಲಾ ಬಿಪಿ ಸ್ಟೂಡೆಂಟ್ ಇದ್ದೀರಿ. ನೀವು ಬ್ಲಾಕ್ ಬಾಡಿ ರೇಡಿಯೇಷನ್ ಥಿಯರಿ, ಫೋಟೊಎಲೆಕ್ಟ್ರಿಕ್ ಥಿಯರಿ ಓದಿರಬೇಕು. ಲಿಂಗ ಇದೋ ಗುಂಡ ಗಡಿಗಿ ಸಾಮಾನ್ಯವಾಗಿ ಬೆಳ್ಳದ ಇರ್ತದ. ಬೆಳ್ಳಿ ಹೀಟ್ ಕಂಡಕ್ಟರ್ ಇದೆ. ಅದು ನಮ್ಮ ಬಾಡಿ ಹೀಟ್ ಹೀರಿಕೊಂಡು ಒಳಗಿರೋ ಕಾರ್ಬನ್ ಲಿಂಗನ ಹೀಟ್ ಮಾಡ್ತದೆ. ಪೂಜಾ ಮಾಡುವಾಗ ಅದನ್ನ ಅಂಗೈ ಮ್ಯಾಲೆ ಯಾಕ ಇಟ್ಕೋತಿವಿ ಅಂದ್ರ ಅಂಗೈ ಹೀಟ್ ಇರ್ತದ. ಅಂಗೈ ಮ್ಯಾಲ ಲಿಂಗ ಇಟ್ಕೊಂಡಾಗ ಗೆಲ್ಯಾಕ್ಸಿಯಿಂದ ಆಟಂಸ್ ಬಂದು ಕಾರ್ಬನ್ ಮ್ಯಾಲ ಕುರುತಾವ. ಕಾರ್ಬನ್ (ಲಿಂಗ)ಹೀಟಿಂದ ಆಟಂಸ್ ಬಿಸಿಯಾಗಿ ಫೋಟಾನ್ ನ್ಯೂಟ್ರಾನ್ ಎಲೆಕ್ಟ್ರಾನ್ ರೇಡಿಯೇಟ್ ಆಗಿ ಹನ್ನೆರಡು ಇಂಚಿನ ದೂರದಲ್ಲಿರುವ ಕಣ್ಣು ಅವನ್ನ ಹೀರಿಕೊಂಡು ಬಿಡ್ತೇತಿ. ಕಣ್ಣಾಲಿಗಳ ನರಗಳೊಳಗ ಹೋಗಿ ಪಿನಿಯಲ್ ಗ್ಲ್ಯಾಂಡ್ ಅನ್ನ ಜಗ್ಗಿ ಮೆಲಟೋನಿನ್ ಉತ್ಪಾದನೆ ಆಗ್ತದ. ಈ ಮೆಲಟೋನಿನ್ ಅನ್ನೋದು best tonic for nerves! ಉತ್ಪತ್ತಿಯಾದ ಮೆಲಟೋನಿನ್ ಪಿಟ್ಯುಟರಿ ಗ್ಲ್ಯಾಂಡ್ ಸೇರಿ ನಂತರ ನರವ್ಯೂಹದ ಮೂಲಕ ದೇಹಕ್ಕ ಹೊಸ ಚೈತನ್ಯ ಕೊಡ್ತದ".

ಹೀಗೆ ಬಸವಣ್ಣನವರು ಆಯುರ್ವೇದಿಕ್, ಭೌತಶಾಸ್ತ್ರ, ರಸಾಯನಶಾಸ್ತ್ರದ ಪಂಡಿತರಾಗಿ ಇನ್ನೇನೇನೋ ಆಗುವವರಿದ್ದರು. ಆದರೆ ಉತ್ತರ ಅಷ್ಟಕ್ಕೇ ಮುಗಿಯಿತು.

ಅಂದ ಹಾಗೆ, ವೈಜ್ಞಾನಿಕವಾಗಿ ಸಾಬೀತಾಗಿರುವಂತೆ ಮನುಷ್ಯನ ದೇಹದಲ್ಲಿ ಅಂದಾಜು ತೂಕದ 18 ಪ್ರತಿಶತ ಕಾರ್ಬನ್ ಇರುತ್ತದೆ. ಹೀಗಿರುವಾಗ ಎರಡು ತೊಲ ತೂಕದ ಇಷ್ಟಲಿಂಗದ ಕಾರ್ಬನ್ ಏನು ಮಹಾ ಬದಲಾವಣೆ ತರಬಲ್ಲದು? ಅಧ್ಯಾತ್ಮಿಕ ಅರುಹಿನ ಕುರುಹಾದ ಇಷ್ಟಲಿಂಗವನ್ನು ಯಃಕಶ್ಚಿತ್ ಎರಡು ತೊಲದ ಕಾರ್ಬನ್ ಮಾಡಿ, ಆಧ್ಯಾತ್ಮಿಕ ಬಸವಣ್ಣನನ್ನು ಭೌತಿಕ ವಿಜ್ಞಾನಿ ಮಾಡಿ, ತಹತಹಿಯ ಸಂಕಥನವನ್ನು ಓರ್ವ ಮತಾಧಿಪತಿಗಳು ಹೊಸೆಯುವ ಮೂರ್ಖತನದ ಧಾರ್ಷ್ಟ್ಯದ ಅನಿವಾರ್ಯತೆ ಏನು? ಹೀಗೆ ತೆಪರು ತೆಪರಾಗಿ ತಾವೇ ತಾವಾಗಿ ಬಟಾಬಯಲು ಬೆತ್ತಲಾಗುವ ಜರೂರತ್ತು ಇವರಿಗೆ ಬೇಕಿತ್ತೆ? ಕಣ್ಣು, ದೃಷ್ಟಿ, ಕಪ್ಪನೆಯ ಕಾಬ್ರನ್ನು, ಗೆಲಾಕ್ಸಿ, ಅಂಗೈ, ಹೀಟು, ಸ್ರವಿಸುವುದು... ನರನಾಡಿಗಳಲ್ಲಿ ಒಸರಿ ಚೈತನ್ಯವುಕ್ಕಿ ಕೂಡಲೆ ಹೊಸ ನರವು... ಎಂಬ ಥಿಯರಿಯನ್ನು ಪದ್ಯೆ ಹೇಳಿದ ನೂರಕ್ಕೆ ನೂರು ಪ್ರತಿಶತ ಜೀವಶಾಸ್ತ್ರದ ಪ್ರಕ್ರಿಯೆಯಾಗಿಯೇ ಅಲೋಚಿಸಿ ಅರಿಯದಿರುತ್ತಾರೆ ಎನ್ನುವುದು ಈ ಕಾವಿ ಬ್ರಹ್ಮಚಾರಿಗಳು ಹುಡುಕಿ ಅರಿಯಲು ಸಾಧ್ಯವಿಲ್ಲ!

ಇನ್ನು ಲಿಂಗವನ್ನು ಅಂಗೈಯಲ್ಲಿ ಹಿಡಿದು ದೃಷ್ಟಿಯನ್ನು ಲಿಂಗದಲ್ಲಿ ಕೇಂದ್ರೀಕರಿಸಿ ಧ್ಯಾನಸ್ಥರಾಗುವುದರಿಂದ ಮಿದುಳಿನಲ್ಲಿ ಪಿನಿಯಲ್ ಗ್ರಂಥಿ (ಗ್ಲ್ಯಾಂಡ್) ಜಾಗೃತಗೊಂಡು ಲಿಂಗವಂತನು ಹೆಚ್ಚಿನ ಕಾಯಕ, ಬೌದ್ಧಿಕ, ಆಧ್ಯಾತ್ಮಿಕ ಸಾಧನೆಗೈಯ್ದು ಸದಾ ಸಮಚಿತ್ತನಾಗಿ ಶಾಂತಿಯನ್ನು ಹೊಂದಿರುತ್ತಾನೆ ಎಂದೆಲ್ಲಾ ಧರ್ಮವು ಹೇಳುತ್ತದೆ. ಕೈಯಲ್ಲಿ ಏನನ್ನೂ ಹಿಡಿಯದೆ ಭೂಮಧ್ಯೆ ದೃಷ್ಟಿಯನ್ನು ಕೇಂದ್ರೀಕರಿಸಿ ಧ್ಯಾನಸ್ಥರಾಗುವುದರಿಂದ ಸಹ ಇದೇ ಜಾಗೃತಿ ಉಂಟಾಗುತ್ತದೆ ಎಂದು ಯೋಗ ಶಾಲೆಗಳು, ಅಧ್ಯಾತ್ಮಗುರುಗಳು, ಮತ್ತು ಹಿಂದೂ ಸಂಸ್ಕೃತಿಯ ಮತಧರ್ಮಗಳು ಹೇಳುತ್ತವೆ. ವೀರಶೈವ ಧರ್ಮವೂ ಲಿಂಗವನ್ನು ಕುರುಹು ಹಿಡಿದು ಧ್ಯಾನದ ಸಾಧನವಾಗಿಸಿಕೊಳ್ಳಲು ಮಟ್ಟವನ್ನು ದಾಟದ ನಂತರ ಕುರುಹಿನ ಅವಶ್ಯಕತೆಯಿಲ್ಲ ಎಂದೇ ಹೇಳುತ್ತದೆ.

ಪತಂಜಲಿಯ ಅಷ್ಟಾಂಗ ಯೋಗದ 'ಧಾರಣ'ವೇ ಶಿವಾಗಮ ಮತ್ತು ವಚನಗಳು ಹೇಳಿದ ಷಟ್‌ಸ್ಥಲಗಳ 'ಐಕ್ಯ'ರೂಪ. ಧಾರಣ ಮತ್ತು ಸಮಾಧಿ ಎಂಬ ಪತಂಜಲಿಯ ಯೋಗಾಂಗಗಳೇ ವೀರಶೈವದ ಐಕ್ಯಸ್ಥಲ. ಕಂಠ ಹಚ್ಚಿದ ಇಷ್ಟಲಿಂಗವನ್ನು ಚಿನ್ನದ/ಬೆಳ್ಳಿಯ/ಕಟ್ಟಿಗೆಯ ಕರಡಿಗೆಯಲ್ಲಿ ಅಥವಾ ಬಟ್ಟೆಯ ಗಂಟಿನಲ್ಲಿ ಇಡುವ ಉದ್ದೇಶ ಕಂಠಿಯ ಒಳಗಿರುವ ಗುರು ಕರುಣಿಸಿದ ಚಿಕ್ಕ ಸ್ವಾವರಲಿಂಗದ ಪೀಠದ ರಕ್ಷಣೆಗೆ ಕಂಡುಕೊಂಡ ವಿಧಾನವೇ ಹೊರತು ಯಾವ ಕಾಬ್ರನ್ನು, ಹೀಟ್ ಕಂಡಕ್ಟರ್ ಎನ್ನುವ ಸಂಕಪನ್ನಿಸಿದ ವಿಶ್ಲೇಷಣೆಯಲ್ಲ, ಮಕ್ಕಳಿಗೆ ಇಂಥ ತಪ್ಪು ಕಲ್ಪನೆ ಕೊಡುವುದು ಮೂರ್ಖತನವಾಗುತ್ತದೆ.

ಒಟ್ಟಾರೆ ಧ್ಯಾನದ ಸಾಧನೆಯಿಂದ ಯೋಗಸಿದ್ಧಿ ಹೊಂದಿ ಸಾಧಕನು ಭೂತ, ವರ್ತಮಾನ, ಭವಿಷ್ಯತ್ ಕಾಲದ ಪ್ರಮುಖ ಆಗುಹೋಗುಗಳನ್ನು ಕಾಣುತ್ತಾನೆ. ಅತನು ಕುಳಿತಲ್ಲಿಂದಲೇ ತನ್ನ ಆತ್ಮವನ್ನು ಬಯಸಿದ ಸ್ಥಳ, ಮನೆ, ಊರು, ಬೀದಿ, ದೇಶಗಳನ್ನು ಸುತ್ತಿಸುತ್ತಾನೆ. ಒಟ್ಟಾರೆ ಕಾಲಾತೀತ, ಜಾಗಾತೀತನಾಗಿ ಆನೇಕತೆ ನನಗೆ ಅರಿವಾಗುತ್ತಾನೆ ಎಂದು ಅನೇಕ ಸಾಧು ಸಾಧಕರಲ್ಲದೆ ಶೈವ, ವೀರಶೈವ, ವೈದಿಕ, ಸನಾತನ ಮತಧರ್ಮಗಳೆಲ್ಲವೂ ಹೇಳುತ್ತವೆ.

ಇರಲಿ, ಇನ್ನೊಬ್ಬ ವಿದ್ಯಾರ್ಥಿ, "ಜಾತಿ ವ್ಯವಸ್ಥೆ ನಿವಾರಿಸಲು ವಚನಗಳ ಪ್ರೇರಣೆ ಇನ್ನೂ ಆಗಿಲ್ಲವೇಕೆ?" ಎಂದು ಕೇಳಿದರು.

ಇದಕ್ಕೆ ಉತ್ತರಿಸಿದ ಭಾಲ್ಕಿ ಶ್ರೀಗಳು, "ಜಾತಿ ನಿರ್ಮೂಲನೆಗಾಗಿಯೇ ಬಸವಣ್ಣ ಹೋರಾಟ ಮಾಡಿದ್ರು. ಜಾತಿ ಅಂದ್ರ ರೋಗ, ಧರ್ಮ ಅದಕ್ಕ ಔಷಧಿ. ಈಗ ಮಾವು, ಬೇವು, ಹಾಲಿ ಮುಂತಾದ ಕಟಿಗಿಯನ್ನು ಸುಟ್ಟರ ಆದರ ಬೂದಿಯನ್ನು ಇತಿಬಿಡ್ತಾದ್ದ ಅಂತ ಹೇಳೋಕೆ ಆಗ್ತದೇ? ನಮ್ಮ ಧರ್ಮ ಅಂಥದ್ದು" ಎಂದರು.

ಅದರ ಆಜುಬಾಜು ಮೇಲೆ ಕೇಳಿ ಸುತ್ತ ಹಲವಾರು ಮಲತ್ತಯ ಜಾತಿಪೀಠಗಳಿಗೆ ಕುರಿಸಿಕೊಂಡು ಸತ್ತರ ಸತ್ತಿಯ ಮೇಲೆ ಹೊಡೆದಂತೆ ಹೀಗೆ ಉತ್ತರಿಸಿದರು. ಅಂದ ಹಾಗೆ ಈ ಅಭಿಯಾನದ ರಂಗಪ್ರಯೋಗಕಕರೆ ಪಂಡಿತಾರಾಧ್ಯ ಎಂಬ ಓರ್ವ ಮಲತ್ತಯ ಜಾತಿಪೀಠ ಚೆನ್ನಬಸವಣ್ಣನ ದೀಕ್ಷಾ ವಿಧಿ ವಿಧಾನದ ರೀತಿ ದೀಕ್ಷೆ ಪಡೆದು ಇದರಲ್ಲಿ ಈ ಒಕ್ಕೂಟದ ಅಣಿ ಜಾತಿ ಪೀಠ ಸದಸ್ಯರು ಸಹ ಮಲತ್ತಯಗಳು ಮತ್ತು ಲಿಂಗಾಯತ ಹೊರಗಿರುವವರು.

ಇರಲಿ, ಮತ್ತೊರ್ವ ವಿದ್ಯಾರ್ಥಿನಿ, "ಲಿಂಗತಾರತಮ್ಯ ಏಕೆ ಇನ್ನೂ ಇದೆ. ನೀವೆಲ್ಲಾ ಸ್ವಾಮಿಗಳು ಮುಂದೆ ಕುಳಿತಿದ್ದೀರಿ. ಮಾತೆಯರು ಹಿಂದೆ ಕೂತಿದ್ದಾರೆ. ನೀವೇ ಲಿಂಗ ತಾರತಮ್ಯ ಮಾಡುತ್ತಿದ್ದೀರಿ!" ಎಂದು ಆಕ್ಷೇಪಿಸಿದರು.

ಅದಕ್ಕೆ ಸಂವಾದ ನಡೆಸಿಕೊಡುತ್ತಿದ್ದ ಹಿಡಗೂಟದ ಸ್ವಾಮಿಯು, "ನಾವು ಮಹಿಳಾ ಮಾತೆಯರನ್ನು ಹಿಂದೆ ಏತ್ತರದ ಸ್ಥಾನದಲ್ಲಿ ಕೂರಿಸಿ ಪುರುಷ ಸ್ವಾಮಿಗಳನ್ನು ಅವರ ಕೆಳಗೆ ಕೂರಿಸಿದ್ದೇವೆ" ಎಂದು ಹಾಸ್ಯಧಾಟಿಯಲ್ಲಿ ಹೇಳಿದರೆ ಭಾಲ್ಕಿ ಶ್ರೀಗಳು, "ನಾವು ಇಲ್ಲೇಕೆ ಕೂರಬೇಕು ಎಂದು ನಿಯಮವೇನೂ ಹೇಳಿಲ್ಲ, ಇಲ್ಲಿ ಯಾರು ಎಲ್ಲಿ ಬೇಕಾದರೂ ಕೂರಬಹುದು. ಅವರವರ ಇಚ್ಛೆಗನುಸಾರವಾಗಿ ಕುಳಿತಿದ್ದಾರೆ" ಎಂದು ಜಾರಿ ಸಾರಿಸಿದರು.

ಅದಕ್ಕೆ ಸಾಣೇಹಳ್ಳಿ, "ಅಯ್ಯೊ ಲಕ್ಷಾಂತ ತನ್ನ ಗಂಡ ಹೆತ್ತು ಆಕ್ಕ ತಂದಾಗ ಅಕನಿಗೆ ಭೀಮಾರಿ ಹಾಕಿದರು ಎಂದರೆ ಎಂಥ ಸಮಾನತೆ ಇತ್ತು. ಇವುತ್ತು ಯಾಕಿಲ್ಲ? ಈಗ ಸ್ವಾರ್ಥ ತುಂಬಿದೆ" ಎಂದು ಮಾತ ಮುಕ್ತಾಯಗೊಳಿಸಿದರು.

ಒಟ್ಟಾರೆ ಗೊಂದಲ ಗೊಂದಲ ಗೊಂದಲ! ದ್ವಂದ್ವ ದ್ವಂದ್ವ ದ್ವಂದ್ವ!!

ನಂತರ ಇನ್ನೊಬ್ಬ ವಿದ್ಯಾರ್ಥಿ, "ಈಗಲೂ ಕೆಲವು ಕಡೆ ಕೆಲವು ಜಾತಿಯವರಿಗೆ ದೇವಸ್ಥಾನ ಪ್ರವೇಶ ನಿರಾಕರಣೆ ಇದೆ. ಏಕೆ?" ಎಂದು ಕೇಳಿದರು.

ಅದಕ್ಕೆ ಜಾತೀಕಿರಿ ಪಂಡಿತಾರಾಧ್ಯರು, "ದೇವಸ್ಥಾನಗಳಿಗೆ ಹೋಗುವುದು ಬಿಟ್ಟರೆ ಜಾತೀಭೂತ ಹೋಗುತ್ತದೆ" ಎಂದರು. ಆದರೆ ಖುದ್ದು ತಾವೇ ಓರ್ವ ಜಾತೀಕಿರಿದ ಶಾಖಾಮಠಿಯಾಗಿದ್ದುದನ್ನು ಜಾತಿಭೂತ ಎನ್ನಲಿಲ್ಲ! ದೆವ್ವದ ಬಾಯಲ್ಲಿ ಭಗವದ್ಗೀತೆ!

ಇನ್ನೊಬ್ಬ ವಿದ್ಯಾರ್ಥಿ, "ಸಮಾನತೆ ಎನ್ನುವ ನೀವು, ನಿಮ್ಮ ಲಿಂಗಾಯತವೇ ವಿಶ್ವದ ಶ್ರೇಷ್ಠ ಧರ್ಮ ಎಂದು ಏಕೆ ಹೇಳುತ್ತೀರಿ?" ಎಂದು ಕೇಳಿದರು.

ಅದಕ್ಕೆ ಉತ್ತರಿಸಿದ ಮಾತೆಯೊಬ್ಬರು, "ಕ್ರಿಶ್ಚಿಯನ್ನರಲ್ಲಿ ಇದಿಲ್ಲ, ಇಸ್ಲಾಮಿನಲ್ಲಿ ಇದಿಲ್ಲ, ಬ್ರಾಹ್ಮಣರಲ್ಲಿ ಮಹಿಳೆಯರಿಗೆ ಜನಿವಾರವೇ ಇಲ್ಲ, ಅದಕ್ಕೆ ನಮ್ಮದು ಶ್ರೇಷ್ಠ" ಎಂದು ಉತ್ತರಿಸಿ ಕಿಸಕಿಸನೆ ನಕ್ಕು ಧಾರ್ಮಿಕ ಸಮಾನತೆಯ ಉದ್ದೇಶವನ್ನೇ ಅಣ್ಣೆಗೆ ಸರಿದಾರು.

ಮುಂದಿನ ಪ್ರಶ್ನೆ, "ನಮ್ಮ ಜಾತಿಯವರಿಗೆ ಏಕೆ ಟಿಕೆಟ್ ಕೇಳ್ತೀರಿ?"

ಸಾಣೇಹಳ್ಳಿ, "ನಾನು ಏನೇ ಹೇಳಿದರೂ ಅದು ವಿವಾದ ಆಗುತ್ತದೆ. ಇಂಥವರನ್ನೇ ಮಂತ್ರಿ ಮಾಡಿ, ಟಿಕೆಟ್ ಕೊಡಿ ಅನ್ನೋದು ತಪ್ಪು. ಬಸವಣ್ಣ ಸಹ ರಾಜಕಾರಣಿಯೇ. ಹೆಂಡಿಗೇ ಹಿರಿತನ ಎಂಬ ಸರ್ವಜ್ಞನ ವಚನವನ್ನು ಉಲ್ಲೇಖಿಸಿ ಮಠಕ್ಕೆ ಸ್ವಾಮಿ ಹೇಗೆ ಇರಬೇಕು ಎಂದು ತಿಳಿಸುತ್ತಾ ಮಠ, ಸ್ವಾರ್ಥ, ಅಜ್ಞಾನ, ವಿಷಯ ಲೋಲುಪ್ತ ಆಗಿರಬಾರದು" ಎಂದು ತಮ್ಮ ಅಜ್ಞಾನಕ್ಕೆ ಸೆಲೆಬ್ರಿಟ ಲೇಪನ ಹಚ್ಚಿ ಮುದವನ್ನು ಮೆರೆದರು. ವಿಶ್ವಪರ್ಯಾಪ್ತನಂದರೆ ಆ ಮಾತುಗಳು ಮಠಾಧಿಪತಿಗಳಲ್ಲದ ಖುದ್ದು ಮಠಾಧಿಪತಿ ತಾನೇ ಆಗಿದ್ದೇನೆ ಎಂಬ ಆತ್ಮಾವಲೋಕನದ ಅಣಿಮುತ್ತುಗಳಾಗಿದ್ದವು! ಕಣ್ಣಿರುವದಿದ್ದರೆ ಕರುಳಿರುವುದೇ?

ಇನ್ನು ನಡುವೆಯೇ ಸಂವಾದ ಹಿಡಿಗೂಟ ಹಿಡಿದಿದ್ದ ಸ್ವಾಮಿ, "ಜೋರು ಚಪ್ಪಾಳೆ ಪ್ಲೀಸ್! ಜೋರು ಚಪ್ಪಾಳೆ ಪ್ಲೀಸ್!" ಎನ್ನುತ್ತಿದ್ದ.

ಮುಂದೆ ಅಷ್ಟಾವರಣ, ವಿಭೂತಿ, ರುದ್ರಾಕ್ಷಿ, ಲಿಂಗದ ವ್ಯಾಖ್ಯಾನಕ್ಕೆ ಇಳಕಲ್ ಶ್ರೀಗಳು ರುದ್ರಾಕ್ಷಿ ಆಯುರ್ವೇದಿಕ್ ಶಕ್ತಿ. ಲಿಂಗ ಕಾರ್ಬನ್ ಶಕ್ತಿ, ವಿಭೂತಿ ಅರಿವಿನ ಶಕ್ತಿ ಎಂದೇನೋ ಬಡಬಡಿಸಿದರು.

ಇನ್ನೊಬ್ಬ ವಿದ್ಯಾರ್ಥಿನಿ, "ಸ್ವಾಮಿಗಳು ಎಂದರೆ ಈಗ ಭಯ ಸೃಷ್ಟಿಯಾಗಿದೆ. ಇದಕ್ಕೇನು ಹೇಳುತ್ತೀರಿ?" ಎಂದರು.

ಹಿಡಿಗೂಟದ ಸ್ವಾಮಿ, "ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಇಂಥ ಅಪವಾದಗಳು ಇರುತ್ತವೆ. ರೈತರು, ಶಿಕ್ಷಕರು, ವೈದ್ಯರು ಮುಂತಾದ ಎಲ್ಲಾ ರಂಗಗಳಲ್ಲೂ ಇಂಥದ್ದು ಇರುತ್ತದೆ. ಯಾರೋ ಒಬ್ಬ ಸ್ವಾಮಿ ಮಾಡಿದರೆ ಅದು ಎಲ್ಲರದೂ ಅಲ್ಲ" ಎಂದು ಒರೆಸಿ "ಮುಂದಿನ ಪ್ರಶ್ನೆ ಪ್ಲೀಸ್" ಎಂದರು.

ನಡುನಡುವೆ ಪ್ರಶ್ನೆ ಕೇಳಿದವರಿಗೆ 'ಶಹಬ್ಬಾಸ್', 'ಅತ್ಯುತ್ತಮ ಪ್ರಶ್ನೆ' ಮುಂತಾಗಿ ಪುಸಲಾಯಿಸುವ ಪ್ರಕ್ರಿಯೆ ನಡೆಯುತ್ತಲೇ ಇತ್ತು.

ಹೀಗೆಂದ ಎನ್ನುವವರು, "ಶಿವ ಪುರಾಣದಲ್ಲಿ ಪ್ರತಿಪಾದಿತ್ತ ಐದು ಲಿಂಗ ವರ್ಣನೆ ಇದೆ. ಬಸವಣ್ಣ ಹೇಳಿದ ಇಷ್ಟಲಿಂಗ ಈ ಐದರಲ್ಲಿ ಯಾವ ವರ್ಗದ್ದು?" ಎಂದು ಕೇಳಿದರು.

ಅದಕ್ಕೆ ಭಾಲ್ಕಿ ಶ್ರೀಗಳು ಹೇಳಿದ್ದು- "ವಿಶ್ವಾತ್ಮಕ ರೂಪದ್ದು. ಅದಕ್ಕೂ ಶೈವ ಪುರಾಣಕ್ಕೂ ಸಂಬಂಧವಿಲ್ಲ".

ಅವರಿಂದ ಮೈಕ್ ಕಿತ್ತುಕೊಂಡ ಸಾಣೇಹಳ್ಳಿ ಸಂಸಾರಿ ಬರಗೂರು ಎನ್ನುವವರು, "ನಾವು ಪೂಜೆ ಮಾಡುವವರಲ್ಲ, ನಾವು ಅನುಸಂಧಾನ ಮಾಡುವವರು. ಮುಂದಿನ ಪ್ರಶ್ನೆ, ಮುಂದಿನ ಪ್ರಶ್ನೆ ಕೇಳಿ" ಎಂದರು.

ಮುಂದೆ ಓರ್ವ ಗೃಹಿಣಿ "ಗಣಪತಿ ಮೂರ್ತಿ ಇಡಬೇಕೋ ಅಥವಾ ಬಸವ ಮೂರ್ತಿ ಇಡ್ಬೇಕೋ?" ಎಂದರು.

ಒಬ್ಬ ಲಿಂಗಾಯತ, "ಇಷ್ಟಲಿಂಗ ಬಿಟ್ಟು ಬೇರೆ ಏನೂ ಇಡಬೇಡಿ. ಆದರೆ ಬಸವಣ್ಣ ಓಕೆ. ಬಸವಣ್ಣನ ಮೂರ್ತಿ ಇಡಿ" ಎಂದ.

ಅತನಿಂದ ಮೈಕ್ ಕಿತ್ತುಕೊಂಡ ಬರಗೂರು ಎಂಬ ಸಂಸಾರಿ ಶರಣ, "ಲಿಂಗವು ಪಂಚಭೂತಗಳ ಅನುಸಂಧಾನದ ಆತ್ಮ ಬಸವಣ್ಣನ ಮೂರ್ತಿಯ ಬೇಡ. ಲಿಂಗದೊಂದಿಗೆ ಅನುಸಂಧಾನ ಮಾಡಿಕೊಂಡರೆ ಸಾಕು. ಯಾವ ಮೂರ್ತಿಪೂಜೆ ಮಾಡುವಂತಿಲ್ಲ, ಅದು ಲಿಂಗಕ್ಕೆ ಮಾಡುವ ಅಪಚಾರ" ಎಂದು ಘರ್ಜಿಸಿದರು. ಅಲ್ಲದೇ ಕೆಲವು ಸ್ವಾಮಿಗಳ ಕಿವಿಯಲ್ಲಿ ತಾನು ಸರಿ ಎಂಬ ಉಲಿದರು.

ಮತ್ತೆ ಮೈಕಿನಲ್ಲಿ, "ನನ್ನ ಎಲ್ಲಾ ಹಿರಿಯರು, ಗುರುಗಳು, ಲಿಂಗದೊಳಗೆ (ಲಿಂಗೈಕ್ಯ). ಆದರೆ ಅಂಥ ನಾವು. ಲಿಂಗವನ್ನು ಪೂಜಿಸಿ ಲಿಂಗವೇ ಆಗುವವರು ನಾವು" ಎಂದರು..... ಲಿಂಗೈಕ್ಯ ಓಕೆ, ಆದರೆ ರೇಣುಕರ ಲಿಂಗೋದ್ಭವ ಏಕೆ? ಎಂದು ಮಾಡಲ್ ಉಪೇಂದ್ರರಾಗಬಹುದು.

ಇವರ ಪ್ರಕಾರ ಅಖಿಂಡ ಶಕ್ತಿಯನ್ನು ಒಂದು ಯಃಕಶ್ಚಿತ್ ಮೂರ್ತಿಗೆ ರೂಪಿಸುವುದು ತಪ್ಪು. ಆದರೆ ಕುರುಹಿನ ರೂಪದ ಲಿಂಗ ಸರಿ!

ಗೊಂದಲ ಗೊಂದಲ ಗೊಂದಲ! ದ್ವಂದ್ವ ದ್ವಂದ್ವ ದ್ವಂದ್ವ! ಬರದ ಗುಂಡಿಯಲ್ಲಿ ಕ್ರಿಗಳ ಜಿಜಾಸು ಉತ್ತರ!

ಕಡೆಗೆ ಧರ್ಮಸ್ಥಳದ ಅಣ್ಣಪ್ಪ, ಹೊರನಾಡು ಅನ್ನಪೂರ್ಣೇಶ್ವರಿ ಗಿಂತಲೂ ಪೋಲಿಸನ್ನ, "ಜಯ ಕಲ್ಯಾಣ ಜಯ ಕಲ್ಯಾಣ ಜಯ ಕಲ್ಯಾಣ ಜಯಹೇ....." ಎಂದು ಮಂಗಳ ಹಾಡಿದರು.

ಅಂದಹಾಗೆ ಈ ಬಸವ ಸಂಸ್ಕೃತಿ ರಂಗಪ್ರಯೋಗದ ಪ್ರಾಥನೆ ಮತ್ತು ಮಂಗಳ ಹಾಡುವ ಗಾಯಕಿಯು ಸರಕಾರಿ ಶಾಲೆಯ ವಾಸ್ತವ ಶಾಲೆಯ ಶಿಕ್ಷಕಿ. ಸಾಣೇಹಳ್ಳಿಯ ಎಲ್ಲಾ ಕಾರ್ಯಕ್ರಮ, ವಿದೇಶಿ ಪ್ರವಾಸಗಳಲ್ಲಿ ಹಾಡುವ ಕಾಯಕ ಗಾಯಕಿ. ಇವರಿಗೆ ಸರಕಾರ ಅದ್ಯಾವ ನಿಯಮಾವಳಿಗಳ ಅಡಿಯಲ್ಲಿ ವಿದೇಶ ಪ್ರವಾಸದ ಅನುಮತಿ ಮತ್ತು ತಿಂಗಳಾನುಗಟ್ಟಲೆ ರಜೆಯನ್ನು ಮಂಜೂರು ಮಾಡಿದೆಯೋ ಪಾಪ ಜಾನಕಿಯವರೇ ಬಲ್ಲರು! ಸಂಬಳ ಸರಕಾರಿ, ಸೇವೆ ಮಠದಲ್ಲಿ ಎಂಬುದು ಯಾವ ಕಾಯಕ ಸಂಸ್ಕೃತಿಯೋ ಕಾಯಕಯೋಗಿ ಸಾಣೇಹಳ್ಳಿಯೇ ಬಲ್ಲ!

(ಮುಂದುವರಿಯುವುದು)

(ಲೇಖಕರು ಶಿಕಾಗೋ ನಿವಾಸಿ ಹಾಗೂ ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:68, Issue: 140

ಸಮಾಚಾರ ಸಣ್ಣದಲ್ಲ

ಡಿಸಿಎಂ ಏಕನಾಥ್ ಎಕ್ಸ್ ಖಾತೆ ಹ್ಯಾಕ್

ಮುಂಬೈ: ಮಹಾರಾಷ್ಟ್ರ ಉಪ ಮುಖ್ಯಮಂತ್ರಿ (ಡಿಸಿಎಂ) ಏಕನಾಥ್ ಶಿಂದೆ ಅವರ 'ಎಕ್ಸ್' ಖಾತೆ ಭಾನುವಾರ ಹ್ಯಾಕ್ ಆಗಿದೆ. ಹ್ಯಾಕರ್‌ಗಳು ಶಿಂದೆ ಅವರ ಖಾತೆಯಲ್ಲಿ ಪಾಕಿಸ್ತಾನ ಮತ್ತು ಟರ್ಕಿ ದೇಶಗಳ ಧ್ವಜಗಳನ್ನು ಪೋಸ್ಟ್ ಮಾಡಿದ್ದಾರೆ. ಖಾತೆ ಹ್ಯಾಕ್ ಆಗಿರುವುದು ತಿಳಿಯುತ್ತಲೇ ಸೈಬರ್ ಕ್ರೈಂ ಪೊಲೀಸ್ ಗಮನಕ್ಕೆ ತಂದಿರುವೆ. ಹ್ಯಾಕ್ ಆದ ನಂತರದ 45 ನಿಮಿಷಗಳಲ್ಲೇ ಖಾತೆ ಮರುಸ್ಥಾಪನೆ ಮಾಡಿ, ಹ್ಯಾಕರ್‌ಗಳು ಮಾಡಿದ್ದ ಪೋಸ್ಟ್‌ಗಳನ್ನು ಡಿಲಿಟ್ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಐಫೋನ್-17ಗಾಗಿ ಮುಂಬೈ ಬಡಿದಾಟ

ಮುಂಬೈ: ಐಫೋನ್ 17 ಸರಣಿ ಸ್ಮಾರ್ಟ್‌ಫೋನ್ ಭಾರತದ ಮಾರುಕಟ್ಟೆ ಪ್ರವೇಶಿಸಿದ್ದು, ದೆಹಲಿ, ಮುಂಬೈ, ಬೆಂಗಳೂರು ಸೇರಿ ದೇಶದೆಲ್ಲೆಡೆ ಜನರು ಖರೀದಿಗೆ ಭಾರೀ ಆಸಕ್ತಿ ತೋರುತ್ತಿದ್ದಾರೆ. ಆಪಲ್ ಷೋರೋಂ ಮುಂದೆ ಸಾಲುಗಟ್ಟಿದ್ದಾರೆ. ಆ್ಯಪಲ್ ಐಫೋನ್ 17 ಸರಣಿ ಆರಂಭಿಕ ಬೆಲೆ ರು.82,900ರಷ್ಟಿದ್ದು, ಮೇಲ್ಮಟ್ಟದ ಮಾದರಿಗೆ ಗರಿಷ್ಠ 2,29,900 ರು.ಗಳಂತೆ ಮಾರಾಟವಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ. ಈ ಮಧ್ಯೆ, ಮುಂಬೈನ ಬಂದಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿರುವ ಜಿಯೋ ಸೆಂಟರ್‌ನಲ್ಲಿರುವ ಆ್ಯಪಲ್ ಸ್ಟೋರ್ ಹೊರಗೆ ಗ್ರಾಹಕರ ಮಧ್ಯೆ ಹೊಡೆದಾಟ ನಡೆದಿದೆ. ಭದ್ರತಾ ಸಿಬ್ಬಂದಿ ಮಧ್ಯಪ್ರವೇಶಿಸಿ ಹೊಡೆದಾಟ ತಡೆದಿದ್ದಾರೆ.

ಭಾರತ ಯುದ್ಧಕ್ಕೆ ಬಂದರೆ ಪಾಕ್ ಜತೆ ಸೌದಿ: ಖ್ವಾಜಾ

ಇಸ್ಲಾಮಾಬಾದ್: ಭಾರತವೇ ಆಗಿರಲಿ, ಬೇರಾವ ದೇಶವೇ ಆಗಿರಲಿ ಪಾಕ್ ಮೇಲೆ ಯುದ್ಧ ಸಾರಿದರೆ ಸೌದಿ ಅರೇಬಿಯ ಖಂಡಿತವಾಗಿಯೂ ಪಾಕ್ ಬೆಂಬಲಕ್ಕೆ ಬರಲಿದೆ' ಎಂದು ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಹೇಳಿದ್ದಾರೆ. ಸೌದಿ-ಪಾಕ್ ಪರಸ್ಪರ ರಕ್ಷಣಾ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದ್ದು, ಈ ಸಂಬಂಧ ಪ್ರತಿಕ್ರಿಯಿಸಿದ ಸಚಿವ ಖ್ವಾಜಾ, ಯೂರೋಪ್ ದೇಶಗಳ ನ್ಯಾಟೋ ಮಾದರಿ ಒಪ್ಪಂದ ಇದಾಗಿದೆ. ಈ ಒಪ್ಪಂದಕ್ಕೆ ಇನ್ನಷ್ಟು ಮುಸ್ಲಿಂ ದೇಶಗಳು ಸೇರುವ ಸಾಧ್ಯತೆ ಇದೆ ಎಂದರು. ಇದೇನೂ ಆಕ್ರಮಣಕಾರಿ ಒಪ್ಪಂದವಲ್ಲ. ಬದಲಾಗಿ 'ಪರಸ್ಪರ ರಕ್ಷಣಾತ್ಮಕ ಒಪ್ಪಂದ'. ವಿಶೇಷವಾಗಿ, ಮುಸ್ಲಿಂ ದೇಶಗಳು ಒಟ್ಟಾಗಿ ಹೋರಾಡಲು ಇಂಥ ಒಪ್ಪಂದದ ಅಗತ್ಯವಿದೆ ಎಂದು ಸಚಿವ ಖ್ವಾಜಾ ಪ್ರತಿಪಾದಿಸಿದ್ದಾರೆ. ಪಾಕ್ ಮೂಲದ ಉಗ್ರರು ಭಾರತದಲ್ಲಿ ಮತ್ತೆ ಭಯೋತ್ಪಾದನೆ ನಡೆಸಿದರೆ ಆಪರೇಷನ್ ಸಿಂದೂರ್ ಪುನಾರಂಭಗೊಳ್ಳಲಿದೆ ಎಂದೇ ಭಾರತ ಹೇಳುತ್ತಿದೆ.



ಇಸ್ರೇಲ್ ತೀವ್ರ ದಾಳಿ: ಗಾಜಾದಲ್ಲಿ 91 ಸಾವು

ಟೆಲ್‌ಅವಿವ್: ಗಾಜಾ ಸ್ಟ್ರಿಪ್ ಪೂರ್ಣ ಕೈವಶ ಮಾಡಿಕೊಳ್ಳುವ ಉದ್ದೇಶದಿಂದ ಗಾಜಾ ಮೇಲಿನ ದಾಳಿಯನ್ನು ಇಸ್ರೇಲ್ ಮತ್ತಷ್ಟು ತೀವ್ರಗೊಳಿಸಿದ್ದು, ಶನಿವಾರ ಒಂದೇ ದಿನ 91 ಮಂದಿ ಸಾವಿಗೀಡಾಗಿದ್ದಾರೆ. ಗಾಜಾ ನಗರವನ್ನು ವಶಪಡಿಸಿಕೊಳ್ಳಲು ವಾಯುಪಡೆ ಮತ್ತು ಸೇನಾಪಡೆಯ ಜಂಟಿ ಕಾರ್ಯಾಚರಣೆಯನ್ನು ಇಸ್ರೇಲ್ ತೀವ್ರಗೊಳಿಸಿದೆ. ವಸತಿ ಕಟ್ಟಡಗಳು, ಆಶ್ರಯ ತಾಣಗಳು ಹಾಗೂ ಗಾಜಾದಿಂದ ಜನರನ್ನು ಬೇರೆಡೆಗೆ ಕರೆದೊಯ್ಯುತ್ತಿದ್ದ ಟ್ರಕ್‌ಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಪರಿಣಾಮ ಒಂದೇ ದಿನದಲ್ಲಿ ಗಾಜಾ ನಗರ ಭಾಗದಲ್ಲಿ 91 ಪ್ಯಾಲೆಸ್ಟೀನಿಯನ್ನರು ಹತರಾಗಿದ್ದಾರೆ. ಇವರಲ್ಲಿ ಪ್ರಮುಖ ವೈದ್ಯರ ಕುಟುಂಬ ಸದಸ್ಯರು ಸೇರಿದ್ದಾರೆ ಎಂದು 'ಅಲ್ ಜಜೀರಾ' ಮಾಧ್ಯಮ ವರದಿ ಮಾಡಿದೆ.

ಅಕ್ರಮ ಬಾಂಗ್ಲಾ ವಲಸಿಗರಿಬ್ಬರ ಸೆರೆ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯ ಪೊಲೀಸರು ನೈಋತ್ಯ ಜಿಲ್ಲೆಯ ಮಹಿಪಾಲಪುರದಲ್ಲಿ ನೆಲೆ ಕಂಡುಕೊಂಡಿದ್ದ ಇಬ್ಬರು ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ಭಾನುವಾರ ಬಂಧಿಸಿದ್ದು, ಗಡಿಪಾರು ಪ್ರಕ್ರಿಯೆಯನ್ನು ಆರಂಭಿಸಿದ್ದಾರೆ. ಬಾಂಗ್ಲಾದೇಶದ ಗಾಜಿಪುರ ಜಿಲ್ಲೆಯ ಶಿಶಿರ್ ಹುಬರ್ಟ್ ರೊಜಾರಿಯೊ (35) ಮತ್ತು ಕಾಕ್ಸ್ ಬಜಾರ್ ಜಿಲ್ಲೆಯ ಮೊಹಮ್ಮದ್ ತೌಹಿದೂರ್ ರೆಹಮಾನ್ (33) ಬಂಧಿತರು.

{ ಪ್ರಶಾಂತ್ ಕಿಶೋರ್ } ಜನ್ ಸುರಾಜ್ ಪಕ್ಷ

ಪ್ರಧಾನಿ ನರೇಂದ್ರ ಮೋದಿ ಅವರ ತಾಯಿಯನ್ನು ಆರ್‌ಜೆಡಿ ಕಾರ್ಯಕ್ರಮದಲ್ಲಿ ನಿಂದಿಸಿರುವ ಆರೋಪ ಎಲ್ಲವೂ ಚುನಾವಣೆ ಹಿನ್ನೆಲೆಯ 'ಮ್ಯಾಚ್ ಫಿಕ್ಸಿಂಗ್' ಅಷ್ಟೇ. ಬಿಜೆಪಿ, ಕಾಂಗ್ರೆಸ್, ಆರ್‌ಜೆಡಿ ಇದರ ಪಾತ್ರಧಾರಿಗಳಾಗಿವೆ. ರಾಜ್ಯದಲ್ಲಿನ ಮೂಲ ಸೌಕರ್ಯ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯಲೆಂದೇ ಈ ಪಕ್ಷಗಳು ನಾಟಕ ಮಾಡುತ್ತಿವೆ ಅಷ್ಟೇ.

ಜಮ್ಮು-ಕಾಶ್ಮೀರದ ಕುಪ್ವಾರ ಬಳಿಯ ನೌಗಾಮ್ ಎಲ್‌ಒಸಿ ಶನಿವಾರ ಸಂಜೆ 6.15ರಿಂದ ಒಂದು ಗಂಟೆ ಕಾಲ ಚಕಮಕಿ

ಭಾರತ-ಪಾಕ್ ಸೈನಿಕರ ಮಧ್ಯೆ ಗುಂಡಿನ ಚಕಮಕಿ

ಶ್ರೀನಗರ: ಇದೇ ವರ್ಷದ ಮೇ 7ರಿಂದ 10ರವರೆಗೆ ಭಾರತ ನಡೆಸಿದ 'ಆಪರೇಷನ್ ಸಿಂದೂರ' ಸೇನಾ ಕಾರ್ಯಾಚರಣೆ ವೇಳೆ 'ಕದನ ವಿರಾಮ ಘೋಷಣೆ' ಆದ ಬಳಿಕ ಬಹುತೇಕ ಮೌನಕ್ಕೆ ಶರಣಾಗಿದ್ದ ಪಾಕಿಸ್ತಾನ ಸೇನೆ ಈಗ ಮತ್ತೆ ಗಡಿಯಲ್ಲಿ ತಂಟೆ ಶುರು ಮಾಡಿದೆ.

ಜಮ್ಮು-ಕಾಶ್ಮೀರದ ಕುಪ್ವಾರ ಪ್ರದೇಶದಲ್ಲಿರುವ ಗಡಿ ನಿಯಂತ್ರಣ ರೇಖೆ(ಎಲ್‌ಒಸಿ) ಬಳಿಯ ನೌಗಾಮ್ ಪ್ರದೇಶದಲ್ಲಿ ಭಾರತ-ಪಾಕ್ ಸೈನಿಕರ ನಡುವೆ ಶನಿವಾರ ಸಂಜೆ ಗುಂಡಿನ ಚಕಮಕಿ ನಡೆದಿದೆ. ಆದರೆ, ಕುಪ್ವಾರದ ಬಳಿ 'ಎಲ್‌ಒಸಿ'ಯ ಉದ್ದಕ್ಕೂ ಎರಡೂ ಕಡೆಯಿಂದ ಸಣ್ಣ ಪ್ರಮಾಣದಲ್ಲಿ ಗುಂಡಿನ ಚಕಮಕಿ ನಡೆದಿದೆ ಅಷ್ಟೆ. ಈ ಘಟನೆ ಕದನ ವಿರಾಮ ಉಲ್ಲಂಘನೆಗೆ ಸಮ ನಲ್ಲ ಎಂದು ಭಾರತೀಯ ಸೇನೆ ಸ್ಪಷ್ಟಪಡಿಸಿದೆ.

ಶನಿವಾರ ಸಂಜೆ 6.15ರ ವೇಳೆ ಪಾಕಿಸ್ತಾನದ ಕಡೆಯಿಂದ ಗುಂಡಿನ ಚಕಮಕಿ ಆರಂಭವಾಯಿತು. ಅದಕ್ಕೆ ಭಾರತೀಯ ಸೇನಾಪಡೆಗಳ ಯೋಧರೂ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. ಒಂದು ಗಂಟೆವರೆಗೂ ಎರಡೂ ಕಡೆಯಿಂದ ಗುಂಡಿನ ಸುರಿಮಳೆಯಾಗಿದೆ. ನಂತರ ಚಕಮಕಿ ನಿಂತು ಹೋಗಿದೆ. ಭಾರತದ ಕಡೆಯಲ್ಲಿ ಯಾರಿಗೂ ಗಾಯವಾಗಿಲ್ಲ ಎಂದು ಮೂಲಗಳಿಂದ ತಿಳಿದು ಬಂದಿದೆ. ಆದರೆ, ಈವರೆಗೂ, ಭಾರತೀಯ ಸೇನಾಪಡೆಗಳಿಂದ ಈ ಗುಂಡಿನ ಚಕಮಕಿ ಬಗ್ಗೆ ಯಾವುದೇ ಅಧಿಕೃತ ಹೇಳಿಕೆ ಹೊರಬಿದ್ದಿಲ್ಲ.

ಮೇ 10ರಿಂದ ಕದನ ವಿರಾಮ: ಪಾಕಿಸ್ತಾನ ಪದೇ ಪದೇ ಕೋರಿಕೆ ಸಲ್ಲಿಸಿದ್ದರಿಂದ ಮೇ 10ರ ಸಂಜೆ 5 ಗಂಟೆಗೆ ಭಾರತ ಕದನ ವಿರಾಮಕ್ಕೆ ಒಪ್ಪಿಕೊಂಡಿತು. ಆದರೆ, ನಂತರದ ದಿನಗಳಲ್ಲಿ ಪಾಕ್ ಕಡೆಯಿಂದ ಒಂದೇ ಒಂದು ಗುಂಡು ಹಾರಿದರೂ ಈಗ ಅಲ್ಪ ವಿರಾಮ ಘೋಷಿಸಲಾಗಿರುವ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯನ್ನು ಮತ್ತೆ ಮುಂದುವರಿಸಲಾಗುವುದು ಎಂದು ಭಾರತ ಸರಕಾರದ ಬಲವಾಗಿಯೇ ಪಾಕ್‌ಗೆ ಎಚ್ಚರಿಕೆ ನೀಡಿತ್ತು. ಆದರೆ, ಪಾಕ್ ಕಡೆಯಿಂದ ಮೊದಲಿಗೆ ಆ.5ರಂದು ಕದನ ವಿರಾಮದ ಉಲ್ಲಂಘನೆಯಾದ ಬಗ್ಗೆ ಕೆಲವು ವರದಿಗಳು ಬಂದವು. ಪೂಂಚ್ ಪ್ರದೇಶದಲ್ಲಿ ಕದನ ವಿರಾಮ ಉಲ್ಲಂಘನೆಯ ಕುರಿತು ಕೆಲ ಸಾಮಾಜಿಕ ಮಾಧ್ಯಮಗಳಲ್ಲಿ ವರದಿ ಪ್ರಕಟವಾದವು. ಆದರೆ, 'ಪಾಕಿಸ್ತಾನದಿಂದ ಕದನ ವಿರಾಮ ಉಲ್ಲಂಘನೆಯಾಗಿಲ್ಲ. ನೆರೆ ದೇಶದ ಕಡೆಯಿಂದ ಅಪ್ರಚೋದಿತ ಗುಂಡಿನ ದಾಳಿ ನಡೆದಿಲ್ಲ' ಎಂದು ಭಾರತೀಯ ಸೇನೆ ಸ್ಪಷ್ಟಪಡಿಸಿತ್ತು.

- ಚಕಮಕಿ ಬಳಿಕ ಎರಡೂ ಕಡೆ ನಿಶ್ಯಬ್ಧ- ಸಾವು-ನೋವು ವರದಿ ಆಗಿಲ್ಲ
- ಘಟನೆ ಸಂಬಂಧ ಈವರೆಗೂ ಸೇನೆಯಿಂದ ಹೇಳಿಕೆ ಇಲ್ಲ

ಉದ್ದೇಶ ಪೂರ್ಣ: ಯುದ್ಧಕ್ಕೆ ವಿರಾಮ

ಮೇ 7ರಂದು ಆರಂಭಿಸಿದ ಯುದ್ಧವನ್ನು ಬಹಳ ಬೇಗ (ಮೇ10 ರಂದು) ನಿಲ್ಲಿಸಿದೆವು. ಪಾಕ್ ಸೇನೆ ನಿಸ್ಸಂದೇಹವಾಗಿ ಹಿಂದೆ ಸರಿಯಿತು. ನಮ್ಮ ಆಪರೇಷನ್ ಸಿಂದೂರ್ ಉದ್ದೇಶ ಉಗ್ರರ ದಮನವಾಗಿತ್ತು. ಅದನ್ನು ನಮ್ಮ ಸೇನೆ ಸಾಧಿಸಿತು. ಉದ್ದೇಶ ಈಡೇರಿದ್ದರಿಂದ ಸೇನಾ ಸಂಘರ್ಷವನ್ನು ಬೇಗನೆ ಕೊನೆಗೊಳಿಸಲಾಯಿತು ಎಂದು ಶನಿವಾರ ಕಾರ್ಯಕ್ರಮವೊಂದರಲ್ಲಿ ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್ ಹೇಳಿದ್ದಾರೆ.

ಪಹಲ್ಗಾಮ್ ಕಹಿ ನೆನಪು

ಏ.22ರಂದು ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್ ಬಳಿಯ ಬೈಸರನ್ ಹುಲ್ಲು ಗಾವಲು ಪ್ರದೇಶದಲ್ಲಿ ವಿಹರಿಸುತ್ತಿದ್ದ ಕರ್ನಾಟಕ, ಕೇರಳ ಸೇರಿದಂತೆ ಭಾರತದ ವಿವಿಧ ರಾಜ್ಯಗಳು ಮತ್ತು ನೇಪಾಳದ ಪ್ರವಾಸಿಗರ ಗುಂಪಿನ ಮೇಲೆರೆಗಿದ ಪಾಕಿಸ್ತಾನ ಮೂಲದ 'ಟಿಆರ್‌ಎಫ್' ಉಗ್ರ ಸಂಘಟನೆಯ ಮೂವರು ಬಂದೂಕುಧಾರಿ ಉಗ್ರರು, 25 ಪ್ರವಾಸಿಗರು ಮತ್ತು ಒಬ್ಬ ಕಾಶ್ಮೀರ ನಿವಾಸಿಯನ್ನು ಗುಂಡಿಕ್ಕಿ ಹತ್ಯೆ ಮಾಡಿದರು. ಘಟನೆಯಿಂದ ಅಕ್ಷರಶಃ ಕುದ್ದು ಹೋದ ದೇಶ, ಪಾಕಿಸ್ತಾನದ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿತು.

ದೇಶವಾಸಿಗಳ ಮನದ ಭಾವನೆಯನ್ನು ಅರ್ಥ ಮಾಡಿಕೊಂಡ ಭಾರತ ಸರಕಾರ ಮೇ 7ರ ನಸುಕಿನ 1 ಗಂಟೆಯಲ್ಲಿ ಆಪರೇಷನ್ ಸಿಂದೂರ್‌ಗೆ ಚಾಲನೆ ನೀಡಿ, ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಉಗ್ರರ ನೆಲೆಗಳನ್ನು ಧ್ವಂಸಗೊಳಿಸಿತು. ಅಷ್ಟೂ ಸಾಲದು ಎಂಬಂತೆ ಪಾಕ್ ಪ್ರಮುಖ ವಾಯುನೆಲೆಗಳು, ಸೇನಾ ನೆಲೆಗಳ ಮೇಲೆಯೂ ಕ್ಷಿಪಣಿಗಳನ್ನು ಪ್ರಯೋಗಿಸಿ ಪಾಕ್‌ನ ಮೂಲ ಸೌಕರ್ಯಗಳನ್ನು ನಾಶಪಡಿಸಿತು. ಕಡೆಗೆ ಪರ್ವತ ಪ್ರದೇಶದಲ್ಲಿನ ಪಾಕ್ ಅಣ್ವಸ್ತ್ರ ಸಂಗ್ರಹಾಗಾರದ ಮೇಲೆಯೂ ಬಾಂಬ್ ದಾಳಿ ನಡೆಸಿತು. ಆಗಲೇ ಪಾಕ್ ಸರಕಾರ ಭಾರತದೆದುರು ಮಂಡಿಯೂರಿ, ಕದನ ವಿರಾಮಕ್ಕೆ ಮನವಿ ಮಾಡಿತು.

ಸೈಬರ್ ದಾಳಿ: ಯೂರೋಪ್ ವಿಮಾನ ನಿಲ್ದಾಣ ಅಸ್ತವ್ಯಸ್ತ

ಲಂಡನ್: ಯುನೈಟೆಡ್ ಕಿಂಗ್ಡಂ ಸೇರಿದಂತೆ ಯೂರೋಪ್‌ನ ವಿವಿಧ ದೇಶಗಳಲ್ಲಿನ ವಿಮಾನ ನಿಲ್ದಾಣಗಳು ಸೈಬರ್ ದಾಳಿಗೆ ಒಳಗಾಗಿದ್ದರಿಂದ ಶನಿವಾರ 400ಕ್ಕೂ ಅಧಿಕ ವಿಮಾನಗಳ ಸಂಚಾರ ಕಡೇ ಕ್ಷಣದಲ್ಲಿ ರದ್ದಾಯಿತು. ನೂರಾರು ವಿಮಾನಗಳು ಬಹಳ ತಡವಾಗಿ ಸಂಚಾರ ಆರಂಭಿಸುವಂತಾಯಿತು.

ಲಂಡನ್‌ನ ಪ್ರಸಿದ್ಧ ಹೀತ್ರೂ ವಿಮಾನ ನಿಲ್ದಾಣವೂ ಸೈಬರ್ ದಾಳಿಗೆ ಒಳಗಾಗಿತ್ತು. ಪ್ರಮುಖ ಯುರೋಪ್ ದೇಶಗಳಿಗೆ ಸಂಚಾರ ಆರಂಭಿಸಬೇಕಿದ್ದ ನೂರಾರು ವಿಮಾನಗಳ ಹಾರಾಟ ಬಹಳ ವಿಳಂಬವಾಯಿತು. ಪ್ರಯಾಣಿಕರು 3 ಗಂಟೆಗೂ ಹೆಚ್ಚು ಕಾಲ ಸರತಿ ಸಾಲಿನಲ್ಲಿ ನಿಲ್ಲಬೇಕಾಯಿತು. ಹಲವು ವಿಮಾನಗಳ ಹಾರಾಟವೇ ರದ್ದಾಯಿತು ಎಂದು ವರದಿಯಾಗಿದೆ. ಸೈಬರ್ ದಾಳಿಯಿಂದಾಗಿ ಯೂರೋಪಿನ ಹಲವು ವಿಮಾನ ನಿಲ್ದಾಣಗಳಲ್ಲಿ ಬೃಹತ್ ತಾಂತ್ರಿಕ ಸಮಸ್ಯೆ ಎದುರಾಯಿತು. ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರು ಚೆಕ್-ಇನ್ ಮತ್ತು ಬೋರ್ಡಿಂಗ್ ವ್ಯವಸ್ಥೆಯೂ ಅಸ್ತವ್ಯಸ್ತ ವಾಯಿತು. ಪರಿಣಾಮ ಯುರೋಪಿನ ಹಲವು ವಿಮಾನ ನಿಲ್ದಾಣಗಳಲ್ಲಿ ವಿಮಾನ ಹಾರಾಟದ ಇಡೀ ವ್ಯವಸ್ಥೆಯೇ ಕೆಲವು ಗಂಟೆಗಳ ಕಾಲ ಹದಗೆಟ್ಟಿತ್ತು ಎಂದು ಬೆಲ್ಜಿಯಂನ ಬ್ರಸೆಲ್ಸ್ ವಿಮಾನ ನಿಲ್ದಾಣದ ಅಧಿಕಾರಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ದೇಶದೆಲ್ಲೆಡೆ ಎಸ್‌ಐಆರ್‌ಗೆ ಸಿದ್ಧತೆ

ದೆಹಲಿ: ದೇಶಾದ್ಯಂತ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆಯನ್ನು ಚುನಾವಣಾ ಆಯೋಗ ನಡೆಸಲು ಸಜ್ಜಾಗುತ್ತಿದೆ. ಅದಕ್ಕಾಗಿ ಸೆ.30ರೊಳಗೆ ಎಲ್ಲಾ ಸಿದ್ಧತೆ ಮಾಡಿಕೊಳ್ಳುವಂತೆ ರಾಜ್ಯ ಚುನಾವಣಾ ಅಧಿಕಾರಿಗಳಿಗೆ ಕೇಂದ್ರ ಚುನಾವಣಾ ಆಯೋಗ ಸ್ಪಷ್ಟ ಸೂಚನೆ ನೀಡಿದೆ.

ಬಿಹಾರದಲ್ಲಾಗಲೇ 'ಎಸ್‌ಐಆರ್' ಪ್ರಕ್ರಿಯೆ ಪೂರ್ಣಗೊಂಡಿದೆ. ಉಳಿದೆಲ್ಲಾ ರಾಜ್ಯಗಳಲ್ಲಿಯೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯನ್ನು ಚುನಾವಣಾ ಆಯೋಗ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಆರಂಭಿಸುವ ಸಾಧ್ಯತೆಯಿದೆ.

ಸೆಪ್ಟೆಂಬರ್ ಮಾಸಾರಂಭದಲ್ಲಿ ದೆಹಲಿಯಲ್ಲಿ ನಡೆದ ರಾಜ್ಯ 'ಮುಖ್ಯ ಚುನಾವಣಾ ಅಧಿಕಾರಿ'(ಸಿಇಒ)ಗಳ ಸಭೆಯಲ್ಲಿ, ಮುಂದಿನ 10-15 ದಿನಗಳಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಗೆ ಸಿದ್ಧರಾಗಿರಿ ಎಂದು ಚುನಾವಣಾ ಆಯೋಗದ ಮುಖ್ಯಸ್ಥರು ಸೂಚಿಸಿದ್ದರು. ಈಗ ಸಿದ್ಧತೆಗೆ ಸೆ.30ರ ಗಡುವು ನಿಗದಿಪಡಿಸಲಾಗಿದೆ.

ಕಳೆದ ಎಸ್‌ಐಆರ್ ನಂತರ ಪ್ರಕಟಿಸಿರುವ ರಾಜ್ಯಗಳ ಮತದಾರರ ಪಟ್ಟಿಯನ್ನು ಸಿದ್ಧವಾಗಿಟ್ಟುಕೊಳ್ಳುವಂತೆ ಆಯಾ ರಾಜ್ಯಗಳ 'ಸಿಇಒ'ಗಳಿಗೆ ತಿಳಿಸಲಾಗಿದೆ ಎಂದು ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕದ ಪವನ್ ಕುಮಾರ್ ಪಟನಾ ಹೈಕೋರ್ಟ್ ಸಿಜೆ

ಪಟನಾ: ಕರ್ನಾಟಕ ರಾಜ್ಯದವರಾದ ನ್ಯಾಯಮೂರ್ತಿ ಪವನ್ ಕುಮಾರ್ ಭೀಮಪ್ಪ ಭಜಂತ್ರಿ ಅವರು ಬಿಹಾರದ ಪಟನಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದು, ಭಾನುವಾರ ಪ್ರಮಾಣವಚನ ಸ್ವೀಕರಿಸಿದರು.

ಬಿಹಾರದ ರಾಜಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ನೂತನ ಪಟನಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪವನ್ ಕುಮಾರ್ ಭೀಮಪ್ಪ ಭಜಂತ್ರಿ ಅವರಿಗೆ ಪ್ರಮಾಣವಚನ ಬೋಧಿಸಿದರು. ಮುಖ್ಯಮಂತ್ರಿ ನಿತೀಶ್ ಕುಮಾರ್, ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಮತ್ತು ಹಲವು ಸಚಿವರು, ನ್ಯಾಯಾಂಗದ ಉನ್ನತ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವ್ಯಕ್ತಿ ಪರಿಚಯ: ಪಟನಾ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪವನ್ ಕುಮಾರ್ ಅವರು ಉತ್ತರ ಕರ್ನಾಟಕದಲ್ಲಿ 1963ರ ಅ.23ರಂದು ಜನಿಸಿದ್ದು, ಬೆಂಗಳೂರಿನ ಎಸ್‌ಜೆಆರ್‌ಸಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದಿದ್ದಾರೆ. 1990ರಲ್ಲಿ ವಕೀಲರಾಗಿ ಸನ್ನದು ಪಡೆದು ವೃತ್ತಿ ಜೀವನ ಆರಂಭಿಸಿದರು. 2015ರ ಜ.2ರಂದು ಕರ್ನಾಟಕ ಹೈಕೋರ್ಟ್ ಹಂಗಾಮಿ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಬಳಿಕ ಪಂಜಾಬ್-ಹರಿಯಾಣ ಹೈಕೋರ್ಟ್‌ಗೆ ವರ್ಗಾವಣೆಗೊಂಡರು. 2021ರ ಅ.20ರಿಂದ ಪಟನಾ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ದಾಲ್ ಸರೋವರ: ಶೆಲ್ ಅವಶೇಷ ಪತ್ತೆ

ಶ್ರೀನಗರ: ಕಳೆದ ಮೇ ತಿಂಗಳಲ್ಲಿ ಭಾರತ ಕೈಗೊಂಡ ಆಪರೇಷನ್ ಸಿಂದೂರ್ ಕಾರ್ಯಾಚರಣೆ ವೇಳೆ ಸ್ಫೋಟಗೊಂಡ ಶೆಲ್‌ನ ಅವಶೇಷಗಳು ದಾಲ್ ಸರೋವರ ಶುಚಿ ಅಭಿಯಾನ ವೇಳೆ ನೀರಿನಾಳದಲ್ಲಿ ಪತ್ತೆಯಾಗಿವೆ. ಸರೋವರ ಸಂರಕ್ಷಣೆ ಮತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ದಾಲ್ ಸರೋವರದಲ್ಲಿ ಚಿಪ್ಪಿನ ಅವಶೇಷಗಳನ್ನು ಕಂಡಿದ್ದಾರೆ. ಭದ್ರತಾ ಪಡೆಗಳು ಅವಶೇಷಗಳನ್ನು ಹೊರ ತೆಗೆದಿವೆ. ಹೆಚ್ಚಿನ ಪರೀಕ್ಷೆಗಾಗಿ ಅವಶೇಷಗಳನ್ನು ಪೊಲೀಸ್ ಠಾಣೆಗೆ ಒಯ್ಯಲಾಗಿದೆ. ಮೇ 10ರ ಬೆಳಗ್ಗೆ ಕ್ಷಿಪಣಿ ಯಂತಹ ಅಸ್ತ್ರವೊಂದು ಜೋರಾಗಿ ಸ್ಫೋಟಿಸಿ ಸರೋವರಕ್ಕೆ ಬಿದ್ದಿತು. ಆಗ ಸರೋವರದ ಮೇಲ್ಮೈಯಲ್ಲಿ ದಟ್ಟ ಹೊಗೆಯೆದ್ದಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

1 ಬಾರಿ ಪಾವತಿ ಮಾತ್ರ: ಅಮೆರಿಕ ಸರಕಾರ ಸ್ಪಷ್ಟನೆ

ಹೊಸ ಅರ್ಜಿದಾರರಿಗಷ್ಟೇ ಎಚ್1ಬಿ ವೀಸಾ ಶುಲ್ಕ ಏರಿಕೆ

ವಾಷಿಂಗ್ಟನ್: ಎಚ್-1ಬಿ ವೀಸಾಗೆ ಹೊಸದಾಗಿ ಅರ್ಜಿ ಸಲ್ಲಿಸಿದವರಿಗೆ ಮಾತ್ರವೇ 1 ಲಕ್ಷ ಡಾಲರ್(88 ಸಾವಿರ ರು.) ಶುಲ್ಕದ ಹೊರೆ ಅನ್ವಯವಾಗುತ್ತದೆ. ಅದೂ ಕೂಡಾ ಅರ್ಜಿ ಸಲ್ಲಿಸಿದಾಗ ಒಂದು ಬಾರಿ ಪಾವತಿಸಬೇಕಾಗಿದೆ ಎಂದು ಅಮೆರಿಕ ಸರಕಾರ ಸ್ಪಷ್ಟಪಡಿಸಿದೆ.

ಆದರೆ, ಎಚ್1ಬಿ ಶುಲ್ಕದ ಹೆಚ್ಚಳ ವಿಚಾರವನ್ನು ಶುಕ್ರವಾರ ಘೋಷಿಸಿದ ಅಮೆರಿಕದ ವಾಣಿಜ್ಯ ಸಚಿವ ಹೊವಾರ್ಡ್ ಲುಟ್ನಿಕ್ ಅವರು, ಹೊಸ ಶುಲ್ಕ ದರ ವಾರ್ಷಿಕವಾಗಿದೆ. ಹೊಸದಾಗಿ ವೀಸಾ ಪಡೆಯುವವರು ಮತ್ತು ವೀಸಾ ನವೀಕರಿಸುವವರಿಬ್ಬರಿಗೂ ಅನ್ವಯಿಸುತ್ತದೆ ಎಂದು ಹೇಳಿದ್ದರು. ಅದು ಈಗಾಗಲೇ ಅಮೆರಿಕದಲ್ಲಿ ಉದ್ಯೋಗದಲ್ಲಿರುವ ಲಕ್ಷಾಂತರ ಎಚ್1ಬಿ ವೀಸಾದಾರರ ತಲೆಬಿಸಿಗೆ ಕಾರಣವಾಗಿತ್ತು. ಅಲ್ಲದೇ, ಪ್ರತಿವರ್ಷವೂ ಶುಲ್ಕ ಕಟ್ಟಬೇಕೆ ಎಂಬ ಗೊಂದಲಕ್ಕೂ ಕಾರಣವಾಗಿತ್ತು.

ಆದರೆ, ಹೊಸ ಶುಲ್ಕ ನೀತಿ ಜಾರಿಗೆ ಬರುವುದಕ್ಕೂ ಮೊದಲೇ ಶ್ವೇತಭವನದ ಪತ್ರಿಕಾ ಕಾರ್ಯದರ್ಶಿ ಕೆರೊಲಿನ್ ಲೀವಿಟ್ ಅವರು ಸ್ಪಷ್ಟೀಕರಣ ನೀಡಿದರು. ಈಗಾಗಲೇ ಎಚ್1ಬಿ ವೀಸಾ ಹೊಂದಿರುವವರು ನವೀಕರಿಸುವಾಗ ಹಳೆಯ ಶುಲ್ಕವನ್ನೇ ಪಾವತಿಸಬೇಕು. ಹೊಸ ಶುಲ್ಕ ಅವರಿಗೆ ಅನ್ವಯವಾಗದು ಎಂದು ಸ್ಪಷ್ಟಪಡಿಸಿದರು.

ಟಿಕೆಟ್ ದರ ಭಾರೀ ಏರಿಕೆ: ಶ್ವೇತಭವನದಿಂದ ಈ ಸ್ಪಷ್ಟೀಕರಣ ಬರುವ ಮೊದಲು ಅಮೆರಿಕದ ಐಟಿ ಕಂಪನಿಗಳು ದೇಶದಿಂದ ಹೊರಹೋಗಿದ್ದ ವಿದೇಶಿ ಉದ್ಯೋಗಿಗಳಿಗೆ ಕೂಡಲೇ ವಾಪಸ್ ಬನ್ನಿ ಎಂದು ತುರ್ತು ಸೂಚನೆ ನೀಡಿದ್ದವು. ಇದೇ ಕಾರಣವಾಗಿ ಭಾರತದಲ್ಲಿ ವಿಮಾನದ ಟಿಕೆಟ್‌ಗೆ ಹಠಾತ್ತನೆ ಭಾರೀ ಬೇಡಿಕೆ ಸೃಷ್ಟಿಯಾಗಿತ್ತು. ಅಮೆರಿಕದತ್ತ ಸಾಗುವ ವಿಮಾನಗಳ ಟಿಕೆಟ್ ದರದಲ್ಲಿಯೂ(1.05 ಲಕ್ಷದಿಂದ 1.50 ಲಕ್ಷ ರು.ವರೆಗೂ) ಭಾರಿ ಹೆಚ್ಚಳವಾಗಿತ್ತು. ಬೆಂಗಳೂರು, ಹೈದರಾಬಾದ್, ಚೆನ್ನೈ, ದೆಹಲಿ, ಮುಂಬೈನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಭಾರೀ ಜನದಟ್ಟಣೆ ಉಂಟಾಗಿತ್ತು. ಟಿಕೆಟ್ ಬುಕಿಂಗ್ ಏಜೆನ್ಸಿಗಳು ಬಿಡುವಿಲ್ಲದೇ ಕೆಲಸ ಮಾಡಲಾರಂಭಿಸಿದ್ದವು. ಆನ್‌ಲೈನ್ ತಾಣದಲ್ಲೂ ಟಿಕೆಟ್ ಬುಕಿಂಗ್‌ಗೆ ಭಾರೀ ಶೋಧ ನಡೆದಿತ್ತು ಎಂದು ವರದಿಯಾಗಿದೆ.

ಪಂಜಾಬ್ ಸಾಲ ಜಿಡಿಪಿಯ **40.35%**

ಕರ್ನಾಟಕ ಸಾಲ ಜಿಡಿಪಿಯ **23.90%**

2022-23ನೇ ಹಣಕಾಸು ವರ್ಷದ ಲೆಕ್ಕ

ರಾಜ್ಯಗಳ ಸಾಲ ಹೊರೆ 60 ಲಕ್ಷ ಕೋಟಿ ರು.

ದೆಹಲಿ: ಕರ್ನಾಟಕ ಸೇರಿದಂತೆ ಭಾರತದ 28 ರಾಜ್ಯಗಳ ಒಟ್ಟು ಸಾಲ ಮೊತ್ತ 2022-23ನೇ ಹಣಕಾಸು ವರ್ಷದಲ್ಲಿ 59.60 ಲಕ್ಷ ಕೋಟಿ ರೂ.ಗಳಿಗೆ ಏರಿಕೆಯಾಗಿದೆ.

ರಾಜ್ಯಗಳ ಒಟ್ಟಾರೆ ಆಂತರಿಕ ಉತ್ಪಾದನೆಗೆ (ಜಿಎಸ್‌ಡಿಪಿ) ಹೋಲಿಸಿದರೆ ರಾಜ್ಯಗಳ ಸಾಲಗಳ ಅನುಪಾತ ಶೇ.23ಕ್ಕೆ ಏರಿದೆ. ಭಾರತದ ಒಟ್ಟು 'ಜಿಡಿಪಿ'ಯಲ್ಲಿ ಶೇ.22.17ರಷ್ಟು ಪಾಲಿನಷ್ಟು ಸಾಲದ ಹೊರೆ ರಾಜ್ಯಗಳ ಮೇಲಿದೆ. ಮಹಾಲೇಖಪಾಲರ (ಸಿಎಜಿ) ವರದಿಯಿಂದ ಈ ಆಘಾತಕಾರಿ ಸಂಗತಿ ತಿಳಿದುಬಂದಿದೆ.

ರಾಜ್ಯಗಳು ವರ್ಷ ಕಳೆದಂತೆಲ್ಲಾ ಹೊಸ ಹೊಸ ಸಾಲ ಮಾಡುತ್ತಿದ್ದು, ಒಟ್ಟಾರೆ ಸಾಲದ ಮೊತ್ತದಲ್ಲಿ ಕಳೆದೊಂದು ದಶಕದಲ್ಲಿ ಮೂರು ಪಟ್ಟು ಹೆಚ್ಚಳವಾಗಿದೆ. ವರಮಾನಕ್ಕೆ ತಕ್ಕ ಪ್ರಮಾಣದಲ್ಲಿ ಸಾಲ ಮಾಡಬೇಕು ಎನ್ನುವುದು ದೇಶಕ್ಕೂ, ರಾಜ್ಯಗಳಿಗೂ ಅನ್ವಯವಾಗುತ್ತದೆ.

2013-14ನೇ ಹಣಕಾಸು ವರ್ಷದಲ್ಲಿ 28 ರಾಜ್ಯಗಳ ಒಟ್ಟು ಸಾಲ 17.57 ಲಕ್ಷ ಕೋಟಿ ರೂ.ಗಳಷ್ಟಿತ್ತು. ಅಂದರೆ, 'ಜಿಎಸ್‌ಡಿಪಿ'ಯ ಶೇ.16.66ರಷ್ಟು ಸಾಲವಿತ್ತು. 2022-23ರ ವೇಳೆಗೆ ಸಾಲ 59.60 ಲಕ್ಷ ಕೋಟಿ ರೂ.ಗೆ (ಎಸ್‌ಜಿಡಿಪಿಯ ಶೇ. 23ಕ್ಕೆ) ಏರಿಕೆಯಾಗಿದೆ. ಅಂದರೆ, ಹತ್ತು ವರ್ಷಗಳಲ್ಲಿ ಸಾಲದ ಹೊರೆ 3.3 ಪಟ್ಟು ಹೆಚ್ಚಳವಾಗಿದೆ.

28 ರಾಜ್ಯಗಳ ಸಾಲ ಪ್ರಮಾಣದಲ್ಲಿ ಪಂಚ ನದಿಗಳ ನಾಡು, ಗೋಧಿಯ ಕಣಜ ಎಂದು ಹೆಸರಾಗಿರುವ ಪಂಜಾಬ್ ರಾಜ್ಯದ್ದೇ ದೊಡ್ಡ ಪ್ರಮಾಣವಾಗಿದೆ. 'ಜಿಎಸ್‌ಡಿಪಿ'ಗೆ ಹೋಲಿಸಿದರೆ ಪಂಜಾಬ್ ಸಾಲದ ಅನುಪಾತ ಶೇ. 40.35ರಷ್ಟಿದೆ. ನಾಗಾಲ್ಯಾಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳೂ ಸಾಲ ಪಡೆಯುವುದರಲ್ಲಿ ಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿವೆ. ಮೊದಲ ಸಾಲಿನ 8 ರಾಜ್ಯಗಳ ಸಾಲದ ಪ್ರಮಾಣ ಅವುಗಳ 'ಜಿಎಸ್‌ಡಿಪಿ'ಗಿಂತ ಶೇ.30ಕ್ಕೂ ಮಿಗಿಲಾಗಿದೆ ಎಂಬುದು ಕಳವಳಕಾರಿಯಾಗಿದೆ. ಅತಿ ಕಡಿಮೆ ಸಾಲ ಅನುಪಾತ ಹೊಂದಿರುವ ರಾಜ್ಯ ಒಡಿಶಾ. ಅದರ ಸಾಲ ಪ್ರಮಾಣ ಎಸ್‌ಜಿಡಿಪಿಯ ಶೇ. 8.45ರಷ್ಟು ಮಾತ್ರವೇ ಇದೆ. ಆ ರಾಜ್ಯ ಅಕ್ಷರಮಟ್ಟಿಗೆ ಆರ್ಥಿಕ ಶಿಸ್ತು ಪಾಲಿಸಿಕೊಂಡು ಬಂದಿದೆ. ಮಹಾರಾಷ್ಟ್ರ, ಗುಜರಾತ್‌ಗಳ ಸಾಲ ಪ್ರಮಾಣವೂ ಶೇ.20ಕ್ಕಿಂತ ಕಡಿಮೆ ಇದೆ. ಶೇ.20ಕ್ಕಿಂತ ಕಡಿಮೆ ಸಾಲ ಹೊಂದಿದ ರಾಜ್ಯಗಳ ಸಂಖ್ಯೆ ಆರು.



ಕರ್ನಾಟಕದ ಸಾಲ

ಜಿಎಸ್‌ಡಿಪಿ ಅನುಪಾತದಲ್ಲಿ ಕರ್ನಾಟಕದ ಸಾಲ ಎಷ್ಟಿದೆ ಎಂಬುದನ್ನು ಸಿಎಜಿ ವರದಿಯಲ್ಲಿ ನಮೂದಿಸಿಲ್ಲ. ನೀತಿ ಆಯೋಗದ ಅಂದಾಜು ಪ್ರಕಾರ 2022-23ರಲ್ಲಿ ಕರ್ನಾಟಕದ ಸಾಲ ರಾಜ್ಯದ ಎಸ್‌ಜಿಡಿಪಿ ಅನುಪಾತದಲ್ಲಿ ಶೇ.23.90ರಷ್ಟಿತ್ತು. 2021ರಲ್ಲಿ ಶೇ. 25.68ಕ್ಕೆ ಏರಿಕೆ ಆಯಿತು. ಆದರೆ, 2025-26ರಲ್ಲಿ ಸಾಲ ತೀವ್ರವಾಗಿ ಹೆಚ್ಚಳವಾಗಿರುವ ಸಾಧ್ಯತೆ ಇದೆ. 2024-25ರಲ್ಲಿ ಕರ್ನಾಟಕ ಆರ್ಥಿಕ ಸಮೀಕ್ಷೆ ಪ್ರಕಾರ 6.85 ಲಕ್ಷ ಕೋಟಿ ರು.ಗಳಷ್ಟಿದ್ದ ರಾಜ್ಯದ ಒಟ್ಟು ಸಾಲ 2025-26ರಲ್ಲಿ 7.64 ಲಕ್ಷ ಕೋಟಿ ರು.ಗೆ ಏರಿಕೆ ಆಗಬಹುದು ಎಂದು ಅಂದಾಜು ಮಾಡಲಾಗಿದೆ.

ನೀತಿ ಆಯೋಗದ ಮಾಜಿ ಸಿಇಒ

ಎಚ್-1ಬಿ ವೀಸಾ ಶುಲ್ಕ ಏರಿಕೆ: ಅಮೆರಿಕ ನಷ್ಟ-ಭಾರತಕ್ಕೆ ಲಾಭ

ದೆಹಲಿ: ಅಮೆರಿಕ ಎಚ್-1ಬಿ ವೀಸಾ ವಾರ್ಷಿಕ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಏರಿಸಿರುವುದರಿಂದ ಭಾರತಕ್ಕೇನೂ ಹಿನ್ನಡೆ ಆಗದು. ಬದಲಾಗಿ ಅಮೆರಿಕಕ್ಕೇ 'ಪ್ರತಿಭೆ'ಗಳ ವಿಚಾರದಲ್ಲಿ ದೊಡ್ಡ ಪೆಟ್ಟು ಬೀಳಲಿದೆ. ಅದರ ಪರಿಣಾಮವಾಗಿ ಭಾರತಕ್ಕೇ ಲಾಭವಾಗಲಿದೆ ಎಂದು ನೀತಿ ಆಯೋಗದ ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಅಮಿತಾಭ್ ಕಾಂತ್ ವಿಶ್ಲೇಷಿಸಿದ್ದಾರೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕ್ರಮ ಜಾಗತಿಕ ಮಟ್ಟದ ಪ್ರತಿಭೆಗಳಿಲ್ಲದೇ ಅಮೆರಿಕದ ಐಟಿ ಕಂಪನಿಗಳು ಪರದಾಡುವಂತೆ ಮಾಡಲಿದೆ. ಇದರಿಂದ ಭಾರತದ ಸಿಲಿಕಾನ್ ಕಣಿವೆ ಎನಿಸಿಕೊಂಡಿರುವ ಬೆಂಗಳೂರು, ಹೈದರಾಬಾದ್, ಪುಣೆ, ಗುರಗಾಂವ್‌ನಲ್ಲಿ ಹೊಸ ಹೊಸ ಪ್ರಯೋಗಾಲಯಗಳು, ಪೇಟೆಂಟ್‌ಗಳು, ಸಂಶೋಧನೆ ಮತ್ತು ಅಭಿವೃದ್ಧಿ, ನಾವೀನ್ಯತೆ ಹಾಗೂ ನವೋದ್ಯಮಗಳ ದೊಡ್ಡ ಅಲೆಯನ್ನು ಸೃಷ್ಟಿಸಲು ಸಹಾಯಕವಾಗಲಿದೆ ಎಂದು ಭವಿಷ್ಯ ನುಡಿದಿದ್ದಾರೆ. ಟ್ರಂಪ್ ನಡೆಯಿಂದ ಅಮೆರಿಕದ ಐಟಿ ಉದ್ಯಮ ಕ್ಷೇತ್ರದಲ್ಲಿ ನಾವೀನ್ಯತೆಗೆ ಪೆಟ್ಟುಬೀಳಲಿದೆ. ಭಾರತದ ಅತ್ಯುತ್ತಮ ವೈದ್ಯರು, ಎಂಜಿನಿಯರ್‌ಗಳು, ವಿಜ್ಞಾನಿಗಳು, ಭಾರತದಲ್ಲೇ ಉಳಿದರೆ ದೇಶದ ಬೆಳವಣಿಗೆ-ಆರ್ಥಿಕ ಪ್ರಗತಿ ಅವಕಾಶವಾಗುತ್ತದೆ ಎಂದರು.

ಭಾರತ ಸೇರಿ 7 ಯುದ್ಧ ನಿಲ್ಲಿಸಿದೆ

ನನಗೆ ನೊಬೆಲ್ ಶಾಂತಿ ಪ್ರಶಸ್ತಿ ಬರಲೇಬೇಕು: ಟ್ರಂಪ್ ವರಾತ

ವಾಷಿಂಗ್ಟನ್: ವಿಶ್ವದಲ್ಲಿ ಈ ಹಿಂದೆ ಯಾರೂ ಮಾಡದ ಕೆಲಸ ಮಾಡಿರುವೆ. ಭಾರತ-ಪಾಕಿಸ್ತಾನ ನಡುವಿನ ಸಂಘರ್ಷ ಸೇರಿ ದಂತೆ ಈವರೆಗೆ ಒಟ್ಟು ಏಳು ಯುದ್ಧಗಳನ್ನು ಅಂತ್ಯಗೊಳಿಸಿದ್ದೇನೆ. ನನಗೆ ನೊಬೆಲ್ ಶಾಂತಿ ಪ್ರಶಸ್ತಿ ಬರಲೇಬೇಕು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಹೇಳಿದ್ದಾರೆ. ಅಮೆರಿಕ ಶಾಂತಿ ಒಪ್ಪಂದಗಳನ್ನು ರೂಪಿಸುತ್ತಿದೆ, ಯುದ್ಧಗಳನ್ನು ನಿಲ್ಲಿಸುತ್ತಿದೆ. ಭಾರತ-ಪಾಕ್, ಥಾಯ್ಲೆಂಡ್-ಕಾಂಬೋಡಿಯಾ ನಡುವಿನ ಯುದ್ಧ ನಿಲ್ಲಿಸಿದ್ದೇವೆ ಎಂದು ಟ್ರಂಪ್, ಅಮೆರಿಕನ್ ಕಾರ್ನರ್‌ಸ್ಟೋನ್ ಸಂಸ್ಥೆಯ ಕಾರ್ಯಕ್ರಮದಲ್ಲಿ ಮಾತನಾಡಿ ದರು. ಅರ್ಮೇನಿಯ-ಅಜರ್‌ಬೈಜಾನ್, ಕೊಸೊವೊ- ಸೆರ್ಬಿಯ, ಇಸ್ರೇಲ್-ಇರಾನ್, ಈಜಿಪ್ಟ್-ಇಥಿಯೋಪಿಯ ಹಾಗೂ ರುವಾಂಡಾ- ಕಾಂಗೋ ಈ ಎಲ್ಲಾ ಯುದ್ಧಗಳನ್ನು ನಿಲ್ಲಿಸಿದ್ದೇವೆ. ಇವುಗಳಲ್ಲಿ ಶೇ. 60ರಷ್ಟು ಸಂಘರ್ಷಗಳು ಕೊನೆಗೊಳ್ಳಲು ವ್ಯಾಪಾರ ಕಾರಣದಿಂದ ನಿಲ್ಲಿಸಲಾಗಿದೆ ಎಂದು ಟ್ರಂಪ್ ಹೇಳಿದರು. ಭಾರತ-ಪಾಕ್ ಎರಡೂ ದೇಶಗಳು ಅಣ್ವಸ್ತ್ರ ಹೊಂದಿವೆ. ಹಾಗಾಗಿಯೇ ಆ ಯುದ್ಧ ನಿಲ್ಲಿಸುವುದು ನನ್ನ ಆದ್ಯತೆಯಾಗಿತ್ತು. ಯುದ್ಧ ಮುಂದುವರೆಸಿದರೆ ನಿಮ್ಮೊಂದಿಗೆ ವ್ಯಾಪಾರ ನಡೆಸುವುದಿಲ್ಲ ಎಂದು ಭಾರತಕ್ಕೆ ಹೇಳಿದ್ದರಿಂದ ಯುದ್ಧ ನಿಂತಿತು ಎಂದರು.

ನಾಗಪುರದಲ್ಲಿ ಕೇಂದ್ರ ಸಚಿವ ಗಡ್ಕರಿ

ನಾನು ಬ್ರಾಹ್ಮಣ, ಮೀಸಲಿಗೆ ಹೋರಾಡುವ ಸ್ಥಿತಿ ಬಂದಿಲ್ಲ

ನಾಗಪುರ: ಒಬ್ಬ ವ್ಯಕ್ತಿಯ ಪ್ರಾಮುಖ್ಯ ಆತನ ಜಾತಿ, ಪಂಗಡ, ಧರ್ಮ, ಲಿಂಗದಿಂದ ನಿರ್ಧಾರವಾಗುವುದಿಲ್ಲ, ಬದಲಾಗಿ ಆತನ ಗುಣ-ಸಾಧನೆಗಳಿಂದ ನಿರ್ಧಾರವಾಗುತ್ತದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ನಾಗಪುರದಲ್ಲಿ ನಡೆದ ಹಲ್ಬಾ ಫೆಡರೇಶನ್ ಕಾರ್ಯಕ್ರಮದಲ್ಲಿ ಮಾತನಾ ಡಿದ ಸಚಿವರು, ನಾನು ಬ್ರಾಹ್ಮಣ ಜಾತಿಗೆ ಸೇರಿದವನು. ಆದರೆ, ನಾನು ಜಾತಿವಾದವನ್ನು ನಂಬುವುದಿಲ್ಲ. ಬ್ರಾಹ್ಮಣ ಸಮುದಾ ಯಕ್ಕೆ ದೇಶದಲ್ಲಿ ಮೀಸಲು ಸೌಲಭ್ಯ ಸಿಗದೇ ಇರುವುದು ದೇವರ ಆಶೀರ್ವಾದ ಎಂದೇ ಪರಿಗಣಿಸುತ್ತೇನೆ ಎಂದಿದ್ದಾರೆ. ಮಹಾರಾಷ್ಟ್ರದಲ್ಲಿ ಬ್ರಾಹ್ಮಣರಿಗೆ ಹೆಚ್ಚಿನ ಪ್ರಾಮುಖ್ಯತೆ ಇಲ್ಲ. ಉತ್ತರ ಭಾರತದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇದೆ. ಉತ್ತರ ಪ್ರದೇಶ, ಬಿಹಾರ ಮತ್ತಿತರ ಉತ್ತರ ಭಾರತದ ರಾಜ್ಯಗಳಲ್ಲಿ, ದುಬೆ, ತ್ರಿಪಾಠಿ ಮತ್ತು ಮಿಶ್ರಾ, ಮತ್ತಿತರ ಬ್ರಾಹ್ಮಣ ಸಮುದಾಯದವರು ಸಾಮಾಜಿಕ ಮತ್ತು ರಾಜಕೀಯವಾಗಿ ಭಾರೀ ಪ್ರಭಾವ ಹೊಂದಿವೆ ಎಂದು ವಿವರಿಸಿದ ಗಡ್ಕರಿ, ಮಹಾರಾಷ್ಟ್ರದಲ್ಲಿ ಮರಾಠಾ ಸಮುದಾಯ ಪ್ರಾಮುಖ್ಯತೆ ಹೊಂದಿರುವಂತೆಯೇ, ಉತ್ತರ ಭಾರತದ ರಾಜ್ಯಗಳಲ್ಲಿ ಬ್ರಾಹ್ಮಣ ಸಮುದಾಯ ಪ್ರಮುಖವಾಗಿದೆ. ಅಧಿಕಾರವನ್ನೂ ಹೊಂದಿದೆ ಎಂದು ಹೇಳಿದ್ದಾರೆ.

ಅಧ್ಯಕ್ಷ ಸೇರಿ 6 ಹುದ್ದೆಗಳಲ್ಲೂ ಜಯ

ಹೈದರಾಬಾದ್ ವಿದ್ಯಾರ್ಥಿ ಸಂಘ: ಎಬಿವಿಪಿಗೆ ಜಯ

ಹೈದರಾಬಾದ್: ತೆಲಂಗಾಣ ರಾಜ್ಯದ ಹೈದರಾ ಬಾದ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ 2025-26ನೇ ಸಾಲಿನ ಚುನಾವಣೆಯಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಭರ್ಜರಿ ಜಯ ಗಳಿಸಿದೆ. ಎಡಪಂಥೀಯ ಬೆಂಬಲಿತ ಮೈತ್ರಿಕೂಟದ ಅಭ್ಯರ್ಥಿಗಳಿಗೆ ಸೋಲಾಗಿದೆ. ಸೆ.19ರಂದು ನಡೆದ ಚುನಾವಣೆಯ ಫಲಿತಾಂಶ ಹೊರ ಬಿದ್ದಿದ್ದು, ವಿದ್ಯಾರ್ಥಿ ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ, ಸಾಂಸ್ಕೃತಿಕ ಕಾರ್ಯದರ್ಶಿ ಮತ್ತು ಕ್ರೀಡಾ ಕಾರ್ಯ ದರ್ಶಿ ಹುದ್ದೆಗಳೆಲ್ಲದರಲ್ಲೂ 'ಎಬಿವಿಪಿ' ಹುರಿ ಯಾಳುಗಳೇ ಗೆದ್ದಿದ್ದಾರೆ. ಪಿಎಚ್‌ಡಿ ಸಂಶೋಧಕ ವಿದ್ಯಾರ್ಥಿ ಶಿವ ಪಾಲೆಪು ಅಧ್ಯಕ್ಷರಾಗಿ ಆಯ್ಕೆಯಾಗಿ ದ್ದಾರೆ. ಉಳಿದಂತೆ, ದೇಬೇಂದ್ರ-ಉಪಾಧ್ಯಕ್ಷ, ಶ್ರುತಿ ಪ್ರಿಯಾ-ಪ್ರಧಾನ ಕಾರ್ಯದರ್ಶಿ, ಸೌರಭ್ ಶುಕ್ಲಾ-ಜಂಟಿ ಕಾರ್ಯದರ್ಶಿ, ವೀನಸ್-ಸಾಂಸ್ಕೃತಿಕ ಕಾರ್ಯದರ್ಶಿ, ಜ್ವಾಲಾ-ಕ್ರೀಡಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. 'ಈ ಗೆಲುವು ರಾಷ್ಟ್ರೀಯತೆಗೆ ವಿದ್ಯಾರ್ಥಿಗಳ ಬದ್ಧತೆ ಮತ್ತು ವಿಭಜಕ ರಾಜಕೀಯ ವಿರುದ್ಧದ ಒಗ್ಗಟ್ಟಿನ ನಿಲುವನ್ನು ಸೂಚಿಸುತ್ತದೆ' ಎಂದು 'ಎಬಿಬಿಪಿ' ಹೇಳಿಕೊಂಡಿದೆ.

ಸಮಾಚಾರ ಸಣ್ಣದಲ್ಲ

ಜಾತಿ ಸಮೀಕ್ಷೆಯಿಂದ ಹಿಂದೂ ವಿಭಜನೆ

ಲಿಂಗಸುಗೂರು: ಸಿದ್ದರಾಮಯ್ಯ ಸರಕಾರ ಜಾತಿ ಸಮೀಕ್ಷೆಯ ಹೆಸರಿನಲ್ಲಿ ಹಿಂದೂ ಸಮಾಜವನ್ನು ಒಡೆಯುವ ದುಷ್ಟ ರಾಜಕಾರಣ ಮಾಡುತ್ತಿದೆ ಎಂದು ಬಿಜೆಪಿ ಜಿಲ್ಲಾ ಅಧ್ಯಕ್ಷ ವೀರನಗೌಡ ಪಾಟೀಲ್ ಲೆಕ್ಕಿಹಾಳ ಹೇಳಿದರು. ಪಟ್ಟಣದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕ್ರೈಸ್ತ ಜಾತಿಗಳನ್ನು ಹಿಂದೂ ಜಾತಿಗಳಲ್ಲಿ ಸೇರಿಸುವ ಮೂಲಕ ಗೊಂದಲ ಸೃಷ್ಟಿಸುವ ಕುತಂತ್ರ ನಡೆದಿದೆ. ಈ ಕ್ರಮ ಶೋಷಿತ ವರ್ಗಗಳ ಮೀಸಲಾತಿಗೆ ಧಕ್ಕೆ ತರುತ್ತದೆ. ಅನಧಿಕೃತ ಕ್ರೈಸ್ತ ಜಾತಿಗಳ ಸೇರ್ಪಡೆಗೆ ಸರಕಾರ ತಕ್ಷಣ ಅಧಿಕೃತವಾಗಿ ತಿದ್ದುಪಡಿ ಪ್ರಕಟಿಸಬೇಕು. ಸರಕಾರದ ಈ ಓಲೈಕೆ ರಾಜಕಾರದಿಂದ ಶೋಷಿತ ವರ್ಗಗಳ ಮೀಸಲಾತಿ ಮೇಲೆ ನೇರ ಪರಿಣಾಮ ಬೀರಲಿದೆ. ಕ್ರೈಸ್ತ ಮಿಷನರಿ ಗಳ ಬಲವಂತದ ಮತಾಂತರಕ್ಕೆ ಸರ್ಕಾರ ಪ್ರೋತ್ಸಾಹ ನೀಡುತಿದೆ. ಹಿಂದೂ ಸಮಾಜವನ್ನು ಒಡೆಯುವ ದುಷ್ಟ ರಾಜಕಾರಣವನ್ನು ನಾವು ಸಹಿಸುವುದಿಲ್ಲ ಎಂದು ಅಗ್ರಹಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ನಾಗಭೂಷಣ್, ಗಿರಿ ಮಲ್ಲನಗೌಡ, ಲಿಂಗರಾಜ ನಾಯಕ, ಮಂಜುನಾಥ ಇದ್ದರು.

ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಕ

ಮುದಗಲ್: ಲಿಂಗಸುಗೂರು ಮಾಜಿ ಶಾಸಕ ಡಿ,.ಎಸ್. ಹೂಲಗೇರಿ ಇವರ ಶಿಫಾರಸ್ಸಿನ ಮೇರೆಗೆ ಹಾಗೂ ಕೆಪಿಸಿಸಿ

ಪ್ರಚಾರ ಸಮಿತಿಯ ಅಧ್ಯಕ್ಷ ವಿನಯಕುಮಾರ ಸೂರಕೆ ಇವರ ಆದೇಶದ ಮೇರೆಗೆ ಮುದಗಲ್ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷರನ್ನಾಗಿ ಅರುಣಕುಮಾರ ಯರದಿಹಾಳ ಮಹಾಂತೇಶ ಇವರನ್ನು ರಾಯಚೂರು ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ ರವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ತಕ್ಷಣದಿಂದ ಕಾಂಗ್ರೆಸ್ ಪಕ್ಷದ ಸಂಘಟನೆ ಹಾಗೂ ಬಲವರ್ಧನೆಯಲ್ಲಿ ತೊಡಗಿಸಿಕೊಳ್ಳ ಬೇಕೆಂದು ನೂತನ ಮುದಗಲ್ ಪ್ರಚಾರ ಸಮಿತಿ ಅಧ್ಯಕ್ಷ ಅರುಣಕುಮಾರ ರವರಿಗೆ ಸೂಚನೆ ನೀಡಿದ್ದಾರೆ.

ನೇರ ಸಾಲ ಯೋಜನೆಗೆ ಅರ್ಜಿಗಳ ಆಹ್ವಾನ

ಹೊಸಪೇಟೆ: ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದವರೆಗೆ ಸ್ವಯಂ ಉದ್ಯೋಗ ಕೈಗೊಳ್ಳಲು ನೇರ ಸಾಲ ಯೋಜನೆ ಸಹಾಯ ಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ಪಿ.ಎಸ್.ಹಟ್ಟಪ್ಪ ತಿಳಿಸಿದ್ದಾರೆ. ವಿವಿಧ ವೃತ್ತಿಗೆ ಳಾದ ಹಸು ಸಾಕಾಣಿಕೆ, ಗುಡಿ ಕೈಗಾರಿಕೆ, ಸಣ್ಣ ಕೈಗಾರಿಕೆ, ಹೋಟೆಲ್ ಉದ್ಯಮ, ಟ್ಯಾಕ್ಸಿ ಮತ್ತು ಇತ್ಯಾದಿ ವ್ಯಾಪಾರಗಳಿಗೆ ಮಂಡಳಿಯಿಂದ ಉದ್ಯಮದ ಘಟಕ ವೆಚ್ಚಕ್ಕೆ 1.ಲಕ್ಷ ರಿಂದ 2 ಲಕ್ಷ ರುಗಳನ್ನು ನೀಡಲಾಗುವುದು. ಕನಿಷ್ಟ 1 ಲಕ್ಷ ರುಗಳಿಗೆ 20 ಸಾವಿರ ರು. ಸಬ್ಸಿಡಿ ಹಾಗೂ 2 ಲಕ್ಷರೂಗಳಿಗೆ 40 ಸಾವಿರ ರೂಗಳ ಸಬ್ಸಿಡಿ ನೀಡುವ ಜತೆಗೆ ಶೇ.4 ರಷ್ಟು ವಾರ್ಷಿಕ ಬಡ್ಡಿ ದರವನ್ನು ನಿಗಧಿಪಡಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಆಕ್ಟೋಬರ್ 31 ರಂದು ಕೊನೆಯ ದಿನವಾಗಿದೆ. ವೆಬ್‌ಸೈಟ್ https://ksbdb.karnataka.gov.in ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅರ್ಜಿದಾರರು ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿರಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 08392-294230 ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಾಳಗೊಂಡ ಎಂದೇ ಬರೆಯಿಸಲು ಮನವಿ

ರಾಯಚೂರು: ಹಿಂದುಳಿದ ವರ್ಗಗಳ ಜಾತಿ ಗಣತಿಯಲಿ ಲಾಳಗೊಂಡ ಸಮಾಜದ ಜನರು ಧರ್ಮದ ಕಲಂನಲ್ಲಿ ಲಿಂಗಾಯತ, ಉಪ ಜಾತಿ ಕಲಂನಲ್ಲಿ ಲಾಳಗೊಂಡ, ಜಾತಿ ಕಲಂನಲ್ಲಿ ಲಿಂಗಾಯತ ಎಂದು ಬರೆಯಿಸಬೇಕೆಂದು ಅಖಿಲ ಕರ್ನಾಟಕ ಲಿಂಗಾಯತ ಲಾಳಗೊಂಡ ಸಂಘದ ರಾಜ್ಯಾಧ್ಯಕ್ಷ ಅರವಿ ಬಸನಗೌಡ ಮನವಿ ಮಾಡಿದರು. ಶಾಂತಾಶ್ರಮದ ಶ್ರೀನಿಜಾನಂದ ಸ್ವಾಮೀಜಿ ಮಾತನಾಡಿ, ಹಿಂದುಳಿದ ಗಣತಿಯಲ್ಲಿ ಲಾಳಗೊಂ ಡ ಸಮಾಜದ ಜನರು ಧರ್ಮ ಮತ್ತು ಜಾತಿ ಕಲಂನಲ್ಲಿ ಗೊಂದಲಕ್ಕೀಡಾಗದೇ ಸಮರ್ಪಕ ಮಾಹಿತಿ ದಾಖಲಿಸಬೇಕು. ಸುದ್ದಿಗೋಷ್ಠಿಯಲ್ಲಿ ಬಸವರಾಜ ಪಾಟೀಲ್ ಅತ್ತನೂರು, ಆಲ್ದಾಳ ವೀರಭದ್ರಪ್ಪ, ಶಿವಪ್ಪ ಗೌಡ, ಹರಿವಿ ನಾಗನಗೌಡ, ಶಶಿಧರ ಗೌಡ, ಶರಣಬಸವ ನೀರಮಾನವಿ ಉಪಸ್ಥಿತರಿದ್ದರು.

'ಆಯುರ್ವೇದ ನಡಿಗೆ' ಜಾಥಾಕ್ಕೆ ಚಾಲನೆ | ವೈದ್ಯಾಧಿಕಾರಿ ಡಾ.ಮುನಿವಾಸುದೇವರೆಡ್ಡಿ ಹೇಳಿಕೆ

ಆಯುರ್ವೇದಕ್ಕೆ ಆರೋಗ್ಯ ಸದೃಢ

ಹೊಸಪೇಟೆ: ಪ್ರತಿಯೊಬ್ಬರಲ್ಲಿ ಯಾವುದೇ ದೈಹಿಕ ಮತ್ತು ಮಾನಸಿಕ ಸಮಸ್ಯೆ ಇಲ್ಲದೆ ಸದೃಡ ಆರೋಗ್ಯ ಜೀವನವನ್ನು ಕಟ್ಟಬೇಕೆಂದರೆ ಆಯುರ್ವೇದ ಗಿಡಮೂಲಿಕೆಗಳು ಮತ್ತು ಔಷಧಿಗಳೇ ಸೂಕ್ತ ಎಂದು ಆಯುಷ್ ಇಲಾಖೆಯ ವೈದ್ಯಾಧಿಕಾರಿ ಡಾ.ಮುನಿವಾಸುದೇವ ರೆಡ್ಡಿ ಹೇಳಿದರು.

ನಗರದ ಸರಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆಯುಷ್ ಇಲಾಖೆ, ಆಯುಷ್ ಫೆಡರೇಷನ್ ಆಫ್ ಇಂಡಿಯಾ (ಎಎಫ್‌ಐ) ಜಿಲ್ಲಾ ಘಟಕ, ಪತಂಜಲಿ ಯೋಗ ಸಂಸ್ಥೆ ಮತ್ತು ಟಿಎಂಎಇ ನರ್ಸಿಂಗ್ ಕಾಲೇಜು ಸಹಭಾಗಿತ್ವದಲ್ಲಿ ಹಮ್ಮಿಕೊಂಡಿದ್ದ ಆಯುರ್ವೇದ ನಡಿಗೆ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದರು. ಪುರಾತನ ಕಾಲದಿಂದಲೂ ದೇಶಿಯ ಆಯುರ್ವೇದ ಚಿಕಿತ್ಸೆಗೆ ಬಹಳಷ್ಟು ಮಹತ್ವವಿದೆ. ಆಯುರ್ವೇದವು ಕೇವಲ ರೋಗ ಲಕ್ಷಣಗಳನ್ನು ನಿಗ್ರಹಿಸುವುದಲ್ಲದೆ. ಸಮಸ್ಯೆಯ ಮೂಲ ಕಾರಣವನ್ನು ಗುರುತಿಸಿ ಚಿಕಿತ್ಸೆ ನೀಡಲು ಸೂಕ್ತ ವೈದ್ಯಕೀಯ ಕ್ರಮವಾಗಿದೆ. ದೇಹದ ಎಲ್ಲಾ ರೀತಿಯ ಆರೋಗ್ಯ ಸಮಸ್ಯೆಗಳಿಗೆ ಆಯುರ್ವೇದದಲ್ಲಿ ಔಷೋಧಪಾಚಾರವಿದೆ. ಪ್ರತಿ ವ್ಯಕ್ತಿಯ ದೇಹದ ಪ್ರಕೃತಿ (ದೋಷಗಳು) ವಿಭಿನ್ನವಾಗಿರುತ್ತದೆ. ಆಯುರ್ವೇದವು ಪ್ರತಿಯೊಬ್ಬರಿಗೂ ವ್ಯಕ್ತಿಯ ಪ್ರಕೃತಿ ಅನುಸಾರವಾಗಿ ಚಿಕಿತ್ಸೆ ನೀಡುವ ಮೂಲಕ ಶಾಶ್ವತ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ನೀಡಬಹುದು ಎಂದರು.

ಈ ವೇಳೆಯಲ್ಲಿ ಆಯುಷ್ ಇಲಾಖೆಯ ಡಾ. ಶಿವಶರಣಯ್ಯ, ಡಾ.ರೂಪ್ ಸಿಂಗ್ ರಾಥೋಡ್, ಡಾ. ಹೇಮಲತಾ, ಎಎಫ್‌ಐ ಘಟಕದ ಡಾ.ಕೇದಾರ್ ದಂಡಿನ್, ಡಾ.ಬಿ.ವಿ.ಭಟ್, ಪತಂಜಲಿ ಯೋಗ ಸಂಸ್ಥೆಯ ಕಿರಣ್ ಗುರೂಜಿ, ರಾಜೇಶ್ ಕಾರ್ವಾ ಸೇರಿದಂತೆ ಆಯುಷ್ ಇಲಾಖೆ ವಿವಿಧ ಅಧಿಕಾರಿಗಳು ಮತ್ತು ಎಎಫ್‌ಐ ಸಂಸ್ಥೆಯ ಸದಸ್ಯರು, ಪತಂಜಲಿ ಯೋಗ ಸಂಸ್ಥೆಯ ಸದಸ್ಯರು ಮತ್ತು ಟಿಎಂಎಇ ನರ್ಸಿಂಗ್ ಕಾಲೇಜ್‌ನ 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ನಗರದ ಸರಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಆಯುರ್ವೇದ ನಡಿಗೆ ಜಾಥಾಕ್ಕೆ ಚಾಲನೆ ನೀಡಿದರು.

> ಆಯುರ್ವೇದ ಚಿಕಿತ್ಸೆಯು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಇದು ದೇಹವನ್ನು ಒಳಗಿನಿಂದ ಬಲಪಡಿಸುವ ಮೂಲಕ ಪ್ರತಿರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುತ್ತದೆ. ಇದರಿಂದಾಗಿ ಯಾವುದೇ ಅಡ್ಡ ಪರಿಣಾಮಗಳಿಲ್ಲದೆ ಶೀಘ್ರ ಚೇತರಿಕೆ ಸಾಧ್ಯವಿದೆ. ಆಯುರ್ವೇದದ ಬಗ್ಗೆ ಸಾರ್ವಜನಿಕರು ಹೆಚ್ಚಿನ ಆಸಕ್ತಿಯನ್ನು ಹೊಂದುವ ಮೂಲಕ ಚಿಕಿತ್ಸೆಗೆ ಮುಂದಾಗಬೇಕಿದೆ. ಆಯುರ್ವೇದವು ಪ್ರತಿಯೊಬ್ಬರು ನಂಬಿಕೆಯಿಂದ ಚಿಕಿತ್ಸೆ ಪಡೆದು ಇದೇ ಚಿಕಿತ್ಸಾ ವಿಧಾನವನ್ನು ಬಯಸುವಂತ ದಿನಗಳು ಸನ್ನಿಹಿತವಾಗಿವೆ. ಆಯುರ್ವೇದ ಜೀವನ, ಆಯುರ್ವೇದವು ಯೋಗ, ಧ್ಯಾನ, ಮಸಾಜ್ ಮತ್ತು ಉಸಿರಾಟದ ವ್ಯಾಯಾಮಗಳ ಮೂಲಕ ಒತ್ತಡ ಮತ್ತು ಆತಂಕವನ್ನು ಕಡಿಮೆ ಮಾಡಲು ಇದು ಸಹಕಾರಿಯಾಗಿದೆ.
>
> -ಡಾ.ಕೆ.ಎಚ್.ಗುರುಬಸವರಾಜ್, ಆಯುಷ್ ವೈದ್ಯಾಧಿಕಾರಿ

ಸಮೀಕ್ಷೆ: ಧರ್ಮದ ಕಾಲಂನಲ್ಲಿ 'ವೀರಶೈವ ಲಿಂಗಾಯತ' ಬರೆಸಿ

ಲಿಂಗಸುಗೂರು: ರಾಜ್ಯ ಸರಕಾರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಡೆಸುತ್ತಿದ್ದು. ನಮ್ಮ ಮಹಾಸಭಾ ಹಲವಾರು ಸಮಾವೇಶಗಳನ್ನು ಮಾಡಿ ಸಮಾವೇಶದಲ್ಲಿ ಪಕ್ಷಾತೀತವಾಗಿ ಎಲ್ಲಾ ಮುಖಂಡರು ಭಾಗವಹಿಸಿ ಪೂಜ್ಯರ ನೇತೃತ್ವದಲ್ಲಿ ಸಮೀಕ್ಷೆಯಲ್ಲಿ ಧರ್ಮದ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂದು ಬರೆಯಿಸಬೇಕು ಎಂದು ನಿರ್ಣಯವನ್ನು ಕೈಗೊಳ್ಳಲಾಗಿದೆ ಎಂದು ಮಾಜಿ ಸಚಿವ ಹಾಗೂ ವೀರಶೈವ ಲಿಂಗಾಯತ ಮಹಾಸಭದ ರಾಜ್ಯ ಉಪಾಧ್ಯಕ್ಷ ಅಮರೇಗೌಡ ಪಾಟೀಲ್ ಬಯ್ಯಾಪೂರು ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ವೀರಶೈವ ಲಿಂಗಾಯತ ಮಹಾಸಭಾವನ್ನು ಹಾನಗಲ್ ಕುಮಾರಸ್ವಾಮಿಯವರು ಹುಟ್ಟು ಹಾಕಿದರು. ನಮ್ಮ ಮಹಾಸಭಾಕ್ಕೆ 100 ವರ್ಷ ಇತಿಹಾಸವಿದೆ. ಲಿಂಗಾಯತ ಸಮಾಜ ಎಲ್ಲಾ ಒಳಪಂಗಡಗಳನ್ನು ಒಗ್ಗೂಡಿಸಿ ನಡೆಸಿಕೊಂಡು ಬರುತ್ತಿದೆ.

ಸಮೀಕ್ಷೆ ಕುರಿತು ಮಹಾಸಭಾದ ನಿರ್ಣಯದಂತೆ ಧರ್ಮದ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂದು ಬರೆಯಿಸಿ, ಜಾತಿ ಕಾಲಂನಲ್ಲಿ ವೀರಶೈವ ಅಥವಾ ಲಿಂಗಾಯತ ಎಂದು ಬರೆಯಿಸಿ ಹಾಗೂ ಉಪ ಜಾತಿ ಕಾಲಂನಲ್ಲಿ ನಿಮ್ಮ ಜಾತಿಯ ಒಳಪಂಗಡಗಳನ್ನು ಬರೆಯಿಸಬೇಕು ಎಂದು ಹೇಳಿದರು. ಈ ಹಿಂದೆ ನಾವು ಹಿಂದೂ ಎಂದು ಬರೆಯಿಸಿರಬಹುದು ಆದರೆ ಈ ಸಮೀಕ್ಷೆಯಲ್ಲಿ ಧರ್ಮದ ಕಾಲಂನಲ್ಲಿ ಹಿಂದೂ ಎಂದು ಬರೆಯಿಸಬೇಡಿ, ಬದಲಾಗಿ ವೀರಶೈವ ಲಿಂಗಾಯತ ಎಂದು ಬರೆಯಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಅಧ್ಯಕ್ಷ ಶರಣಪ್ಪ ಮೇಟಿ, ಮುಖಂಡರಾದ ಸೋಮಶೇಖರ ಐದನಾಳ, ಲಿಂಬಣ್ಣ ಕುಂಬಾರ್, ಪ್ರಭುಸ್ವಾಮಿ ಅತ್ತನೂರು, ಚಿದಾನಂದ ಹಡಪದ, ಬಸವಂತರಾಯ ಕುರಿ ಸೇರಿ ಇತರರು ಇದ್ದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅಮರೇಗೌಡ ಪಾಟೀಲ್ ಅವರು ಮಾತನಾಡಿದರು.

ಸಮಾಜ ಕಟ್ಟುವ ಶಿಕ್ಷಕರ ಪಾತ್ರ ದೊಡ್ಡದು

ಹೂವಿನಹಡಗಲಿ: ಸಮಾಜವನ್ನು ಕಟುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು ಎಂದು ಪ್ರಾಂಶುಪಾಲರ ಸಂಘದ ಜಿಲ್ಲಾ ಉಪಾಧ್ಯಕ್ಷ ಕೋರಿ ಹಾಲೇಶ್ ಹೇಳಿದರು. ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ಬೀಚಿ ಗ್ರಂಥಾಲಯ ಬೆಂಬಲಿಗರ ಬಳಗದ 27ನೇ ವರ್ಷದ ಡಾ.ರಾಧಾಕೃಷ್ಣನ್ ಸ್ಮರಣಾರ್ಥ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸತತ 27 ವರ್ಷ ನಿರಂತರವಾಗಿ ಉತ್ತಮ ಶಿಕ್ಷಕರನ್ನು ಗೌರವಿಸುವ ಬಳಗದ ಕಾರ್ಯ ವೈಖರಿ ಶ್ಲಾಘನೀಯ ಎಂದರು.

ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಶಿಕ್ಷಕರು ಸದಾ ಶ್ರಮಿಸಬೇಕು. ಗ್ರಾಮೀಣ ಪ್ರದೇಶದ ಮಕ್ಕಳ ಉನ್ನತ ಸಾಧನೆಗೆ ಪ್ರೇರೇಪಿಸುವ ಕೆಲಸ ನಿರಂತರವಾಗಿ ಆಗಬೇಕು ಎಂದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಕೊಟ್ರಗೌಡ ಮಾತನಾಡಿ ಶಿಕ್ಷಕರನ್ನು ಗೌರವಿಸಿದರೆ ಸಮಾಜವನ್ನು ಗೌರವಿಸಿದಂತೆ. ಪ್ರಶಸ್ತಿಗಳು ಜವಾಬ್ದಾರಿ ಹೆಚ್ಚಿಸುತ್ತವೆ. ಬಳಗದ ಕಾರ್ಯಕ್ರಮಗಳಿಗೆ ಸಹಕಾರ ನೀಡುವುದಾಗಿ ಹೇಳಿದರು.

27ನೇ ವರ್ಷದ ಡಾ ರಾಧಾಕೃಷ್ಣನ್ ಸ್ಮರಣಾರ್ಥ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಸರೋಜಮ್ಮ ಎಂ (ಪ್ರಾಥಮಿಕ) ಸಣ್ಣಲಕ್ಕಪ್ಪ ಎಂ (ಪ್ರೌಢಶಾಲೆ), ನಟರಾಜ್ ಪಾಟೀಲ್ (ಕಾಲೇಜು), ಕೆ ಬಿ ಬಸವರಾಜ ಇವರಿಗೆ ನೀಡಿ ಗೌರವಿಸಲಾಯಿತು.

ದೈಹಿಕ ಪರಿವೀಕ್ಷಕ ರಫಿ ಅಹಮದ್ ಖವಾಸ್, ಪತ್ರಕರ್ತರ ಸಂಘಗಳ ಅಧ್ಯಕ್ಷರಾದ ಎಂ.ಪಿ.ಎಂಶಿವಪ್ರಕಾಶ್, ಬಿಚ್ಚುಗತ್ತಿ ಖಾಜಾ ಹುಸೇನ್, ವೀರೇಶ್ ಕಲ್ಮಠ, ಶಾಖಾ ಗ್ರಂಥಾಲಯಾಧಿಕಾರಿ ಬಿ ನಾರಾಯಣ್ ದಾಸ್, ಬೀರಬ್ಬಿ ಬಸವರಾಜ, ಗ್ರಂಥಾಲಯ ಮೇಲ್ವಿಚಾರಕರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ ಕುರಿ, ನಿವೃತ್ತ ಉಪ ಪ್ರಾಂಶುಪಾಲ ಪಿ ಪ್ರಕಾಶ್ ಉಪಸ್ಥಿತರಿದ್ದರು.

ಹೂವಿನಹಡಗಲಿ ಪಟ್ಟಣದ ಬೀಚಿ ಬಳಗದಿಂದ ಗಣ್ಯರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಜಾತಿ ಆಧಾರದ ಮೇಲೆ ಮೀಸಲು ಸೌಲಭ್ಯ

ರಾಯಚೂರು: ಹಿಂದುಳಿದ ವರ್ಗಗಳ ಜಾತಿ ಗಣತಿಯಲ್ಲಿ ಬಸವಾನುಯಿಗಳು ಲಿಂಗಾಯತ ಎಂದು ಬರೆಯಿಸಬೇಕು. ಧರ್ಮದ ಕಲಂನಲ್ಲಿ ಇತರೆ ಎಂದು ನಮೂದಿಸಬೇಕೆಂದು ಬಸವ ಸಂಸ್ಕೃತಿ ಅಭಿಯಾನದ ಸಂಚಾಲಕ ಹರವಿ ನಾಗನಗೌಡ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ, ಲಿಂಗಾಯತ ಧರ್ಮವು ಸ್ವಾತಂತ್ರ ಧರ್ಮವಾಗಿದ್ದು, ಕಾಯಕಗಳ ಆಧಾರದ ಮೇಲೆ ಜಾತಿಗಳಾಗಿ ವಿಗಂಡಿಸಲಾಗಿದೆ.

> ಹಿಂದುಳಿದ ಜಾತಿ ಗಣತಿ ಸಮಾಜ ಜನಸಂಖ್ಯೆ ಸಂಗ್ರಹಿಸಲು ನಡೆಯುತ್ತಿದೆ ಹೊರತು ಧರ್ಮದ ಸಂಬಂಧಿಸಿದ್ದಲ್ಲ ಲಿಂಗಾಯತ ಪ್ರತ್ಯೇಕ ಧರ್ಮವಾಗಿದೆ. ಸೊನ್ನಲಿಗೆ ಸಿದ್ದರಾಮರು ಅನೇಕವಚನಗಳನ್ನು ಬಸವ ಧರ್ಮವನು ಉಲ್ಲೇಖಿಸಿದ್ದಾರೆ. ಗೊಂದಲಕ್ಕೆ ಒಳಗಾಗದೇ ಲಿಂಗಾಯತರೆಲ್ಲರು ಧರ್ಮ ಕಾಲಂನಲ್ಲಿ ಇತರೆ ಎಂದು ನಮೂದಿಸಬೇಕು. ಶಾಸಕ ಬಸನಗೌಡ ಯತ್ನಾಳ ತಿಳುವಳಿಕೆ ಕೊರತೆಯಿಂದ ಲಿಂಗಾಯತ ಧರ್ಮ ಬಸವಣ್ಣ ಸ್ಥಾಪಿಸಿಲ್ಲ ಎಂದು ಹೇಳಿರಬಹುದು.
>
> -ರುದ್ರಯ್ಯ, ಲಿಂಗಾಯತ ಸಮಾಜ ಅಧ್ಯಕ್ಷ

ವಿಶ್ವಗುರು ಬಸವಣ್ಣನವರೇ ಲಿಂಗಾಯತ ಧರ್ಮ ಸ್ಥಾಪಕರಾಗಿದ್ದಾರೆ.

ಲಿಂಗಾಯತ ಸಮುದಾಯದಲ್ಲಿ 97 ಉಪ ಪಂಗಡಗಳಿವೆ. ಧರ್ಮ ಅಂಕಣದಲ್ಲಿ 8ರಲ್ಲಿ ಇತರೆ, ಜಾತಿ ಕಲಂನದಲ್ಲಿ ಲಿಂಗಾಯತ, 10ರಲ್ಲಿ ಉಪಜಾತಿಗಳನ್ನು ಬರೆಯಿಸಬೇಕಿದೆ.

ಮೀಸಲಾತಿ ಧರ್ಮಗಳ ಮೇಲೆ ನಿರ್ಧಾರವಾಗುವದಿಲ್ಲ. ಜಾತಿ ಆಧಾರದ ಮೇಲೆ ಮೀಸಲು ನೀಡಲಾಗುತ್ತದೆ. ಕೆಲವರು ಗೊಂದಲ ಉಂಟು ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದರು.

ಸುದ್ದಿಗೋಷ್ಠರಿಯಲ್ಲಿ ರಾಚನಗೌಡ ಕೋಳೂರು, ಮಹಾಜನ ಶೆಟ್ಟಿ, ಕೆ.ಬಸವರಾಜ, ದೇವೆಂದ್ರಮ್ಮ ಕುರುಗೋಡು ಬಸವರಾಜ ಇದ್ದರು.

ನಗರದ ಪತ್ರಿಕಾ ಭವಮದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಹರವಿ ನಾಗನಗೌಡ ಮಾತನಾಡಿದರು.

ಸಾಹಿತ್ಯ, ಸಾಂಸ್ಕೃತಿಕವಾಗಿ ರಾಯಚೂರು ಶ್ರೀಮಂತ

ರಾಯಚೂರು: ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಹಾಗೂ ಭೌಗೋಳಿಕವಾಗಿ ಅತ್ಯಂತ ಶ್ರೀಮಂತ ನಾಡಾಗಿರುವ ರಾಯಚೂರು ಜಿಲ್ಲೆಯಲ್ಲಿ ಬೆಳಕು ಎಂಬ ಹೆಸರಿನಲ್ಲಿ ರಾಷ್ಟ್ರ ಮಟ್ಟದ ಸಮ್ಮೇಳನವನ್ನು ಹಮ್ಮಿಕೊಂಡು, ಕಲಾವಿದರಿಗೆ ಗೌರವ ತರುವ ಕೆಲಸವನ್ನು ಮಾಡುತ್ತಿರುವುದು ಅತ್ಯಂತ ಶ್ಲಾಘನೀಯ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ಸಿ.ಸೋಮಶೇಖರ ಹೇಳಿದರು.

ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಬೆಳಕು ಸಾಹಿತ್ಯಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರ ಮಟ್ಟದ ಬೆಳಕು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಬೆಳಕು ಎಂದರೆ ಜ್ಞಾನ, ಪ್ರೀತಿ, ದಯೆ, ಪ್ರಗತಿ, ಸಾಮರಸ್ಯ ಹಾಗೂ ಸಹಬಾಳ್ವೆಯಾಗಿದ್ದು, ಬೆಳಕು ಇದ್ದಲ್ಲಿ ದ್ವೇಷ ಹಾಗೂ ಸಂಘರ್ಷಗಳು ಇರುವುದಿಲ್ಲ.

ಅಂತಹ ಬೆಳಕು ಎಂಬ ಹೆಸರಿನಲ್ಲಿ ಸಮ್ಮೇಳನವನ್ನು ಹಮ್ಮಿಕೊಂಡು, ಕಲಾವಿದರ ಕಲೆಯನ್ನು ಹೊರ ತಂದು ಅವರ ಕಲೆಗೆ ಪ್ರೋತ್ಸಾಹಿಸುವ ಮತ್ತು ಕಲಾವಿದರನ್ನು ಮುಖ್ಯ ವಾಹಿನಿಗೆ ತರುವ ಕಾರ್ಯವನ್ನು ಬೆಳಕು ಸಂಸ್ಥೆ ಮಾಡುತ್ತಿದೆ ಎಂದರು. ಪ್ರಸ್ತುತ ಕನ್ನಡ ಭಾಷೆಯನ್ನು ಉಳಿಸುವ ಕೆಲಸಗಳು ಇಂತಹ ಸಂಸ್ಥೆಗಳಿಂದ ಆಗಬೇಕಾಗಿದ್ದು, ಗಡಿ ಪ್ರದೇಶದ ಶಿಕ್ಷಣ ಹಾಗೂ ಶಾಲೆಗಳಿಗೆ ಶಕ್ತಿ ತುಂಬುವ ಕೆಲಸಗಳನ್ನು ಸಂಸ್ಥೆಗಳ ಜೊತೆಗೆ ಸರಕಾರದಿಂದಲೂ ಆಗಬೇಕಿದೆ ಕನ್ನಡ ನಾಡು ವಿಶಿಷ್ಟವಾದ ನಾಡಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಿಚಾರ ವೇದಿಕೆಯ ಅಧ್ಯಕ್ಷ ಪಾಲನೇತ್ರ, ರಾಯಚೂರು ವಿವಿಯ ಸಿಂಡಿಕೇಟ್ ಸದಸ್ಯ ಚನ್ನಬಸವ ದದ್ದಲ್, ಅಂತರಾಷ್ಟ್ರೀಯ ಕ್ಲಾರಿನೇಟ್ ವಾದಕ ಪಂಡಿತ್ ನರಸಿಂಹಲು ವಡವಾಟಿ, ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಸುರೇಂದ್ರಬಾಬು, ಕೃಷ್ಣ ಶಾವಂತಗೇರಾ, ಅಮರೇಶ ಹಾವಿನ್, ಅನಿತಾ ತಾಯಿ, ಪೊಲೀಸ್ ಅಧಿಕಾರಿಗಳಾದ ಪ್ರಕಾಶ ಡಂಬಳ್, ಎರಿಯಪ್ಪ ಅಂಗಡಿ, ಸಣ್ಣ ಈರೇಶ, ಸುರೇಶ ಣಾಯಕ, ವೆಂಕಟೇಶ ಗುತ್ತೇದಾರ್ ಸೇರಿದಂತೆ ಅನೇಕರು ಭಾಗಿಯಾಗಿದ್ದರು.

ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ರಾಷ್ಟ್ರ ಮಟ್ಟದ ಬೆಳಕು ಸಮ್ಮೇಳನದಲ್ಲಿ ಡಾ.ಸಿ. ಸೋಮಶೇಖರ ಮಾತನಾಡಿದರು.

> ಸಾಹಿತ್ಯ ಸಮಾಜದ ಕನ್ನಡಿಯಾಗಿದ್ದು, ಸಾಹಿತ್ಯವನ್ನ ಜನಮಾನಸದಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಸಂಸ್ಥೆ ಮಾಡುತ್ತಿದ್ದು, ಇದು ಕೇವಲ ಸಂಸ್ಥೆಯ ಕೆಲಸ ಮಾತ್ರವಲ್ಲದೇ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಕಾರ್ಯ ಮೆಚ್ಚುವಂತದ್ದು .
>
> -ಪುಟ್ಟಮಾದಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಎಸ್‌ಟಿ ಪಟ್ಟಿಗೆ ಕುರುಬ ಸಮುದಾಯ ಬೇಡ

ಹೊಸಪೇಟೆ: ಪರಿಶಿಷ್ಟ ಪಂಗಡ (ಎಸ್‌ಟಿ) ಪಟ್ಟಿಗೆ ಕುರುಬ ಮತ್ತಿತರ ಕೆಲವು ಸಮುದಾಯಗಳನ್ನು ಸೇರಿಸಲು ರಾಜ್ಯ ಸರಕಾರ ಉದ್ದೇಶಿಸಿರುವುದನ್ನು ವಿರೋಧಿಸಿ ಸೆ.25ರಂದು ನಗರದಲ್ಲಿ ಪ್ರತಿಭಟನೆ ನಡೆಸಲಾ ಗುವುದು ಎಂದು ಹೊಸಪೇಟೆ ತಾಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಗೋಸಲ ಭರಮಪ್ಪ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಅಕ್ಟೋಬರ್ 5ರೊಳಗೆ ಸರಕಾರ ನಮ್ಮ ಬೇಡಿಕೆಗಳಿಗೆ ಸ್ಪಂದಿಸಿ ನಿರ್ಧಾರ ಪ್ರಕಟಿಸಬೇಕು, ತಪ್ಪಿದಲ್ಲಿ ಅ.7ರಂದು ನಡೆಯಲಿರುವ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೇ, ಬೇಡವೇ ಎಂಬುದನ್ನು ನಿರ್ಧರಿಸಲಾಗುವುದು ಎಂದು ಹೇಳಿದರು.

ಪರಿಶಿಷ್ಟ ಪಂಗಡಕ್ಕೆ ಕುರುಬ ಮತ್ತು ಇತರೆ ಸಮುದಾಯಗಳನ್ನು ಸೇರ್ಪಡೆಗೊಳಿಸುವ ಯೋಜನೆಯನ್ನು ತಕ್ಷಣ ನಿಲ್ಲಿಸಬೇಕು, ಈಗಾಗಲೇ ಸುಳ್ಳು ಜಾತಿ ಪ್ರಮಾಣಪತ್ರ ಪಡೆದು ಎಸ್‌ಟಿ ಫಲಾನುಭವಿಗಳಾಗಿವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಆದೇಶ ನೀಡಬೇಕು ಎಂಬುದು ನಮ್ಮ ಸಮುದಾಯದ ಪ್ರಮುಖ ಬೇಡಿಕೆಯಾಗಿದೆ ಎಂದರು.

ಅಹಿಂದ ನಾಯಕ ಎಂದು ಹೇಳಿಕೊಳ್ಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಸ್‌ಸಿ, ಎಸ್‌ಟಿ ಸಮುದಾಯಗಳನ್ನು ತುಳಿಯುವ ಕೆಲಸ ಮಾಡುತ್ತಿದ್ದಾರೆ. ಜಾತಿ, ಜಾತಿಗಳ ನಡುವೆ ಬಡಿದಾಡಿಕೊಳ್ಳುವ ಸ್ಥಿತಿ ತಂದಿಡುತ್ತಿದ್ದಾರೆ. ಸಿಎಂ ನಿಲುವನ್ನು ಅವರ ಜಾತಿಯವರೇ ವಿರೋಧಿಸುತ್ತಿದ್ದಾರೆ. ಸರಕಾರ ತನ್ನ ನಿಲುವು ಬದಲಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ನಿಶ್ಚಿತ ಎಂದು ತಿಳಿಸಿದರು. ಸಮಾಜದ ಎಸ್.ಎಸ್. ಚಂದ್ರಶೇಖರ್, ಗುಡುಗುಡಿ ಸೋಮನಾಥ್, ಎಚ್.ಆಂಜನೇಯ, ಬೆಳಗೋಡು ಅಂಬಣ್ಣ, ಕಿನ್ನಾಳ ಹನುಮಂತ ಇದ್ದರು.

> ಸಮಾಜದ 14 ಮಂದಿ ಶಾಸಕರು ಕಾಂಗ್ರೆಸ್‌ನಿಂದಲೇ ಆಯ್ಕೆಯಾಗಿ ಬಂದವರು, ಸೆ.18ರಂದು ರಾಜನಹಳ್ಳಿ ಗುರುಪೀಠದಲ್ಲಿ ನಡೆದ ಸಭೆಯಲ್ಲಿ ಹೆಚ್ಚಿನ ಶಾಸಕರು ಪಾಲ್ಗೊಂಡಿಲ್ಲ. ಇದು ಇವರು ಸಮಾಜಕ್ಕೆ ಮಾಡುತ್ತಿರುವ ದ್ರೋಹ. ಕುರುಬ ಸಮಾಜವನ್ನು ಎಸ್‌ಟಿಗೆ ಸೇರಿಸಿದ ಅರ್ಧ ಗಂಟೆಯಲ್ಲಿ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಬಳ್ಳಾರಿ-ವಿಜಯನಗರ ಸಂಸದ ಇ. ತುಕಾರಾಂ ಗುರುಪೀಠದಲ್ಲಿ ಪ್ರತಿಜ್ಞೆ ಮಾಡಿದ್ದಾರೆ.
>
> -ಜಂಬಯ್ಯ ನಾಯಕ, ಮುಖಂಡ



ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಗೋಸಲ ಭರಮಪ್ಪ ಮಾತನಾಡಿದರು.

ನೇತ್ರ ತಪಾಸಣೆ, ಶಸ್ತ್ರ ಚಿಕಿತ್ಸಾ ಶಿಬಿರ

ಹೊಸಪೇಟೆ: ನೇತ್ರಾ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ಬಲ್ಡೋಟ ಸಮೂಹದ ಎಂಎಸ್‌ಪಿಎಲ್ ಲಿಮಿಟೆಡ್ ಹೊಸಪೇಟೆ, ನೇತ್ರಾಲಕ್ಷ್ಮಿ ವೈದ್ಯಾಲಯ, ಅಶ್ವಿನಿ ಕಣ್ಣಿನ ಆಸ್ಪತ್ರೆ ಹಾಗೂ ಪದ್ಮಶಾಲಿ ಯುವಕ ಸಂಘ ಮತ್ತು ಪದ್ಮಶಾಲಿ ಬಹುತ್ತಮ ಸಮಾಜ ಸಹಯೋಗದಲ್ಲಿ ನಗರದ ಪದ್ಮಶಾಲಿ ಸಮಾಜದ ಕಲ್ಯಾಣ ಮಂಟಪದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಎಂಎಸ್‌ಪಿಎಲ್ ಪೆಲ್ಲೆಟ್ ಪ್ಲಾಂಟ್ -2 ಅಧ್ಯಕ್ಷ ವೆಂಕಟರಮಣ ರೆಡ್ಡಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಎಂ ಎಸ್ ಪಿ ಎಲ್ ಸಂಸ್ಥೆ ಹಲವು ಸಮಾಜಮುಖಿ ಕಾರ್ಯಕ್ರಮಗಳ ಜೊತೆ ಆರೋಗ್ಯ ಶಿಬಿರಗಳನ್ನು ಆಯೋಜಿಸುತ್ತಾ ಬಂದಿದ್ದು ಅವುಗಳಲ್ಲಿ ಉಚಿತ ನೇತ್ರ ತಪಾಸಣಾ ಮತ್ತು ಶಸ್ತ್ರ ಚಿಕಿತ್ಸೆ ಶಿಬಿರವೂ ಒಂದಾಗಿದೆ ಎಂದರು. ಈಗಾಗಲೇ ನೇತ್ರಲಕ್ಷ್ಮಿ ವೈದ್ಯಾಲಯದ ಸಹಯೋಗದೊಂದಿಗೆ ಹೊಸಪೇಟೆ ನಗರ ಸೇರಿದಂತೆ ಆಯ್ದ ಹಳ್ಳಿಗಳಲ್ಲಿನ ಹತ್ತು ಸಾವಿರಕ್ಕೂ ಹೆಚ್ಚಿನ ಜನರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಲಾಗಿದ್ದು ಅವರೆಲ್ಲರೂ ತಮ್ಮ ಕೆಲಸಗಳನ್ನು ಸ್ವಾತಂತ್ರವಾಗಿ ಮಾಡುತ್ತಿದ್ದಾರೆ. ಸಮಾಜದ ಎಲ್ಲಾ ವರ್ಗದ ಜನರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಲು ತಿಳಿಸಿದರು.

ಶಿಬಿರ ಕುರಿತು ನೇತ್ರ ತಜ್ಞರಾದ ಡಾ. ಶ್ರೀನಿವಾಸ್ ದೇಶಪಾಂಡೆ, ಅರವಾ ವಿಶ್ವನಾಥ್, ಡಾ. ಅರವಾ ರಾಜು ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಂ ಎಸ್ ಪಿ ಎಲ್ ಸಂಸ್ಥೆ ಸಮಾಜ ಸೇವಾ ವಿಭಾಗದ ಮುಖ್ಯಸ್ಥ ಹೆಚ್ ಕೆ ರಮೇಶ್, ರವಿ ಬಿಸಗುಪ್ಪಿ, ರಾಮಚಂದ್ರಪ್ಪ, ಗುರಂ ಶ್ರೀನಿವಾಸ, ರೇವಣಿಕಿ ಸರೋಜಮ್ಮ, ರಾಮು ಸೇರಿದಂತೆ ಪದ್ಮಶಾಲಿ ಸಮಾಜದ ಪದಾಧಿಕಾರಿಗಳು ಮತ್ತು ಯುವಕರು ಭಾಗವಹಿಸಿದ್ದರು.

ನಗರದ ಪದ್ಮಶಾಲಿ ಸಮಾಜದ ಕಲ್ಯಾಣ ಮಂಟಪದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ನಡೆಯಿತು.

> ಎಂಎಸ್‌ಪಿಎಲ್ ಸಂಸ್ಥೆಯು ಹೊಸಪೇಟೆ ನಗರದಲ್ಲಿ ಪರಿಸರವನ್ನೊಳಗೊಂಡಂತೆ ಅನೇಕ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತ ಬಂದಿದ್ದು ಸಂಸ್ಥೆಯ ಸಹಯೋಗದಲ್ಲಿ ಈ ಶಿಬಿರವು ಮೂರನೇ ಕಾರ್ಯಕ್ರಮವಾಗಿದ್ದು ಸುಮಾರು 50ಕ್ಕೂ ಹೆಚ್ಚಿನ ಜನರಿಗೆ ಶಸ್ತ್ರ ಚಿಕಿತ್ಸೆ ಮಾಡಿಸಲಾಗಿದೆ.
>
> -ಜಯರಾಮ್

ಶಾಸಕ ಹಿಟ್ನಾಳ್ ಆಸ್ಪತ್ರೆ ಕಟ್ಟಡ ಪರಿಶೀಲನೆ

ಕೊಪ್ಪಳ: ನಗರದ ಸರಕಾರಿ ವೈದ್ಯಕೀಯ ಕಾಲೇಜಿನ ಪಕ್ಕದಲ್ಲಿ ನಿರ್ಮಾಣವಾಗಿರುವ ನೂತನ 450 ಬೆಡ್ ಆಸ್ಪತ್ರೆಯನ್ನು ಸಿಎಂ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಲಿದ್ದಾರೆ ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಹೇಳಿದರು. ನಗರದ ನೂತನ ಕಟ್ಟಡಕ್ಕೆ ಭೇಟಿ ನೀಡಿ, ಪರಿಶೀಲಿಸಿ ಭಾನುವಾರ ಮಾತನಾಡಿದರು.

ಅ. 6 ರಂದು ಕೊಪ್ಪಳಕ್ಕೆ ಸಿಎಂ ಸಿದ್ದರಾಮಯ್ಯ ಪ್ರವಾಸ ಕಾರ್ಯಕ್ರಮ ಖಚಿತವಾಗಿದೆ. ಅಂದು ಅಭಿವೃದ್ಧಿ ಕಾಮಗಾರಿಗಳ ಅಡಿಗಲ್ಲು ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ. ಜತೆಗೆ ಕಿಮ್ಸ್‌ನ ನೂತನ ಆಸ್ಪತ್ರೆ ಕಟ್ಟಡವನ್ನು ಲೋಕಾರ್ಪಣೆ ಮಾಡಲಿದ್ದಾರೆ. ಕಿಮ್ಸ್ ಅಧಿಕಾರಿಗಳು ಎಲ್ಲ ಸಿದ್ಧತೆ ಮಾಡಿಕೊಳ್ಳಬೇಕು. ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಸಿಎಂ ಸಿದ್ದರಾಮಯ್ಯ ಅವರು 450 ಬೆಡ್ ಆಸ್ಪತ್ರೆಯ ಉದ್ಘಾಟನೆ ನಂತರ ಕೊಪ್ಪಳ ಜಿಲ್ಲೆಗೆ ನೂತನವಾಗಿ ಘೋಷಣೆ ಆಗಿರುವ 100 ಕೋಟಿ ವೆಚ್ಚದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡ ನಿರ್ಮಾಣಕ್ಕೆ ಅಡಿಗಲ್ಲು ನೆರವೇರಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಶಾಸಕ ಕೆ. ರಾಘವೇಂದ್ರ ಹಿಟ್ನಾಳ 450 ಬೆಡ್ ನ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದರು.

ಕನಕದಾಸ ಪ್ರತಿಮೆ ಲೋಕಾರ್ಪಣೆ

ಸಿಎಂ ಸಿದ್ದರಾಮಯ್ಯ ಕೊಪ್ಪಳ ಪ್ರವಾಸದ ಹಿನ್ನೆಲೆ ಕಾಗಿನೆಲೆ ಕನಕಗುರು ಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ಕೊಪ್ಪಳ ಭೇಟಿ ನೀಡಿ, ಕೇಂದ್ರೀಯ ಬಸ್ ನಿಲ್ದಾಣದ ಮುಂದಿನ ಕನಕದಾಸರ ಪ್ರತಿಮೆ ಪರಿಶೀಲನೆ ಮಾಡಿದರು. ಈ ವೇಳೆ ಶಾಸಕ ಹಾಗೂ ಸಂಸದರು ಪ್ರತಿಮೆ ಕುರಿತು ಮಾಹಿತಿ ನೀಡಿ, ಅ. 6ಕ್ಕೆ ಸಿದ್ದರಾಮಯ್ಯ ಅವರು ಕೊಪ್ಪಳಕ್ಕೆ ಆಗಮಿಸುತ್ತಿದ್ದಾರೆ. ಸಿಎಂ ಅವರೇ ಪ್ರತಿಮೆ ಅನಾವರಣ ಮಾಡಲಿದ್ದಾರೆ ಎಂದು ಶ್ರೀಗಳಿಗೆ ಮಾಹಿತಿ ನೀಡಿದರು. ಶ್ರೀಗಳಿಗೂ ಕೂಡ ಕನಕದಾಸರ ಪ್ರತಿಮೆಯ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಶಾಸಕರು ಸಂಸದರು ಅಹ್ವಾನಿಸಿದರು.

ಸರಕಾರಿ ಶಾಲೆ ಮೂಲ ಸೌಲಭ್ಯದಿಂದ ವಂಚಿತ

ವಿದ್ಯಾರ್ಥಿಗಳಿಗೆ ಬೇಕಿದೆ ಶುದ್ಧ ಕುಡಿವ ನೀರು | ಶೌಚಾಲಯಕ್ಕೆ ಬಯಲೇ ಗತಿ

ಅನಿಲ್ ಕುಮಾರ್ ಎಂ ಕಲ್ಭಾವಿ ಯಲಬುರ್ಗಾ

ತಾಲೂಕಿನ ಹಲವು ಸರಕಾರಿ ಶಾಲೆಗಳು ಮೂಲ ಸೌಲಭ್ಯದಿಂದ ವಂಚಿತವಾಗಿವೆ. ತಾಲೂಕಿನ ಬಹುತೇಕ ಸರಕಾರಿ ಶಾಲೆಗಳಲ್ಲಿ ಕುಡಿಯುವ ನೀರು, ಶೌಚಾಲಯ ಸೌಲಭ್ಯ ಇಲ್ಲದಂತಾಗಿದೆ. ಮಲ, ಮೂತ್ರ ವಿಸರ್ಜನೆಗೆ ವಿದ್ಯಾರ್ಥಿಗಳು ಬಯಲಿಗೆ ತೆರಳುತ್ತಿದ್ದಾರೆ. ತಾಲೂಕಿನಲ್ಲಿ 64 ಕಿರಿಯ ಪ್ರಾಥಮಿಕ ಶಾಲೆ, 126 ಪ್ರಾಥಮಿಕ ಶಾಲೆಗಳು, ಮತ್ತು 59 ಹೈಸ್ಕೂಲ್ ಶಾಲೆಗಳಿದ್ದು, ಈ ಶಾಲೆಗಳಿಗೆ ಶುದ್ಧ ಕುಡಿಯುವ ನೀರು, ಶೌಚಾಲಯಗಳ ಸ್ಥಿತಿಯಂತೂ ಹೇಳೋರು ಕೇಳೋರು ಇಲ್ಲ ಎಂಬಂತಾಗಿದೆ. ಕ್ಷೇತ್ರದಲ್ಲಿ ಶಾಲೆಗಳು ಒಟ್ಟು 249 ಇದ್ದು. ಕೆಲವೇ ಶಾಲೆಗಳಲ್ಲಿ ಶುದ್ಧ ನೀರಿನ ಘಟಕಗಳಿದ್ದು, ಉಳಿದ ಶಾಲೆಗಳಲ್ಲಿ ಶುದ್ಧ ಕುಡಿಯೋ ನೀರು, ಶೌಚಾಲಯ ವ್ಯವಸ್ಥೆಯೇ ಇಲ್ಲ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಬೇಕಾಗಿದೆ.

ಶ್ರೀಮಂತರ ಮಕ್ಕಳು ದೊಡ್ಡ ದೊಡ್ಡ ಖಾಸಗಿ ಶಾಲೆಗಳಿಗೆ ತೆರಳುತ್ತಿದ್ದಾರೆ. ಆದರೆ ಹಳ್ಳಿ ಗಾಡಿನ ಬಡವರ ಮಕ್ಕಳು ಸರಕಾರಿ ಶಾಲೆಗಳಿಗೆ ತೆರಳುತ್ತಿದ್ದಾರೆ. ಆದರೆ ಈ ಸರಕಾರಿ ಶಾಲೆಗಳಲ್ಲಿ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆಯೂ ಸರಿಯಾಗಿಲ್ಲ. ಕೆಲವು ಶಾಲೆಗಳಲ್ಲಂತೂ ಶೌಚಾಲಯವೇ ಇಲ್ಲ.

ಸರಕಾರಿ ಶಾಲೆಗಳ ಅಭಿವೃದ್ದಿಗೆ ಆದ್ಯತೆ ನೀಡುತ್ತೇವೆ ಎಂಬ ಭರವಸೆಯನ್ನು ಸರಕಾರ ನೀಡುತ್ತಿದೆ. ಆದರೆ ವಾಸ್ತವದಲ್ಲಿ ಸರಕಾರಿ ಶಾಲೆಗಳ ಸ್ಥಿತಿ ಹದಗೆಟ್ಟಿದೆ. ಕುಡಿಯುವ ನೀರು, ಶೌಚಾಲಯ ಅಷ್ಟೇ ಅಲ್ಲ, ಸುಸ್ಥಿತಿಯಲ್ಲಿಲ್ಲದ ಕಟ್ಟಡಗಳಲ್ಲಿ ಕುಳಿತುಕೊಂಡು ಪಾಠ ಕೇಳಬೇಕಾದ ಅನಿವಾರ್ಯ ಪರಿಸ್ಥಿತಿ ಬಡವರ ಮಕ್ಕಳದ್ದು. ಒಟ್ಟು 270 ಶಾಲೆಗಳ ಪೈಕಿ ಕೈಬೆರಳಷ್ಟು ಶಾಲೆಗಳಲ್ಲಿ ಮಾತ್ರ ಕುಡಿಯುವ ನೀರು ಹಾಗೂ ಶೌಚಾಲಯದ ಸೌಲಭ್ಯವಿದೆ. ಉಳಿದ ಶಾಲೆಗಳ ಕಾಯಕಲ್ಪ ಆದಷ್ಟು ಬೇಗ ಆಗಬೇಕಿದೆ.

ನಿರ್ವಹಣೆ ಕೊರತೆಯಿಂದ ದುರಸ್ಥಿ ಹಂತ ತಲುಪಿದ ಶೌಚಾಲಯಗಳು.

> ಶುದ್ಧ ಕುಡಿಯುವ ನೀರು ಹಾಗೂ ಶೌಚಾಲಯ ನಿರ್ವಹಣೆಗೆ ಪ್ರತಿ ಆರು ತಿಂಗಳಿಗೊಮ್ಮೆ 10 ಸಾವಿರವನ್ನು ಇಲಾಖೆಯಿಂದ ಕೊಡುತ್ತಿದ್ದೆವೆ. ಈಗ ಸುಮಾರು 100 ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, ಉಳಿದ ಶಾಲೆಗಳಿಗೆ ಹೊಸ ಆರ್ ಓ ಪ್ಲಾಂಟ್ ದೊರೆಯುವ ನಿರೀಕ್ಷೆಯಲ್ಲಿದ್ದೇವೆ. ಹಲವಾರು ಶಾಲೆಗಳಲ್ಲಿ ಶೌಚಾಲಯಗಳು ದುರಸ್ಥಿ ಹಂತದಲ್ಲಿದ್ದು, ಗ್ರಾಮ ಪಂಚಾಯತ್‌ಗಳ ಸಹಾಯಹಸ್ತ ಬೇಕಾಗಿದೆ. ಅಗತ್ಯ ಕ್ರಮಕ್ಕೆ ಅಧಿಕಾರಿಗಳಿಗೆ ಸೂಚಿಸುತ್ತೇನೆ.
>
> -ಅಶೋಕಗೌಡರ್, ಕ್ಷೇತ್ರ ಶಿಕ್ಷಣಾಧಿಕಾರಿ

> ಶಾಸಕರು ಸರಕಾರಿ ಶಾಲೆಗಳಲ್ಲಿ ಇರುವ ಮೂಲಭೂತ ಸಮಸ್ಯೆಗಳ ಬಗ್ಗೆ ಗಮನ ಹರಿಸಬೇಕು. ತಾಲೂಕಿಗೆ ಲಗ್ಗೆ ಇಟ್ಟ ಸೋಲಾರ್ ಹಾಗೂ ವಿಂಡ್ ಪವರ್ ಕಂಪನಿಗಳು ಸಿ ಎಸ್ ಆರ್ ನಿಧಿ ಮುಖಾಂತರ ಸರಕಾರಿ ಶಾಲೆಗಳಿಗೆ ಗುಣಮಟ್ಟದ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಶೌಚಾಲಯ ಸ್ಥಾಪನೆಗೆ ಶಿಕ್ಷಣ ಇಲಾಖೆಗೆ ದೇಣಿಕೆ ಕೊಡಲು ಮುಂದಾಗಬೇಕಿವೆ. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.
>
> -ಮಲ್ಲನಗೌಡ ಕೋನನಗೌಡ್ರ, ಜೆಡಿಎಸ್ ಪಕ್ಷದ ಜಿಲ್ಲಾ ವಕ್ತಾರ

ಸಮಾಚಾರ ಸಣ್ಣದಲ್ಲ

ಸಚಿವ ಮಲ್ಲಿಕಾರ್ಜುನ್ ಹುಟ್ಟುಹಬ್ಬ ಇಂದು

ದಾವಣಗೆರೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರ ಹುಟ್ಟುಹಬ್ಬ ಅಂಗವಾಗಿ ಅವರ ಅಭಿಮಾನಿ ಬಳಗದಿಂದ ಸೆ.22ರಂದು ವಿವಿಧ ಸಾಮಾಜಿಕ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದು ಗೋಶಾಲೆ, ವೃದ್ಧಾ ಶ್ರಮ, ಅಂಗವಿಕಲರ ಶಾಲೆಗಳು ಮತ್ತು ಅನಾಥಾಶ್ರ ಮಗಳು ಸೇರಿದಂತೆ ವಿವಿಧೆಡೆ ಸಾಮಾಜಿಕ ಕಾರ್ಯಕ್ರ ಮಗಳನ್ನು ನಡೆಸಲಾಗುತ್ತಿದೆ. ಬೆಳಗ್ಗೆ 11.30ಕ್ಕೆ ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಮಲ್ಲಿಕಾರ್ಜುನ್ ಅವರ ಜನ್ಮದಿನವನ್ನು ಪಕ್ಷದ ಎಲ್ಲಾ ಶಾಸಕರು, ಮುಖಂಡರು, ಕಾರ್ಯಕರ್ತರು ಮತ್ತು ಅಭಿಮಾನಿಗಳೊಂದಿಗೆ ಕೇಕ್ ಕತ್ತರಿಸಿ ಆಚರಿಸ ಲಾಗುತ್ತಿದೆ.

ದಸರಾ ಸಾಂಸ್ಕೃತಿಕ ಉತ್ಸವ ಇಂದಿನಿಂದ

ದಾವಣಗೆರೆ: ಇಲ್ಲಿನ ನಿಟುವಳ್ಳಿಯ ಶ್ರೀ ಜೋಡಿ ಬನ್ನಿಮಹಾಂಕಾಳಿ ಮತ್ತು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ನಗರದ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣ ಹಿಂಭಾಗದ ಶ್ರೀ ಸಿದ್ದೇಶ್ವರ ಮಿಲ್ ಆವರಣದ ದೇವಸ್ಥಾನದಲ್ಲಿ ಸೆ. 22ರಿಂದ ಅಕ್ಟೋಬರ್ 3ರ ವರೆಗೆ ದೇವನಗರಿ ದಸರಾ ಸಾಂಸ್ಕೃತಿಕ ಉತ್ಸವ ಏರ್ಪಡಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷೆ ಗುಂಡಿ ಪುಷ್ಪಾ ಸಿದ್ದೇಶ್ ತಿಳಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸೆ. 22ರ ಬೆಳಗ್ಗೆ 7.30ಕ್ಕೆ ನಿಟುವಳ್ಳಿ ದುರ್ಗಾಂಬಿಕಾ ದೇವಸ್ಥಾನದ ಎದುರಿನಿಂದ ಪೂರ್ಣಕುಂಭ ಮೆರವಣಿಗೆಯೊಂದಿಗೆ ದೇವಿಯ ಮೂರ್ತಿಯನ್ನು ತಂದು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಗುವುದು. ಮಧ್ಯಾಹ್ನ 2 ಸಾವಿರ ಜನರಿಗೆ ಅನ್ನಸಂತರ್ಪಣೆಗೆ ವ್ಯವಸ್ಥೆ ಮಾಡಲಾಗಿದೆ. ಪ್ರತಿದಿನ ಸಂಜೆ ರಾ. ರಾ. ವಿ. ಪುಷ್ಪಾ ಹಾಗೂ ಚಿತ್ತರಗಿ ಆಶಾ ಅವರಿಂದ ಶ್ರೀದೇವಿ ಪಾರಾಯಣ ನಡೆಯಲಿದೆ. ಸಂಜೆ 6.30ರಿಂದ ಮನರಂಜನೆ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.ಸೆ.22ರ ಸಂಜೆ ಶುಭದಾ ತಂಡದವರಿಂದ ವೀಣಾವಾದನ, ಶ್ರೀ ವೀರಭದ್ರೇಶ್ವರ ವೀರಗಾಸೆ ತಂಡದಿಂದ ವೀರಗಾಸೆ ಪ್ರದರ್ಶನ, 23ರಂದು ವಿದುಷಿ ಅಶ್ವಿಕಾ ಐನಹಳ್ಳಿ ಶಿಷ್ಯರಿಂದ ಶ್ರೀದೇವಿ ನೃತ್ಯವೈಭವ ಭರತನಾಟ್ಯ, ಚಮನ್, ಬುಡೇನ್ ತಂಡದಿಂದ ಲಾವಣಿ ಗಾಯನ, 24ರಂದು ಮಹೇಶ್ ಮೆಲೋಡಿಸ್ ಕಲಾವಿದರಿಂದ ಹಳೆಯ ಚಿತ್ರಗೀತೆಗಳ ಗಾಯನ, 25ರಂದು ಕದಳಿ ವೇದಿಕೆಯಿಂದ ಶ್ರೀಶೈಲ ಮಲ್ಲಿಕಾರ್ಜುನ ವಿವಿಧ ನಾಟಕ ಕಲಾವಿದರ ಸಂಘದಿಂದ 'ಮಗ ಹೋದರೂ ಮಾಂಗಲ್ಯ ಬೇಕು' ಸಾಮಾಜಿಕ ನಾಟಕ, 26ಕ್ಕೆ ಜಯಲಕ್ಷ್ಮೀ ನಾಟಕ ಸಂಘದಿಂದ ಶ್ರೀ ರೇಣುಕಾದೇವಿ ಮಹಾತ್ಮೆ ಭಕ್ತಿ ಪ್ರಧಾನ ನಾಟಕ, 27ಕ್ಕೆ ನಮನ ಅಕಾಡೆಮಿಯಿಂದ ನೃತ್ಯ ನಮನ, ಶ್ರೀಕೃಷ್ಣ ವಿಲಾಸಂ ನೃತ್ಯರೂಪಕ, 28ಕ್ಕೆ ಕಲಾವಿಕಾಸ ನಾಟಕ ಸಂಘದಿಂದ ಕಂಬನಿ ಹಾಸ್ಯಭರಿತ ನಾಟಕ, 29ರಂದು ಡಿ. ಮಹೇಶ್ವರಪ್ಪ ತಂಡದಿಂದ ಸುಗಮ ಸಂಗೀತ, 30ರಂದು ಜಯಲಕ್ಷ್ಮೀ ನಾಟಕ ಸಂಘದಿಂದ ತವರುಮನೆ ನಾಟಕ, ಅ.1ರಂದು ತಾಯಿಕರುಳು ಅರ್ಥಾತ್ ಸೊಕ್ಕಿನ ಸೊಸೆ ನಾಟಕ ಪ್ರದರ್ಶನ ನಡೆಯಲಿದೆ ಎಂದು ಮಾಹಿತಿ ನೀಡಿದರು.ಅ.1ರಂದು ಅನ್ನಸಂತರ್ಪಣೆ ನೆರವೇರಲಿದೆ. 2ರಂದು ನಿಟುವಳ್ಳಿ ರಾಜಬೀದಿಗಳಲ್ಲಿ ನಡೆಯುವ ಚಾಮುಂಡೇಶ್ವರಿ ದೇವಿ ಮೆರವಣಿಗೆಯು ದೇವಸ್ಥಾನದ ಆವರಣಕ್ಕೆ ಆಗಮಿಸಿದ ಬಳಿಕ ಸಾಮೂಹಿಕ ಬನ್ನಿ ಮುಡಿದು, ನವರಾತ್ರಿ ಉತ್ಸವಕ್ಕೆ ತೆರೆ ಎಳೆಯಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಹೇಶ್ವರಪ್ಪ ದೊಡ್ಡಮನಿ, ನಿಟುವಳ್ಳಿ ಮುರುಗೇಶ್, ಎನ್.ಎಚ್. ಯಲ್ಲಪ್ಪ, ಬಾತಿ ರುದ್ರೇಶ್ ಇದ್ದರು.

ಫ್ಲೋರೋಸಿಸ್ ಕಾಯಿಲೆ ಬರದಂತೆ ಜಾಗೃತಿ ವಹಿಸಿ

ಹರಿಹರ: ಫ್ಲೋರೋಸಿಸ್ ಕಾಯಿಲೆಗೆ ಔಷಧಿ ಇಲ್ಲ, ಕಾಯಿಲೆ ಬರದಂತೆ ಮುಂಜಾಗ್ರತೆ ವಹಿಸಿ ಎಂದು ಜಿಲ್ಲಾ ಫ್ಲೋರೋಸಿಸ್ ಸಲಹೆಗಾರ ಬಿ.ಎಂ. ಸಿದ್ದಯ್ಯ ತಿಳಿಸಿದರು.ತಾಲೂಕಿನ ಕೊಂಡಜ್ಜಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶನಿವಾರ ನಡೆದ ಉಚಿತ ಫ್ಲೋರೋಸಿಸ್ ತಪಾಸಣಾ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದ ಅವರಿ ಫ್ಲೋರೈಡ್ ಅಂಶ ಅಧಿಕ ಪ್ರಮಾಣದಲ್ಲಿ ಇರುವ ಕುಡಿಯುವ ನೀರು, ಆಹಾರ, ಟೂತ್‌ಪೇಸ್ಟ್ ಹಾಗೂ ಕಾರ್ಖಾನೆಗಳಿಂದ ಹೊರಹೊಮ್ಮುವ ಧೂಳು, ಹೊಗೆಗಳಿಂದ ಫ್ಲೋರೋಸಿಸ್ ಕಾಯಿಲೆ ಬರುತ್ತದೆ. ಇವುಗಳಲ್ಲಿ ದಂತ ಫ್ಲೋರೋಸಿಸ್, ಮೂಳೆಗಳ ಫ್ಲೋರೋಸಿಸ್ ಹಾಗೂ ದೇಹದ ಇತರೆ ಭಾಗದ ಫ್ಲೋರೋಸಿಸ್ ಎಂದು 3 ವಿಧಗಳಿವೆ ಎಂದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ ಶಿವಪ್ರಕಾಶ್ ಅವರು ಮಾತನಾಡಿದರು. 116 ಜನರನ್ನು ತಪಾಸಣೆ ಮಾಡಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಶಿವಪ್ರಕಾಶ್, ಕೀಲು ಮೂಳೆ ತಜ್ಞ ಡಾ. ಕಿರಣ್ ಕುಮಾರ್ ಹೂವಳೆ, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಉಮಣ್ಣ ಎಂ, ಹಿರಿಯ ಆರೋಗ್ಯ ನಿರಕ್ಷಣಾಧಿಕಾರಿ ತಿಪ್ಪೇಸ್ವಾಮಿ, ಆರೋಗ್ಯ ನಿರೀಕ್ಷಣಾಧಿಕಾರಿ ವೈ.ಕೆ. ರಂಗನಾಥ, ಜಿಲ್ಲಾ ಪ್ರಭಾರ ಆರೋಗ್ಯ ಮೇಲ್ವಿಚಾರಕ ಆನಂದ್‌ಮೂರ್ತಿ ಇದ್ದರು.

{ ಆರ್.ಅಶೋಕ, } ವಿಧಾನಸಭೆಯ ವಿರೋಧ ಪಕ್ಷದ ನಾಯಕ

ಎಲ್ಲ ಜಾತಿಗಳ ಜನರು ಮತಾಂತರವನ್ನು ವಿರೋಧಿಸಿದ್ದಾರೆ. ಕುರುಬ, ಬ್ರಾಹ್ಮಣ, ವಿಶ್ವಕರ್ಮ ಹೀಗೆ ಎಲ್ಲ ಜಾತಿಗಳ ಮುಂದೆ ಕ್ರಿಶ್ಚಿಯನ್ ಎಂಬ ಹೆಸರು ತರಲಾಗಿದೆ. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಕೈಸ್ತರಾಗಿದ್ದು, ಅವರನ್ನು ಮೆಚ್ಚಿಸಲು ರಾಜ್ಯ ಕಾಂಗ್ರೆಸ್ ಸರಕಾರ ಈ ರೀತಿ ಮಾಡುತ್ತಿದೆ.

ನಗರಘಟ್ಟ ಶಾಲಾ ಹೆಚ್ಚುವರಿ ಕೊಠಡಿ ಕಾಮಗಾರಿಗೆ ಭೂಮಿ ಪೂಜೆ। ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಹೇಳಿಕೆ

ಕ್ಷೇತ್ರದ ಅಭಿವೃದ್ಧಿಗೆ ತಾರತಮ್ಯ ಮಾಡಲ್ಲ

ಹೊಳಲ್ಕೆರೆ : ಚುನಾವಣೆಯಲ್ಲಿ ಗೆಲ್ಲುವತನಕ ನಾನು ಒಂದು ಪಕ್ಷದವನು. ಗೆದ್ದ ಮೇಲೆ ಎಲ್ಲರಿಗೂ ನಾನು ಎಂ.ಎಲ್.ಎ. ಯಾವ ತಾರತಮ್ಯ ಮಾಡುವುದಿಲ್ಲ ಎಂದು ಶಾಸಕ ಡಾ.ಎಂ.ಚಂದ್ರಪ್ಪ ಹೇಳಿದರು.

ತಾಲೂಕಿನ ನಗರಘಟ್ಟ ಗ್ರಾಮದಲ್ಲಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಹೆಚ್ಚುವರಿ ಕೊಠಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಶಾಲೆ ಮೇಲೆ ಬೇವು-ಜಾಲಿ ಗಿಡಗಳು ಬೆಳೆದಿತ್ತು. ಕೆಡವಿ 46 ರೂಂಗಳನ್ನು ಕಟ್ಟಿಸಿದ ಪರಿಣಾಮವಾಗಿ 1650 ಬಡ ಮಕ್ಕಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಹಳ್ಳಿಗಳಿಂದ ಬರುವ ಮಕ್ಕಳಿಗೆ ತೊಂದರೆ ಯಾಗಬಾರದೆಂದು ಸರಕಾರಿ ಶಾಲೆಗಳಿಗೆ ಬಸ್‌ಗಳನ್ನು ಬಿಟ್ಟಿದ್ದೇನೆ. ಡ್ರೈವರ್ ಕಂಡಕ್ಟಗೆ ಸಂಬಳ ನೀಡಿ ಬಸ್‌ಗೆ ಡೀಸೆಲ್ ಕೂಡ ಹಾಕಿಸುತ್ತಿದ್ದೇನೆ. ರಾಜ್ಯದಲ್ಲಿ ಯಾವ ಎಂ.ಎಲ್.ಎ.ಕೂಡ ಸರಕಾರಿ ಶಾಲೆಗಳಿಗೆ ಬಸ್‌ಗಳನ್ನು ಕೊಟ್ಟಿಲ್ಲ. ಮುಂದಿನ ದಿನಗಳಲ್ಲಿ ಕರಿಯಮ್ಮ ದೇವಸ್ಥಾನಕ್ಕೆ ಕಾಂಕ್ರಿಟ್ ರಸ್ತೆ ಮಾಡಿಸುತ್ತೇನೆಂದು ತಿಳಿಸಿದರು.

ಅಧಿಕಾರ ಬಹಳಷ್ಟು ದಿನ ಇರುವುದಿಲ್ಲ. ಸಾರ್ವಜನಿಕರ ಮಧ್ಯೆಯಿದ್ದುಕೊಂಡು ಕಷ್ಟ-ಸುಖ ಕೇಳಿ ಎಲ್ಲಿ ಏನು ಕೆಲಸ ಮಾಡಿದರೆ ಜನರಿಗೆ ಒಳ್ಳೆಯದಾಗುತ್ತದೆಂದು ಆಲೋಚಿಸಿ ಪ್ರತಿ ನಿತ್ಯ ಒಂದಲ್ಲ ಒಂದು ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದೇನೆ. ಭರಮಸಾಗರದಲ್ಲಿ ಮೊದಲನೆ ಬಾರಿಗೆ ಚುನಾವಣೆಗೆ ನಿಂತಾಗ ಜನರ ಬಳಿ ಹೋಗಿ ಮತ ಕೇಳಲು ರಸ್ತೆಗಳಿರಲಿಲ್ಲ.

ಗೆದ್ದ ನಂತರ ಎಲ್ಲಾ ಗ್ರಾಮಗಳಲ್ಲಿಯೂ ರಸ್ತೆಗಳನ್ನು ಮಾಡಿಸಿದ್ದರಿಂದ ರಸ್ತೆ ರಾಜ ಎನ್ನುವ ಬಿರುದು ನೀಡಿ ಎರಡನೆ ಬಾರಿಗೂ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿದರೆಂದು ಸ್ಮರಿಸಿದರು.ಮಕ್ಕಳಿಗೆ ಆಸ್ತಿ ಮಾಡುವ ಬದಲು ವಿದ್ಯಾವಂತರನ್ನಾಗಿ ಮಾಡಿ. ಇನ್ನು ಮೂರು ತಿಂಗಳೊಳಗೆ ತಾಲ್ಲೂಕಿನ ಎಲ್ಲಾ ಕೆರೆಕಟ್ಟೆಗಳಿಗೆ ಭದ್ರಾ ಯೋಜನೆಯಿಂದ ನೀರು ತುಂಬಿಸುತ್ತೇನೆ. ಹಿರಿಯೂರಿನ ವಾಣಿವಿಲಾಸಸಾಗರದಿಂದ ನೀರು ತಂದು ಪ್ರತಿ ಮನೆ ಮನೆಗೆ ಶುದ್ಧ ಕುಡಿಯುವ ನೀರು ಪೂರೈಸುವುದಕ್ಕಾಗಿ 367 ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದೇನೆ. ಹದಿನೈದು ದಿನದೊಳಗೆ ಸರಕಾರಿ ಶಾಲೆಗೆ ಇನ್ನು ಎರಡು ಬಸ್‌ಗಳನ್ನು ಬಿಟ್ಟು, ಎರಡು ಶಾಲೆಗಳನ್ನು ಮಂಜೂರು ಮಾಡುತ್ತೇನೆಂದು ಭರವಸೆ ನೀಡಿದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಅಜ್ಜಯ್ಯ, ಮಾಜಿ ಅಧ್ಯಕ್ಷ ಪ್ರವೀಣ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಪರಮೇಶ್ವರಪ್ಪ, ಎಂ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ಅಂಕಳಪ್ಪ ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀನಿವಾಸ್, ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಶೇಖರಪ್ಪ, ಕರಿಯಪ್ಪ, ನಾಗರಾಜಪ್ಪ, ಶ್ರೀನಿವಾಸ್, ಸಿದ್ದಪ್ಪ ಹಾಗು ಗ್ರಾಮದ ಮುಖಂಡರುಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಕಾಮಗಾರಿಗೆ ಶಾಸಕ ಡಾ.ಎಂ.ಚಂದ್ರಪ್ಪ ಅವರು ಭೂಮಿ ಪೂಜೆ ನೆರವೇರಿಸಿದರು.

> ಅಧಿಕಾರ ಬಹಳಷ್ಟು ದಿನ ಇರುವುದಿಲ್ಲ. ಸಾರ್ವಜನಿಕರ ಮಧ್ಯೆಯಿದ್ದುಕೊಂಡು ಕಷ್ಟ-ಸುಖ ಕೇಳಿ ಎಲ್ಲಿ ಏನು ಕೆಲಸ ಮಾಡಿದರೆ ಜನರಿಗೆ ಒಳ್ಳೆಯದಾಗುತ್ತದೆಂದು ಆಲೋಚಿಸಿ ಪ್ರತಿ ನಿತ್ಯ ಒಂದಲ್ಲ ಒಂದು ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದೇನೆ. ಭರಮಸಾಗರದಲ್ಲಿ ಮೊದಲನೆ ಬಾರಿಗೆ ಚುನಾವಣೆಗೆ ನಿಂತಾಗ ಜನರ ಬಳಿ ಹೋಗಿ ಮತ ಕೇಳಲು ರಸ್ತೆಗಳಿರಲಿಲ್ಲ. ಗೆದ್ದ ನಂತರ ಎಲ್ಲಾ ಗ್ರಾಮಗಳಲ್ಲಿಯೂ ರಸ್ತೆಗಳನ್ನು ಮಾಡಿಸಿದ್ದರಿಂದ ರಸ್ತೆ ರಾಜ ಎನ್ನುವ ಬಿರುದು ನೀಡಿ ಎರಡನೆ ಬಾರಿಗೂ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸಿದ್ದಾರೆ.
>
> -ಡಾ.ಎಂ.ಚಂದ್ರಪ್ಪ, ಶಾಸಕ

ಶಿಸ್ತು ಅಳವಡಿಕೆಗೆ ಎನ್‌ಸಿಸಿ ಸಹಕಾರಿ

ಎನ್‌ಸಿಸಿ ಘಟಕದ ವಿದ್ಯಾರ್ಥಿಗಳು ಆಯೋಜಿಸಿದ್ದ ಸಮಾರಂಭವನ್ನು ಡಾ. ಎಂ.ಕೆ ದೇವಪ್ಪ ಅವರು ಉದ್ಘಾಟಿಸಿದರು.

ಚಳ್ಳಕೆರೆ : ಎನ್‌ಸಿಸಿ ವಿದ್ಯಾರ್ಥಿಗಳು ಸದೃಢ ಸಮಾಜ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಜೊತೆಗೆ ಸಾಮಾಜಿಕ ಚಟುವಟಿಕೆಗಳಲ್ಲಿ ಇವರ ಪಾತ್ರ ಮುಖ್ಯವಾಗಿದೆ ಎಂದು ಎಂದು ಪ್ರಾಂಶುಪಾಲ ಡಾ. ಎಂ.ಕೆ ದೇವಪ್ಪ ಹೇಳಿದರು.

ನಗರದ ಹೆಚ್.ಪಿ.ಪಿ.ಸಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಎನ್ ಸಿ ಸಿ ಘಟಕದ ವಿದ್ಯಾರ್ಥಿಗಳು ಆಯೋಜಿಸಿದ್ದ ಸಮಾರಂಭದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಇಂದಿನ ಯುವಕರು ಭಾರತೀಯ ಸೇನೆಗೆ ಹಾಗೂ ಕೇಂದ್ರ ಸರಕಾರದ ಕೆಲ ಹುದ್ದೆಗಳಿಗೆ ಮತ್ತು ಉನ್ನತ ಶಿಕ್ಷಣಕ್ಕೆ ಹಾಗೂ ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಹೊಂದಲು ಎನ್ ಸಿ ಸಿ ಗುಣಗಳು ಹಾಗೂ ಸರ್ಟಿಫಿಕೇಟ್ ಸಹಕಾರಿಯಾಗಿದೆ ಎಂದರು.ಈ ಕಾಲೇಜಿನಲ್ಲಿ ನೂರರಷ್ಟು ಫಲಿತಾಂಶ ಬಂದಿರುವುದು ಸಂತಸದ ಸಂಗತಿ, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಸೇನೆ ಹಾಗೂ ಇತರೆ ಉದ್ಯೋಗಗಳಲ್ಲಿ ಸೇರುವು ದರಿಂದ ಕಾಲೇಜಿನ ಕೀರ್ತಿ ಮತ್ತಷ್ಟು ಹೆಚ್ಚಾಗುತ್ತದೆ ಎಂದರು. ಕಾರ್ಯ ಕ್ರಮದಲ್ಲಿ ಸುಬೇದಾರ್ ರಮಣರೆಡ್ಡಿ, ಮನೋಹರ್ ಸಿಂಗ್, ಭಾರತೀಯ ಸೇನೆಯ ಅಧಿಕಾರಿಗಳು ಮತ್ತು ಎನ್ ಸಿ ಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಶ್ರೀಬನಶಂಕರಿ ಸಹಕಾರ ಸಂಘಕ್ಕೆ 22 ಲಕ್ಷ ರು.ಲಾಭ

ಹೊಸದುರ್ಗ: ಪಟ್ಟಣದ ಶ್ರೀಬನಶಂಕರಿ ಪತ್ತಿನ ಸಹಕಾರ ಸಂಘವು 2024-25ನೇ ಸಾಲಿನಲ್ಲಿ 22.27 ಲಕ್ಷ ರು. ನಿವ್ವಳ ಲಾಭ ಗಳಿಸಿದೆ. ಸಾಲಗಾರರು ಸಂಘದಲ್ಲಿ ಪಡೆದ ಸಾಲವನ್ನು ನಿಗದಿತ ವೇಳೆಗೆ ಕಂತು ಹಣ, ಬಡ್ಡಿ ಪಾವತಿಸಿ. ಸುಸ್ಥಿ ಸಾಲಗಾರರಾಗದಂತೆ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಸಂಘದ ಅಧ್ಯಕ್ಷರಾದ ಎ.ಎಸ್.ರಾಮಚಂದ್ರ ಅವರು ಮನವಿ ಮಾಡಿದರು.

ನಗರದ ಬನಶಂಕರಿ ಸಮುದಾಯ ಭವನದಲ್ಲಿ ನಡೆದ ಶ್ರೀಬನಶಂಕರಿ ಪತ್ತಿನ ಸಹಕಾರ ಸಂಘದ 25ನೇ ವರ್ಷದ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಹಾಗೂ ಸಂಘದ ರಜತಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ನಮ್ಮ ಸಂಘವು 2024-25ನೇ ಸಾಲಿನ ಅಂತ್ಯಕ್ಕೆ 3447 ಜನರಿಂದ 2.05 ಕೋಟಿ ರು. ಷೇರು ಬಂಡವಾಳ ಹೊಂದಿದೆ. 2024-25ನೇ ಸಾಲಿನ ಅಂತ್ಯಕ್ಕೆ 61.65 ಲಕ್ಷ ರು. ಕಾಯ್ದಿರಿಸಿದ ನಿಧಿ ಆಗಿದ್ದು, 1.50 ಕೋಟಿ ರು. ಇತರೆ ನಿಧಿಗಳನ್ನು ಹೊಂದಿದೆ. ಠೇವಣಿಗಳ ಮೊತ್ತ 43.33 ಕೋಟಿ ರು. ಇರುತ್ತದೆ. 37.39 ಕೋಟಿ ರು. ಸಾಲ ಬರಬೇಕಿದೆ. ಸಕಾಲಕ್ಕೆ ಸಾಲ ಮರುಪಾವತಿಸಿ ಸಂಘದ ಪ್ರಗತಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು. ದೇವಾಂಗ ಸಮಾಜದ ಅಧ್ಯಕ್ಷ ಡಿ.ಆರ್.ಗೋವಿಂದರಾಜು ಮಾತನಾಡಿ, ಹಿರಿಯರೆಲ್ಲಾ ಸೇರಿ ಸಮಾಲೋಚನೆ ಮಾಡಿ 2001ರಲ್ಲಿ ಈ ಸಂಘವನ್ನು ಪ್ರಾರಂಭ ಮಾಡಲಾಯಿತು. ಸಂಘವು ರಜತಮಹೋತ್ಸವ ಆಚರಿಸಿ ಕೊಳ್ಳುತ್ತಿರುವುದು ಹರ್ಷದ ಸಂಗತಿ. ಯಾವುದೇ ಸಂಘ ಅಭಿವೃದ್ಧಿ ಸಾಧಿಸಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಗೋ.ತಿಪ್ಪೇಶ್, ಸಂಘದ ಉಪಾಧ್ಯಕ್ಷ ಡಿ.ಆರ್ ನಾಗೇಶಪ್ಪ, ಬಿಜೆಪಿ ಮುಖಂಡ ಬುರುಡೇಕಟ್ಟೆ ರಾಜೇಶ್ ಮಾತನಾಡಿದರು. ಈ ವೇಳೆ ಸಂಘದ ನಿರ್ದೇಶಕರಾದ ನಟರಾಜ್, ಮಂಜುನಾಥ್, ಟಿ.ಸಿ.ಗುರುಪ್ರಸಾದ್, ಪ್ರಕಾಶ್ ಎಸ್.ಎನ್. ಮಂಜುನಾಥ್, ವಿ.ಪ್ರದೀಪ್ ಕುಮಾರ್, ಹೆಚ್.ಎಂ.ಮಂಜುಳಾ, ದಾಕ್ಷಾಯಣಿ, ಬಿ.ಟಿ.ಸುರೇಶ್, ಎಚ್.ಆರ್.ಶಾಂತಕುಮಾರ್, ಆರ್.ಆರ್.ತಿಮ್ಮಣ್ಣ, ಕೆ.ಎಂ.ಪರಣ್ಣ, ಡಿ. ಕೆಂಚಪ್ಪ ಚಂದ್ರಶೇಖರ್, ರಾಮಚಂದ್ರ, ಸಿಇಒ ಎಸ್.ಸುನಿತ, ವಕೀಲರಾದ ಮಮತಾ ಸಂಘದ ಸಿಬ್ಬಂದಿ ಹಾಜರಿದ್ದರು. ಸಮಾರಂಭದಲ್ಲಿ ಸಕಾಲಕ್ಕೆ ಸಾಲ ಮರುಪಾವತಿ ಮಾಡಿದವರನ್ನು ಹಾಗೂ ಪ್ರತಿಭಾನ್ವಿತ ಮಕ್ಕಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಂಘದ ರಜತಮಹೋತ್ಸವ ಸಮಾರಂಭವನ್ನು ಎ.ಎಸ್.ರಾಮಚಂದ್ರ ಅವರು ಉದ್ಘಾಟಿಸಿದರು.

ಸರಕಾರದ ಯೋಜನೆ ಸೌಲಭ್ಯ ಸಮರ್ಪಕವಾಗಿ ಒದಗಿಸಿ: ಡಿಸಿ

ಮೇಲ್ವಿಚಾರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಮಾತನಾಡಿದರು.

ದಾವಣಗೆರೆ: ಪ. ಜಾತಿ, ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಹೆಚ್ಚಿನ ಜಾಗೃತಿ ವಹಿಸಿ, ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸಬೇಕು ಎಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳಿಂದ ಪ.ಜಾತಿ, ಪ.ಪಂಗಡ ಉಪಯೋಜನೆ, ಬುಡಕಟ್ಟು ಉಪಯೋಜನೆಯ ಅಭಿವೃದ್ಧಿ ಕಾರ್ಯಕ್ರಮಗಳ ಜಿಲ್ಲಾ ಮಟ್ಟದ ಮೇಲ್ವಿಚಾರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ. ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ವಿವಿಧ ಇಲಾಖೆಗಳಲ್ಲಿನ ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಯೋಜನೆಯಡಿ ನೀಡಲಾಗುವ ಸೌಲಭ್ಯ, ಸವಲತ್ತು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ಒದಗಿಸಬೇಕು. ಹಾಗೆಯೇ ಈ ಇಲಾಖೆ ವ್ಯಾಪ್ತಿಗೆ ಒಳಪಡುವ ಮಕ್ಕಳಿಗೆ ಬಾಲಕಾರ್ಮಿಕ, ಜೀತ ಪದ್ಧತಿ ಕುರಿತು ಬೀದಿ ನಾಟಕ ಆಯೋಜನೆ ಮಾಡುವ ಮೂಲಕ ಹೆಚ್ಚಿನ ಜಾಗೃತಿ ಮೂಡಿಸಬೇಕು. ವಿದ್ಯಾರ್ಥಿಗಳಿಗೆ ಅವಶ್ಯ ಹಾಗೂ ಅಗತ್ಯವಾಗಿರುವ ಪಠ್ಯ, ಶೂ ಇನ್ನಿತರೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದ ಅವರು, ಕೆಲವು ಇಲಾಖೆ ಹಾಗೂ ನಿಗಮಗಳಲ್ಲಿ ಹಲವು ಲೋಪಗಳು ಕಂಡು ಬರುತ್ತಿದ್ದು, ತ್ವರಿತವಾಗಿ ಪರಿಹಾರ ಕಂಡುಕೊಂಡು ವಿವಿಧ ಇಲಾಖೆಗಳಲ್ಲಿನ ಯೋಜನೆ, ಕಾರ್ಯಕ್ರಮ ಫಲಾನುಭಗವಿಗಳಿಗೆ ಕಾಲಮಿತಿಯೊಳಗೆ ಒದಗಿಸಬೇಕು ಎಂದು ತಾಕೀತು ಮಾಡಿದರು.ಇದೇ ವೇಳೆ ಜೆಜೆಎಂ ಯೋಜನೆಯಡಿ ಈಗಾಗಲೇ 50 ಗ್ರಾಮಗಳನ್ನು 24★7 ಶುದ್ಧ ಕುಡಿಯುವ ನೀರು ಪೂರೈಕೆ ಮಾಡುತ್ತಿದ್ದು, ಜನವರಿ ವೇಳೆಗೆ 100 ಗ್ರಾಮಗಳಿಗೆ ಸುಸ್ಥಿರ ಮತ್ತು ಶುದ್ಧ ಕುಡಿಯುವ ನೀರು ಪೂರೈಕೆಗೆ ಕ್ರಮವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಸಿಇಓ ಗಿತ್ತೆ ಮಾಧವ ವಿಠಲ ರಾವ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ನಾಗರಾಜ್, ಪ. ವರ್ಗಗಳ ಇಲಾಖೆ ಅಧಿಕಾರಿ ನವೀನ್ ಮಠದ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ರಾಜಾನಾಯ್ಕ ಉಪಸ್ಥಿತರಿದ್ದರು.

ಸಚಿವ ಎಸ್‌ಎಸ್‌ಎಂ ಜನ್ಮದಿನ: ಸಾಧನ ಸಲಕರಣೆಗಳ ವಿತರಣೆ

ದಾವಣಗೆರೆ: ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್ ಎಸ್ ಮಲ್ಲಿಕಾರ್ಜುನ್ ಅವರ 58 ನೇ ಜನ್ಮದಿನದ ಪ್ರಯುಕ್ತ ಎಸ್ ಎಸ್ ಕೇರ್ ಟ್ರಸ್ಟ್ ವಿದ್ಯಾರ್ಥಿ ವಿಭಾಗ ದಾವಣಗೆರೆ ಹಾಗೂ ಕೇಂದ್ರ ಸರ್ಕಾರದ ಅಲಿಂಕೋ ಸಂಸ್ಥೆ, ಸಿಆರ್ ಸಿ ದಾವಣಗೆರೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದೊಂದಿಗೆ ದಾವಣಗೆರೆಯ ಶ್ರೀಸದ್ಯೋಜ್ಯಾತ ಮಠದಲ್ಲಿ ಸೆ.22 ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ಸಾಧನಸಲಕರಣೆಗಳನ್ನು ವಿತರಿಸಲಾಗುವುದು ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆಪ್ಟೆಂಬರ್ 10 ರಂದು ದಾವಣಗೆರೆಯ ಶಾಮನೂರು ರಸ್ತೆಯ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ದಾವಣಗೆರೆ ಉತ್ತರ, ದಕ್ಷಿಣ ಹಾಗೂ ಮಾಯಕೊಂಡ ವಿಧಾನಸಭಾಕ್ಷೇತ್ರದ ವಿಶೇಷಚೇತನರಿಗೆ ಮತ್ತು 60 ವರ್ಷ ತುಂಬಿದ ಹಿರಿಯ ನಾಗರಿಕರಿಗೆ ಸಾಧನ ಸಲಕರಣೆಯ ಮೌಲ್ಯಮಾಪನ ಶಿಬಿರ ಆಯೋಜಿಸಲಾಗಿತ್ತು.

ಈ ವೇಳೆ ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಫಲಾನುಭವಿಗಳು ಭಾಗವಹಿಸಿದ್ದರು.ಸಮಗ್ರ ಪರಿಶೀಲನೆಯ ನಂತರ ಆಯ್ಕೆಯಾದ 343 ಅರ್ಹ ಫಲಾನುಭವಿಗಳಿಗೆ ಇಂದು ಸುಮಾರು 995 ಸಾಧನ ಸಲಕರಣೆ ವಿತರಿಸಲಾಗುವುದು.

ಮೊದಲ ಹಂತದಲ್ಲಿ ದಾವಣಗೆರೆ ಉತ್ತರ, ದಕ್ಷಿಣ ಮತ್ತು ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಶಿಬಿರ ಆಯೋಜಿಸಲಾಗಿದ್ದು. ಉಳಿದ ಐದು ವಿಧಾನಸಭಾ ಕ್ಷೇತ್ರದಲ್ಲಿ ಮುಂದಿನ ದಿನಗಳಲ್ಲಿ ಶಿಬಿರ ನಡೆಸಲಾಗುವುದು.

ಈ ಕಾರ್ಯಕ್ರಮದಲ್ಲಿ ಅಂಧರಿಗೆ ಮೊಬೈಲ್,ವೈಬ್ರೇಟಿಂಗ್ ಸ್ಟಿಕ್ ಹಾಗೂ ಅಗ ವೀಲ್ ಚೇರ್,ತ್ರಿಚಕ್ರ ವಾಹನ ಸೇರಿದಂತೆ ಸುಮಾರು 28.82 ಲಕ್ಷ ಮೌಲ್ಯದ ಸಲಕರಣೆ ವಿತರಣೆ ಮಾಡಲಾಗುತ್ತಿದೆ.

ಆದ್ದರಿಂದ ಅರ್ಹ ಫಲಾನುಭವಿಗಳು ಹಿಂದಿನ ಶಿಬಿರದಲ್ಲಿ ನೀಡಲಾಗಿದ್ದ ಟೋಕನ್ ನೊಂದಿಗೆ ಹಾಜರಾಗಿ ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಲು ಸಂಸದರು ತಿಳಿಸಿದ್ದಾರೆ.

ಸತತ ಓದಿನಿಂದ ಸಾಧನೆ ಸಾಧ್ಯ: ಸಚಿವ ಸುಧಾಕರ

ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಸಚಿವ ಡಿ ಸುಧಾಕರ್ ಅವರು ಮಾತನಾಡಿದರು.

ಹಿರಿಯೂರು: ಶಿಕ್ಷಣವೇ ವಿದ್ಯಾರ್ಥಿಗಳಿಗೆ ಜೀವನದ ಅಡಿಪಾಯ ಶಿಕ್ಷಣದಿಂದ ಸರ್ವತೋಮುಖ ಪ್ರಗತಿಯನ್ನು ಕಾಣಬಹುದು ಎಂದು ಸಚಿವ ಡಿ ಸುಧಾಕರ್ ಅವರು ಹೇಳಿದರು.ನಗರದ ಹುಳಿಯಾರು ರಸ್ತೆಯ ವೇದಾವತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಾಂಸ್ಕೃತಿಕ, ಕ್ರೀಡಾ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಶಿಕ್ಷಣವು ಮಾನವ ಜೀವನದ ಮಹತ್ವದ ಘಟ್ಟ ಹಾಗೂ ಶಿಕ್ಷಣನ್ನು ಪಡೆದುಕೊಂಡರೆ ಸಮಾನ್ಯ ಜ್ಞಾನವನ್ನು ಹೆಚ್ಚುತ್ತದೆ ಎಂದು ತಿಳಿಸಿದರು.

2024-25ನೇ ಶೈಕ್ಷಣಿಕ ಸಾಲಿನಲ್ಲಿ ಅತೀ ಹೆಚ್ಚು ಅಂಕಪಡೆದ ರೂಪಾ ಸಿ, ಬಿ ಎಸ್ಸಿ, ಸ್ನೇಹಾ ವಿ, ಬಿಕಾಂ, ಬರೀರಾ ಸಾದಿಯ, ಬಿಸಿಎ ಮತ್ತು ಕಿಶೋರ್ ಕುಮಾರ್, ಬಿಬಿಎ ವಿದ್ಯಾರ್ಥಿಗಳಿಗೆ ತಲಾ ರೂ.10,000ಗಳ ನಗದು ಬಹುಮಾನವನ್ನು ನೀಡಿದರು.

ಕಾರ್ಯ ಕ್ರಮದಲ್ಲಿ ಪ್ರಾಂಶುಪಾಲ ಪ್ರೊ. ಹನುಮಂತರಾಯಪ್ಪ, ಬಿ.ಕೆ. ನಾಗಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಖಾದಿ ರಮೇಶ್ ,ಮಹಮ್ಮದ್ ಫಕೃದ್ದೀನ್, ಚೇತನ ಕುಮಾರಿ, ಕೆ ರಾಮಚಂದ್ರಪ್ಪ ಗಿಡ್ಡೋಬನಹಳ್ಳಿ ಅಶೋಕ್, ಜಿ.ದಾದಾಪೀರ್, ಶಿವಕುಮಾರ್, ಕೃಷ್ಣಮೂರ್ತಿ, ಮಂಜುಳಮ್ಮ, ಬಿಎಲ್ ಮೂರ್ತಿ, ಮಹೇಶ್, ಖಾದಿ ರಮೇಶ್, ಕೃಷ್ಣಮೂರ್ತಿ, ನಗರಸಭೆ ಉಪಾಧ್ಯಕ್ಷೆ ಮಂಜುಳ, ಕಾಲೇಜಿನ ಪ್ರಾಧ್ಯಾಪಕರುಗಳಾದ ಪ್ರೊ.ಎಲ್ ನಾಗರಾಜು, ಪ್ರೊ. ಪುಷ್ಪಲತಾ ಆರ್, ಡಾ. ಅಣ್ಣಪ್ಪಸ್ವಾಮಿ, ಕಾಲೇಜು ಸಿಬ್ಬಂದಿಗಳು ವಿದ್ಯಾರ್ಥಿಗಳು ಸೇರಿದಂತೆ ಇತರರಿದ್ದರು.

ರೈತರಿಗೆ ಸೂಕ್ತ ಸಲಹೆ ನೀಡದ ಕೃಷಿ ಇಲಾಖೆ!

ಜಗಳೂರು: ಆರಂಭದಲ್ಲಿ ಮುಂಗಾರು ಮಳೆಯ ಉತ್ತಮವಾಗಿ ಸುರಿದ ಹಿನ್ನಲೆ ತಾಲೂಕಿನಲ್ಲಿ ತೊಗರಿ ಬಿತ್ತನೆ ಸಮರ್ಪಕವಾಗಿ ಆಗಿದೆ. ಬಿತ್ತನೆಯಾಗಿ ತೊಗರಿ ಬೆಳೆ ಚೆನ್ನಾಗಿಯೇ ಬೆಳೆದು ನಿಂತಿದೆ. ಆದರೆ, ಮಳೆಯ ಕೊರತೆಯಿಂದಾಗಿ ಕೆಲವು ಕಡೆ ಬಾಡುತ್ತಿದೆ. ಅಲ್ಲದೆ, ರೈತರು ತೊಗರಿ ಬೆಳೆಯನ್ನು ಮುಂಜಾಗ್ರತೆಯಿಂದ ರಕ್ಷಿಸಿಕೊಳ್ಳಬೇಕಿದೆ. ಆದ್ದರಿಂದ ತೊಗರಿ ಬೆಳೆಯ ಆರೈಕೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಕೃಷಿ ಇಲಾಖೆ ಮಾತ್ರ ರೈತರಿಗೆ ಆರೈಕೆ ಮಾಡುವುದಕ್ಕೆ ಸಲಹೆ ನೀಡದೆ ಕೈಕಟ್ಟಿ ಕುಳಿತ್ತಿದೆ.

ತಾಲೂಕಿನಲ್ಲಿ 2500 ಹೆಕ್ಟರ್ ಪ್ರದೇಶದಲ್ಲಿ ತೊಗರಿ ಬಿತ್ತನೆ ಮಾಡಲಾಗಿದೆ. ತೊರೆಸಾಲು ಭಾಗದಲ್ಲಿ ಅಲ್ಲದೆ ತಾಲೂಕಿನಲ್ಲಿ ತೊಗರಿ ಮುಖ್ಯ ಬೆಳೆಯಾಗಿ ಅಲ್ಲದೇ ಮಕ್ಕೆಜೋಳ, ಶೇಂಗಾ ಬೆಳೆಗಳಲ್ಲಿ ಅಕ್ಕಡಿಯ ಬೆಳೆಯಾಗಿ ತಾಲೂಕಿನಲ್ಲಿ ಬೆಳೆಯಲಾಗಿದೆ.

ಕುಡಿ ಚಿವುಟುವ ಕಾರ್ಯವಾಗಿ ಬಿತ್ತನೆ ಮಾಡಿದ 40 ರಿಂದ 50 ದಿನದಲ್ಲಿ ಮೊದಲನೇ ಬಾರಿ ಹಾಗೂ 60ರಿಂದ 70 ದಿನದ ನಂತರ ಎರಡನೇ ಬಾರಿಗೆ ತುದಿ 4 ರಿಂದ 5 ಸೆಂ.ಮೀ ಕತ್ತರಿಸಬೇಕು. ಈ ಕರ‍್ಯವನ್ನು ಕತ್ತರಿಯಿಂದ ಇಲ್ಲ ಕುಡಿ ಚಿವುಟುವ ಯಂತ್ರದ ಕೈಗೊಳ್ಳಬೇಕು. ಆದರೆ ಕೃಷಿ ಇಲಾಖೆ ಅಧಿಕಾರಿಗಳು ರೈತರಿಗೆ ಯಾವುದೇ ಮಾಹಿತಿ ಸಲಹೆ ನೀಡದೆ ಇರುವುದು ರೈತರ ಬೆಳೆ ಕುಂಟಿತಕ್ಕೆ ಕಾರಣವಾಗುತ್ತಿದೆ.

ಕುಡಿ ಚಿವುಟುದರಿಂದ ತೊಗರಿ ಗಿಡಗಳಲ್ಲಿ ಕವಲುಗಳು ಹೆಚ್ಚಾಗಿ, ಹೂವು ಕಾಯಿಗಳ ಸಂಖ್ಯೆ ಹೆಚ್ಚಾಗುತ್ತದೆ. ಅಲ್ಲದೆ ಎತ್ತರ ಕಡಿಮೆಯಾಗಿ ಇಳುವರಿ ಜಾಸ್ತಿಯಾಗುವುದಲ್ಲದೆ ಗಾಳಿಗೆ ಮುರಿದು ಬಿಳುವುದು ತಡೆಯುತ್ತದೆ. ರೋಗಗಳು ಬಾದೆಗೆ ಕೀಟಬಾದಗೆ ರೈತರು ಔಷಧಿ ಸಿಂಪಡಿಸುವುದಕ್ಕೆ ಸಹಕಾರಿಯಾಗಲಿದೆ.

ಸಾಹಿತ್ಯ, ಕಲೆಯ ಬಗ್ಗೆ ಜಾಗೃತಿ ಮೂಡಿಸಿ

ಶಿವಮೊಗ್ಗ : ಸಮಾಜ ಸೇವಾ ಕಾರ್ಯಕರ್ತರ ವೇದಿಕೆ ಜಿಲ್ಲಾ ಮಟ್ಟದಲ್ಲಿ ಅಸ್ಥಿತ್ವಕ್ಕೆ ಬಂದಿದ್ದು, ಇಂದು ಅದರ ಉದ್ಘಾಟನೆಯಾಗಿದೆ ಎಂದು ಸಮಾಜ ಸೇವಾ ಕಾರ್ಯಕರ್ತರ ವೇದಿಕೆಯ ರಾಜ್ಯಾಧ್ಯಕ್ಷ ಚನ್ನಯ್ಯ ಮ.ವಸ್ತ್ರದ ಹೇಳಿದರು. ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಮ್ಮ ವೇದಿಕೆಯು ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ. ಭ್ರಷ್ಟಾಚಾರ ಮುಕ್ತಮಾಡಲು, ದೀನದಲಿತರಿಗೆ ನ್ಯಾಯ ನೀಡಲು, ಭ್ರಷ್ಟ ಅಧಿಕಾರಿಗಳನ್ನು ಓಡಿಸಲು, ಪ್ರಾಮಾಣಿಕ ಅಧಿಕಾರಿಗಳಿಗೆ ಪ್ರೋತ್ಸಾಹ ನೀಡಲು, ಸಾಹಿತ್ಯ ಆಸಕ್ತಿ ಮೂಡಿಸಲು, ಕಲೆ, ನಾಡು, ನುಡಿಯ ಬಗ್ಗೆ ಜಾಗೃತಿ ಮೂಡಿಸುವುದು ಹೀಗೆ ಹಲವು ಸಾಮಾಜಿಕ ಚಟುವಟಿಕೆಗಳನ್ನು ರೂಪಿಸುತ್ತಾ ಬಂದಿದೆ ಎಂದರು. ರಾಜ್ಯ ಕಾರ್ಯಾಧ್ಯಕ್ಷ ಟಿ.ಹೆಚ್.ಎಂ. ರಾಜಕುಮಾರ ಮಾತನಾಡಿ, ಶಿವಮೊಗ್ಗ ಜಿಲ್ಲೆಯ ಅಧ್ಯಕ್ಷರಾಗಿ ಮೂರ್ತಿ ಸಿ. ಆಯ್ಕೆಯಾಗಿದ್ದಾರೆ. ಹಾಗೆ ಗೌರವ ಅಧ್ಯಕ್ಷರಾಗಿ ಎಚ್.ಎನ್.ಶ್ರೀನಿವಾಸ್, ಕಾರ್ಯದರ್ಶಿಯಾಗಿ ಶಿವಮೂರ್ತಿ ಎಸ್.ಪಿ. ನೇಮಕ ಗೊಂಡಿದ್ದಾರೆ. ದಾವಣಗೆರೆ ಜಿಲ್ಲಾಧ್ಯಕ್ಷರಾಗಿ ನರಸಿಂಹ ಗೋವಿನಕೋವಿ ಅವರನ್ನು ನೇಮಕ ಮಾಡಲಾಗಿದೆ ಜಿಲ್ಲೆಯಲ್ಲಿ ಅವರು ತಮ್ಮ ತಮ್ಮ ಸಾಮಾಜಿಕ ಚಟುವಟಿಕೆಗಳನ್ನು ವಿಸ್ತರಿಸುತ್ತಾ ವೇದಿಕೆಯ ಗೌರವವನ್ನು ಹೆಚ್ಚಿಸಲಿದ್ದಾರೆ ಎಂದರು. ಶಿವಮೊಗ್ಗ ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ಸಿ. ಮೂರ್ತಿ ಮಾತನಾಡಿದರು. ದಾವಣಗೆರೆ ಜಿಲ್ಲಾಧ್ಯಕ್ಷ ನರಸಿಂಹಪ್ಪ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ. ರಾಮಕೃಷ್ಣ, ರಾಜ್ಯ ಕಾರ್ಯದರ್ಶಿ ಮನೋಜ್‌ಕುಮಾರ್ ಇದ್ದರು.

ಸಮೀಕ್ಷೆಗೆ ಕಾಲಮಿತಿ ಹಾಕುವುದು ಬೇಡ: ಶ್ರೀಗಳು

ಚಿತ್ರದುರ್ಗ: ರಾಜ್ಯ ಸರಕಾರ ಇಂದಿನಿಂದ ನಡೆಸಲು ಉದ್ದೇಶಿಸಿರುವ ಸಾಮಾಜಿಕ, ಶೈಕ್ಷಣಿಕ ಗಣತಿಯನ್ನು ರಾಜ್ಯದ 7 ಕೋಟಿ ಜನರ ಸಮೀಕ್ಷೆಯಾಗುವವರೆಗೂ ಸಹ ನಡೆಸಬೇಕು, ಇದಕ್ಕೆ ಯಾವುದೇ ರೀತಿಯಲ್ಲಿ ಕಾಲಮಿತಿಯನ್ನು ಹಾಕುವುದು ಬೇಡ ಈ ಸಮೀಕ್ಷೆಯಿಂದ ಯಾರೂ ಸಹ ಹೊರಗುಳಿಯದಂತೆ ನೋಡಿಕೊಳ್ಳಬೇಕಿದೆ ಎಂದು ಭೋವಿ ಗುರುಪೀಠದ ಶ್ರೀಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಒತ್ತಾಯಿಸಿದ್ದಾರೆ.ಚಿತ್ರದುರ್ಗ ನಗರದ ಹೊರವಲಯದ ಭೋವಿ ಗುರುಪೀಠದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು,

ರಾಜ್ಯ ಸರ್ಕಾರ ಸಾಮಾಜಿಕ ಶೈಕ್ಷಣಿಕ ಗಣತಿಯನ್ನು ರಾಜ್ಯದಲ್ಲಿ ನಡೆಸುತ್ತಿರುವುದಕ್ಕೆ ಸ್ವಾಗತ, ಈ ಸಮೀಕ್ಷೆ ರಾಜ್ಯದಲ್ಲಿ ವಿವಿಧ ಜಾತಿಗಳ ಪ್ರಗತಿಗೆ ಕಾರಣವಾಗಿದೆ. ಈ ಸಮೀಕ್ಷೆಯನ್ನು ಯಾರೂ ಸಹ ನಿರ್ಲಕ್ಷ್ಯ ಮಾಡಬಾರದು, ಎಲ್ಲಾರು ಗಣತಿದಾರರು ಕೇಳುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ನೀಡುವುದರ ಮೂಲಕ ನಿಮ್ಮ ನಿಮ್ಮ ಜಾತಿಯನ್ನು ಗುರುತಿಸಿಕೊಳ್ಳಬೇಕಿದೆ, ರಾಜ್ಯದ ಕೆಲವು ಪ್ರದೇಶಗಳಲ್ಲಿ ಕೆಲಸಕ್ಕಾಗಿ ನಮ್ಮ ರಾಜ್ಯವನ್ನು ಬಿಟ್ಟು ಬೇರೆ ಕಡೆಗಳಲ್ಲಿ ಹಲವಾರು ಜನತೆ ವಲಸೆ ಹೋಗಿದ್ದಾರೆ. ಇಂತಹವರನ್ನು ಈ ಗಣತಿಯಲ್ಲಿ ಒಳಪಡಿಸಬೇಕಿದೆ. ಕಟ್ಟಡ ಕೆಲಸಕ್ಕಾಗಿ ಬೆಂಗಳೂರು ಸೇರಿದಂತೆ ಮಹಾನಗರಗಳಿಗೆ ಹೋಗಿದ್ದಾರೆ. ಉತ್ತರ ಕರ್ನಾಟಕದಿಂದ ಕಾಫೀ ತೋಟಗಳಲ್ಲಿ ಕೆಲಸ ಮಾಡಲು ಹೋಗಿದ್ದಾರೆ ಕೊಪ್ಪಳ, ಬಳ್ಳಾರಿ ಸೇರಿದಂತೆ ನಾನಾ ಜಿಲ್ಲೆಗಳಿಂದ ಜಿಲ್ಲೆಯನ್ನು ಬಿಟ್ಟು ಹೊರಗಡೆ ಹೋಗಿರುತ್ತಾರೆ ಇಂತಹರನ್ನು ಸಮೀಕ್ಷೆ ಮಾಡಲು ಪ್ರತ್ಯೇಕವಾದ ತಂಡವನ್ನು ನೇಮಕ ಮಾಡುವಂತೆ ಸರ್ಕಾರವನ್ನು ಶ್ರೀಗಳು ಆಗ್ರಹಿಸಿದರು.

ಮೈಸೂರಿನ ದಸರಾ ಹಬ್ಬ ನಾಡಹಬ್ಬವಾಗಿ ಪರಿಣಮಿಸಿದೆ. ಈ ಸಮಯದಲ್ಲಿ ಊರಿನಿಂದ ಹೊರಗೆ ಹೋದವರು ವಾಪಾಸ್ಸು ಬರುತ್ತಾರೆ. ಇದೇ ಉತ್ತರ ಕರ್ನಾಟಕದಲ್ಲಿ ದೀಪಾವಳಿ ಹಬ್ಬ ನಾಡಹಬ್ಬವಾಗಿದೆ. ಈ ಸಮಯದಲ್ಲಿ ಊರಿನಿಂದ ಹೊರಗಡೆ ಹೋದವರು ವಾಪಾಸ್ಸು ಬರುತ್ತಾರೆ ಇಂತಹ ಸಮಯದಲ್ಲಿ ಸರ್ಕಾರ ಮಾಡುವ ಸಮೀಕ್ಷೆ ಸರಿಯಿದೆ. ಇದನ್ನು ಸೂಕ್ಷ್ಮವಾಗಿ ಪರಿಗಣಿಸಿ ಸಮೀಕ್ಷೆಯನ್ನು ಮಾಡಬೇಕಿದೆ. ಈ ಹಿನ್ನಲೆಯಲ್ಲಿ ಸಮೀಕ್ಷೆಯನ್ನು ಮಾಡುವವರಿಗೆ ಕಾಲ ಮಿತಿಯನ್ನು ಹಾಕದೇ ಗಣತಿಯಲ್ಲಿ ರಾಜ್ಯದ 7 ಕೋಟಿ ಜನ ಸಮೀಕ್ಷೆಯಲ್ಲಿ ಭಾಗವಹಿಸುವಂತೆ ಕಾಲವನ್ನು ನೀಡಬೇಕಿದೆ. ರಾಜ್ಯದ ಎಲ್ಲಾ ಜನತೆ ಈ ಸಮೀಕ್ಷೆಯಲ್ಲಿ ಭಾಗವಹಿಸಿದ್ದಾರೆ ಎಂದು ಖಾತರಿಯಾದ ಮೇಲೆ ಸಮೀಕ್ಷೆಯನ್ನು ಪೂರ್ಣ ಮಾಡುವಂತೆ ಶ್ರೀಗಳು ಒತ್ತಾಯಿಸಿದ್ದಾರೆ.

'ಬೆಸ್ತರ್' ಎಂದೇ ಬರೆಯಿಸಲು ಮನವಿ

ದಾವಣಗೆರೆ: ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸೆ.22ರಿಂದ ರಾಜ್ಯದಲ್ಲಿ ಕೈಗೊಳ್ಳುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಬೆಸ್ತರ್ ಸಮುದಾಯದವರು ಬೆಸ್ತರ್ ಎಂದೇ ಬರೆಯಿಸಬೇಕು ಎಂದು ಜಿಲ್ಲಾ ಬೆಸ್ತರ್ ಮಹಾಸಭಾ ಅಧ್ಯಕ್ಷ ಎಸ್. ಪರಮೇಶ್ ಮನವಿ ಮಾಡಿದರು.ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಬೆಸ್ತರ್ ಸಮುದಾಯವು ರಾಜ್ಯದಲ್ಲಿ 40 ಲಕ್ಷ ಜನಸಂಖ್ಯೆ ಹೊಂದಿದೆ. ಆದರೆ, ಕಾಂತರಾಜ್ ವರದಿಯಲ್ಲಿ 14 ಲಕ್ಷ ಜನಸಂಖ್ಯೆ ಮಾತ್ರ ತೋರಿಸಲಾಗಿದೆ. ಇದಕ್ಕೆ ನಮ್ಮ ಸಮುದಾಯವರು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಜಾತಿಯ ಹೆಸರು ಬರೆಸುತ್ತಿರುವುದು ಕಾರಣವಾಗಿದೆ. ಆದ್ದರಿಂದ ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಸರಕಾರದ ಸೌಲಭ್ಯ ದೊರೆಯಬೇಕಾದರೆ ಪ್ರಸ್ತುತ ನಡೆಯುತ್ತಿರುವ ಸಮೀಕ್ಷೆಯಲ್ಲಿ ಬೆಸ್ತರ್ ಎಂದೇ ಬರೆಯಿಸಬೇಕು ಎಂದು ಸಲಹೆ ನೀಡಿದರು''ಸಮೀಕ್ಷೆಯಲ್ಲಿ ಜಾತಿ ಕಾಲಂಬಲ್ಲಿ ಬೆಸ್ತರ್, ಉಪ ಜಾತಿ ಕಾಲಂನಲ್ಲಿ ಬೆಸ್ತರ್, ಬೆಸ್ತ, ಬಾರಿಕರು, ಸುಣಗಾರ, ಕಬ್ಬೇರು, ಬಾರ್ಕಿ, ಮೀನುಗಾರ, ಮಡ್ಡೇರ, ಅಂಬಿಗಾ ಸೇರಿ ಇವುಗಳ ಪೈಕಿ ನಿಮ್ಮ ಶಾಲಾ ದಾಖಲಾತಿಯಲ್ಲಿ ನಮೂದಿಸಿರುವ ಉಪ ಜಾತಿಯ ಹೆಸರು ಬರೆಸಬೇಕು. ಕುಲ ಕಸುವು ಕಾಲಂನಲ್ಲಿ ಮೀನುಗಾರಿಕೆ ಎಂದು ನಮೂದಿಸಬೇಕು ಎಂದರು. ''ಬೆಸ್ತರ್ ಸಮುದಾಯವನ್ನು ಪ. ಪಂಗಡದ ಪಟ್ಟಿಗೆ ಸೇರಿಸಬೇಕೆಂಬುದು 30 ವರ್ಷಗಳ ಕೂಗು. ಆದರೆ, ನಮ್ಮ ಬೇಡಿಕೆಗೆ ಯಾವುದೇ ಸ್ಪಂದನೆ ದೊರೆತಿಲ್ಲ.

ವಿಶ್ವವಾಣಿ
@vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 22-09-2025 ಸೋಮವಾರ

ಭರ್ಜರಿ ಜಂಬೂಸವಾರಿ

ಇನ್ನು, ಮೈಸೂರಿನಲ್ಲಿ ನಡೆಯುವ ದಸರಾ ಹಬ್ಬದ ವೈಭವವನ್ನು ವಿವರಿಸಲು ಪದಗಳು ಸಾಲವು. ಇದನ್ನು ವೀಕ್ಷಿಸಲು ಕರ್ನಾಟಕದ ಮೂಲೆ ಮೂಲೆಯ ಜನರು ಮಾತ್ರವಲ್ಲದೆ, ಭಾರತದ ವಿವಿಧ ರಾಜ್ಯಗಳ ಹಾಗೂ ವಿದೇಶಗಳ ಪ್ರವಾಸಿಗರೂ ತಂಡೋಪತಂಡವಾಗಿ ಆಗಮಿಸಿ, ದಸರೆಯ ಸಂಭ್ರಮಕ್ಕೆ ಮತ್ತಷ್ಟು ಮೆರುಗನ್ನು ತುಂಬುತ್ತಾರೆ. ಕರ್ನಾಟಕದಲ್ಲಿ ದಸರಾಹಬ್ಬವನ್ನು ಕನ್ನಡಿಗರ ಹಬ್ಬವಾಗಿ, ನಾಡಹಬ್ಬವಾಗಿ ಬಿಂಬಿಸಿದವರು ವಿಜಯನಗರದ ಅರಸರು ಮತ್ತು ಮೈಸೂರಿನ ಒಡೆಯರ್ ರಾಜವಂಶಸ್ಥರು. ದಸರಾ ಉತ್ಸವಕ್ಕೆ ಹಲವು ದಶಕಗಳಿಂದ ದಕ್ಕಿರುವ ಸಾಂಸ್ಕೃತಿಕ ಆಯಾಮವು ಇಂದಿನವರೆಗೂ ಅವ್ಯಾಹತವಾಗಿ ಮುಂದುವರಿದುಕೊಂಡು ಬಂದಿದೆ. ಇದರ ಕೀರ್ತಿ ಮೈಸೂರಿನ ಒಡೆಯರ್ ಅರಸರುಗಳಿಗೆ ಸಲ್ಲಬೇಕು. ಕ್ರಿ.ಶ. 1610ರಲ್ಲಿ ರಾಜ ಒಡೆಯರ್ ಅವರಿಂದ ಆರಂಭವಾದ ಜಂಬೂಸವಾರಿಯು ಇಂದಿಗೂ ದಸರೆಯ ಪ್ರಮುಖ ಆಕರ್ಷಣೆಯಾಗಿದೆ. ಈಗ ಅದು ಸರಕಾರದ ವತಿಯಿಂದ ನಡೆಸಲಾಗುವ ಶ್ರೀ ಚಾಮುಂಡೇಶ್ವರಿ ದೇವಿಯ ಮೆರವಣಿಗೆಯಾಗಿದೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಪ್ರತಿಯೊಂದು ಜಿಲ್ಲೆಯ ಚಿತ್ತಾಕರ್ಷಕ ಸ್ತಬ್ಧಚಿತ್ರಗಳು ಬಿಂಬಿತಗೊಂಡು, ದಸರಾ ಉತ್ಸವಕ್ಕೆ ಮತ್ತಷ್ಟು ಆಕರ್ಷಣೆಯನ್ನು ತುಂಬುತ್ತವೆ.

ನಾಡಹಬ್ಬ ದಸರಾ, ಎಷ್ಟೊಂದು ಸುಂದರ

ಚೆಲ್ಲಿದೆ ನಗೆಯ ಪನ್ನೀರ... ಎಲ್ಲೆಲ್ಲು ನಗೆಯ ಪನ್ನೀರ...

• ಸುರೇಶ ಗುದಗನವರ, ಧಾರವಾಡ

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬ-ಹರಿದಿನಗಳಿಗೆ, ಆಚಾರ-ವಿಚಾರಗಳಿಗೆ ಅವುಗಳದ್ದೇ ಆದ ವೈಶಿಷ್ಟ್ಯವಿದೆ. ನಮ್ಮಲ್ಲಿ ವರ್ಷಪೂರ್ತಿ ಏನಾದರೊಂದು ಹಬ್ಬ ಇರುವುದು ಮತ್ತು ಪ್ರತಿಯೊಂದು ಹಬ್ಬಕ್ಕೂ ಅದರದ್ದೇ ಆದ ಮಹತ್ವ ಇರುವುದು ಗೊತ್ತಿರುವಂಥದ್ದೇ. ಅಂಥ ಹಬ್ಬಗಳ ಪೈಕಿ ನವರಾತ್ರಿಯೂ ಒಂದು. ಇದು ಒಂಬತ್ತು ದಿನಗಳ ಹಬ್ಬ. ನವರಾತ್ರಿಯಾದ ಮಾರನೇ ದಿನ ಬರುವ 'ವಿಜಯದಶಮಿ' ದಿನವೂ ಸೇರಿ ಒಟ್ಟು ಹತ್ತು ದಿನಗಳವರೆಗೆ ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುವ ಹಬ್ಬವಿದು. ಉತ್ತರ ಭಾರತೀಯರು ಈ ಹಬ್ಬವನ್ನು 'ದಶಹರಾ' ಎಂದು ಕರೆಯುತ್ತಾರೆ.

• ಪೌರಾಣಿಕ ಹಿನ್ನೆಲೆ:

ನವರಾತ್ರಿ ಹಬ್ಬಕ್ಕೆ ಅದರದ್ದೇ ಆದ ಪೌರಾಣಿಕ ಹಿನ್ನೆಲೆಯಿದೆ. ಪುರಾಣ ಕಾಲದಲ್ಲಿ, ರಕ್ತಬೀಜಾಸುರ, ಚಂಡ, ಮುಂಡ, ಶುಂಭ, ನಿಶುಂಭ, ಮಹಿಷ ಮುಂತಾದ ಅನೇಕ ರಾಕ್ಷಸರಿದ್ದರು. ಅವರಿಂದ ಮೂರೂ ಲೋಕಗಳಿಗೆ ಗಂಡಾಂತರವಿತ್ತು. ಆದ್ದರಿಂದ, ಬ್ರಹ್ಮ, ವಿಷ್ಣು, ಮಹೇಶ್ವರರ ಸಹಕಾರ ಹಾಗೂ ಸರಸ್ವತಿ, ಲಕ್ಷ್ಮೀ ಮತ್ತು ಪಾರ್ವತಿಯರ ಒಟ್ಟು ಶಕ್ತಿಗಳು ಸೇರಿ ಒಂದು 'ಮಹಾಶಕ್ತಿ'ಯ ಉದಯವಾಯಿತು. ಆ ಮಹಾಶಕ್ತಿ ದೇವಿಯು ರಾಕ್ಷಸರನ್ನೆಲ್ಲಾ ಸಂಹರಿಸಿ ಲೋಕವನ್ನು ಕಾಪಾಡಿದಳು. 'ದುಷ್ಟ ಶಿಕ್ಷಣೆ, ಶಿಷ್ಟ ರಕ್ಷಣೆ'ಯ ಈ ಪರಿಕಲ್ಪನೆಯನ್ನು ಕೇಂದ್ರಬಿಂದುವಾಗಿಟ್ಟುಕೊಂಡು ನವರಾತ್ರಿ ಹಬ್ಬವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಲೋಕಮಾತೆಯನ್ನು ಕಾಳಿ, ಚಾಮುಂಡಿ, ದುರ್ಗೆ, ಶಾಕಾಂಬರಿ ಮುಂತಾದ ಹೆಸರುಗಳಿಂದ ಪೂಜಿಸಲಾಗುತ್ತದೆ.

• ಎಲ್ಲೆಲ್ಲೂ ಸಂಭ್ರಮ

ಭಾರತದ ಮಿಕ್ಕ ರಾಜ್ಯಗಳಲ್ಲೂ ದಸರಾ ಹಬ್ಬವನ್ನು ತುಂಬಾ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅದರಲ್ಲೂ ಪಶ್ಚಿಮ ಬಂಗಾಳದಲ್ಲಿ ಕಾಣಬರುವ ಆಚರಣೆಯು ವಿಶ್ವಪ್ರಸಿದ್ಧಿಯನ್ನು ಪಡೆದಿದೆ. ಅಲ್ಲಿ 9 ದಿನಗಳೂ ದುರ್ಗಾದೇವಿಯ ಬೃಹತ್ ಹಾಗೂ ಸುಂದರ ಮೂರ್ತಿಗಳನ್ನು ಭವ್ಯವಾಗಿ ಅಲಂಕರಿಸಿರುವ ಮಂಟಪದಲ್ಲಿ ಕೂರಿಸಿ ಪೂಜಿಸಲಾಗುತ್ತದೆ. ಇದು ಬಂಗಾಳಿಯರಿಗೆ ನಾಡಹಬ್ಬವಾಗಿದೆ. ಪಂಜಾಬ್‌ನಲ್ಲಿ ಭಕ್ತರು 7 ದಿನಗಳ ಉಪವಾಸ ಮಾಡಿದ ನಂತರ ಎಂಟನೇ ದಿನ ಪುಟ್ಟ ಬಾಲಿಕೆಯರನ್ನು ದೇವಿಯರ ಪ್ರತಿರೂಪವೆಂದು ಭಾವಿಸಿ, ಅವರೆಲ್ಲರಿಗೂ ಪೂರಿ, ಹಲ್ವಾ ಮತ್ತು ಕಡಲೆಯ ನೈವೇದ್ಯ ನೀಡುತ್ತಾರೆ. ಗುಜರಾತ್ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ನವರಾತ್ರಿಯ ಸಮಯದಲ್ಲಿ ಸಂಘಟಿಸಲಾಗುವ

ದಾಂಡಿಯಾ, ಗರ್ಬಾ ನೃತ್ಯಗಳು ತುಂಬಾ ಚಿತ್ತಾಕರ್ಷಕವಾಗಿರುತ್ತವೆ. ಹಿಮಾಚಲ ಪ್ರದೇಶದ ಕುಲುವಿನಲ್ಲಿ 7 ದಿನಗಳವರೆಗೆ ರಘುನಾಥ ದೇವರ ಉತ್ಸವ ನಡೆಯುತ್ತದೆ. ಉತ್ತರ ಭಾರತದಲ್ಲಿ ದುರ್ಗಾಪೂಜೆ ವಿಶೇಷವೆನಿಸಿದರೆ, ದಕ್ಷಿಣ ಭಾರತದಲ್ಲಿ ಚಾಮುಂಡಿಯ ಆರಾಧನೆ ವಿಶಿಷ್ಟವಾದುದು.

• ಪೂಜೆಯ ವೈಭವ

ನವರಾತ್ರಿ ಹಬ್ಬವು ಆಶ್ವಯುಜ ಮಾಸದ ಬಹುಳ ಪಾಡ್ಯಮಿಯಿಂದ ಪ್ರಾರಂಭವಾಗಿ ವಿಜಯದಶಮಿಯಂದು ಕೊನೆಗೊಳ್ಳುತ್ತದೆ. ಈ ಮಧ್ಯೆ ಬರುವ ಸಪ್ತಮಿ, ಅಷ್ಟಮಿ, ನವಮಿಗಳಲ್ಲಿ ವಿಶೇಷ ಪೂಜೆಯೂ ನಡೆಯುತ್ತದೆ. ನವರಾತ್ರಿ ಹಬ್ಬದ ಎಂಟನೆಯ ದಿನ ದುರ್ಗಾಷ್ಟಮಿ. ಅಂದು ದುರ್ಗಾದೇವಿ ಅಥವಾ ಚಾಮುಂಡೇಶ್ವರಿ ದೇವಿಗೆ ಮಹಾಪೂಜೆ ನಡೆಯುತ್ತದೆ. ಒಂಬತ್ತನೆಯ ದಿನ ನವಮಿ. ಅಂದು ಆಯುಧಗಳ ಪೂಜೆಯನ್ನೇ ವಿಶೇಷವಾಗಿ ಮಾಡಲಾಗುತ್ತದೆ. ರೈತರು ತಮ್ಮ ನೇಗಿಲು, ಕೂರಿಗೆ, ಗಾಡಿ ಮೊದಲಾದವುಗಳಿಗೆ, ಬಡಗಿಗಳು ತಮ್ಮ ಉಳಿ, ಬಾಚಿ, ಉಜ್ಜುಗೊರಡು ಮೊದಲಾದವುಗಳಿಗೆ ಹೀಗೆ ಆಯಾ ವೃತ್ತಿಪರರು ತಾವು ಬಳಸುವ ಆಯುಧ-ಸಾಧನ-ಸಲಕರಣೆಗಳಿಗೆ ಹಾಗೂ ಸ್ಕೂಟರ್, ಬೈಕ್, ಕಾರು, ಟ್ರ್ಯಾಕ್ಟರ್, ಲಾರಿ-ಬಸ್ಸು ಮುಂತಾದ ವಾಹನಗಳಿಗೆ ಅರಿಶಿನ-ಕುಂಕುಮ, ವಿಭೂತಿ, ಗಂಧ, ಹೂವು ಮುಂತಾದವುಗಳನ್ನು ಬಳಸಿ ಭಕ್ತಿಯಿಂದ ಪೂಜಿಸುತ್ತಾರೆ. ಇದು ತಮ್ಮ ವೃತ್ತಿಬದುಕಿಗೆ ಒತ್ತಾಸೆಯಾಗಿ ನಿಂತು, ಮುನ್ನಡೆಯನ್ನು ಕಾಣಲು ಅನುವುಮಾಡಿಕೊಟ್ಟದ್ದಕ್ಕೆ ಆಯಾ ವೃತ್ತಿಯವರು ತಾವು ಬಳಸುವ ಸಾಧನ-ಸಲಕರಣೆಗಳಿಗೆ ತೋರುವ ಕೃತ್ಯಜ್ಞತೆಯ ದ್ಯೋತಕವೂ ಹೌದು.

• ಬನ್ನಿಪತ್ರೆಯ ವಿತರಣೆ

ಹತ್ತನೆಯ ದಿನವೇ ವಿಜಯದಶಮಿ. ಇದು ಕೈಗೊಂಡ ಕಾರ್ಯದಲ್ಲಿ ಯಶಸ್ಸು ಸಿಕ್ಕಿದ್ದರ ದ್ಯೋತಕವಾಗಿ ಆಚರಿಸಲ್ಪಡುವ ಹಬ್ಬದ ದಿನ. ಶ್ರೀರಾಮನು ಲಂಕಾಯುದ್ಧದಲ್ಲಿ ರಾವಣನನ್ನು ಸಂಹರಿಸಿ ವಿಜಯವನ್ನು ಸಾಧಿಸಿದ್ದು, ಪಾಂಡವರು ತಮ್ಮ ಶತ್ರುಗಳ ಮೇಲೆ ಗೆಲುವನ್ನು ಸಾಧಿಸಿದ್ದು ಇದೇ ದಿನದಂದು ಎನ್ನಲಾಗುತ್ತದೆ.
ವಿಜಯದಶಮಿಯಂದು ಶಕ್ತಿ ದೇವತೆಗೆ ಮಾತ್ರವಲ್ಲದೆ ಶಮೀವೃಕ್ಷ ಅಥವಾ ಬನ್ನೀಮರಕ್ಕೂ ವಿಶೇಷ ಪೂಜೆಯನ್ನು ಸಲ್ಲಿಸಲಾಗುತ್ತದೆ. ಅಂದು ಬನ್ನಿಪತ್ರೆಯನ್ನು ಪರಸ್ಪರ ಹಂಚಿಕೊಂಡು 'ನಿಮ್ಮ ಬದುಕು ಬಂಗಾರದ ಹಾಗೆ ಇರಲಿ' ಎಂದು ಶುಭ ಹಾರೈಸುವುದು, ದೊಡ್ಡವರಿಗೆ ಚಿಕ್ಕವರು ನಮಸ್ಕಾರ ಮಾಡುವುದು ಸಂಪ್ರದಾಯವಾಗಿ ನಡೆದುಕೊಂಡು ಬಂದಿದೆ. ನವರಾತ್ರಿಯ ಸಂದರ್ಭದಲ್ಲಿ ಆಸಕ್ತರು ತಮ್ಮ ಮನೆಗಳಲ್ಲಿ ಬಗೆಬಗೆಯ ಮತ್ತು ಸುಂದರವಾದ ಗೊಂಬೆಗಳನ್ನು ಕೂರಿಸುವುದು ಮತ್ತೊಂದು ವಿಶೇಷ.



ನವರಾತ್ರಿಯಲ್ಲಿ ಪೂಜಿಸಲ್ಪಡುವ ನವದುರ್ಗೆಯರು

• ರಮಣ್ ಶೆಟ್ಟಿ ರೆಂಜಾಳ, ಮುಂಬಯಿ

ದಸರೆಯ ಸಂಭ್ರಮಾಚರಣೆ ನಡೆಯುವ ಒಂಬತ್ತು ದೈವಿಕ ರಾತ್ರಿಗಳಲ್ಲಿ ದೇವಿಯು ಆಳವಾದ ವಿಶ್ರಾಂತಿ ಮತ್ತು ನವಸೊಬಗನ್ನು ಪಡೆಯುತ್ತಾಳೆ. ಇದರ ದ್ಯೋತಕವಾಗಿ, ದೇವಿಯು ಪ್ರತಿದಿನವೂ ಒಂದೊಂದು ರೂಪ ಮತ್ತು ವರ್ಣವೈವಿಧ್ಯದಲ್ಲಿ ಕಂಗೊಳಿಸುತ್ತಾಳೆ. ಅವು ಹೀಗಿವೆ:

1. **ಶೈಲಪುತ್ರಿ:** ಇದು ದುರ್ಗಾದೇವಿಯ ಮೊದಲ ಅಭಿವ್ಯಕ್ತಿಯಾಗಿದ್ದು, ನವರಾತ್ರಿಯ ಮೊದಲ ದಿನದಂದು ಈ ಸ್ವರೂಪವನ್ನು ಪೂಜಿಸಲಾಗುತ್ತದೆ. ಪರ್ವತಪುತ್ರಿಯಾದ ಕಾರಣದಿಂದಲೇ 'ಶೈಲಪುತ್ರಿ' ಎಂದು ಕರೆಸಿಕೊಳ್ಳುವ ಈಕೆ, ಶಕ್ತಿ ಮತ್ತು ಸ್ಥೈರ್ಯದ ಪ್ರತೀಕಳಾಗಿದ್ದಾಳೆ. ಆನಂದ ಮತ್ತು ಶಕ್ತಿಯನ್ನು ಪ್ರತಿನಿಧಿಸುವ ಹಳದಿ ಬಣ್ಣದಲ್ಲಿ ಇವಳು ಕಂಗೊಳಿಸುತ್ತಾಳೆ.
2. **ಬ್ರಹ್ಮಚಾರಿಣಿ:** ನವರಾತ್ರಿಯ ಎರಡನೇ ದಿನವು ಈ ದೇವಿಗೆ ಅರ್ಪಿತವಾಗಿದೆ. ಶಾಂತಿ ಮತ್ತು ಸಮೃದ್ಧಿಯನ್ನು ಬಿಂಬಿಸುವ ಹಸಿರು ಬಣ್ಣದಲ್ಲಿ ಕಂಗೊಳಿಸುವ ಈ ದೇವಿ, ತಪಸ್ಸು, ಧೈರ್ಯ ಮತ್ತು ಸಹನೆಯ ಸಂಕೇತವಾಗಿದ್ದಾಳೆ.
3. **ಚಂದ್ರಘಂಟಾ:** ನವರಾತ್ರಿಯ ಮೂರನೇ ದಿನವು ಈ ದೇವಿಯ ದಿನವಾಗಿದೆ. ಹಣೆಯ ಮೇಲೆ ಅರ್ಧಚಂದ್ರನನ್ನು ಹೊಂದಿರುವ ಉಗ್ರದೇವತೆಯಾಗಿರುವುದರಿಂದ ಈ ದೇವಿಗೆ ಚಂದ್ರಘಂಟಾ ಎಂದೇ ಕರೆಯಲಾಗುತ್ತದೆ. ಧೈರ್ಯ ಮತ್ತು ಸಮತೋಲನವನ್ನು ಸಂಕೇತಿಸುವ ಬೂದು ಬಣ್ಣದಲ್ಲಿ ಕಂಗೊಳಿಸುವ ಈ ದೇವಿಯು ದುಷ್ಟರ ಸಂಹಾರಕಿಯಾಗಿದ್ದಾಳೆ.
4. **ಕೂಷ್ಮಾಂಡ:** ನವರಾತ್ರಿಯ ನಾಲ್ಕನೇ ದಿನ ಕಂಗೊಳಿಸುವ ಈ ದೇವಿಯು ಉರಿಯುತ್ತಿರುವ ಸೂರ್ಯನೊಳಗೆ ವಾಸಿಸುವ ಶಕ್ತಿದೇವತೆಯಾಗಿದ್ದಾಳೆ. ಸೃಷ್ಟಿಯ ಮೂಲವೂ, ಶಕ್ತಿ ಮತ್ತು ಚೈತನ್ಯದ ಸ್ವರೂಪಳೂ ಆಗಿರುವ ಈಕೆ, ಸೃಜನಶಕ್ತಿ ಮತ್ತು ಉತ್ಸಾಹವನ್ನು ಪ್ರತಿನಿಧಿಸುವ ಕಿತ್ತಳೆ ಬಣ್ಣದಲ್ಲಿ ಕಂಗೊಳಿಸುತ್ತಾಳೆ.
5. **ಸ್ಕಂದಮಾತಾ:** ಪುಟ್ಟ ಕಾರ್ತಿಕೇಯನನ್ನು (ಸ್ಕಂದ) ತನ್ನ ತೊಡೆಯ ಮೇಲೆ ಕೂರಿಸಿಕೊಂಡಿರುವ ಈಕೆಯನ್ನು ಸ್ಕಂದಮಾತಾ ಎಂದೇ ಕರೆಯಲಾಗುತ್ತದೆ. ನವರಾತ್ರಿಯ ಐದನೇ ದಿನ ಪೂಜಿಸಲ್ಪಡುವ ಈಕೆ ಕರುಣೆಯ ಪ್ರತೀಕಳಾಗಿದ್ದು, ಶುದ್ಧತೆ ಮತ್ತು ತಾಯ್ತನದ ಸಂಕೇತವಾಗಿರುವ ಬಿಳಿಯ ಬಣ್ಣದಿಂದ ಕಂಗೊಳಿಸುತ್ತಾಳೆ.
6. **ಕಾತ್ಯಾಯಿನಿ:** ನವರಾತ್ರಿಯ ಆರನೇ ದಿನ ಪೂಜಿಸಲ್ಪಡುವ ಈಕೆಗೆ ಅಷ್ಟಭುಜಗಳಿರುತ್ತವೆ. ಸಿಂಹವಾಹನೆಯಾಗಿರುವ ಈಕೆ ತನ್ನ ಕರಗಳಲ್ಲಿ ಖಡ್ಗ, ತ್ರಿಶೂಲ, ಕಮಲ ಪುಷ್ಪಗಳನ್ನು ಧರಿಸಿರುತ್ತಾಳೆ. ಅಸುರ ಸಂಹಾರಿಣಿಯೂ ಧರ್ಮರಕ್ಷಕಿಯೂ ಆಗಿರುವ ಈಕೆ ಯುವತಿಯರ ಆರಾಧ್ಯದೇವಿಯೆಂದು ಪ್ರಸಿದ್ಧಳು. ಪ್ರೇಮ ಮತ್ತು ಶಕ್ತಿಯನ್ನು ಬಿಂಬಿಸುವ ಕೆಂಪು ಬಣ್ಣದಿಂದ ಇವಳು ಕಂಗೊಳಿಸುತ್ತಾಳೆ.
7. **ಕಾಳರಾತ್ರಿ:** ದಂತಕಥೆಗಳ ಪ್ರಕಾರ, ರಾಕ್ಷಸರನ್ನು ಕೊಲ್ಲಲು ತನ್ನ ಚರ್ಮದ ಬಣ್ಣವನ್ನು ತ್ಯಾಗಮಾಡಿ ಕಪ್ಪುಬಣ್ಣವನ್ನು ಧರಿಸಿದಾಕೆ ಈ ಕಾಳರಾತ್ರಿ. ನವರಾತ್ರಿಯ ಏಳನೇ ದಿನ ಪೂಜಿಸಲ್ಪಡುವ ಈ ದೇವಿಯು ದುಷ್ಟ ಸಂಹಾರಕಿಯಾಗಿರುವುದರ ಜತೆಗೆ, ಭಯವನ್ನು ಹೋಗಲಾಡಿಸುವ ಶಕ್ತಿಯಾಗಿದ್ದಾಳೆ. ಭಯನಾಶವನ್ನೂ ರಹಸ್ಯವನ್ನೂ ಪ್ರತಿನಿಧಿಸುವ ನೀಲಿಬಣ್ಣದಿಂದ ಇವಳು ಕಂಗೊಳಿಸುತ್ತಾಳೆ.
8. **ಮಹಾಗೌರಿ:** ನವರಾತ್ರಿಯ ಎಂಟನೇ ದಿನವು ದುರ್ಗಾಷ್ಟಮಿ ಎಂದು ಕರೆಯಲ್ಪಡುತ್ತದೆ ಮತ್ತು ಇದು ಮಹಾಗೌರಿಗೆ ಸಮರ್ಪಿತವಾಗಿದೆ. ದೇವಿಯ ನವರೂಪಗಳಲ್ಲಿ ಇವಳದ್ದು ಅತ್ಯಂತ ಆಕರ್ಷಕವೆಂದು ಪರಿಗಣಿಸಲ್ಪಟ್ಟಿದೆ. ಶಾಂತಿ, ಶುದ್ಧತೆ ಮತ್ತು ಭಕ್ತಿಯ ಸಂಕೇತವಾಗಿರುವ ಈಕೆಯು ಸೌಂದರ್ಯ ಮತ್ತು ಭಕ್ತಿಯನ್ನು ಬಿಂಬಿಸುವ ಗುಲಾಬಿ ಬಣ್ಣದಿಂದ ಕಂಗೊಳಿಸುತ್ತಾಳೆ.
9. **ಸಿದ್ಧಿದಾತ್ರಿ:** ನವರಾತ್ರಿಯ ಒಂಬತ್ತನೇ ದಿನದಂದು ಪೂಜಿಸಲ್ಪಡುವ ಈ ದೇವಿಯು ನೈಸರ್ಗಿಕವಾಗಿ ಗುಣಪಡಿಸುವ ಶಕ್ತಿಯನ್ನು ಹೊಂದಿದ್ದಾಳೆ. ಆನಂದದಾಯಕಳಾದ ಇವಳು ಜ್ಞಾನ ಮತ್ತು ಶಕ್ತಿಯನ್ನೂ ಎಲ್ಲಾ ಸಿದ್ಧಿಗಳನ್ನೂ ಅನುಗ್ರಹಿಸುತ್ತಾಳೆ. ಜ್ಞಾನ ಮತ್ತು ಆಧ್ಯಾತ್ಮಿಕತೆಯನ್ನು ಸಂಕೇತಿಸುವ ನೇರಳೆ ಬಣ್ಣದಲ್ಲಿ ಇವಳು ಕಂಗೊಳಿಸುತ್ತಾಳೆ.

ಮೇಲೆ ವಿವರಿಸಲಾಗಿರುವಂತೆ, ದೇವಿಯು ಕಂಗೊಳಿಸುವ ಬಣ್ಣಗಳಿಗೆ ಅನುಗುಣವಾಗಿರುವ ವಸ್ತ್ರಗಳನ್ನೇ ಭಕ್ತರೂ ಧರಿಸಿ ದೇವಿಯ ಆರಾಧನೆ ಮಾಡುವ ಪದ್ಧತಿ ಪ್ರಚಲಿತವಾಗಿದೆ.

ನೇಪಥ್ಯಕ್ಕೆ ಸರಿದ ಕೊಡಗಿನ ಕಿತ್ತಳೆ

ಡಾ.ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ

ತೊಳೆಯನ್ನು ಬಿಡಿಸಿ ಬಾಯೊಳಗೆ ಇಟ್ಟುಕೊಳ್ಳುತ್ತಿದ್ದಂತೆಯೇ ದೇಹಕ್ಕೆ ಚೈತನ್ಯ ನೀಡುವಂಥ ಹಣ್ಣು ಕಿತ್ತಳೆ. ಅದರಲ್ಲೂ ನಿರ್ದಿಷ್ಟವಾಗಿ, ಕೊಡಗಿನ ಕಿತ್ತಳೆಯನ್ನು ಸವಿಯಲು ಬಲುರುಚಿ. ಕಿತ್ತಳೆ ಹಣ್ಣಿನ ಸೀಜನ್ ಬಂತೆಂದರೆ ಎಲ್ಲೆಡೆಯ ಮಾರುಕಟ್ಟೆಗಳಲ್ಲಿ ಅವುಗಳದೇ ದರ್ಬಾರ್ ಆಗಿರುತ್ತಿತ್ತು. ಆದರೆ, ಈ ವರ್ಷ ಅದೇನೋ ಗೊತ್ತಿಲ್ಲ, ಬಹಳ ಕಡೆ ಹುಡುಕಿದರೂ ಸಿಗಲಿಲ್ಲ. ವ್ಯಾಪಾರಸ್ಥರನ್ನು ಈ ಬಗ್ಗೆ ಕೇಳಿದ್ದಕ್ಕೆ, ''ಕೊಡಗಿನ ಕಿತ್ತಳೆ ಕಣ್ಮರೆಯಾಗಿದೆ, ನಾವು ಬೇರೆ ಕಡೆಯಿಂದ ತರಿಸಿ ಮಾರುತ್ತಿದ್ದೇವೆ'' ಎಂದಾಗ

ಆಘಾತವಾಯಿತು.

ಆದರೆ ಇದು ನಿಜ. ಕೊಡಗಿನ ಬ್ರ್ಯಾಂಡ್‌ಗಳಲ್ಲಿ ಒಂದೆನಿಸಿಕೊಂಡಿರುವ ಕಿತ್ತಳೆ ಇತ್ತೀಚಿನ ವರ್ಷಗಳಲ್ಲಿ ಸದ್ದಿಲ್ಲದೆ ಕಣ್ಮರೆಯಾಗುತ್ತಿದೆ. ಮೊದಲೆಲ್ಲ ಗಿಡಗಳಲ್ಲಿ ತೂಗಿ ತೊನೆಯುತ್ತಿದ್ದ ಹಣ್ಣುಗಳಿಂದಾಗಿ ಕಿತ್ತಳೆ ತೋಟಗಳು ರಮ್ಯನೋಟವನ್ನೇ ನೀಡುತ್ತಿದ್ದವು. ಆದರೆ ಈಗ ಅಂಥ ದೃಶ್ಯಗಳು ಅಪರೂಪವಾಗುತ್ತಿವೆ. ಕೊಡಗಿನಲ್ಲಿ ಹಿಂದೆ ಬೆಳೆಯಲಾಗುತ್ತಿದ್ದ ತಳಿಗಳು ಮಾಯವಾಗಿವೆ, ಈಗೀಗ ಹೊಸ ತಳಿಗಳನ್ನು ಬೆಳೆಸುವ ಪ್ರಯತ್ನಗಳು ನಡೆಯುತ್ತಿವೆ. ಆದರೆ, ಅವುಗಳನ್ನು ಪ್ರತ್ಯೇಕವಾಗಿ ನೆಡದೆ, ಕಾಫಿತೋಟಗಳಲ್ಲಿ ನಡುನಡುವೆ ಬೆಳೆಸುತ್ತಿರುವುದರಿಂದಾಗಿ, ಕಾಫಿ ಗಿಡಗಳಿಗೆ ಸಂಬಂಧಿಸಿ ಏನಾದರೂ ಕೆಲಸ ಮಾಡುವಾಗ ಕಿತ್ತಳೆ ಗಿಡಗಳ ಬೇರುಗಳಿಗೆ ಹಾನಿಯಾಗಿ, ಬೆಳವಣಿಗೆ ಕುಂಠಿತವಾಗುತ್ತಿದೆ ಮತ್ತು ಗಿಡಗಳು ಬೇಗನೆ ಒಣಗಿಹೋಗುತ್ತಿವೆ ಎಂದು ಕೆಲವೊಂದು ಬೆಳೆಗಾರರು ಹೇಳುತ್ತಿದ್ದಾರೆ. ತನ್ನ ಗುಣಮಟ್ಟ ಮತ್ತು ರುಚಿಯ ಕಾರಣದಿಂದಾಗಿ ದೇಶ-ವಿದೇಶಗಳಲ್ಲಿ ಹೆಸರನ್ನು ದಕ್ಕಿಸಿಕೊಂಡಿರುವ ಕೊಡಗಿನ ಕಿತ್ತಳೆಯನ್ನು ಬೆಳೆಗಾರರು ಉಳಿಸಿಕೊಳ್ಳಬೇಕಿದೆ. ಸರಕಾರವೂ ಅವರಿಗೆ ಸಹಾಯಹಸ್ತ ನೀಡಬೇಕಿದೆ.

ಚಿತ್ತವಿಹಾರ

• ಮಿರ್ಲೆ ಚಂದ್ರಶೇಖರ.

ಬೇಡದೆ ಎಲ್ಲವನ್ನೂ ಕೊಡುವ ದೇವರು

ನನ್ನವ್ವನೆಂದರೆ....
ನಾನು ಕೇಳಿದ್ದೆಲ್ಲವನ್ನು ಕೊಡುವ
ಅಕ್ಷಯಪಾತ್ರೆಯಾದವಳು.
ತಾನು, ತನ್ನ ಕುಟುಂಬದ
ಚಾಕರಿಯಾಯಿತೆಂದು ಬದುಕಿದವಳು.
ಹೊರಪ್ರಪಂಚದ ಅರಿವೆ ಇಲ್ಲದೆಯೂ
ಸಂಸಾರ ನಿರ್ವಹಿಸಿದವಳು.
ವಿದ್ಯೆ ಇಲ್ಲದೆಯೂ ಕುಟುಂಬ
ಸರಿದೂಗಿಸುವ ಕಲೆಯುಳ್ಳವಳು.
ಬೇಯಿಸಿ ಗಂಡಮಕ್ಕಳಿಗೆ ಉಣಿಸಿ ಮಿಕ್ಕರೆ
ಅರೆಹೊಟ್ಟೆ ಉಂಡವಳು.
ಮೊದಲು ನನಗಿರಲಿ ಎಂದು ಹೇಳಲಿಲ್ಲ
ಎಂದೂ.
ವೃತ್ತಿಗೆ ನಿವೃತ್ತಿ ಎನ್ನುವ ತೆರೆ ಇಲ್ಲದ
ಸಂಬಳರಹಿತ ಚಾಕರಿ ನನ್ನವ್ವಳದು.
ನೋವಿಂದ ಕರೆದರೆ ಕರಗಿ ನೀರಾಗುವುಳು.
ಕವಿತೆಯೊಂದ ಬರೆದರೆ ಸಾಲದು,
ಮಹಾಕಾವ್ಯಕ್ಕೂ ಮೀರಿದ ಮಹಾನಾರಿ.
ಕಾಣದ ಭಗವಂತನನ್ನು ಪೂಜಿಸುವ
ತಾಯಿಗರ್ಭದ ಶಿಶುಗಳೇ...
ದೇವತೆಯ ಮಡಿಲಲ್ಲಿ ಮಲಗಿ ಮರೆತವರೆ..
ತಿಳಿದುಕೊಳ್ಳಿ ಅವ್ವನೆಂದರೆ ಬೇಡದೆ ಕಾಡದೆ
ಎಲ್ಲವನ್ನೂ ಕೊಟ್ಟು ಕಣ್ಣೆದುರೇ ಇರುವ
ದೇವರು!
ನನ್ನವ್ವನೆಂದರೆ... ಎಲ್ಲವೂ ಅವಳೇ....
ನನ್ನದೆಲ್ಲವೂ ಅವಳದೇ.....!

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಅವನು ನೀಡಿದ ಒಪ್ಪಿಗೆ (4)
3. ಕರಾರು ಮಾಡಿಕೊಳ್ಳುವಾಗ ಎದುರಾದ ಆಕ್ಷೇಪ (4)
6. ಅಸಂಬದ್ಧವಾದ ಚರ್ಚೆ ಇದು (5)
7. ಎರಡಕ್ಷರದ ಶತ್ರು (2)
9. ಅಮಲು ಎನ್ನುವ ಪದವಿದು (2)
10. ನೀರು ಹರಿಯುವ ನಾಲೆ (3)
11. ಅರ್ಧಚಂದ್ರಾಕೃತಿಯ ರಚನೆ (3)
12. ಹಸುವಿನ ಕಂದ (2)
13. ಜಾವಾ ದ್ವೀಪಕ್ಕೆ ಹೋಗುವಾಗಿನ ವೇಗ (2)
15. ಒಂದಕ್ಕೊಂದು ಹೊಂದಾಣಿಕೆಯಿಲ್ಲದ ಎರಡು ಅಥವಾ ಹೆಚ್ಚು ವಸ್ತುಗಳ ಮಿಶ್ರಣ (5)
17. ಆಯುಧಗಳನ್ನಿಡುವ ಕಟ್ಟಡ (4)
18. ಆತನ ಕೆಲಸದಲ್ಲಿ ಕಂಡಿದೆ ನಾವೀನ್ಯ (4)

ಮೇಲಿಂದ ಕೆಳಕ್ಕೆ

1. ತಪ್ಪಾದ ಹಾದಿ (4)
2. ಲಿಖಿತವಾಗಿ ಮಾಡಿಕೊಂಡ ಅರಿಕೆ (3)
4. ವೈಶೇಷಿಕ ದರ್ಶನವನ್ನು ಸಿದ್ಧಾಂತ ರೂಪದಲ್ಲಿ ರಚಿಸಿದ ಮಹರ್ಷಿ (3)
5. ಕಚೇರಿಯಲ್ಲಿ ಕೆಲಸ ಮಾಡಿಸಿಕೊಳ್ಳಲು ಕೊಡಬೇಕಾಯಿತು ಲಂಚ (4)
8. ರೆಕ್ಕೆ-ಪುಕ್ಕ ಕಟ್ಟಿಕೊಂಡಿರುವ ಅಪವಾದ (3)
9. ನರ, ಮನುಷ್ಯ (3)
12. ಮತ್ತೊಬ್ಬರ ಅಧೀನ, ಕೈವಶ (4)
14. ಈಗಿನ ಕಾಲ (4)
15. ಹಾಡುಗಾರ ಇಲ್ಲಿ ದಿಕ್ಕುತಪ್ಪಿಸಿ ಬಂದಿದ್ದಾನೆ (3)
16. ಕಾರ್ಯಕ್ಕೆ ಮತ್ತೊಂದು ಹೆಸರು (3)

ಕುಮಾರವ್ಯಾಸ ಭಾರತವನ್ನು ರಚಿಸಲು ನೆರವಾದ ಅಶ್ವತ್ಥಾಮ

ಕುಮಾರವ್ಯಾಸನ ಮೂಲ ಹೆಸರು 'ನಾರಣಪ್ಪ'. ಆತನು ಗದುಗಿನ ವೀರನಾರಾಯಣನ ಪರಮ ಭಕ್ತನಾದುದರಿಂದ ಎಲ್ಲರೂ ಅವನನ್ನು 'ಗದುಗಿನ ನಾರಣಪ್ಪ' ಎಂದೇ ಕರೆಯುತ್ತಿದ್ದರು. ನಾರಣಪ್ಪನಿಗೆ ಕೃಷ್ಣನನ್ನು ಹಾಡಿ ಹೊಗಳುವುದೆಂದರೆ ಅಪರಿಮಿತವಾದ ಆನಂದ. ನಾರಾಯಣನ ಸ್ಮರಣೆಯಲ್ಲಿದ್ದಾಗ ಆತನು ತನ್ನನ್ನು ತಾನೇ ಮರೆತುಬಿಡುತ್ತಿದ್ದ. ವ್ಯಾಸಭಾರತವನ್ನು ದೀರ್ಘವಾಗಿ ಅಭ್ಯಾಸ ಮಾಡಿದ್ದ ನಾರಣಪ್ಪನಿಗೆ ಮಹಾಭಾರತವನ್ನು ಸರಳವಾದ ಕನ್ನಡದಲ್ಲಿ ಓದುಗರ ಮನಮುಟ್ಟುವಂತೆ ಹೇಳಬೇಕೆಂಬ ಆಸೆ ಬೇರೂರಿತ್ತು. ಆದರೆ ಎಷ್ಟೇ ಪ್ರಯತ್ನಪಟ್ಟರೂ ಆ ಕೃಷ್ಣ ಕಥೆಯನ್ನು ಪ್ರಾರಂಭಿಸಲು ಕುಳಿತರೆ, ಮನದಾಳದಲ್ಲಿ ಹುದುಗಿದ್ದ ಭಕ್ತಿಸುಧೆಯನ್ನು ಬರವಣಿಗೆಯಲ್ಲಿ ಇಳಿಸಲಾಗುತ್ತಿರಲಿಲ್ಲ. ಪ್ರತಿದಿನ ವೀರನಾರಾಯಣನ ದೇವಸ್ಥಾನಕ್ಕೆ ಬಂದು ತನಗೆ ಮಹಾಭಾರತ ಕಥೆಯನ್ನು ಬರೆಯುವಂಥ ಶಕ್ತಿ ಹಾಗೂ ಕೌಶಲವನ್ನು ದಯಪಾಲಿಸು ಎಂದು ಪ್ರಾರ್ಥಿಸುತ್ತಿದ್ದನು.

ಒಂದು ದಿನ ಹೀಗೆ ವೀರನಾರಾಯಣದ ದೇವಸ್ಥಾನದಲ್ಲಿ ಭಗವಂತನ ಮುಂದೆ ಕುಳಿತು ಅನನ್ಯವಾಗಿ ಪ್ರಾರ್ಥನೆ ಮಾಡುತ್ತಿದ್ದಾಗ ಹಾಗೇ ಜೊಂಪು ಹತ್ತಿದ ಹಾಗಾಗಿ ಕನಸು ಬಿದ್ದಿತು. ಆ ಕನಸಿನಲ್ಲಿ ಕಾಣಿಸಿಕೊಂಡ ಶ್ರೀಕೃಷ್ಣ ಪರಮಾತ್ಮನು, ''ಭಕ್ತಾ, ಚಿಂತಿಸಬೇಡ. ಶೀಘ್ರದಲ್ಲಿಯೇ ನಿನಗೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ನನ್ನ ಪರಮಭಕ್ತನೂ ಚಿರಂಜೀವಿಯೂ ಆದ ಅಶ್ವತ್ಥಾಮನ ದರ್ಶನವಾಗುತ್ತದೆ. ಅವನು ನಿನಗೆ ನನ್ನ ಕಥೆಯನ್ನು ಹೇಳುತ್ತಾನೆ. ನೀನು ಮಹಾಭಾರತ ಕಥೆಯನ್ನು ರಚಿಸುವುದರಲ್ಲಿ ಯಶಸ್ವಿಯಾಗುತ್ತೀಯ'' ಎಂದು ಹೇಳಿದಂತಾಯಿತು. 'ಇದು ಭಗವಂತನ ಅನುಗ್ರಹವೇ ಇರಬೇಕು. ನಾನು ಅಶ್ವತ್ಥಾಮನನ್ನು ಹುಡುಕಿಯೇ ಹುಡುಕುತ್ತೇನೆ. ಅವನ ಸಹಕಾರದಿಂದ ಮಹಾಭಾರತದ ಕಥೆಯನ್ನು ಬರೆಯುತ್ತೇನೆ' ಎಂದು ಕುಮಾರವ್ಯಾಸನು ಛಲತೊಟ್ಟು ಮುಂದಿನ ದಿನಗಳಲ್ಲಿ ಅಶ್ವತ್ಥಾಮನಿಗಾಗಿ ಹುಡುಕಾಡತೊಡಗಿದ.

ಆ ಕಾಲದಲ್ಲಿ ಸಾಮಾನ್ಯವಾಗಿ. 'ಸಾವಿರ ಮಂದಿ ಸೇರುವ ಧರ್ಮಕಾರ್ಯಗಳ ಸಂತರ್ಪಣೆಗಳಿಗೆ ಅಶ್ವತ್ಥಾಮನು ಆಗಮಿಸುತ್ತಾನೆ. ಅಲ್ಲಿ ಅವನು ದೇವರ ಪ್ರಸಾದವನ್ನು ಸ್ವೀಕರಿಸಿ ಹೋಗುತ್ತಾನೆ' ಎಂಬ ನಂಬಿಕೆಯಿದ್ದಿತು. ಅಂಥ ಅನೇಕ ಜಾಗಗಳಿಗೆ ಹೋದರೂ ಅಶ್ವತ್ಥಾಮನ ದರ್ಶನ ಆಗಲೇ ಇಲ್ಲ. ಛಲಬಿಡದ ಕುಮಾರವ್ಯಾಸನು ತನ್ನ ಪ್ರಯತ್ನವನ್ನು ಮುಂದುವರಿಸುತ್ತಲೇ ಹೋದ.

ಒಮ್ಮೆ ಯಾವುದೋ ದೇವಾಲಯದಲ್ಲಿ ನಡೆಯುತ್ತಿದ್ದ ಧರ್ಮಕಾರ್ಯವೊಂದರಲ್ಲಿ ಭಾಗವಹಿಸಿದ್ದ ಕುಮಾರವ್ಯಾಸ, ಪ್ರಸಾದ ಸ್ವೀಕರಿಸಲೆಂದು ಊಟಕ್ಕೆ ಕುಳಿತಿದ್ದ, ಅವನು ಕುಳಿತಿದ್ದ ಎದುರಿನ ಸಾಲಿನಲ್ಲಿ ಇಬ್ಬರು ಮಕ್ಕಳು ಒಂದು ಬಾಳೆ ಎಲೆಗಾಗಿ ಕಿತ್ತಾಡುತ್ತಿದ್ದರು. ಕೊನೆಗೆ ಅವರಲ್ಲಿ ಒಬ್ಬನು ಆ ಎಲೆಯನ್ನು ಗಿಟ್ಟಿಸುವುದರಲ್ಲಿ ಜಯಶೀಲನಾದನು. ಅವರ ಜಗಳವನ್ನು ನೋಡುತ್ತಿದ್ದ ಅಲ್ಲೇ ಇದ್ದ ಮುದುಕನೊಬ್ಬ, ''ಭೇಷ್, ಛಲ ಎಂದರೆ ಹೀಗಿರಬೇಕು ಮಗು. ದುರ್ಯೋಧನನಲ್ಲಿ ಇಂಥ ಛಲವನ್ನು ನೋಡಿದ್ದೆ, ಈಗ ನಿನ್ನಲ್ಲಿ ಈ ಛಲವನ್ನು



ನೋಡುತ್ತಿದ್ದೇನೆ'' ಎನ್ನುತ್ತ ಆ ಗೆದ್ದ ಹುಡುಗನ ಬೆನ್ನು ತಟ್ಟಿ ಮುದ್ದಾಡಿದನು.

ಕುಮಾರವ್ಯಾಸನಿಗೆ ಮಿಂಚು ಹೊಡೆದಂತಾಗಿ ಅವನೇ ಅಶ್ವತ್ಥಾಮ ಎನ್ನುವುದರಲ್ಲಿ ಯಾವ ಅನುಮಾನವೂ ಉಳಿಯಲಿಲ್ಲ. ತಕ್ಷಣ ಅಲ್ಲೇ ಅವರ ಪಾದಗಳಿಗೆರಗುತ್ತ, ''ಸ್ವಾಮೀ, ತಾವು ಅಶ್ವತ್ಥಾಮ ಮಹಾಮುನಿಗಳಲ್ಲವೇ? ದಯಮಾಡಿ ನನಗೆ ಮಹಾಭಾರತದ ಕಥೆಯನ್ನು ಹೇಳಬೇಕು. ಅದನ್ನು ಬರೆಯುವಂತೆ ನನಗೆ ಕೃಷ್ಣ ಪರಮಾತ್ಮನ ಪ್ರೇರಣೆಯಾಗಿದೆ'' ಎಂದು ಪ್ರಾರ್ಥಿಸಿದನು.

ಶುರುವಿನಲ್ಲಿ ಆ ವೃದ್ಧನು ನಿರಾಕರಿಸಿದ. ಆದರೆ ಕುಮಾರವ್ಯಾಸ ಬಿಡದಿದ್ದಾಗ ಆ ವೃದ್ಧನು ಮಣಿಯಲೇಬೇಕಾಯಿತು. ಅವರು ಕುಮಾರವ್ಯಾಸನ ಕಡೆ ತಿರುಗಿ ''ವತ್ಸ, ನೀನು ಹೇಳುತ್ತಿರುವಂತೆ ನಾನು ಅಶ್ವತ್ಥಾಮನೇ. ನಿನ್ನ ಅಪೇಕ್ಷೆಯಂತೆ ನಾನು ನಿನಗೆ ಮಹಾಭಾರತದ ಕಥೆಯನ್ನು ವಿಸ್ತಾರವಾಗಿ ಹೇಳುತ್ತೇನೆ. ನಾನೂ ನಿನ್ನಂಥ ಒಬ್ಬ ಭಕ್ತನಿಗಾಗಿ ಹುಡುಕುತ್ತಿದ್ದೆ. ಆದರೆ ನನ್ನದೊಂದು ಷರತ್ತು. ನನ್ನ ಗೆಳೆಯ ದುರ್ಯೋಧನನ ಸಾವಿನತನಕ ಮಾತ್ರ ನಾನು ಮಹಾಭಾರತ ಕಥೆಯನ್ನು ಹೇಳಬಲ್ಲೆ, ಅಲ್ಲಿಂದ ಮುಂದೆ ನಾನು ಹೇಳಲಾರೆ, ಹೇಳುವುದಕ್ಕಾಗುವುದೂ ಇಲ್ಲ. ನಮ್ಮ ಮಧ್ಯ ಪರದೆಯೊಂದು ಇರುತ್ತದೆ, ನೀನು ಯಾವುದೇ ಕಾರಣಕ್ಕೂ ಅದನ್ನು ಸರಿಸಿ ನನ್ನನ್ನು ನೋಡಬಾರದು. ಅದಕ್ಕೆ ನೀನು ಒಪ್ಪುವುದಾದರೆ ಮಹಾಭಾರತದ ಕಥೆಯನ್ನು ಬರೆಯಲು ನಾಳೆಯಿಂದಲೇ ಪ್ರಾರಂಭಿಸೋಣ'' ಎಂದ. ಅಶ್ವತ್ಥಾಮನ ಮಾತುಗಳಿಂದ ಕುಮಾರವ್ಯಾಸನಿಗಾದ ಸಂತೋಷಕ್ಕೆ ಮಿತಿಯೇ ಇಲ್ಲವಾಯಿತು. ಅಶ್ವತ್ಥಾಮನಿಗೆ ಮತ್ತೆ ಮತ್ತೆ ನಮಸ್ಕರಿಸುತ್ತ ಎಲ್ಲಕ್ಕೂ ಒಪ್ಪಿಗೆ ನೀಡಿದ. ಜೀವನದಲ್ಲಿ ಮಹತ್ತರವಾದದ್ದೇನಾದರೂ ಸಾಧಿಸಬೇಕಾದರೆ ಅದಕ್ಕೆ ಗುರುದರ್ಶನ, ಅವರ ಆಶೀರ್ವಾದ ಬಹಳ ಮುಖ್ಯ. ಇದಕ್ಕೆ ನಾವು ನಿರಂತರ ಅಂಥ ಒಂದು ಕೃಪಾಕಟಾಕ್ಷಕ್ಕೆ ಧ್ಯಾನಿಸುತ್ತಾ, ಅದನ್ನು ಸಾಧಿಸುವ ಒಂದೇ ಮನಸ್ಸಿನಿಂದ ಪರಿಶ್ರಮ ಪಟ್ಟಾಗ ಮಾತ್ರ ಇಂಥ ಗುರುದರ್ಶನಗಳು ಸಾಧ್ಯ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಅಂತ ಬಲ್ಲವರು ಹೇಳಿರುವುದು ಅದಕ್ಕೇ ಅಲ್ಲವೇ?

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಎರಡು ಸರಣಿಗಳಿಗೆ ಪಂತ್ ಅಲಭ್ಯ

ದೆಹಲಿ: ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಗಮನಾರ್ಹ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದ್ದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ರಿಷಭ್ ಪಂತ್,

ವೆಸ್ಟ್ ಇಂಡೀಸ್ ಹಾಗೂ ಆಸ್ಟ್ರೇಲಿಯಾ ವಿರುದ್ಧ ಮುಂಬರುವ ಟೆಸ್ಟ್ ಹಾಗೂ ವೈಟ್‌ಬಾಲ್ ಸರಣಿಗಳಿಗೆ ಅಲಭ್ಯರಾಗಲಿದ್ದಾರೆಂದು ವರದಿಯಾಗಿದೆ. ಇಂಗ್ಲೆಂಡ್ ವಿರುದ್ಧದ ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆದಿದ್ದ ನಾಲ್ಕನೇ ಟೆಸ್ಟ್ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ಗಾಯಗೊಂಡ ಕಾರಣ ಕೊನೆಯ ಟೆಸ್ಟ್ ಪಂದ್ಯದಲ್ಲಿ ರಿಷಭ್ ಪಂತ್ ಆಡಿರಲಿಲ್ಲ. ಹಾಗಾಗಿ ಅವರು ಗಾಯದಿಂದ ಸಂಪೂರ್ಣವಾಗಿ ಗುಣಮುಖರಾಗಲು ಇನ್ನೂ ಮೂರರಿಂದ ನಾಲ್ಕು ವಾರಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅಕ್ಟೋಬರ್ 2ರಂದು ಆರಂಭವಾಗುವ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಗೆ ಅಲಭ್ಯರಾಗಲಿದ್ದಾರೆ. ಅಲ್ಲದೆ ಆಸ್ಟ್ರೇಲಿಯಾ ವಿರುದ್ಧ ವೈಟ್‌ಬಾಲ್ ಸರಣಿಗಳಿಗೂ ಕೂಡ ಅವರು ಅಲಭ್ಯರಾಗಲಿದ್ದಾರೆ. ಆದರೆ ನವೆಂಬರ್ 14ರಂದು ದಕ್ಷಿಣ ಆಫ್ರಿಕಾ ವಿರುದ್ಧ ತವರಿನಲ್ಲಿ ಆರಂಭವಾಗಲಿರುವ ಟೆಸ್ಟ್ ಸರಣಿಗೆ ರಿಷಭ್ ಪಂತ್ ಭಾರತ ತಂಡಕ್ಕೆ ಲಭ್ಯರಾಗುವ ಸಾಧ್ಯತೆ ಇದೆ. ಹಾಗಾಗಿ ಮುಂದಿನ 4ರಿಂದ 5 ವಾರಗಳ ಕಾಲ ರಿಷಭ್ ಪಂತ್ ವಿಶ್ರಾಂತಿಯನ್ನು ಪಡೆಯಲಿದ್ದಾರೆ.

ದಸರಾ ಕ್ರೀಡಾಕೂಟ: ಫೋಗಟ್ ಅತಿಥಿ

ಮೈಸೂರು: ಈ ಸಲದ ದಸರಾ ಕ್ರೀಡಾಕೂಟ ಉದ್ಘಾಟನಾ ಸಮಾರಂಭವು ಸೆ. 22ರಂದು ಸಂಜೆ 4 ಗಂಟೆಗೆ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರೀಡಾಕೂಟ ಉದ್ಘಾಟಿ ಸಲಿದ್ದು, ಕಾರ್ಯಕ್ರ ಮದಲ್ಲಿ ಒಲಿಂಪಿ ಯನ್ ಕುಸ್ತಿಪಟು ವಿನೇಶ್ ಫೋಗಟ್ ವಿಶೇಷ ಅತಿಥಿ ಯಾಗಿ ಪಾಲ್ಗೊಳ್ಳಲಿ ದ್ದಾರೆ. ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸೆ. 22ರಿಂದ 25ರವರೆಗೆ ಕ್ರೀಡಾಕೂಟ ನಡೆಯಲಿದೆ. ಮೂರು ಒಲಿಂಪಿಕ್ಸ್ ಟೂರ್ನಿಗಳಲ್ಲಿ ಕುಸ್ತಿಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ವಿನೇಶ್ ಫೋಗಟ್ ಅವರು, ಕಾಮನ್‌ವೆಲ್ತ್ ಮತ್ತು ಏಷ್ಯನ್ ಪಂದ್ಯಗಳಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಮಹಿಳಾ ಕುಸ್ತಿಪಟು ಎಂಬ ಹೆಗ್ಗಳಿಕೆ ಹೊಂದಿದ್ದಾರೆ. 2019, ಫೆಬ್ರವರಿಯಲ್ಲಿ ರಂದು ನಡೆದ ಲಾರೆನ್ಸ್ ವರ್ಲ್ಡ್ ಚಾಂಪಿಯನ್‌ಶಿಪ್ ಪ್ರಶಸ್ತಿಗೆ ನಾಮ ನಿರ್ದೇಶನಗೊಂಡ ಮೊದಲ ಭಾರತೀಯ ಕ್ರೀಡಾಪಟು ಎಂದೆನಿಸಿದ್ದಾರೆ.

2024ರ ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆ.ಜಿ. ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ್ದ ವಿನೇಶಾ ಫೋಗಟ್ ನಿಗದಿ ಮಾಡಿದ್ದಕ್ಕಿಂತ ಕೊಂಚ ಹೆಚ್ಚು ದೇಹತೂಕ ಹೊಂದಿದ್ದ ಕಾರಣಕ್ಕೆ ಟೂರ್ನಿ ಯಿಂದ ಹೊರಬಿದ್ದು, ಕುಸ್ತಿಗೆ ನಿವೃತ್ತಿ ಘೋಷಿಸಿ ದ್ದರು. ಆ ಬಳಿಕ ರಾಜಕೀಯ ಪ್ರವೇಶಿಸಿದ್ದ ಅವರು, 2024ರ ಅಕ್ಟೋಬರ್‌ನಲ್ಲಿ ಹರಿಯಾ ಣದ ಜುಲಾನ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಆಯ್ಕೆಯಾಗಿದ್ದಾರೆ.

ಏಷ್ಯಾಕಪ್ ಟಿ20 ಸೂಪರ್-4 ಪಂದ್ಯ | ಟೀಮ್ ಇಂಡಿಯಾ ಫೀಲ್ಡಿಂಗ್ ಆಯ್ಕೆ

ಪಾಕ್: ಸಾಮಾನ್ಯ ಮೊತ್ತ

ದುಬೈ: ಭಾನುವಾರ ಇಲ್ಲಿ ನಡೆದ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್-4 ಪಂದ್ಯಾವಳಿಯಲ್ಲಿ ಟಾಸ್ ಗೆದ್ದ ಭಾರತದ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಪಾಕಿಸ್ತಾನವನ್ನು ಬ್ಯಾಟಿಂಗ್‌ಗೆ ಇಳಿಸಿದರು. ಮೊದಲು ಬ್ಯಾಟಿಂಗ್ ಆರಂಭಿಸಿದ ಪಾಕಿಸ್ತಾನವು ಉತ್ತಮ ಆರಂಭ ಪಡೆಯಿತು.

ಪತ್ರಿಕೆಯು ಮುದ್ರಣಕ್ಕೆ ಹೋಗುವ ವೇಳೆ ಪಾಕಿಸ್ತಾನವು 15.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 119 ರನ್ ಗಳಿಸಿದೆ.

ಪಾಕಿಸ್ತಾನ ಪರ ಸಾಹಿಬ್ಜಾದಾ ಫರ್ಹಾನ್ ಮತ್ತು ಫಖರ್ ಝಮಾನ್ ಆರಂಭಿಕ ಬ್ಯಾಟರ್‌ಗಳಾಗಿ ಕ್ರೀಸ್‌ಗೆ ಬಂದರು. ಭಾರತದ ಪರ ಮೊದಲ ಓವರ್ ಅನ್ನು ಹಾರ್ದಿಕ್ ಪಾಂಡ್ಯ ಆರಂಭಿಸಿದರು. ಮೊದಲ ಓವರ್‌ನಲ್ಲಿ ಪಾಂಡ್ಯ 6 ರನ್ ನೀಡಿದರು. ಎರಡನೇ ಓವರ್ ಬುಮ್ರಾ ಮಾಡಿದರು. ಆ ಓವರ್‌ನಲ್ಲಿ ಬುಮ್ರಾ ಎರಡು ಬೌಂಡರಿ ಸಹಿತ 11 ರನ್ ನೀಡಿ ದುಬಾರಿ ಬೌಲರ್ ಎನಿಸಿದರು.

ಬಳಿಕ 3ನೇ ಓವರ್ ಅನ್ನು ಹಾರ್ದಿಕ್ ಪಾಂಡ್ಯ ಎಸೆದರು. ಆದರೆ 2ನೇ ಚೆಂಡಿನಲ್ಲಿ ಹಾರ್ದಿಕ್ ಪಾಂಡ್ಯ ಎಸೆದ ಚೆಂಡನ್ನು ಫಖರ್ ಸರಿಯಾಗಿ ಊಹಿಸದ ಕಾರಣ ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಹಿಡಿದ ಕ್ಯಾಚ್‌ಗೆ ಔಟ್ ಆದರು. ಫಖರ್ 15 ರನ್ ಗಳಿಸಲಷ್ಟೇ ಶಕ್ತರಾದರು. ಅವರು ವಿಕೆಟ್ ಕಳೆದುಕೊಳ್ಳುವ ಹೊತ್ತಿಗೆ ಪಾಕ್ ತಂಡದ ಮೊತ್ತ ಕೇವಲ 21 ರನ್ ಆಗಿತ್ತು.

ಆ ಬಳಿಕ ಮೂರನೇ ವಿಕೆಟ್‌ಗೆ ಫಹಾರ್ನ್ ಮತ್ತು ಸಯಿಮ್ ಅಯೂಬ್ ಜತೆಯಾಟ ಉತ್ತಮವಾಗಿ ಸಾಗಿತು. ಭಾರತ ಪರವಾಗಿ 5ನೇ ಓವರ್ ಬೌಲ್ ಮಾಡಿದ ವರುಣ್ ಚಕ್ರವರ್ತಿ ಬೌಲಿಂಗ್‌ನಲ್ಲಿ ಸಯೀಮ್ ಅಯೂಬ್ ತಿಲಕ್ ವರ್ಮಾಗೆ ಸುಲಭ ಕ್ಯಾಚ್ ನೀಡಿದ್ದರು. ಆದರೆ ಅದನ್ನು ಹಿಡಿಯುವಲ್ಲಿ ತಿಲಕ್ ವರ್ಮಾ ವಿಫಲರಾದರು.

ಫರ್ಹಾನ್: ಪಾಕ್ ಪರ ಅರ್ಧಶತಕ

ಆ ಬಳಿವೂ ಸಯಿಮ್ ಅಯೂಬ್ ಮತ್ತು ಫರ್ಹಾನ್ ಜತೆಯಾಟ ಮುಂದುವರಿಯಿತು. ಫರ್ಯಾನ್ ತಮ್ಮ ಭರ್ಜರಿ ಬ್ಯಾಟಿಂಗ್ ಮೂಲಕ ಅರ್ಧ ಶತಕವನ್ನು ಪೂರೈಸಿದರು.

ರೆಫ್ರಿ ಬದಲಾವಣೆ ಇಲ್ಲ: ಲೀಗ್ ಹಂತದ ಪಂದ್ಯದಲ್ಲಿ ಭಾರತ ತಂಡದ ಆಟಗಾರರು ಪಾಕಿಸ್ತಾನದ ಆಟಗಾರರ ಜೊತೆ ಹಸ್ತಲಾಘವ ಮಾಡದಿರುವ ಘಟನೆಗೆ ಪಂದ್ಯದ ಮ್ಯಾಚ್ ರೆಫ್ರಿಯಾಗಿದ್ದ ಪೈಕ್ರಾಫ್ಟ್ ಅವರೇ ಕಾರಣ, ಹಾಗಾಗಿ ಅವರನ್ನು ತಾನು ಆಡುವ ಎಲ್ಲಾ ಪಂದ್ಯಗಳಿಂದ ವಜಾ ಮಾಡುವಂತೆ ಪಾಕಿಸ್ತಾನ ಕ್ರಿಕೆಟ್ ಬೋರ್ಡ್ ಐಸಿಸಿಗೆ ಮನವಿ ಮಾಡಿತ್ತು. ಆದರೆ ಪಿಸಿಬಿಯ ಮನವಿಯನ್ನು ಐಸಿಸಿ ಭಾನುವಾರ ನಡೆದ ಸೂಪರ್-4ರ ಪಂದ್ಯದಲ್ಲೂ ತಳ್ಳಿ ಹಾಕಿತ್ತು. ಪಿಸಿಬಿ ಪದೇ ಪದೇ ವಿನಂತಿಸಿದರ ಹೊರತಾಗಿಯೂ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಭಾನುವಾರದ ಪಂದ್ಯಕ್ಕೂ ಮ್ಯಾಚ್ ರೆಫ್ರಿಯಾಗಿ ಆ್ಯಂಡಿ ಪೈಕ್ರಾಫ್ಟ್ ಅವರನ್ನೇ ಮುಂದುವರಿಸಿದೆ.

ರೆಫ್ರಿ ಶಾಲಾ ಶಿಕ್ಷಕನಲ್ಲ: ಅಶ್ವಿನ್

ಏಷ್ಯಾ ಕಪ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ಲೀಗ್ ಪಂದ್ಯದ ಟಾಸ್ ವೇಳೆ ಎರಡು ದೇಶಗಳ ನಾಯಕರು ಹಸ್ತಲಾಘವ ಮಾಡಲೇಬೇಕು ಎಂದು ಒತ್ತಾಯಿಸಲು ಮ್ಯಾಚ್ ರೆಫ್ರಿ ಆ್ಯಂಡಿ ಪೈಕ್ರಾಫ್ಟ್ ಅವರು ಶಾಲಾ ಶಿಕ್ಷಕ ಅಥವಾ ಕಾಲೇಜು ಪ್ರಾಂಶುಪಾಲರಲ್ಲ, ಅವರ ಕೆಲಸವನ್ನು ಅವರು ಸರಿಯಾಗಿ ನಿರ್ವಹಿಸಿದ್ದಾರೆ ಎಂದು ಭಾರತದ ಮಾಜಿ ಕ್ರಿಕೆಟಿಗ ರವಿಚಂದ್ರ ಅಶ್ವಿನ್ ಆ ಕುರಿತಾಗಿ ಅಭಿಪ್ರಾಯ ವ್ಯಕ್ತಪಡಿಸಿ, ಪೈಕ್ರಾಫ್ಟ್ ಬೆಂಬಲಕ್ಕೆ ನಿಂತಿದ್ದಾರೆ.

ಭಾರತ ತಂಡ: ಅಭಿಷೇಕ್ ಶರ್ಮಾ, ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್(ನಾಯಕ), ತಿಲಕ್ ವರ್ಮಾ, ಸಂಜು ಸ್ಯಾಮ್ಸನ್(ವಿಕೆಟ್ ಕೀಪರ್), ಶಿವಂ ದುಬೆ, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಜಸ್ಪ್ರೀತ್ ಬುಮ್ರಾ, ಕುಲ್‌ದೀಪ್ ಯಾದವ್, ವರುಣ್ ಚಕ್ರವರ್ತಿ

ಪಾಕಿಸ್ತಾನ ತಂಡ: ಸೈಯಮ್ ಆಯುಬ್, ಸಾಹಿಬ್ಜಾದಾ ಫರ್ಹಾನ್, ಫಖರ್ ಝಮಾನ್, ಸಲ್ಮಾನ್ ಅಘಾ (ನಾಯಕ), ಹುಸೇನ್ ತಲಾತ್, ಮೊಹಮ್ಮದ್ ಹ್ಯಾರಿಸ್ (ವಿಕೆಟ್ ಕೀಪರ್), ಮೊಹಮ್ಮದ್ ನವಾಝ್, ಫಹೀಮ್ ಅಶ್ರಫ್, ಶಾಹೀನ್ ಅಫ್ರಿದಿ, ಹ್ಯಾರಿಸ್ ರೌಫ್, ಅಬ್ರಾರ್ ಅಹ್ಮದ್

ಮುಂದಿನ ಭಾನುವಾರ ಬಿಸಿಸಿಐಯಿಂದ ಅಧಿಕೃತ ಘೋಷಣೆ

ಮಿಥುನ್ ಮನ್ಹಾಸ್ ಬಿಸಿಸಿಐ ಅಧ್ಯಕ್ಷ?

ದೆಹಲಿ: ದೆಹಲಿಯ ಮಾಜಿ ಕ್ರಿಕೆಟಿಗ ಮಿಥುನ್ ಮನ್ಹಾಸ್ ಅವರು ಭಾರತೀಯ ಕ್ರಿಕೆಟ್



ನಿಯಂತ್ರಣ ಮಂಡಳಿಯ (ಬಿಸಿಸಿಐ) ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ. ಮನ್ಹಾಸ್ ಅವರು ಸರ್ವಾನುಮತದಿಂದ ಆಯ್ಕೆ ಯಾಗುವ ಸಾಧ್ಯತೆ ಹೆಚ್ಚು ಎಂದು ಎಂದು ಮೂಲಗಳು ತಿಳಿಸಿವೆ. ದೆಹಲಿಯಲ್ಲಿ ಈ ಕುರಿತು ಚರ್ಚಿಸಲು ಬಿಸಿಸಿಐನ ಉನ್ನತ ಅಧಿಕಾರಿಗಳು ಮತ್ತು ಮಾಜಿ ಹಿರಿಯ ಪದಾಧಿಕಾರಿಗಳ ಸಭೆ ನಡೆದಿದೆ

ಸೆಪ್ಟೆಂಬರ್ 28ರ ಭಾನುವಾರ ದೆಹಲಿಯಲ್ಲಿ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಬಿಸಿಸಿಐ ತನ್ನ ಹೊಸ ಪದಾಧಿಕಾರಿಗಳ ಘೋಷಣೆ ಮಾಡಲಿದೆ. ವಿಶ್ವ ಕ್ರಿಕೆಟ್‌ನಲ್ಲಿ ಅತ್ಯಂತ ಗಮನಾರ್ಹ ಹುದ್ದೆಗಳಲ್ಲಿ ಒಂದಾದ ಬಿಸಿಸಿಐ ಅಧ್ಯಕ್ಷ ಗಾದಿಗೆ ನಾಮಪತ್ರ ಸಲ್ಲಿಸಿರುವ ಮಿಥುನ್ ಅವರಿಗೆ ಬಿಸಿಸಿಐನ ಉನ್ನತ ಅಧಿಕಾರಿಗಳ ಬೆಂಬಲವಿದೆ. ಈ ಕಾರಣಕ್ಕಾಗಿ 45 ವರ್ಷ ವಯಸ್ಸಿನ ಮಿಥುನ್ ಮನ್ಹಾಸ್ ಅವರು ರೋಜರ್ ಬಿನ್ನಿ ಅವರ ಉತ್ತರಾಧಿಕಾರಿಯಾಗುವ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ.

ಮನ್ಹಾಸ್ 157 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. 1979ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಜನಿಸಿದ ಮಿಥುನ್ ಮನ್ಹಾಸ್ ಭಾರತೀಯ ದೇಶೀಯ ಕ್ರಿಕೆಟ್‌ನಲ್ಲಿ ಜನಪ್ರಿಯರಾಗಿದ್ದರು. ದೆಹಲಿಯಲ್ಲಿ ಪ್ರಾರಂಭವಾಗಿ ಜಮ್ಮು ಮತ್ತು ಕಾಶ್ಮೀರದಲ್ಲಿ ಕೊನೆಗೊಂಡ 18 ವರ್ಷಗಳ ಅವರ ಪ್ರಥಮ ದರ್ಜೆ ವೃತ್ತಿಜೀವನದಲ್ಲಿ, 157 ಪಂದ್ಯಗಳ ಮೂಲಕ 9,714 ರನ್ ಗಳಿಸಿದ್ದಾರೆ. ಅದರಲ್ಲಿ 27 ಶತಕಗಳು ಮತ್ತು 49 ಅರ್ಧಶತಕಗಳು ಇದ್ದವು. ಅವರು ಬಲಗೈ ಬ್ಯಾಟಿಂಗ್ ಮತ್ತು ಆಫ್ ಸ್ಪಿನ್ ಬೌಲಿಂಗ್ ಮಾಡಿದ್ದರು.

ಖಜಾಂಚಿ ಆಗಿ ಭಟ್ ಆಯ್ಕೆ ಸಾಧ್ಯತೆ

ಕರ್ನಾಟಕ ಮಾಜಿ ಕ್ರಿಕೆಟಿಗ ಎ. ರಘುರಾಮ್ ಭಟ್ ಅವರಿಗೆ ಬಿಸಿಸಿಐ ಖಜಾಂಚಿ ಸ್ಥಾನ ಸಿಗುವ ಸಾಧ್ಯತೆಯಿದೆ. 1979ರಲ್ಲಿ ರಣಜಿ ಟ್ರೋಫಿ ಮೂಲಕ ಕ್ರಿಕೆಟ್ ಪ್ರವೇಶಿಸಿದ್ದ ಭಟ್, ತನ್ನ ವೃತ್ತಿಜೀವನದಲ್ಲಿ ಆಲ್‌ರೌಂಡರ್ ಆಗಿಯೂ ಮಿಂಚಿದ್ದಾರೆ. 1983ರಲ್ಲಿ ಭಾರತ ತಂಡಕ್ಕೂ ಆಯ್ಕೆ ಆಗಿ ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ಆಡಿದ್ದಾರೆ. ಕರ್ನಾಟಕ ರಾಜ್ಯ ಕ್ರಿಕೆಟ್ ಕ್ರಿಕೆಟ್ ಅಸೋಸಿಯೇಷನ್‌ನಲ್ಲೂ ವಿವಿಧ ಹುದ್ದೆಗಳನ್ನು ಯಶಸ್ವಿಯಾಗಿ ನಿಭಾಯಿಸಿದ ಹೆಗ್ಗಳಿಕೆ ಅವರದ್ದಾಗಿದೆ.

ಟೇಕ್ವಾಂಡೋ ಟೂರ್ನಿ: ಕೀರ್ತಿಗೆ ಚಿನ್ನ

ಬೆಂಗಳೂರು: ಸ್ಕೂಲ್ ಗೇಮ್ಸ್ ಫೆಡರೇಶನ್ ಆಫ್ ಇಂಡಿಯಾ ಟೂರ್ನಮೆಂಟ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಕೀರ್ತಿ ಎಂ.ಎಸ್. ಉತ್ತರ ಪ್ರದೇಶದ ಇಟಾವಾದ ಅಮ್ನೀವ್ ವಿಷನ್ ಶಾಲೆಯಲ್ಲಿ ನಡೆದ ಸಿಬಿಎಸ್‌ಇ ರಾಷ್ಟ್ರೀಯ ಟೇಕ್ವಾಂಡೋ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಗಳಿಸಿದ್ದಾರೆ. ಈ ಗೆಲುವಿನ ಮೂಲಕ, ಮುಂದಿನ ನವೆಂಬರ್‌ನಲ್ಲಿ ಜಮ್ಮು-ಕಾಶ್ಮೀರದಲ್ಲಿ ನಡೆಯಲಿರುವ ಸ್ಕೂಲ್ ಗೇಮ್ಸ್ ಫೆಡರೇಶನ್ ಆಫ್ ಇಂಡಿಯಾ ಟೂರ್ನಮೆಂಟ್‌ನಲ್ಲಿ ಸಿಬಿಎಸ್‌ಇ ಮಂಡಳಿಯನ್ನು ಪ್ರತಿನಿಧಿಸುವ ಕರ್ನಾಟಕದ ಏಕೈಕ ಸ್ಪರ್ಧಿ ಎನಿಸಿದ್ದಾರೆ. ತನ್ನ ಎಂಟನೇ ವಯಸ್ಸಿನಲ್ಲಿ ಮಾಸ್ಟರ್ ಜ್ಯೋತಿಮಣಿ ಮಾರ್ಕಂಡನ್ ಮತ್ತು ಸಹಾಯಕ ತರಬೇತುದಾರ ಹರ್ಷ.ಆರ್ ಅವರ ಮಾರ್ಗದರ್ಶನದಲ್ಲಿ ತನ್ನ ಟೇಕ್ವಾಂಡೋ ಪಯಣ ಪ್ರಾರಂಭಿಸಿದರು. ಶಿಸ್ತಿನ ಅಭ್ಯಾಸದಿಂದ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಜಯ ಸಾಧಿಸುತ್ತಾ ಹೋದರು. ವರ್ಷಗಳು ಕಳೆದಂತೆ, ಅವರು ಸಿಬಿಎಸ್‌ಇ ದಕ್ಷಿಣ ವಲಯ-2 ಚಾಂಪಿಯನ್‌ಶಿಪ್‌ಗಳಲ್ಲಿ 2022 ಮತ್ತು 2023ರಲ್ಲಿ ಚಿನ್ನದ ಪದಕಗಳು, 2025ರ ಸಿಬಿಎಸ್‌ಇ ದಕ್ಷಿಣ ವಲಯದಲ್ಲಿ ಬೆಳ್ಳಿ ಪದಕವನ್ನೂ ಗಳಿಸಿದ್ದರು.

ನ. 7ರಿಂದ 9ರವರೆಗೆ ಕೋರಮಂಗಲ ಕ್ರೀಡಾಂಗಣದಲ್ಲಿ ಕ್ರೀಡೋತ್ಸವ

2ನೇ ರಾಷ್ಟ್ರೀಯ ಪೈಥಿಯನ್ ಕ್ರೀಡಾಕೂಟ

ಬೆಂಗಳೂರು: ನಗರದ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನವೆಂಬರ್ 7ರಿಂದ 9ರ ವರೆಗೆ ಕ್ರಿಕೆಟ್, ಪ್ರಾಚೀನ ಸಮರ ಕಲೆಗಳು, ಪಾರಂಪರಿಕ ಆಟೋಟಗಳು, ನೃತ್ಯ, ಸಂಗೀತ, ಸಂಸ್ಕೃತಿಕ ಸ್ಪರ್ಧೆಗಳನ್ನೊಳಗೊಂಡ ಹಲವು ವೈಶಿಷ್ಟ್ಯಗಳನ್ನು ಒಂದೇ ವೇದಿಕೆಯಡಿ ಪ್ರಸ್ತುತಪಡಿಸುವ 2ನೇ ರಾಷ್ಟ್ರೀಯ ಸಾಂಸ್ಕೃತಿಕ ಪೈಥಿಯನ್ ಕ್ರೀಡಾ ಕೂಟ-2025 ಆಯೋಜಿಸಲಾಗಿದೆ.

ಮೂರು ದಿನಗಳ ಕಾಲ ಆಧುನಿಕ ಗದಾಯುದ್ಧ, ಗೋಣಿಚೀಲ ಓಟ, ಕಪ್ಪೆ ಜಿಗಿತ, ಟೆನಿಸ್, ವಾಲಿಬಾಲ್, ಸೈಕ್ಲೋಥಾನ್, ಮ್ಯಾರಥಾನ್ ಸೇರಿದಂತೆ ಎಂಟು ಬಗೆಯ ಕಲಾ ಪ್ರಕಾರಗಳ ಕ್ರೀಡಾಕೂಟ ನಡೆಯಲಿದ್ದು, ದೇಶ, ವಿದೇಶಗಳ ಹಲವಾರು ಗಣ್ಯರು ಅದರಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಆ ಕ್ರೀಡಾ ಹಬ್ಬಕ್ಕೆ ಚಾಲನೆ ನೀಡಲಿದ್ದಾರೆ ಎಂದು ಪೈಥಿಯನ್ ಕ್ರೀಡಾಕೂಟಗಳ ಸಂಸ್ಥಾಪಕರಾದ ಬಿಜೇಂದರ್ ಗೋಯಲ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದಕ್ಕಾಗಿ ಒಂದು ವಿಶೇಷ ಒಟಿಟಿ ವೇದಿಕೆಯನ್ನು ಆರಂಭಿಸಲಾಗಿದ್ದು, ವೈಶಿಷ್ಟ್ಯಪೂರ್ಣ ಸಂಸ್ಕೃತಿಯನ್ನು ಉಳಿಸಲು ಶೀಘ್ರದಲ್ಲೇ 'ಪೈಥಿಯನ್' ವಾಹಿಯನ್ನೂ ಪ್ರಾರಂಭಿಸುತ್ತಿದ್ದೇವೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಕ್ರೀಡಾಕೂಟದ ಸಂಘಟನಾ ವಿಭಾಗದ ಅಧ್ಯಕ್ಷ ಬಿ. ಹಚ್. ಅನಿಲ್ ಕುಮಾರ್ ಮಾತನಾಡಿ, ಪೈಥಿಯನ್ ಕ್ರೀಡೆಗಳು ಕಲಾವಿದರು ಮತ್ತು ಸಂಪ್ರದಾಯಿಕ ಆಟಗಾರರಿಗೆ ಸೂಕ್ತ ವೇದಿಕೆಯಾಗಿದೆ. ಇದು ಕಲೆ ಮತ್ತು ಸಂಪ್ರದಾಯಿಕ ಕ್ರೀಡೆಗಳಿಗೆ ಸಮಾನ ಗೌರವ ನೀಡುತ್ತದೆ. ಕರ್ನಾಟಕದ ಕಲಾವಿದರು ಮತ್ತು ಯುವ ಜನಾಂಗಕ್ಕೆ ಇದು ಇತಿಹಾಸ ಸೃಷ್ಟಿಸುವ ಅವಕಾಶ ಎಂದರು. ಹರಿಯಾಣದ ಆಹಾರ ಇಲಾಖೆ ಆಯುಕ್ತರಾದ ರಾಜೇಶ್ ಗೋಪಾಲ್ ಕೂಡಾ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಿಟಾಕೀಸ್

ಕ್ಯಾಸೆಟ್‌ನಲ್ಲಿ ಫುಲ್ ಮೀಲ್ಸ್

ಹಿಂದೆ ಸಿನಿಮಾಗಳ ಹಾಡುಗಳು ಕ್ಯಾಸೆಟ್ ಮೂಲಕ ಸಂಗೀತ ಪ್ರಿಯರನ್ನು ತಲುಪುತ್ತಿದ್ದವು. ಚಿತ್ರದ ಆಡಿಯೊ ಹಿಟ್ ಆಯಿತೊ ಇಲ್ಲವೊ ಎಂಬುದು ಕ್ಯಾಸೆಟ್‌ಗಳ ಮಾರಾಟ ಮೇಲೆ ನಿರ್ಧಾರವಾಗುತ್ತಿತ್ತು. ಆದರೆ ಕಾಲ ಬದಲಾದಂತೆ ಕ್ಯಾಸೆಟ್‌ಗಳು ಮರೆಯಾಗಿವೆ. ಈಗ ಫುಲ್ ಮೀಲ್ಸ್ ಚಿತ್ರತಂಡ ಕ್ಯಾಸೆಟ್ ಯುಗವನ್ನು ಮತ್ತೆ ಮರುಕಳುಹಿಸುವಂತೆ ಮಾಡಿದೆ. ಚಿತ್ರದ ವಾಹ್ ಏನೋ ಹವಾ.. ಎಂಬ ಹಾಡನ್ನು ಕ್ಯಾಸೆಟ್‌ನಲ್ಲಿ ಬಿಡುಗಡೆ ಮಾಡುವ ಮೂಲಕ ಎಲ್ಲರನ್ನೂ ಹಳೆಯ ನೆನಪುಗಳಿಗೆ ಕರೆದೊಯ್ದಿದೆ. ಆ ಮೂಲಕ ಸಿನಿಪ್ರಿಯರನ್ನು ಸೆಳೆದಿದೆ.

ಸಂಗೀತ ನಿರ್ದೇಶಕ ಗುರುಕಿರಣ್ ಚಿತ್ರದ ಹಾಡನ್ನು ಬಿಡುಗಡೆ ಮಾಡಿ, ಟೇಪ್ ರೆಕಾರ್ಡರ್‌ನಲ್ಲಿ ಹಾಡನ್ನು ಕೇಳಿಸುವ ಮೂಲಕ ಬಿಡುಗಡೆ ಗಮನಸೆಳೆದರು. ಎಲ್ಲರನ್ನೂ ಕೆಲಕಾಲ ಹಳೆಯ ನೆನಪುಗಳನ್ನು ಮೆಲಕು ಹಾಕುವಂತೆ ಮಾಡಿದರು. ವಾಹ್ ಏನೋ ಹವಾ... ಮೆಲೋಡಿ ಪ್ರೇಮಗೀತೆಯಾಗಿದ್ದು, ಸಿನಿಪ್ರಿಯರ ಮನಗೆದ್ದಿದೆ. ಕವಿರಾಜ್ ಸಾಹಿತ್ಯದ ಈ ಹಾಡಿಗೆ, ಗುರುಕಿರಣ್ ಸಂಗೀತ ಸಂಯೋಜಿಸಿದ್ದು, ವಿಜೇತ್ ಅರಸ್ ಮತ್ತು ಸುನಿಧಿ ಗಣೇಶ್ ದನಿಯಲ್ಲಿ ಮಧುರವಾಗಿ ಮೂಡಿಬಂದಿದೆ.

ಸಂಗೀತವನ್ನು ಪ್ರಸ್ತುತಪಡಿಸುವ ರೀತಿ ಬದಲಾಗಬಹುದು. ಆದರೆ ಸಂಗೀತ ಎಂದಿಗೂ ಬದಲಾಗುವುದಿಲ್ಲ, ಈಗಿನ ಪೀಳಿಗೆಯ ಟ್ರೆಂಡ್‌ಗೆ ತಕ್ಕಂತೆ ಮಾಡಿರುವ ಫುಲ್ ಮೀಲ್ಸ್‌ನ ಹಾಡುಗಳನ್ನು ಪ್ರೇಕ್ಷಕರು ಖಂಡಿತಾ ಮೆಚ್ಚುಕೊಳ್ಳುತ್ತಾರೆ ಎಂದು ಗುರುಕಿರಣ್ ಹೇಳಿದರು.

ಎನ್.ವಿನಾಯಕ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಫುಲ್ ಮೀಲ್ಸ್, ವೆಡ್ಡಿಂಗ್ ಫೋಟೋಗ್ರಾಫರ್ ಸುತ್ತ ಸುತ್ತುವ ಕಥಾ ಹಂದರವನ್ನು ಒಳಗೊಂಡಿದೆ. ರೊಮ್ಯಾಂಟಿಕ್ ಕಾಮಿಡಿ ಸ್ಟೋರಿಯೂ ಚಿತ್ರದಲ್ಲಿ ಬೆರೆತಿದೆ. ಈ ಹಿಂದೆ ಸಂಕಷ್ಟಕರ ಗಣಪತಿ, ಪುನೀತ್ ರಾಜ್ ಕುಮಾರ್ ಅವರ ಪಿ.ಆರ್.ಕೆ ಪ್ರೊಡಕ್ಷನ್‌ನಲ್ಲಿ ನಿರ್ಮಾಣವಾಗಿದ್ದ ಫ್ಯಾಮಿಲಿ ಪ್ಯಾಕ್ ಚಿತ್ರಗಳಲ್ಲಿ ನಾಯಕನಾಗಿ ನಟಿಸಿದ್ದ ಲಿಖಿತ್, ಫುಲ್ ಮೀಲ್ಸ್ ಚಿತ್ರದಲ್ಲಿಯೂ ನಾಯಕನಾಗಿ ಅಭಿನಯಿಸಿದ್ದಾರೆ. ದಿಯಾ ಖುಷಿ, ತೇಜಸ್ವಿನಿ ಶರ್ಮ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ರಂಗಾಯಣ ರಘು, ಸೂರಜ್ ಲೋಕ್ರೆ, ವಿಜಯ್ ಚಂಡೂರ್, ರವಿ ಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಚಂದ್ರಕಲಾ ಮೋಹನ್, ಹೊನ್ನವಳ್ಳಿ ಕೃಷ್ಣ, ರಮೇಶ್ ಪಂಡಿತ್, ಗಣೇಶ್ ರಾವ್, ನಾಗೇಂದ್ರ ಅರಸ್, ಮೂಗು ಸುರೇಶ್ ಸೇರಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ದೀಪು.ಎಸ್. ಕುಮಾರ್ ಸಂಕಲನ, ಮನೋಹರ್ ಜೋಷಿ ಛಾಯಾಗ್ರಹಣ, ಹರೀಶ್ ಗೌಡ ಸಂಭಾಷಣೆ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ, ಅರ್ಜುನ್ ರಾಜ್ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಫುಲ್ ಮೀಲ್ಸ್ ನವೆಂಬರ್ ಇಪ್ಪತ್ತೊಂದ ರಂದು ತೆರೆಗೆ ಬರಲಿದೆ.

ಶಕ್ತಿಶಾಲಿನ ಅನಿತ್ ಪಡ್ಡಾ

ಸಯ್ಯಾರಾ ಚಿತ್ರದ ಮೂಲಕ ಸಮನಗೆದ್ದ ಬಾಲಿವುಡ್ ಬ್ಯೂಟಿ ಅನಿತ್ ಪಡ್ಡಾ, ನ್ಯಾಷನಲ್ ಕ್ರಶ್ ಆಗಿ ಹೊರಹೊಮ್ಮಿದ್ದಾರೆ. ಅನಿತ್ ಬಾಲಿವುಡ್‌ನ ಬೇಡಿಕೆಯ ನಟಿಯಾಗಿ ಗುರುತಿಸಿಕೊಂಡಿದ್ದು, ಹಲವು ಸಿನಿಮಾಗಳಲ್ಲಿ ನಟಿಸುವ ಅವಕಾಶ ಪಡೆದಿದ್ದಾರೆ. ಅದರಲ್ಲಿ ಶಕ್ತಿಶಾಲಿನಿ ಸಿನಿಮಾವೂ ಒಂದು. ಈ ಹಿಂದೆ ಸ್ತ್ರಿ 2, ಛಾವ ಅಂತಹ ಹಿಟ್ ಸಿನಿಮಾಗಳನ್ನು ನಿರ್ಮಾಣ ಮಾಡಿರುವ ಮಾಡೋಕ್ ಫಿಲಂಸ್, ಈಗ ಶಕ್ತಿಶಾಲಿನಿ ಶೀರ್ಷಿಕೆಯಲ್ಲಿ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಅಮೀತ್ ಪಡ್ಡಾ ನಾಯಕಿಯಾಗಿ ನಟಿಸಲಿದ್ದಾರೆ. ಈ ಹಿಂದೆ ಕಿಯಾರಾ ಅಡ್ವಾಣಿ ಚಿತ್ರದ ನಾಯಕಿ ಎನ್ನಲಾಗಿತ್ತು. ಕಿಯಾರಾ ಮಗುವಿನ ಲಾಲನೆ ಪಾಲನೆಯಲ್ಲಿ ಬ್ಯುಸಿಯಾಗಿರುವುದರಿಂದ ಅವರ ಬದಲಾಗಿ, ಅನಿತ್ ಅವರಿಗೆ ಚಿತ್ರತಂಡ ಮಣೆ ಹಾಕಿದೆ. ಶಕ್ತಿಶಾಲಿನಿ ಫ್ಯಾಂಟಿಸಿ ಕಥೆಯ ಜತೆಗೆ ಹಾರರ್ ಅಂಶಗಳನ್ನು ಒಳಗೊಂಡಿದೆ. ಈ ವರ್ಷಾಂತ್ಯಕ್ಕೆ ಶಕ್ತಿಶಾಲಿನಿ ಚಿತ್ರೀಕರಣ ಆರಂಭಿಸಿದೆ. ಚಿತ್ರಕ್ಕಾಗಿ ಅದ್ದೂರಿ ಸೆಟ್ ಸಿದ್ಧವಾಗುತ್ತಿದ್ದು ಅಲ್ಲಿಯೇ ಶೂಟಿಂಗ್ ನಡೆಯಲಿದೆ. ಸಯ್ಯಾರಾ ಚಿತ್ರದಲ್ಲಿ ಕ್ಯೂಟ್ ಆಗಿ ಹಾಟ್ ಲುಕ್‌ನಲ್ಲಿ ಮಿಂಚಿದ್ದ ಅನಿತ್ ಪಡ್ಡಾ ಈ ಸಿನಿಮಾದಲ್ಲಿ ಹೇಗೆ ಕಂಗೊಳಿಸಲಿದ್ದಾರೆ ಎಂಬ ಕುತೂಹಲವಿದೆ.

ಕರಾಸ್ತ್ರ ಮಹಿಳೆಯರ ರಕ್ಷಣೆಯ ಅಸ್ತ್ರ

ಪ್ರಸ್ತುತ ಕಾಲಘಟ್ಟದಲ್ಲಿ ಮಹಿಳೆಯರಿಗೆ ತಮಗೆ ಎಂಥದೇ ಆಪತ್ತಿನ ಸಂದರ್ಭ ಎದುರಾದರೂ, ಹೇಗೆ ತಮ್ಮನ್ನು ತಾವು ಸ್ವಯಂರಕ್ಷಣೆ ಮಾಡಿಕೊಳ್ಳಬೇಕು ಎಂಬ ಕಥೆಯನ್ನು ಒಳಗೊಂಡ ಕರಾಸ್ತ್ರ ಚಿತ್ರ ತೆರೆಗೆ ಸಿದ್ಧವಾಗಿದೆ. ನಾರಾಯಣ ಪೂಜಾರ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು ಇದೇ.26ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಶ್ರೀಶಿವಶಕ್ತಿ ಸಿನಿ ಕಂಬೈನ್ಸ್ ಬ್ಯಾನರ್‌ನಲ್ಲಿ ನಾರಾಯಣ ಪೂಜಾರ್ ಅವರೇ ಚಿತ್ರ ನಿರ್ಮಾಣ ಮಾಡಿದ್ದಾರೆ. ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಕುತೂಹಲ ಮೂಡಿಸಿದ್ದು, ಕರಾಟೆ ಚಿತ್ರದ ಒಂದು ಭಾಗವಾಗಿದೆ. ನಾರಾಯಣ ಪೂಜಾರ್ ನಾಯಕನಾಗಿ ನಟಿಸಿದ್ದು, ಮನಿಷಾ ನಾಯಕಿ ಬಣ್ಣಹಚ್ಚಿದ್ದಾರೆ. ಶ್ರೀನಿವಾಸ ಹುಲಕೋಟಿ, ಕ್ಷಿತಿಜಾ ವೀರಣ್ಣ, ವಿದ್ಯಾ ಬೆಳಗಾವಿ, ಸ್ಟೆಫಿ ಲೂಯಿಸ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಹೆಣ್ಣು ಮಕ್ಕಳಿಗೆ ಸ್ವರಕ್ಷಣೆ ಎಷ್ಟು ಮುಖ್ಯ ಎಂಬುದನ್ನು ಈ ಚಿತ್ರದ ಮೂಲಕ ಹೇಳಲಾಗಿದೆ. ನಾಯಕಿಗೆ ಒಂದು ಸಮಸ್ಯೆ ಎದುರಾಗುತ್ತದೆ. ಆಕೆ ಅದನ್ನು ಬಗೆಹರಿಸುತ್ತಾಳೆ ಎಂಬುದನ್ನು ಕರಾಸ್ತ್ರದಲ್ಲಿ ಸಸ್ಪೆನ್ಸ್, ಥ್ರಿಲ್ಲರ್, ಆ್ಯಕ್ಷನ್ ಅಂಶಗಳನ್ನು ಬೆರೆಸಿ ಕಟ್ಟಿಕೊಡಲಾಗಿದೆ. ಬೇಸಿಕಲಿ ನಾನೊಬ್ಬ ಕರಾಟೆ ಮಾಸ್ಟರ್, ಉತ್ತರ ಕರ್ನಾಟಕದ ಪ್ರತಿಭೆಗಳನ್ನ ಈ ಚಿತ್ರದಲ್ಲಿ ಬಳಸಿಕೊಂಡಿದ್ದೇನೆ. ಚಿತ್ರದಲ್ಲಿ ನಾನು ಮೂರು ಶೇಡ್‌ನಲ್ಲಿ ಕಾಣಿಸಿಕೊಂಡಿದ್ದೇನೆ ಎಂದು ನಿರ್ದೇಶಕ ನಾರಾಯಣ ಪೂಜಾರ್ ಹೇಳಿದರು.

ಕರಾಸ್ತ್ರ ಅದ್ಭುತವಾಗಿ ಮೂಡಿಬಂದಿದೆ. ಮಹಿಳೆಯರು ತಮ್ಮನ್ನು ತಾವು ಹೇಗೆ ರಕ್ಷಣೆ ಮಾಡಿಕೊಳ್ಳೋದನ್ನು ಕಲಿಯಬೇಕು ಎಂಬುದನ್ನು ಈ ಚಿತ್ರದ ಮೂಲಕ ನಿರ್ದೇಶಕರು ಹೇಳಿದ್ದಾರೆ. ಗಗನ್ ಛಾಯಾಗ್ರಹಣ, ಮಹಾರಾಜ್ ಸಂಗೀತ ನಿರ್ದೇಶನ, ರಾಜ್ ಭಾಸ್ಕರ್ ಹಿನ್ನೆಲೆ ಸಂಗೀತ, ಕರಾಟೆ ಮಂಜು, ಶಂಕರ ಶಾಸ್ತ್ರಿ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.

ಹೊಸ ಅವತಾರದಲ್ಲಿ ಬಘೀರ

ನಟ ಶ್ರೀಮುರಳಿ ಭರಾಟೆ ಬಳಿಕ ಬಘೀರನಾಗಿ ನಟಿಸಿದ್ದು, ಈ ಚಿತ್ರದಲ್ಲಿ ಭರ್ಜರಿ ಆ್ಯಕ್ಷನ್ ಮೂಲಕ ಮಿಂಚಿದರು. ಆ ನಂತರ ಅವರು ಯಾವ ಸಿನಿಮಾದಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ಹಾಗಾಗಿ ಮುರಳಿ ಅವರ ಮುಂದಿನ ಚಿತ್ರ ಯಾವುದು ಎಂದು ಸಿನಿಪ್ರಿಯರು ಕಾಯುತ್ತಿದ್ದಾರೆ. ಹೀಗಿರುವಾಗಲೇ ಬಘೀರ ಹೊಸ ಅವತಾರದಲ್ಲಿ ಪ್ರತ್ಯಕ್ಷವಾಗುವ ಸೂಚನೆ ನೀಡಿದ್ದಾರೆ.

ಮುರಳಿ ತಮ್ಮ ಹೊಸ ಚಿತ್ರಕ್ಕಾಗಿ ಭರ್ಜರಿ ವರ್ಕ್‌ಔಟ್ ಶುರು ಮಾಡಿದ್ದಾರೆ. ಜಿಮ್‌ನಲ್ಲಿ ಕಸರತ್ತು ಮಾಡುತ್ತಿರುವ ಫೋಟೊ ಹಂಚಿಕೊಂಡಿರುವ ಮುರಳಿ ತಮ್ಮ ಮುಂದಿನ ಚಿತ್ರಕ್ಕಾಗಿ ಎಂಬುದನ್ನು ತಿಳಿಸಿದ್ದಾರೆ. ಅದು ಯಾವ ಸಿನಿಮಾ ಎಂಬುದನ್ನು ರಿವಿಲ್ ಮಾಡಿಲ್ಲ. ಮುರಳಿಗೆ ಉಗ್ರಂ ಚಿತ್ರ ಭರ್ಜರಿ ಯಶಸ್ಸು ತಂದುಕೊಟ್ಟಿತ್ತು. ಹಾಗಾಗಿ ಮುಂದೆ ಉಗ್ರಂ 2 ಮೂಡಿಬರಬಹುದೆ ಎಂಬ ಕುತೂಹಲವೂ ಇದೆ. ಈ ಚಿತ್ರಕ್ಕಾಗಿಯೇ ರೋರಿಂಗ್ ಸ್ಟಾರ್ ಭರ್ಜರಿ ಸಿದ್ಧತೆ ನಡೆಸುತ್ತಿದ್ದಾರೆ ಎನ್ನಲಾಗುತ್ತಿದೆ. ಇನ್ನು ಹೈಬಜೆಟ್‌ನಲ್ಲಿ ಮೂಡಿ ಬಂದ ಬಘೀರ ಕೂಡ ಸಿನಿಪ್ರಿಯರನ್ನು ಸೆಳೆಯಿತು. ಹೊಂಬಾಳೆ ಫಿಲಂಸ್ ನಿರ್ಮಾಣ ಮಾಡಿದ್ದ ಬಘೀರ ಚಿತ್ರದ ಮುಂದುವರಿದ ಭಾಗ ಮೂಡಿಬರಬಹುದು ಎಂದು ಸಿನಿಪ್ರಿಯರು ಕಾಯುತ್ತಿದ್ದಾರೆ. ಆದರೆ ಮುರಳಿ ಮಾತ್ರ ತಮ್ಮ ಮುಂದಿನ ಸಿನಿಮಾ ಯಾವುದು ಎಂದು ಎಲ್ಲಿಯೂ ರಿವಿಲ್ ಮಾಡಿಲ್ಲ. ಮುರಳಿ ಮುಂದೆ ಹೈವೋಲ್ಟೇಜ್ ಆ್ಯಕ್ಷನ್ ಸಿನಿಮಾದಲ್ಲಿ ನಟಿಸುವುದು ಖಚಿತವಾಗಿದೆ. ಈ ವರ್ಷಾಂತ್ಯಕ್ಕೆ ಸಿನಿಮಾ ಸೆಟ್ಟೇರುವ ನಿರೀಕ್ಷೆಯೂ ಇದೆ.